ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮತ್ತೊಂದು ವಿರಾಟ ದಾಖಲೆ

ದೆಹಲಿಯಲ್ಲಿ ಸೋಮವಾರ ನಡೆದ ಡೆಲ್ಲಿ-ಆರ್‌ಸಿಬಿ ಪಂದ್ಯದಲ್ಲಿ ಅಜೇಯ 23ರನ್‌ಗಳಿಸಿದ ಆರ್‌ಸಿಬಿಯ ಕೊಹ್ಲಿ, ಐಪಿಎಲ್‌ನಲ್ಲಿ 9 ಸಾವಿರ ರನ್ ಗಡಿ ದಾಟಿದ ಏಕೈಕ ಕ್ರಿಕೆಟಿಗನೆಂಬ ಹೊಸ ದಾಖಲೆ ಬರೆದರು. ಡೆಲ್ಲಿ ತಂಡ ನೀಡಿದ 76ರನ್‌ಗಳ ಗುರಿಯನ್ನು 6.3 ಓವರ್‌ನಲ್ಲಿ ಬೆಂಬತ್ತಿದ ಆರ್‌ಸಿಬಿ, ಐಪಿಎಲ್‌ನಲ್ಲಿ ಅತಿವೇಗವಾಗಿ ಗುರಿ ಚೇಸ್ ಮಾಡಿದ 2ನೇ ತಂಡವೆನಿಸಿತು.

ಸೊಂಪಾದ ಪುಟಗಳು

ಪರೀಕ್ಷೆ ನಡೆಸೋದು ಬರೀ ಪಾಸ್ ಮಾಡೋಕಲ್ಲ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಸಂವಹನದ ರೀತಿ ಬದಲಿಸಿದ ಸೋಶಿಯಲ್ ಮೀಡಿಯಾಗಳು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನೀವು ಬೇರೆಯವರನ್ನು ಕ್ಷಮಿಸುವುದರಿಂದ, ಆ ವ್ಯಕ್ತಿಯನ್ನು ಸರಿಪಡಿಸಿದಂತೆ ಆಗುವುದಿಲ್ಲ. ಆದರೆ ನೀವು ಅದರಿಂದ ಸಂಪೂರ್ಣ ಸ್ವತಂತ್ರರಾಗಬಹುದು ಮತ್ತು ಅನಗತ್ಯ ಆಲೋಚನೆ, ಚಿಂತೆಗಳಿಂದ ಮುಕ್ತರಾಗಬಹುದು.

ವಕ್ರತುಂಡೋಕ್ತಿ

ವಿಷಯ ಇಲ್ಲದಿದ್ದರೂ ಕಿತ್ತಾಡಲು ಮಾತ್ರ ವಿಷಯಗಳ ಕೊರತೆಯೇ ಇಲ್ಲದಿರುವ ಜಾಗಕ್ಕೆ ಫೇಸ್ ಬುಕ್ ಅಥವಾ ಟ್ವಿಟರ್ ಎನ್ನಬಹುದು.

ಆಗಸ್ಟ್ ಒಂದರಿಂದ ಬೆಂಗಳೂರು-ಮುಂಬೈ ವಂದೇ ಭಾರತ್ ರೈಲು

ಬೆಂಗಳೂರು: ಬಹು ನಿರೀಕ್ಷೆಯ ಬೆಂಗಳೂರು-ಮುಂಬೈ ನಡುವಿನ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ಆಗಸ್ಟ್ 1ರಿಂದ ಆರಂಭವಾಗಲಿದೆ. ಈ ಮೂಲಕ ಬೆಂಗಳೂರು-ಮುಂಬೈ ನಡುವಿನ ರೈಲು ಪ್ರಯಾಣ ಇನ್ನಷ್ಟು ಆರಾಮದಾಯಕವಾಗಲಿದೆ ಎಂದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಈ ಸ್ಲೀಪರ್ ರೈಲು ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣದಿಂದ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಲ್‌ವರೆಗೆ ಸಂಚರಿಸಲಿದ್ದು, ಸೊಲ್ಲಾಪುರ ಮತ್ತು ಕಲಬುರಗಿ ಮಾರ್ಗವಾಗಿ ತೆರಳಲಿದೆ.

ರಾಜನಾಥ್‌ಗೆ ರಾಷ್ಟ್ರಪತಿ ಪಟ್ಟ?



ದೆಹಲಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು 2027ರ ಜೂನ್‌ನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯನ್ನಾಗಿಸುವ ಸಾಧ್ಯತೆಯಿದೆ. ಇತ್ತೀಚೆಗೆ ಒಬಿಸಿ, ದಲಿತ ಹಾಗೂ ಬುಡಕಟ್ಟು ಹಿನ್ನೆಲೆಯುಳ್ಳವರು ರಾಷ್ಟ್ರಪತಿಗಳಾಗಿದ್ದು, ಈ ಬಾರಿ ಮೇಲ್ಜಾತಿಯವರನ್ನು ಆ ಹುದ್ದೆಗೆ ಆಯ್ಕೆ ಮಾಡಬೇಕೆಂದು ಬಿಜೆಪಿಯ ಮೇಲ್ಜಾತಿಯ ನಾಯಕರು ಆಗ್ರಹಿಸಿದ್ದಾರೆ. ಇದಕ್ಕೆ ಆರ್‌ಎಸ್‌ಎಸ್ ಕೂಡ ಸಮ್ಮತಿಸಿದೆ. ರಾಜನಾಥ್ ಅವರು ಉತ್ತರ ಪ್ರದೇಶದ ಠಾಕೂರ್ ಸಮುದಾಯದವರು.

ಫನ್‌ತರಂಗ

- ರಘುಪತಿ ಶೃಂಗೇರಿ -

ದೆಹಲಿಯಲ್ಲಿ ಬೀಡು ಬಿಟ್ಟಿರುವ ಕರ್ನಾಟಕ ಸರ್ಕಾರದ ನೇತಾರರು

ಇತ್ತ ಬೆಂಗಳೂರಿಗೆ ಡಿಸಿಎಂ, ಅತ್ತ ದೆಹಲಿಗೆ ಸತೀಶ್ ಜಾರಕಿಹೊಳಿ

ಬಣ ಬಡಿದಾಟ: ಹೊಸ ಕೌತುಕ

ಅಹಿಂದ ಸಮಾವೇಶಕ್ಕೆ ಸಿದ್ದು ಬಣ ಸಿದ್ಧತೆ: ಮೇ 15ಕ್ಕೆ ಫೈನಲ್ ಫೈಟ್

ಫಲಿತಾಂಶದ ಬಳಿಕ ಕಾಂಗ್ರೆಸ್ ಶಾಸಕರು ಮತ್ತೆ ದೆಹಲಿಯತ್ತ ದೌಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕಾರಣದ ಕುರ್ಚಿ ಕಾಳಗ ಅಂತಿಮಘಟ್ಟಕ್ಕೆ ತಲುಪಿದ್ದು, ಡಿಸಿಎಂ ದೆಹಲಿಯಿಂದ ಹಿಂದಿರುಗುತ್ತಿದ್ದಂತೆ ಸಚಿವ ಸತೀಶ್ ಜಾರಕಿಹೊಳಿ ದಿಢೀರ್ ದೆಹಲಿಗೆ ತೆರಳಿದ್ದಾರೆ. ಮತ್ತೊಂದೆಡೆ ಅಹಿಂದ ಸಮಾವೇಶಕ್ಕೆ ಒಳಗೊಳಗೇ ಸಿದ್ಧತೆ ನಡೆಯುತ್ತಿದ್ದು, ಇತ್ತ ಮೇ 15ರ ನಂತರ ಬೆಳವಣಿಗೆ ಕುತೂಹಲ ಮೂಡಿಸಿದೆ.

ಇದಕ್ಕೆ ತಾಳವೆಂಬಂತೆ ಸಿಎಂ ಸ್ಥಾನದ ರೇಸ್‌ನಲ್ಲಿರುವುದು ಡಿ.ಕೆ.ಶಿವಕುಮಾರ್ ಮಾತ್ರ ಎಂದು ಶಾಸಕರೊಬ್ಬರು ಹೇಳಿದದಾರೆ. ಮತ್ತೊಂದೆಡೆ 40 ಶಾಸಕರು ಕೂಡ ದೆಹಲಿಯತ್ತ ಮುಖಮಾಡಿದ್ದು, ರಾಜಕಾರಣ ಮಾಡುವುದಕ್ಕೆ ದೆಹಲಿಗೆ ಹೋಗುವುದು ಎಂದು ಗೃಹ ಸಚಿವ ಪರಮೇಶ್ವರ್ ಅವರು ಹೇಳಿರುವುದು ಮತ್ತೇನೋ ಸಂಭವಿಸುವ ಮುನ್ಸೂಚನೆಯಾಗಿದೆ.

ಹೈಕಮಾಂಡ್ ನಾಯಕರ ಭೇಟಿಗಾಗಿ ದೆಹಲಿಗೆ ತೆರಳಿ ಭಾನುವಾರ ಬೆಳಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ವಾಪಸಾಗಿದ್ದರು. ಅಲ್ಲದೆ, ಯಾವಾಗ ಏನು ಆಗಬೇಕೋ ಅದು ಆಗುತ್ತದೆ. ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾತನಾಡುವುದಿಲ್ಲ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ ಎಂದು ಹೇಳಿದ್ದರು. ಇದಾದ ಸಂಜೆಗೆ ಸಚಿವ ಸತೀಶ್ ಜಾರಕಿಹೊಳಿ ದಿಢೀರ್ ದೆಹಲಿಗೆ ತೆರಳಿದ್ದಾರೆ. ಈ ಬೆಳವಣಿಗೆ ಕುತೂಹಲ ಮೂಡಿಸಿದ್ದು, ಇದು ಮತ್ತೊಮ್ಮೆ ಅಹಿಂದ ಅಸ್ತ್ರ ಪ್ರಯೋಗಕ್ಕೆ ಇಳಿಯಲಿದೆಯಾ ಎಂಬ ಗುಸು ಗುಸು ಕಾಂಗ್ರೆಸ್ ವಲಯದಲ್ಲೇ ಕೇಳಿ ಬಂದಿದೆ.

ನಾಯಕತ್ವದ ಬದಲಾವಣೆ ಚರ್ಚೆಯ ನಡುವೆಯೇ ಸತೀಶ್ ಜಾರಕಿಹೊಳಿ ಸಕ್ಕರೆ ಕಾರ್ಖಾನೆ ಕುರಿತ ಕೆಲಸ ಇದೆ ಎಂದು ಬೆಂಬಲಿಗರನ್ನು ಕರೆದುಕೊಂಡು ಭಾನುವಾರ ಸಂಜೆ ದೆಹಲಿಗೆ ಹೋಗಿದ್ದು, ಇದೇ ವೇಳೆ ಹೈಕಮಾಂಡ್ ನಾಯಕರನ್ನು ಭೇಟಿಯಾಗಲಿದ್ದಾರೆ ಎನ್ನಲಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರನ್ನು ಸಚಿವ ಸತೀಶ್ ಜಾರಕಿಹೊಳಿ ಭೇಟಿ ಮಾಡುವ ಸಾಧ್ಯತೆ ಇದ್ದು, ನಾಯಕತ್ವದ ವಿಚಾರ ಬಂದಾಗ ಅಹಿಂದ ಅಸ್ತ್ರದ ಬಗ್ಗೆ ಚರ್ಚಿಸಲಿದ್ದಾರೆ ಎನ್ನುವುದು ಕೂಡ ಪಕ್ಷದಲ್ಲಿ ಗುಟ್ಟಾಗಿ ಉಳಿದಿಲ್ಲ.

ಅಹಿಂದಕ್ಕೆ 25 ವರ್ಷ ಹಿನ್ನೆಲೆ ವಿಚಾರ ಸಂಕಿರಣದ ಬೆನ್ನಲ್ಲೇ ಅಹಿಂದ ಸಮಾವೇಶ ರಾಜ್ಯಾದ್ಯಂತ ನಡೆಸಲು ಯೋಜಿಸುತ್ತಿರುವ ತಂಡ, ಈ ಮೂಲಕ ಹೈಕಮಾಂಡ್‌ಗೆ ಸಂದೇಶ ರವಾನಿಸಲು ತೆರೆಮರೆಯ ತಂತ್ರಗಾರಿಕೆ ಪ್ರಯೋಗ ಮಾಡುತ್ತಿದ್ದಾರೆ ಎನ್ನುವ ಮಾತು ಕೇಳಿ ಬಂದಿದೆ. ಇನ್ನು ಶೋಷಿತರ ಹೆಸರಿನಲ್ಲಿ ದಲಿತ ಸಮಾವೇಶಕ್ಕೆ ಸಚಿವರಾದ ಡಾ.ಜಿ ಪರಮೇಶ್ವರ್ ಹಾಗು ಎಚ್.ಸಿ ಮಹದೇವಪ್ಪ ನಿರ್ಧರಿಸಿದ್ದರು. ಆದರೆ ಸಮಾವೇಶ ಮಾಡದಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಸೂಚಿಸಿದ್ದರು. ಇದೀಗ ಅಹಿಂದ ಸಮಾವೇಶಕ್ಕೆ ಅನುಮತಿ ಕೊಡುತ್ತಾರೋ ಇಲ್ಲವೋ ಎಂಬುದು ಕೂಡ ಚರ್ಚೆಯ ನಂತರ ಅಂತಿಮವಾಗಲಿದೆ. ಈ ಬೆಳವಣಿಗೆಯ ನಡುವೆಯೇ ಹೈಕಮಾಂಡ್ ನಾಯಕರ ಭೇಟಿಗೆ ಸಿಎಂ ಆಪ್ತರು ಮುಂದಾಗಿದ್ದು ಸಚಿವ ಡಾ.ಎಚ್.ಸಿ. ಮಹಾದೇವಪ್ಪ ದೆಹಲಿಗೆ ತೆರಳಿ ಕೇಂದ್ರ ಸಚಿವರ ಜೊತೆ ಸಭೆಯಲ್ಲಿ ಭಾಗಿಯಾಗುವ ಸಾಧ್ಯತೆ ಇದೆ.



ಮೇ 15 ರಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹುಟ್ಟುಹಬ್ಬ. ದೆಹಲಿ ವರಿಷ್ಠರು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ಇದೆ. ಶಿವಕುಮಾರ್ ಅವರ ಶ್ರಮಕ್ಕೆ ಹೈಕಮಾಂಡ್ ಪ್ರತಿಫಲ ನೀಡಬೇಕು. ಮೇ 15ಕ್ಕೆ ಡಿಕೆಶಿಗೆ ಹೈಕಮಾಂಡ್ ಶಕ್ತಿ ಕೊಡುವ ಭರವಸೆ ಇದೆ.

ಡಾ.ರಂಗನಾಥ್, ಕುಣಿಗಲ್ ಕಾಂಗ್ರೆಸ್ ಶಾಸಕ

ಸಚಿವ ಸಂಪುಟ ಪುನಾರಚನೆಯಾಗಿ ಬೇರೆಯವರಿಗೂ ಅವಕಾಶ ಸಿಗಬೇಕು. ನಮ್ಮಲ್ಲಿ ಯಾವ ಗೊಂದಲವಿಲ್ಲ. ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಮಾಡೋದೇ ರಾಜಕೀಯ. ಅದರಲ್ಲಿ ಬೆಳವಣಿಗೆ ಏನಿದೆ? ಅದಕ್ಕೆ ಅಲ್ವ ರಾಜಕಾರಣ ಎಂದು ಹೇಳೋದು. ರಾಜಕಾರಣ ಅನ್ನೋ ಪದದಲ್ಲೇ ಅದೆಲ್ಲವೂ ಬಂದು ಬಿಡುತ್ತೆ. ಪ್ರತ್ಯೇಕವಾಗಿ ರಾಜಕೀಯ ಅನ್ನೋದು ಏನು ಇಲ್ವಲ್ಲ?

ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಸುರ್ಜೇವಾಲ ಕೊಟ್ಟ ಸಿಹಿ ಏನು?

ಮೇ 2ನೇ ಅಥವಾ 3ನೇ ವಾರದಲ್ಲಿ ಸಿಹಿ ಸುದ್ದಿ ಕೊಡುತ್ತೇವೆ ಎಂದು ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ ಎಂದು ಶಾಸಕ ಅಶೋಕ್ ಪಟ್ಟಣ್ ಹೇಳಿದ್ದಾರೆ. ನಾವು ದೆಹಲಿಗೆ ಹೋಗಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದೇವೆ. ಮೇ 2 ಇಲ್ಲವೇ 3ನೇ ವಾರದಲ್ಲಿ ಸಿಹಿಸುದ್ದಿ ಕೊಡುತ್ತೇವೆ ಎಂದಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಮ್ಮ ಜೊತೆ ಮಾತನಾಡಿದ್ದಾರೆ. ಮತ್ತೊಮ್ಮೆ ಸಭೆ ಸೇರಲು ಶಾಸಕರು ಒತ್ತಾಯಿಸುತ್ತಿದ್ದಾರೆ. 40 ಜನ ಶಾಸಕರು ಮತ್ತೆ ಹೈಕಮಾಂಡ್ ನಾಯಕರ ಭೇಟಿಗೆ ಹೋಗುತ್ತೇವೆ. ಉಪಚುನಾವಣೆ ಫಲಿತಾಂಶ ಬಂದ ಬಂದ ತಕ್ಷಣ ದೆಹಲಿಗೆ ಹೋಗುತ್ತೇವೆ ಎಂದಿದ್ದಾರೆ.

ರೇಸ್‌ನಲ್ಲಿ ಡಿಕೆ ಮಾತ್ರ: ಬಾಲಕೃಷ್ಣ

ನಾಯಕತ್ವದ ಜಟಾಪಟಿ ನಡುವೆ ಸಿದ್ದರಾಮಯ್ಯ ಅವರ ನಂತರ ಸಿಎಂ ರೇಸ್‌ನಲ್ಲಿರುವುದು ಡಿ.ಕೆ.ಶಿವಕುಮಾರ್ ಮಾತ್ರ. ಬೇರೆಯವರೂ ರೇಸ್‌ನಲ್ಲಿದ್ದರೂ ಅದು ಕಾಲಕ್ಕೆ ತಕ್ಕಂತೆ ತೀರ್ಮಾನ ಆಗಲಿದೆ. ಸದ್ಯಕ್ಕೆ ಸಿದ್ದರಾಮಯ್ಯನವರು ಬೇಡ ಅಂದಾಗ ಆ ಸ್ಥಾನದ ರೇಸ್‌ನಲ್ಲಿರೋದು ಡಿಕೆಶಿ ಮಾತ್ರ ಎಂದು ಮಾಗಡಿ ಶಾಸಕ ಬಾಲಕೃಷ್ಣ ಹೇಳಿದ್ದಾರೆ. ಈ ಅವಧಿಯಲ್ಲೇ ಡಿಕೆಶಿಗೆ ಅವಕಾಶ ಸಿಗಲಿದೆ. ನಮ್ಮ ಹೈಕಮಾಂಡ್ ಈ ಬಗ್ಗೆ ಶೀಘ್ರವೇ ಸೂಕ್ತ ತೀರ್ಮಾನ ಮಾಡಲಿದೆ ಎಂದು ರಾಮನಗರದಲ್ಲಿ ಹೇಳಿದ್ದಾರೆ. ನಮ್ಮ ಹೈಕಮಾಂಡ್ ವೀಕ್ ಇಲ್ಲ, ಸ್ಟ್ರಾಂಗ್ ಇದೆ. ಸಂಪುಟ ರಚನೆ ಬಗ್ಗೆ ಸಾಧಕ ಬಾಧಕಗಳ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಹಾಗಾಗಿ, ವಿಳಂಬ ಆಗುತ್ತಿರಬಹುದು ಎಂದಿದ್ದಾರೆ.

ಯುದ್ಧ ಅಂತ್ಯಕ್ಕೆ ಇರಾನ್ ಪ್ರಸ್ತಾವ

ದಾಳಿ ಸಂಪೂರ್ಣವಾಗಿ ನಿಂತರೆ ಮಾತ್ರ ಮಾತುಕತೆಗೆ ಸಿದ್ಧ ಎಂದ ಟೆಹರಾನ್

ಟೆಹರಾನ್: ಕೊಲ್ಲಿ ಸಂಘರ್ಷವನ್ನು ಕೊನೆಗಾಣಿಸಲು ಇರಾನ್ ಮೂರು ಹಂತದ ಪ್ರಸ್ತಾವನೆಗಳನ್ನು ಮುಂದಿಟ್ಟಿದೆ. ಈ ಮೂರು ಪ್ರಸ್ತಾವಗಳನ್ನು ಅಮೆರಿಕ ಒಪ್ಪಿದರೆ, ಕೂಡಲೇ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವುದಾಗಿ ಇರಾನ್ ಹೇಳಿದೆ. ಇದೇ ವೇಳೆ, ಇರಾನ್ ಇನ್ನು ಮೂರು ದಿನಗಳ ಒಳಗೆ ಮಾತುಕತೆಗೆ ಬಾರದಿದ್ದರೆ, ತೈಲಪೂರೈಕೆಯ ಪೈಪ್‌ಲೈನ್‌ಗಳನ್ನು ಸ್ಫೋಟಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ಪಾಕಿಸ್ತಾನದಲ್ಲಿ ನಡೆದ ಎರಡನೇ ಶಾಂತಿ ಮಾತುಕತೆಯಿಂದ ಏಕಪಕ್ಷೀಯವಾಗಿ ಹೊರನಡೆದಿದ್ದ ಇರಾನ್ ಮೊದಲ ಬಾರಿಗೆ ತಾನೇ ಷರತ್ತುಬದ್ಧ ಮಾತುಕತೆಗೆ ಮುಂದಾಗಿದೆ. ಮೊದಲಿಗೆ ಅಮೆರಿಕವು ಇರಾನ್ ವಿರುದ್ಧ ಸಾರಿರುವ ಯುದ್ಧವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಹೊರ್ಮುಜ್ ಹಾಗೂ ಇರಾನಿನ ಬಂದರುಗಳ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಬೇಕು ಎಂದು ಇರಾನ್ ಷರತ್ತು ವಿಧಿಸಿದೆ. ಅಮೆರಿಕ ಈ ಷರತ್ತು ಪಾಲಿಸಿದರೆ ಮಾತ್ರ ಪರಮಾಣು ಶಸ್ತ್ರಾಸ್ತ್ರಗಳ ನಿಯಂತ್ರಣದ ಬಗ್ಗೆ ಮಾತುಕತೆ ನಡೆಸುವುದಾಗಿ ಇರಾನ್ ಹೇಳಿದೆ.

ಯುದ್ಧವನ್ನು ಸಂಪೂರ್ಣವಾಗಿ ನಿಲ್ಲಿಸಿದರೆ ಮಾತ್ರ ನಾವು ಹೊರ್ಮುಜ್ ಜಲಸಂಧಿ ಹಾಗೂ ಅಮೆರಿಕದ ಇಚ್ಛೆಯ ಇರಾನಿನ ಪರಮಾಣು ಶಸ್ತ್ರಾಸ್ತ್ರಗಳ ನಿಯಂತ್ರಣದ ಬಗ್ಗೆ ಮಾತುಕತೆಗೆ ಬರುತ್ತೇವೆ ಎಂದು ಇರಾನ್ ಹೇಳಿದೆ. ಇದೇ ವೇಳೆ ಮುಂದಿನ ಹಂತದಲ್ಲಿ ಮೂರನೇ ರಾಷ್ಟ್ರದ ಮಧ್ಯಸ್ಥಿಕೆ ಬದಲು ನೇರ ಮಾತುಕತೆಗೆ ಇರಾನ್ ಒಲವು ತೋರಿಸಿದೆ.

ಭಾರತೀಯರಿದ್ದ ಹಡಗಿನ ಮೇಲೆ ಇರಾನ್ ದಾಳಿ

ಓಮನ್ ಕರಾವಳಿಯ ಶಿನಾಸ್ ಬಂದರು ವ್ಯಾಪ್ತಿಯಲ್ಲಿ 12 ಮಂದಿ ಭಾರತೀಯರಿದ್ದ ಎಂಟಿ ಸಿರೋನ್ ಎಂಬ ಹಡಗಿನ ಮೇಲೆ ಇರಾನ್ ಕರಾವಳಿ ಕಾವಲು ಪಡೆ ಶುಕ್ರವಾರದಂದು ದಾಳಿ ನಡೆಸಿತ್ತು. ಘಟನೆಯಲ್ಲಿ ಎಲ್ಲಾ ಭಾರತೀಯ ಸಿಬ್ಬಂದಿ ಸಂಪೂರ್ಣ ಸುರಕ್ಷಿತವಾಗಿದ್ದಾರೆ ಎಂದು ಭಾರತದ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವಾಲಯ ಸೋಮವಾರ ತಿಳಿಸಿದೆ.

ಮೊಜ್ತಾಬಾ ಜೊತೆ ಮಾತನಾಡಿದ್ದೇನೆ: ಪುಟಿನ್

ಸೋಮವಾರದಂದು ಇರಾನ್ ವಿದೇಶಾಂಗ ಸಚಿವ ಅರಘ್ಚಿ ಜೊತೆಗೆ ಭೇಟಿ ಮಾಡಿದ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಮಾತುಕತೆ ನಂತರ ಕಳೆದ ವಾರ ತಾವು ಇರಾನ್ ಸರ್ವೋಚ್ಚ ನಾಯಕ ಮೊಜ್ತಾಬಾ ಅವರೊಂದಿಗೆ ಮಾತನಾಡಿದ್ದಾಗಿ ಹೇಳಿರುವುದು ಎಲ್ಲರೂ ಹುಬ್ಬೇರುವಂತೆ ಮಾಡಿದೆ. ಮೊಜ್ತಾಬಾ ಮಾತನಾಡುವ ಸ್ಥಿತಿಯಲ್ಲಿ ಇಲ್ಲ ಎಂಬ ವರದಿಗಳ ನಡುವೆ ಅನ್ಯ ದೇಶದ ನಾಯಕನೊಬ್ಬ ಹೀಗೆ ಹೇಳಿರುವುದು ಇದೇ ಮೊದಲು.

ಯುಎಇಗೆ ಇಸ್ರೇಲ್ ಐರನ್ ಡೋಮ್

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮೇಲೆ ಇರಾನ್ ನಡೆಸುತ್ತಿರುವ ಕ್ಷಿಪಣಿ ದಾಳಿಗಳಿಂದ ಯುಎಇಯನ್ನು ಕಾಪಾಡಲು ಇಸ್ರೇಲ್ ಸಹಾಯಹಸ್ತ ಚಾಚಿದೆ. ತನ್ನಲ್ಲಿರುವ ಅತ್ಯಾಧುನಿಕ ಕ್ಷಿಪಣಿ ನಿಗ್ರಹ ವ್ಯವಸ್ಥೆಯಾದ ಐರನ್ ಡೋಮ್ ತಂತ್ರಜ್ಞಾನವನ್ನು ಯುಎಇಗೆ ನೀಡಿದೆ.

ಜನಿವಾರ ತೆಗೆಸಿದ ಕಾಲೇಜು ಕಪ್ಪು ಪಟ್ಟಿಗೆ ಸೇರ್ಪಡೆ?

ಕೃಪಾನಿಧಿ ಕಾಲೇಜಿನಲ್ಲಿನ್ನು ಸರಕಾರಿ ಪರೀಕ್ಷೆಗಳಿಲ್ಲ

ಬೆಂಗಳೂರು: ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ ಸಂಬಂಧ ಉದ್ದೇಶಪೂರ್ವಕವಾಗಿ ಜನಿವಾರ ತೆಗೆಸಿದ್ದಾರೆ ಎನ್ನುವ ವಿಚಾರ ತನಿಖಾ ವರದಿಯಿಂದ ಬಯಲಾಗಿದೆ. ಇದರ ಬೆನ್ನಲ್ಲೇ ಈ ಕಾಲೇಜಿನಲ್ಲಿ ಇನ್ನು ಮುಂದೆ ಯಾವುದೇ ಸರಕಾರಿ ಪರೀಕ್ಷೆ ನಡೆಸದಂತೆ ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ತಿಳಿಸಿದ್ದಾರೆ.

ಸಿಇಟಿ ಪರೀಕ್ಷೆ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ವಿಚಾರ ಭಾರಿ ವಿವಾದಕ್ಕೆ ಕಾರಣವಾಗುತ್ತಿದ್ದಂತೆ ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನ ಮೂವರು ಸಿಬ್ಬಂದಿ ಅಮಾನತು ಮಾಡಲಾಗಿತ್ತು. ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜಿನ ಮೇಲೂ ಕ್ರಮ ಕೈಗೊಳ್ಳುವ ನಿರೀಕ್ಷೆ ಇದೆ. ಸಿಇಟಿ ಪರೀಕ್ಷೆ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ವಿಚಾರ ಭಾರಿ ವಿವಾದಕ್ಕೆ ಕಾರಣವಾಗುತ್ತಿದ್ದಂತೆ ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನ ಮೂವರು ಸಿಬ್ಬಂದಿ ಅಮಾನತು ಮಾಡಲಾಗಿತ್ತು. ಈ ನಡುವೆ ಇದು ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಕ್ರೋಶ ವ್ಯಕ್ತಪಡಿಸಿತ್ತು.

ಚಿಕ್ಕಬಳ್ಳಾಪುರದಿಂದಲೂ ಸಮಗ್ರ ವರದಿ

ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜಿನಲ್ಲಿ ಏ.23ರಂದು ನಡೆದ ಸಿಇಟಿ ಪರೀಕ್ಷೆಯ ವೇಳೆ ಸುಪ್ರಿತ್.ಕೆ.ಆರ್.ಎಂಬ ವಿದ್ಯಾರ್ಥಿಯ ಜನಿವಾರ ತೆಗೆಸಲಾಗಿತ್ತು ಎನ್ನಲಾದ ಪ್ರಕರಣ ಸಂಬಂಧ ಸಮಗ್ರ ತನಿಖೆಗಾಗಿ ಜಿಲ್ಲಾಡಳಿತವು ಅಪರ ಜಿಲ್ಲಾಧಿಕಾರಿ ಡಾ.ಭಾಸ್ಕರ್, ಉಪವಿಭಾಗಾಧಿಕಾರಿ ಆರ್.ಅಶ್ವಿನ್ ಹಾಗೂ ಡಿಡಿಪಿಯು ಆದಿಶೇಷರಾವ್ ನೇತೃತ್ವದಲ್ಲಿ ತನಿಖಾ ತಂಡ ರಚನೆ ಮಾಡಿದೆ. ಈ ತಂಡ ವಿದ್ಯಾರ್ಥಿ ಸುಪ್ರಿತ್‌ನ ಪೋಷಕರು, ಪರೀಕ್ಷೆ ನಡೆಸಿದ ಕಾಲೇಜು ಸಿಬ್ಬಂದಿಯನ್ನು ಕರೆಸಿ ಮಾಹಿತಿ ಪಡೆದಿದೆ.

ಕುಕ್ಕರ್ ಉಗ್ರ, ಶಾರೀಕ್‌ಗೆ 10 ವರ್ಷಗಳ ಕಠಿಣ ಸಜೆ

ತಪ್ಪೊಪ್ಪಿಕೊಂಡ ಆರೋಪಿಗೆ ಶಿಕ್ಷೆಯಲ್ಲಿ ವಿನಾಯಿತಿ

ಬೆಂಗಳೂರು: ಮಂಗಳೂರಿನ ಹೊರವಲಯದಲ್ಲಿ ಮೂರುವರೆ ವರ್ಷದ ಹಿಂದೆ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಕಾರಣನಾಗಿದ್ದ ಅಪರಾಧಿ ಮೊಹಮ್ಮದ್ ಶಾರೀಕ್‌ಗೆ 10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 94 ಸಾವಿರ ರು. ದಂಡ ವಿಧಿಸಿ ಎನ್‌ಐಎ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

2022ರ ನ.19ರಂದು ಸಂಜೆ 4:40 ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೋದಲ್ಲಿ ಶಾರೀಕ್ ತೆರಳುವಾಗ (ಐಇಡಿ) ಕುಕ್ಕರ್ ಸ್ಫೋಟಗೊಂಡಿತ್ತು. ಸ್ಫೋಟದ ರಭಸಕ್ಕೆ ಉಗ್ರನ ಜತೆ ಆಟೋ ಚಾಲಕ ಪುರುಷೋತ್ತಮ್ ಪೂಜಾರಿ ಅವರು ಸಹ ಗಂಭೀರ ಗಾಯಗೊಂಡಿದ್ದರು. ಉಗ್ರ ಸಂಘಟನೆಗಳಿಂದ ಪ್ರೇರಿತನಾಗಿದ್ದ ಶಾರೀಕ್, ಮಂಗಳೂರಿನ ದೇಗುಲವೊಂದರಲ್ಲಿ ಸ್ಫೋಟ ನಡೆಸಲು ಸಂಚು ಹೂಡಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿತ್ತು. ಕೃತ್ಯದ ಹಿಂದೆ ಐಸಿಸ್ ನಂಟು ಹಿನ್ನೆಲೆಯಲ್ಲಿ ಆರೋಪಿ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ಪ್ರಕರಣ ದಾಖಲಿಸಿ ಎನ್‌ಐಎ ತನಿಖೆ ಕೈಗೊಂಡಿತ್ತು.

ಆರಂಭದಲ್ಲಿ ಎನ್‌ಐಎ ದೋಷಾರೋಪವನ್ನು ಪ್ರಶ್ನಿಸಿದ್ದ ಶಾರೀಕ್ ಬಳಿಕ ಕೃತ್ಯದ ಕುರಿತು ತಪ್ಪೊಪ್ಪಿಕೊಂಡ ಹಿನ್ನೆಲೆಯಲ್ಲಿ ನ್ಯಾ. ಕೆಂಪರಾಜು ಅವರು ಅಪರಾಧಿಗೆ 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 94 ಸಾವಿರ ರು. ದಂಡ ವಿಧಿಸಿದ್ದಾರೆ. ಶಿವಮೊಗ್ಗದ ತೀರ್ಥಹಳ್ಳಿ ಮೂಲದ ಶಾರೀಕ್, ಐಸಿಸ್ ಹಾಗೂ ಸಿಮಿ ಉಗ್ರ ಸಂಘಟನೆಗಳಿಂದ ಪ್ರೇರಿತನಾಗಿದ್ದ. ಶಿವಮೊಗ್ಗ ಐಸಿಸ್ ಮಾಡ್ಯುಲ್ ಸದಸ್ಯನಾಗಿದ್ದ. ಈತನ ವಿರುದ್ಧ 2020ರಲ್ಲಿ ಮಂಗಳೂರಿನಲ್ಲಿ ಮತೀಯ ವಿದ್ವೇಷದ ಗೋಡೆ ಬರಹ ಹಾಗೂ ಶಿವಮೊಗ್ಗ ತುಂಗಾ ನದಿ ತೀರದಲ್ಲಿ ನಡೆಸಿದ್ದ ಪ್ರಯೋಗಾರ್ಥ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಕೇಸು ದಾಖಲಾಗಿತ್ತು. ವಿಚಾರಣೆ ವೇಳೆ ತಾನು ನಿರಾಪರಾಧಿ ಎಂದು ಹೇಳಿದ್ದ ಈತ ಬಳಿಕ 2025ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ.

ಎನ್‌ಐಎ ತನಿಖಾಧಿಕಾರಿಗಳು ಚಾರ್ಜ್‌ಶೀಟ್‌ನಲ್ಲಿ ನಮೂದಿಸಿರುವ ಆರೋಪಗಳು ಸತ್ಯವಾಗಿದ್ದು, ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಇಟ್ಟು ಸ್ಫೋಟಕ್ಕೆ ಕಾರಣನಾಗಿರುವೆ. ನನಗೆ ಈಗ ಪಶ್ಚಾತ್ತಾಪವಾಗಿದೆ. ಕೃತ್ಯದಲ್ಲಿ ತಾನು ಭಾಗಿಯಾಗಿದ್ದೇನೆ.

→ 4

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೊಮ್ಮೆ ಭದ್ರತಾಲೋಪ

240ಕ್ಕೂ ಹೆಚ್ಚು ಸಿಸಿಟಿವಿ ಆಫ್: ಇಬ್ಬರು ನೌಕರರ ಸೆರೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 24 ರಂದು ನಡೆದ ಆರ್‌ಸಿಬಿ ಮತ್ತು ಗುಜರಾತ್ ಟೈಟಾನ್ಸ್ ತಂಡಗಳ ನಡುವಿನ ಐಪಿಎಲ್ ಪಂದ್ಯದ ವೇಳೆ ವಿಧ್ವಂಸಕ ಕೃತ್ಯ ಎಸಗಿರುವ ಆತಂಕಕಾರಿ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಸಿಸಿಟಿವಿ ವ್ಯವಸ್ಥೆ ಉಸ್ತುವಾರಿ ವಹಿಸಿದ್ದ ಸಂಸ್ಥೆಯ ಇಬ್ಬರು ಸಿಬ್ಬಂದಿಗಳನ್ನು ಬಂಧಿಸಲಾಗಿದೆ.

ಪಂದ್ಯ ನಡೆಯುವ ದಿನದಂದು ಬೆಳಗ್ಗೆ ಕ್ರೀಡಾಂಗಣದ ತಾಂತ್ರಿಕ ತಂಡವು ಕ್ಯಾಮೆರಾಗಳನ್ನು ಪರಿಶೀಲಿಸಿದಾಗ, ಬರೋಬ್ಬರಿ 240ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳು ಆಫ್ ಆಗಿರುವುದು ಪತ್ತೆಯಾಗಿದೆ. ಕ್ರೀಡಾಂಗಣದ ಪ್ರಮುಖ ಭದ್ರತಾ ವ್ಯವಸ್ಥೆಯಾದ ಸಿಸಿಟಿವಿ ಕ್ಯಾಮೆರಾಗಳ ಕೇಬಲ್‌ಗಳನ್ನು ಕತ್ತರಿಸಿ, ಇಡೀ ಭದ್ರತಾ ಜಾಲವನ್ನೇ ಅಸ್ತವ್ಯಸ್ತಗೊಳಿಸಲು ಯತ್ನಿಸಲಾಗಿತ್ತು.

ಕ್ಯಾಮೆರಾಗಳು ಏಕಾಏಕಿ ಬಂದ್ ಆಗಿದ್ದರಿಂದ ತಾಂತ್ರಿಕ ತಂಡವು ತಕ್ಷಣವೇ ತನಿಖೆ ನಡೆಸಿದೆ. ಈ ವೇಳೆ ಐವಿಎಸ್ ಡಿಜಿಟಲ್ ಸೊಲ್ಯೂಷನ್ಸ್ ಎಂಬ ಉಪ-ವಿತರಕ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಇ. ಮತ್ತು ಅಬ್ದುಲ್ ಕಲಾಂ ಈ ವಿಧ್ವಂಸಕ ಕೃತ್ಯದಲ್ಲಿ ತೊಡಗಿರುವುದು ಬೆಳಕಿಗೆ ಬಂದಿದೆ. ಆರೋಪಿಗಳು ಅಕ್ರಮವಾಗಿ ಕ್ರೀಡಾಂಗಣವನ್ನು ಪ್ರವೇಶಿಸಿದ್ದರು.

→ 4



ಸಂಬಳಕ್ಕಾಗಿ ಸಿಸಿಟಿವಿ ಕಟ್!

ಕ್ರೀಡಾಂಗಣದ ಭದ್ರತೆಗಾಗಿ ಅಳವಡಿಸಲಾಗಿದ್ದ ಸಿಸಿಟಿವಿ ನಿರ್ವಹಣೆಯ ಹೊಣೆಯನ್ನು ಐವಿಎಸ್ ಡಿಜಿಟಲ್ ಸೊಲ್ಯೂಷನ್ ಎಂಬ ಕಂಪನಿಗೆ ಉಪಗುತ್ತಿಗೆ ನೀಡಲಾಗಿತ್ತು. ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಹಾಗೂ ಅಬ್ದುಲ್ ಕಲಾಂ ಎಂಬವರು ಈ ಕೃತ್ಯ ಎಸಗಿದ್ದಾರೆ ಎಂಬುದು ಪೊಲೀಸರ ವಿಚಾರಣೆಯಿಂದ ದೃಢಪಟ್ಟಿದೆ. ಆರೋಪಿಗಳಿಬ್ಬರಿಗೂ ಕಂಪನಿಯಿಂದ ಬರಬೇಕಿದ್ದ ಸಂಬಳ ಬಾಕಿ ಇತ್ತು. ಎಷ್ಟು ಕೇಳಿದರೂ ಕಂಪನಿ ಸಂಬಳ ನೀಡದ ಕಾರಣ ಕೋಪಗೊಂಡು ಸಂಸ್ಥೆಗೆ ಪಾಠ ಕಲಿಸಲು ಈ ಕೃತ್ಯ ಎಸಗಿದ್ದಾರೆಂದು ವಿಚಾರಣೆ ವೇಳೆ ತಿಳಿದು ಬಂದಿದೆ. ಆರೋಪಿಗಳ ವಿಚಾರಣೆ ಮುಂದುವರಿದಿದೆ.

ಪಂಚಮಶಾಲಿ ಪೀಠದ ಗದ್ದಲ ತಾರಕಕ್ಕೆ

ಗೊಂದಲದ ನಡುವೆ ಲೆಕ್ಕ ಕೊಟ್ಟ ಟ್ರಸ್ಟ್, ಪರ-ವಿರುದ್ಧ ಘೋಷಣೆ

ದಾವಣಗೆರೆ: ಹರಿಹರ ಹೊರವಲಯದ ಪಂಚಮಸಾಲಿ ಪೀಠದಲ್ಲಿ ಸ್ವಾಮೀಜಿ ಮತ್ತು ಟ್ರಸ್ಟ್ ನಡುವಣ ಜಗಳ ತಾರಕ್ಕೇರಿದೆ. ಸ್ವಾಮೀಜಿ ಮತ್ತು ಟ್ರಸ್ಟಿಗಳ ಉಚ್ಚಾಟನೆ ಪ್ರಕರಣದ ನಡುವೆ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅವರು 2008ರಿಂದ 2026ರ ವರೆಗೆ ಮಠಕ್ಕೆ ಸರಕಾರ, ದಾನಿಗಳು, ಸಮಾಜ ಬಾಂಧವರು ನೀಡಿರುವ ಹಣದ ಲೆಕ್ಕ ಒಪ್ಪಿಸಿದ್ದಾರೆ. ಮಠದ ಆವರಣದಲ್ಲಿ ಪರ-ವಿರುದ್ಧ ಘೋಷಣೆಗಳ ನಡುವೆ ಉಮಾಪತಿ ಸುಮಾರು ಮೂರು ಗಂಟೆಗಳ ಕಾಲ ಲೆಕ್ಕ ಪತ್ರ ಮಂಡಿಸಿದರು. ಆದರೆ ಈ ಲೆಕ್ಕವನ್ನು ಒಪ್ಪಿಕೊಳ್ಳಲು ನಿರಾಕರಿಸಿರುವ ವಚನಾನಂದ ಸ್ವಾಮೀಜಿ, ಟ್ರಸ್ಟ್, 'ಕೃಷ್ಣನ ಲೆಕ್ಕದ ಬದಲು ರಾಮನ ಲೆಕ್ಕ ಕೊಡಲಿ' ಎಂದು ಹೇಳಿದ್ದಾರೆ.

ಸೋಮವಾರ ಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಲೆಕ್ಕ ಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಧರ್ಮದರ್ಶಿ ಬಿ.ಸಿ. ಉಮಾಪತಿ ಅವರು, ಒಟ್ಟು 18 ವರ್ಷಗಳಲ್ಲಿ ಮಠಕ್ಕೆ 27 ಕೋಟಿ 61 ಲಕ್ಷ 57 ಸಾವಿರದ 518 ರು.ಗಳ ದೇಣಿಗೆ ಬಂದಿದೆ. ಸರಕಾರದಿಂದ ಬಂದಿರುವ 12.70 ಕೋಟಿ ರು., ಮರಳು ಮಾರಾಟ ಮಾಡಿದ 10 ಲಕ್ಷ ರು., ಸಂಡೂರು ನಾಗನಗೌಡ ಅವರ 2 ಕೋಟಿ ರೂ., ಬಸವರಾಜ ಬೊಮ್ಮಾಯಿ ಅವರ 15 ಲಕ್ಷ, ದೇವಸ್ಥಾನ ನಿರ್ಮಾಣಕ್ಕೆ ಶಾಮನೂರು ಶಿವಶಂಕರಪ್ಪ 1 ಕೋಟಿ ರು. ನೀಡಿರುವುದು ಸೇರಿದಂತೆ ಒಟ್ಟು 27 ಕೋಟಿ ರು. ಸೇರಿದಂತೆ ರಾಜ್ಯಾದ್ಯಂತ ದಾನಿಗಳು ನೀಡಿರುವ ಅಷ್ಟೂ ದಾನಿಗಳ ಹೆಸರನ್ನು ಉಲ್ಲೇಖಿಸಿದರು.

→ 4

ಗೊಂದಲದ ವಾತಾವರಣ

ಲೆಕ್ಕ ಕೊಡುವ ವೇದಿಕೆ ಕಾರ್ಯಕ್ರಮ ಆರಂಭವಾದ ಕೆಲವೇ ಕ್ಷಣಗಳಲ್ಲಿ ಮಠದೊಳಗಿದ್ದ ವಚನಾನಂದ ಶ್ರೀಗಳು ಮಠದಿಂದ ಹೊರನಡೆದರು. ಇದನ್ನು ಕಂಡ ಭಕ್ತ ಸಮೂಹ ಶ್ರೀಗಳ ಹಿಂದೆ ನಡೆದು ಕೆಲ ಕಾಲ ಗೊಂದಲವಾಯಿತು. ಅರ್ಧ ಗಂಟೆಯ ನಂತರ ಮತ್ತೆ ವೇದಿಕೆಯತ್ತ ಆಗಮಿಸಿದ ಸ್ವಾಮೀಜಿ ಪರ ಭಕ್ತರು, ಟ್ರಸ್ಟಿಗಳ ವಿರುದ್ಧ ಧಿಕ್ಕಾರ ಕೂಗಿ, ಕೃಷ್ಣನ ಲೆಕ್ಕ ಬೇಡ, ರಾಮನ ಲೆಕ್ಕ ಕೊಡಿ, ನಿಮ್ಮ ಲೆಕ್ಕಕ್ಕೆ ನಮ್ಮ ವಿರೋಧವಿದೆ ಎಂದು ವೇದಿಕೆ ಬಲಭಾಗದಲ್ಲಿ ನಿಂತು ಹರಹರ ಮಹದೇವ್, ಜೈ ಪಂಚಮಸಾಲಿ.. ಘೋಷಣೆ ಕೂಗಿದರು. ಈ ವೇಳೆ ಸಮಾಜದ ಮುಖಂಡ ಎಚ್.ಎಸ್. ನಾಗರಾಜ್ ಸಿಡಿಮಿಡಿಗೊಂಡು, 'ನಿಮ್ಮ ಬೆದರಿಕೆಗೆ ಬಗ್ಗುವವರು ನಾವಲ್ಲ. ನೀವು ಲೆಕ್ಕ ಕೇಳಿದ್ದೀರಿ. ನಾವು ಕೊಡುತ್ತಿದ್ದೇವೆ ಎಂದರು.



ಸಭೆಯಿಂದ ದೂರ ಉಳಿದ ವಚನಾನಂದ ಶ್ರೀ

ಲೆಕ್ಕ ಕೊಡಿ ಎಂದು ಕಳೆದ ಎರಡು ವಾರಗಳಿಂದ ಹೋರಾಟ ನಡೆಸಿದ್ದ ಲೆಕ್ಕ ಕೊಡಿ ಸಮಿತಿ ಮುಖಂಡರು ಹಾಗೂ ವಚನಾನಂದ ಶ್ರೀಗಳು ಲೆಕ್ಕ ಕೊಡುವ ಕಾರ್ಯಕ್ರಮಕ್ಕೆ ಹಾಜರಾಗಲಿಲ್ಲ. ಈ ಕುರಿತು ವಚನಾನಂದ ಶ್ರೀ ಪ್ರತಿಕ್ರಿಯಿಸಿ, ಅವರು ಕೊಡುವ ಕೃಷ್ಣನ ಲೆಕ್ಕ ನಾವು ಪಡೆಯುವುದಿಲ್ಲ, ಶ್ರೀರಾಮನ ಲೆಕ್ಕ ಕೊಟ್ಟರೆ ಮಾತ್ರ ನಾವು ಕೇಳುತ್ತೇವೆ ಎಂದು ಸಭೆಯಿಂದ ದೂರ ಉಳಿದರು.

ಸಫಾರಿಯಲ್ಲಿನ್ನು ಮೊಬೈಲ್ ಬಳಸುವಂತಿಲ್ಲ

ಪ್ರವಾಸಿಗರು, ಸಿಬ್ಬಂದಿ ಮೊಬೈಲ್ ಬಳಕೆಗೆ ಇಲಾಖೆ ನಿರ್ಬಂಧ

ಬೆಂಗಳೂರು: ವನ್ಯಜೀವಿ ಸಂರಕ್ಷಣೆ ಮತ್ತು ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಕರ್ನಾಟಕ ಅರಣ್ಯ ಇಲಾಖೆ ಸಫಾರಿ ವೇಳೆ ಮೊಬೈಲ್ ಬಳಕೆಗೆ ಕಟ್ಟುನಿಟ್ಟಿನ ನಿಯಂತ್ರಣ ಹೇರಲು ಮುಂದಾಗಿದೆ. ಇನ್ನು ಮುಂದೆ ಸಫಾರಿ ವೇಳೆ ಸೆಲ್ಫಿ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲು, ಸಫಾರಿಗೆ ತೆರಳುವವರು ತಮ್ಮ ಮೊಬೈಲ್‌ಗಳನ್ನು ಏರೋಪ್ಲೇನ್ ಮೋಡ್‌ನಲ್ಲಿ ಇಡುವುದನ್ನು ಕಡ್ಡಾಯಗೊಳಿಸಲು ಇಲಾಖೆ ನಿರ್ಧರಿಸಿದೆ. ಸುಪ್ರಿಂಕೋರ್ಟ್ ಇತ್ತೀಚೆಗೆ ನೀಡಿದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗಿದೆ.

ಸಫಾರಿ ಪ್ರದೇಶಗಳಲ್ಲಿ ಮೊಬೈಲ್ ಬಳಕೆಯಿಂದ ವನ್ಯಜೀವಿಗಳಿಗೆ ಅಡ್ಡಿಯುಂಟು ಮಾಡುವುದು ಹಾಗೂ ಪ್ರವಾಸಿಗರ ನಡುವೆ ಅನವಶ್ಯಕ ಗದ್ದಲ ಉಂಟಾಗುವುದನ್ನು ತಡೆಯುವುದು ಈ ನಿಯಮದ ಉದ್ದೇಶವಾಗಿದೆ. ರಣಥಂಬೋರ್, ಸರಿಸ್ಕಾ ಮತ್ತು ಇತರ ಹುಲಿ ಮೀಸಲು ಪ್ರದೇಶಗಳ ಸಫಾರಿ ವಲಯಗಳಲ್ಲಿ ಈಗಾಗಲೇ ನಿಯಮ ಸಂಪೂರ್ಣವಾಗಿ ಜಾರಿಗೆ ತರಲಾಗಿದ್ದರೂ, ಕರ್ನಾಟಕದಲ್ಲಿ ಸಂಪೂರ್ಣ ವಾಗಿ ಜಾರಿಗೆ ತಂದಿರಲಿಲ್ಲ. ಇದೀಗ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಮುಂದಾಗಿದೆ.

ಸಫಾರಿ ವೇಳೆ ವನ್ಯಜೀವಿಗಳಿಗೆ ಯಾವುದೇ ರೀತಿಯಲ್ಲೂ ಅಡ್ಡಿಪಡಿಸುವ ಅಂಶಗಳನ್ನು ತಪ್ಪಿಸಬೇಕು. ಅತಿಥಿಗಳು ಮತ್ತು ಸಿಬ್ಬಂದಿ ಸೇರಿದಂತೆ ಸಫಾರಿಗೆ ಹೋಗುವ ಎಲ್ಲರೂ ತಮ್ಮ ಮೊಬೈಲ್ ಏರೋಪ್ಲೇನ್ ಮೋಡ್‌ನಲ್ಲಿ ಇಡಲು ನಿರ್ದೇಶಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಕರ್ನಾಟಕದಲ್ಲಿ ಸಫಾರಿಗಳು ನಿಯಂತ್ರಿತವಾಗಿ ನಡೆಯುತ್ತಿರುವುದರಿಂದ ಇತರ ರಾಜ್ಯಗಳಂತೆ ಸಂಪೂರ್ಣ ಮೊಬೈಲ್ ನಿಷೇಧ ಅಗತ್ಯವಿಲ್ಲ. ಆದರೆ, ಪ್ರಾಣಿಗಳಿರುವ ಸ್ಥಳದ ಮಾಹಿತಿ ಹಂಚಿಕೊಳ್ಳುವುದು, ಲೈವ್ ಸಂವಹನ ನಡೆಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಹುಲಿ, ಚಿರತೆಯಂತಹ ಪ್ರಾಣಿಗಳು ಇರುವ ಮಾಹಿತಿ ಹಂಚಿಕೊಂಡರೆ ಒಂದೇ ಸ್ಥಳದಲ್ಲಿ ಹೆಚ್ಚಿನ ವಾಹನಗಳು ಸೇರುವ ಸಾಧ್ಯತೆ ಇದೆ. ಇದರಿಂದ ವನ್ಯಜೀವಿಗಳಿಗೆ ಅಡ್ಡಿಯುಂಟು ಮಾಡಿದಂತಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಸಫಾರಿ ವಾಹನ ಚಾಲಕರು ಹಾಗೂ ಮಾರ್ಗದರ್ಶಕರಿಗೂ ಈ ನಿಯಮ ಅನ್ವಯವಾಗಬೇಕು. ವೈರ್‌ಲೆಸ್ ರೇಡಿಯೋಗಳ ಬಳಕೆಗೂ ನಿಯಮ ಅನ್ವಯವಾಗಲಿದೆ. ಸುಪ್ರಿಂ ಕೋರ್ಟ್ ನಿರ್ದೇಶನವನ್ನು 2026ರ ಮೇ 17ರೊಳಗೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಹುಲಿ ಅರಣ್ಯಗಳಿನ್ನು ಸೈಲೆನ್ಸ್ ಝೋನ್



ಫೆಬ್ರವರಿ 17, 2026 ರೊಳಗೆ ಪರಿಸರ-ಸೂಕ್ಷ್ಮ ವಲಯಗಳನ್ನು ಒಳಗೊಂಡಂತೆ ಹುಲಿ ಅಭಯಾರಣ್ಯಗಳ ಸಂಪೂರ್ಣ ಪ್ರದೇಶವನ್ನು ಶಬ್ದ ಮಾಲಿನ್ಯ (ನಿಯಂತ್ರಣ) ನಿಯಮಗಳು, 2000 ರ ಅಡಿಯಲ್ಲಿ ಸೈಲೆನ್ಸ್ ಝೋನ್ ಎಂದು ಘೋಷಿಸಬೇಕೆಂದು ಸುಪ್ರಿಂಕೋರ್ಟ್ ನಿರ್ದೇಶಿಸಿದೆ. ಎಲ್ಲಾ ಅರಣ್ಯಗಳನ್ನು ಮೌನ ವಲಯಗಳಾಗಿ ಘೋಷಿಸುವುದನ್ನು ಪರಿಗಣಿಸುವಂತೆ ನ್ಯಾಯಾಲಯವು ಸರಕಾರಗಳಿಗೆ ಸೂಚಿಸಿವೆ. ಆದ್ದರಿಂದ, ದೇಶಾದ್ಯಂತ ಅನ್ವಯವಾಗುವ ನವೆಂಬರ್ 2025 ರ ತೀರ್ಪಿನಲ್ಲಿರುವ ನಿರ್ದೇಶನಗಳನ್ನು ರಾಜ್ಯ ಸರಕಾರ ಪಾಲಿಸಬೇಕು ಎಂಬ ಅಭಿಪ್ರಾಯ ಇಲಾಖೆಯಲ್ಲಿ ವ್ಯಕ್ತವಾಗಿದೆ.

ಸಮಾಚಾರ ಸಣ್ಣದಲ್ಲ

ಗುಡ್ನಾಪುರ ಸರಕಾರಿ ಶಾಲೆ ನೂರಕ್ಕೆ ನೂರು ಸಾಧನೆ

ಶಿರಸಿ: ಈ ಬಾರಿಯ ಎಸ್‌ಎಸ್‌ಎಲ್ಸಿ ವಾರ್ಷಿಕ ಪರೀಕ್ಷೆ ಫಲಿತಾಂಶದಲ್ಲಿ ಗುಡ್ನಾಪುರದ ಸರಕಾರಿ ಪ್ರೌಢಶಾಲೆಯ ಫಲಿತಾಂಶ ಪ್ರತಿಶತ 100 ಸಾಧನೆಯನ್ನು ಮಾಡಿದೆ. ಈ ಸರಕಾರಿ ಪ್ರೌಢಶಾಲೆಯಲ್ಲಿ ಹೊಸ ಶಾಲೆಯಾಗಿದ್ದು, ಈ ಶಾಲೆಯ ಪ್ರಥಮ ಬ್ಯಾಚ್ ನ ಫಲಿತಾಂಶ ಪಾಲಕರಿಗೆ ಊರ ನಾಗರಿಕರಿಗೆ ಶಿಕ್ಷಕರಿಗೆ ಸಂತಸವನ್ನು ನೀಡಿದೆ. ಈ ಪ್ರೌಢಶಾಲೆಯ ಈ ವರ್ಷದ ಹತ್ತನೇ ತರಗತಿ ಪರೀಕ್ಷೆಗೆ ಒಟ್ಟು 10 ವಿದ್ಯಾರ್ಥಿಗಳು ಕುಳಿತಿದ್ದರು. ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 625ಕ್ಕೆ 554 ಅಂಕಗಳನ್ನು ಗಳಿಸಿ ಶೇ. 89 ಪ್ರತಿಶತದೊಂದಿಗೆ ಶ್ರೇಯಸ್ ಸಂತೋಷ್ ನಾಯ್ಕ ಪ್ರಥಮ ಸ್ಥಾನ, ವೈಷ್ಣವಿ ಗಣಪತಿ ನಾಯ್ಕ 488 ಅಂಕ 78 ಪ್ರತಿಶತದೊಂದಿಗೆ ದ್ವಿತೀಯ ಸ್ಥಾನ, ಕಾವ್ಯ ಬಸವರಾಜ ನಾಯ್ಕ್ 475 ಅಂಕ 76 ಪ್ರತಿಶತದೊಂದಿಗೆ ತೃತೀಯ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಎಸ್ ಡಿಎಂಸಿ ಅಧ್ಯಕ್ಷರು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಅಭಿನಂದನೆ ವ್ಯಕ್ತಪಡಿಸಿದೆ ಎಂದು ಪ್ರಕಟನೆ ತಿಳಿಸಿದೆ.

ನಾಳೆ ವಿದ್ಯುತ್ ಪೂರೈಕೆ ವ್ಯತ್ಯಯ

ಕಾರವಾರ: ಕುಮಟಾ ಉಪವಿಭಾಗ ವ್ಯಾಪ್ತಿಯಲ್ಲಿ 33ಕೆ.ವಿ ಗೋಕರ್ಣ ಮಾರ್ಗದ ತುರ್ತುನಿರ್ವಹಣಾ ಕಾರ್ಯವಿರುವುದರಿಂದ ಗೋಕರ್ಣ ಭಾಗದ ಎಲ್ಲ ಭಾಗಗಳಲ್ಲಿ ಏ.29 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಮತ್ತು 11ಕೆ.ವಿ ಮಾಸುರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮತ್ತು 11ಕೆ.ವಿ ಮಿರ್ಜಾನ ಮತ್ತು 11ಕೆವಿ ಕತಗಾಲ ಮಾರ್ಗದಲ್ಲಿ ಹೊಸ 11ಕೆ.ವಿ ಮಾರ್ಗದ ರಚನೆ ಕಾಮಗಾರಿ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕುಮಟಾ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಟಿಐ ತರಬೇತಿ ಪ್ರವೇಶ ಅರ್ಜಿ ಆಹ್ವಾನ

ಕಾರವಾರ: ಪ್ರಸ್ತಕ ಸಾಲಿನ ಐ.ಟಿ.ಐ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಇಲಾಖೆ ವೆಬ್ ಸೈಟ್ www.cite.karnataka.gov.in ಮೂಲಕ ಮೇ.8 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಹಿಳಾ ಅಭ್ಯರ್ಥಿಗಳಿಗೆ ವಾರ್ಷಿಕ ಬೋಧನಾ ಶುಲ್ಕ ವಿನಾಯತಿ ನೀಡಲಾಗಿದ್ದು, ವೆಲ್ಡರ್ ವೃತ್ತಿಗೆ 8ನೇ ತರಗತಿ ಪಾಸ್ ಅಥವಾ 10ನೇ ತರಗತಿ ಅನುತ್ತೀರ್ಣ ಆದವರು ಕೂಡಾ ಅರ್ಜಿ ಸಲ್ಲಿಸಬಹುದು. ಪ್ರವೇಶ ಪಡೆಯಬಯಸುವ ಅಭ್ಯರ್ಥಿಗಳು ಇಲೆಕ್ಟ್ರಿಕಲ್, ಫೀಟರ್,ಟರ್ನರ್, ಇಂಡಸ್ಟ್ರೀಯಲ್ ರೋಬೋಟಿಕ್ ಅಂಡ್ ಡಿಜಿಟಲ್ ಮ್ಯಾನಿಪ್ಯಾಕ್ಚರಿಂಗ್, ಟೇಕ್ನಿಶಿಯನ್, ಮ್ಯಾನಿ ಪ್ಯಾಕ್ಚರಿಂಗ್ ಪ್ರೋಸೆಸ್ ಕಂಟ್ರೋಲ್ ಅಂಡ್ ಅಟೋಮಷಿನ್, ಸಿಎನ್ ಸಿ ಮಷಿನ್ ಟೆಕ್ನಿಷಿನ್, ವರ್ಚಲ್ ಅನಾಲಿಸಸ್ ಅಂಡ್ ಡಿಸೈನರ್, ಎಂಜಿನೀಯರಿಂಗ್ ಡಿಸೈನ್ ಟೆಕ್ನಿಷಿಯನ್ ಉದ್ಯೋಗ ಯೋಜನೆಯಲ್ಲಿನ ವೃತ್ತಿಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರವೇಶಾತಿಗೆ ಕಡ್ಡಾಯವಾಗಿ ಆಧಾರ ಕಾರ್ಡ್, ಮೊಬೈಲ್ ನಂಬರ, ನಮೂದಿಸಬೇಕು ಆಧಾರ ಕಾರ್ಡ್,ಮೊಬೈಲ್ ನಂಬರ, ಇಮೇಲ್ ಗಳು ತರಬೇತಿ ಮುಗಿಸಿ ಪರೀಕ್ಷೆ ಹಾಜರಾಗುವರಿಗೆ ಬದಲಾಯಿಸವಂತ್ತಿಲ್ಲ. ಹೆಚ್ಚಿನ ಮಾಹಿತಿಗಾಗಿ ಸರಕಾರಿ ತರಬೇತಿ ಸಂಸ್ಥೆ ಬಾಡ ನಂದನಗದ್ದಾ ದೂ.ಸಂ: 9448635044, 7676993526, 8861 930372 ಗೆ ಸಂಪರ್ಕಿಸುವಂತೆ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಕಾರವಾರ: ಚಾಮರಾಜೇಂದ್ರ, ಸರಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯ 2026-27 ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅತಿಥಿ ಉಪನ್ಯಾಸಕ / ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಗೌರವ ಸಂಭಾವನೆ ಆಧಾರದ ಮೇಲೆ ಷರತ್ತು ಹಾಗೂ ನಿಬಂಧನೆಗಳನ್ವಯ ಕಾರ್ಯ ನಿರ್ವಹಿಸಲು ಅನ್ವಯ ಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ (ಗ್ರಾಫಿಕ್) ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ, ಕನ್ನಡ, ಇಂಗ್ಲೀಷ್, ಹಿಂದಿ, ಭಾರತ ಮತ್ತು ಭಾರತೀಯ ಸಂವಿಧಾನ ಹಾಗೂ ಸಂವಿಧಾನ ಮೌಲ್ಯಗಳು, ಪರಿಸರ ಅಧ್ಯಯನ ವಿಷಯದ ಕುರಿತು ಅರ್ಜಿ ಆಹ್ವಾನಿಸ ಲಾಗಿದೆ. ಅರ್ಹ ಆಭ್ಯರ್ಥಿಗಳು ಮೇ.15 ಸಂಜೆ 5.30 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾ ಲಯದ ದೂರವಾಣಿ ಸಂಖ್ಯೆ 0821-2438931 ನ್ನು ಸಂಪರ್ಕಿಸಲು ಸಂಪರ್ಕಿಸುವಂತೆ ಚಾಮರಾಜೇಂದ್ರ, ಸರಕಾರಿ ದೃಶ್ಯಕಲಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಎಸ್. ಮಧು ಬಂಗಾರಪ್ಪ} ಶಿಕ್ಷಣ ಸಚಿವ

ಸರಕಾರದಿಂದ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕೋರ್ಟ್‌ನಲ್ಲಿ ವ್ಯಾಜ್ಯ ಇರುವುದರಿಂದ ನೇಮಕಾತಿ ತಡವಾಗುತ್ತಿದೆ. ರಾಜ್ಯದಲ್ಲಿ ಅತಿ ಹೆಚ್ಚು ನೇಮಕಾತಿ ಇರುವುದು ನಮ್ಮ ಇಲಾಖೆಯಲ್ಲಿ. ನಮ್ಮ ಇಲಾಖೆಯ ಟಿಇಟಿ ಪರೀಕ್ಷೆ ಮುಗಿದಿದೆ. ಈಗ ಸಿಇಟಿ ಪರೀಕ್ಷೆ ಆಗಬೇಕಿದೆ. ಈಗ ಒಳ ಮೀಸಲಾತಿ ಘೋಷಣೆ ಆಗಿರುವುದರಿಂದ ನೇಮಕಾತಿ ಹಾದಿ ಸುಗಮವಾಗಿದೆ.

ಜಿಲ್ಲಾ ನೀರು , ನೈರ್ಮಲ್ಯ ಸಮಿತಿ ಸಭೆ | ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ

ಕುಡಿಯುವ ನೀರಿನ ಸಮಸ್ಯೆಗೆ ತಕ್ಷಣ ಸ್ಪಂದಿಸಿ

ಕಾರವಾರ: ಪ್ರಸಕ್ತ ಬೇಸಿಗೆಯಲ್ಲಿ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಸ್ಪಂದಿಸಿ, ಸಮಸ್ಯೆಗೆ ಸೂಕ್ತ ಪರಿಹಾರ ಒದಗಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ, ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ಬೇಸಿಗೆಯಲ್ಲಿ 41 ಗ್ರಾಮ ಪಂಚಾಯತ್ ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು, 17 ಗ್ರಾಮಗಳಲ್ಲಿ ಸರಕಾರಿ ಮತ್ತು ಖಾಸಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರಿನ ಸರಬರಾಜು ಮಾಡಲು 98 ಖಾಸಗಿ ಬೋರ್‌ವೆಲ್ ಗಳನ್ನು ಗುರುತಿಸಲಾಗಿದ್ದು, ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಸಮಸ್ಯೆ ಕಂಡುಬಂದಲ್ಲಿ ತ್ವರಿತವಾಗಿ ಸ್ಪಂದಿಸಿ, ನೀರು ಒದಗಿಸುವಂತೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ, ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಮಾತನಾಡಿದರು.

ಜಿಲ್ಲೆಯ ಗ್ರಾಮೀಣ ಪ್ರದೇಶಗಳ ನೀರು ಸರಬರಜು ವ್ಯವಸ್ಥೆಯಲ್ಲಿ ಬರುವ ಪೈಪ್‌ಲೈನ್ ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುವಂತೆ ಹಾಗೂ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಪ್ರಾಥಮಿಕ ಹಂತದಲ್ಲಿ ನಿರಂತರವಾಗಿ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಪರಿಶೀಲನೆಗೆ ಒಳಪಡಿಸುವ ಮೂಲಕ ಯಾವುದೇ ಸಂದರ್ಭದಲ್ಲಿ ಕಲುಷಿತ ನೀರು ಸರಬರಾಜು ಆಗದಂತೆ ಕಟ್ಟೆಚ್ಚರ ವಹಿಸುವಂತೆ ನಿರ್ದೇಶನ ನೀಡಿದರು.

ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳ ವೇರಿಯೇಷನ್ ಮತ್ತು ಅವಧಿ ವಿಸ್ತರಣೆ ಪ್ರಸ್ತಾವನೆಯ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಿದ ಅವರು, ಅರಣ್ಯ ಇಲಾಖೆಯ ಅನುಮತಿಗೆ ಸಲ್ಲಿಸಿರುವ ಕಾಮಗಾರಿಗಳ ಕುರಿತಂತೆ ಆಕ್ಷೇಪಣೆಗಳನ್ನು ಬಗೆಹರಿಸಲು ನಿರಂತರವಾಗಿ ಫಾಲೋ ಅಪ್ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮತ್ತು ಬೋರ್‌ವೆಲ್‌ಗಳನ್ನು ಕೊರೆಯುವ ಸಂದರ್ಭದಲ್ಲಿ ಭೂ ವಿಜ್ಞಾನಿಗಳಿಂದ ಪರಿಶೀಲನೆ ನಡೆಸಿ, ಅವರ ಅನುಮತಿಯ ನಂತರ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅಲ್ಲಾ ಭಕಷ್, ಮುಖ್ಯ ಲೆಕ್ಕಾಧಿಕಾರಿ ಆನಂದ್ ಸಾ ಹಬೀಬ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸತ್ಯಪ್ಪ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಕಾಮಗಾರಿ ಶೀಘ್ರವೇ ಪೂರ್ಣಗೊಳಿಸಿ

ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳಲ್ಲಿ ಇದುವರೆಗೆ 745 ಕಾಮಗಾರಿಗಳನ್ನು ಪೂರ್ಣಗೊಳಿಸಿ, 685 ಕಾಮಗಾರಿಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಹಸ್ತಾಂತರಿಸಿ ಶೇ.77.85 ಪ್ರಗತಿ ಸಾಧಿಸಿ, 481.25 ಕೋಟಿ ವೆಚ್ಚ ಮಾಡಿ, ಶೇ.54.76 ಆರ್ಥಿಕ ಪ್ರಗತಿ ಸಾಧಿಸಿದ್ದು, ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಸೂಚಿಸಿದರು.

ಗೋ ರಕ್ಷಣಾ ಅಭಿಯಾನ

ಗೋಸಮ್ಮಾನ ಆಹ್ವಾನ ಅಭಿಯಾನದ ನಿವೇದಕರು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪ್ರತಿಯನ್ನು ತಹಸೀಲ್ದಾರ ಅವರಿಗೆ ಸಲ್ಲಿಸಲಾಯಿತು.

ಶಿರಸಿ: ಗೋ ರಕ್ಷಣಾ ಅಭಿಯಾನದ ಅಡಿಯಲ್ಲಿ, ಭಾರತೀಯ ಸಂಸ್ಕೃತಿ, ಆರ್ಥಿಕತೆ, ಮಾನವ ಆರೋಗ್ಯ, ವಿಷಮುಕ್ತ ಕೃಷಿ, ಪರಿಸರ ಸಮತೋಲನ ಕಾಪಾಡುವಲ್ಲಿ ಹಸುವಿನ ಸ್ಥಾನವು ಮಹತ್ವದ್ದಾಗಿದೆ ಎಂದು ಗೋಸಮ್ಮಾನ ಆಹ್ವಾನ ಅಭಿಯಾನದ ನಿವೇದಕರು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪ್ರತಿಯನ್ನು ತಹಸೀಲ್ದಾರ ಅವರಿಗೆ ಸಲ್ಲಿಸಿದರು ಹಾಗೂ ಇದನ್ನು ಸಂಬಂಧಿಸಿದವರಿಗೆ ಕಳುಹಿಸಬೇಕೆಂದು ಕೋರಿದರು.

ಗೋ ವಂಶವು ಶತಮಾನಗಳಿಂದಲೂ ಭಾರತೀಯ ಪರಂಪರೆಯ ಜೀವನಾಡಿಯಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಗೋವುಗಳಿಗೆ ಸರಿಯಾದ ಸಂರಕ್ಷಣೆ, ಮತ್ತು ಉತ್ತೇಜನದ ಕೊರತೆಯಿಂದಾಗಿ ಗೋ ವಂಶದ ಸ್ಥಿತಿ ಶೋಚನೀಯವಾಗಿದೆ. ಅಭಿಯಾನದ ಅಡಿಯಲ್ಲಿ ಜಾಗೃತ ನಾಗರಿಕರಾದ ನಾವೆಲ್ಲರೂ ಗೋಮಾತೆಯ ರಕ್ಷಣೆ, ಸಂರಕ್ಷಣೆ, ಸೇವೆ, ರಕ್ಷಣೆಗಾಗಿ ಇರುವ ಪ್ರಾರ್ಥನಾ ಪತ್ರವನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ. ಅಲ್ಲದೇ ಈ ಕುರಿತು ತಮ್ಮ ಸಹಕಾರ, ಸಲಹೆ ಸೂಚನೆಗಳನ್ನು, ಮಾರ್ಗದರ್ಶನವನ್ನು ನೀಡಬೇಕೆಂದು ಈ ವಿನಂತಿಸಲಾಗಿದೆ ಎಂದು ಅಭಿಯಾನದ ಮನವಿಯಲ್ಲಿ ವಿವರಿಸಲಾಗಿದೆ.

ಮನವಿ ಸಲ್ಲಿಸಿದ ನಿಯೋಗದಲ್ಲಿ ರಾಮಚಂದ್ರಾಪುರ ಮಠದ ಹವ್ಯಕ ಮಹಾಮಂಡಳದ ಶಿರಸಿ ಅಂಬಾಗಿರಿ ವಲಯದ ಅಧ್ಯಕ್ಷ ಶಂಕರ ಹೆಗಡೆ ಭದ್ರನ್, ಪದಾಧಿಕಾರಿ ಸಾವಿತ್ರಿ ಹೆಗಡೆ, ಕೆ.ಜಿ ಭಟ್ಟ, ಆರ್.ಎಸ್. ಬೈಲಕೇರಿ, ಇಂದಿರಾ ಬೈಲಕೇರಿ, ವಿಜಯಲಕ್ಷ್ಮೀ ಅಂಗಡಿ ಇತರರು ಇದ್ದರು.

ಕೇರಂ: ಮೋಹನ್ ಪ್ರಥಮ

ಶಿರಸಿ: ಸ್ಫೂರ್ತಿ ಕೇರಂ ಅಸೋಸಿಯೇಷನ್ ಅಡಿಯಲ್ಲಿ ಕುಮಾರ ಆಸೀಫ್ ಅನ್ವರ್ ಸಾಬ್ ಹಾಗೂ ಕುಮಾರ ವಿಷ್ಣು ವಿಕ್ರಂ ಹರ್ಡಿಕರ್ ನೇತೃತ್ವದಲ್ಲಿ ನಡೆದ ಮುಕ್ತ ಕೇರಂ ಪಂದ್ಯಾಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪ್ರತಿಭಾನ್ವಿತ ಆಟಗಾರರು ತಮ್ಮ ಕೌಶಲ ಮೆರೆದರು. 50ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡಿದ್ದ ಈ ಪಂದ್ಯಾವಳಿಯಲ್ಲಿ ಬೆಂಗಳೂರಿನ ಆಟಗಾರರು ಪ್ರಾಬಲ್ಯ ಸಾಧಿಸಿದರು.

ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮೋಹನ್ ಬಾಬು ಪ್ರಥಮ ಸ್ಥಾನ ಗಳಿಸಿದರೆ, ಶಿವಮೊಗ್ಗದ ಹರೀಶ್ ದ್ವಿತೀಯ ಹಾಗೂ ಬೆಂಗಳೂರಿನ ಅಪ್ಪು ತೃತೀಯ ಸ್ಥಾನ ಪಡೆದರು. ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಅಪ್ಪು ಮತ್ತು ದಾವಣಗೆರೆಯ ಸಯ್ಯದ್ ಜೋಡಿ ಪ್ರಥಮ ಬಹುಮಾನ ಮುಡಿಗೇರಿಸಿಕೊಂಡಿತು. ಮೋಹನಬಾಬು ಹಾಗೂ ಭದ್ರಾವತಿಯ ದಿವಾಕರ ಜೋಡಿ ದ್ವಿತೀಯ ಸ್ಥಾನ ಗಳಿಸಿದರೆ, ಶಿವಮೊಗ್ಗದ ಶ್ರೀನಿವಾಸ್ ಮತ್ತು ಸಾದಿಕ್ ಜೋಡಿ ತೃತೀಯ ಬಹುಮಾನಕ್ಕೆ ಭಾಜನರಾದರು.

ಮುಕ್ತಾಯ ಸಮಾರಂಭದಲ್ಲಿ ರಾಜ್ಯ ಮಟ್ಟದ 18 ವರ್ಷದೊಳಗಿನ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ ಕುಮಾರಿ ಅಪೇಕ್ಷಾ ಬಾಲಚಂದ್ರ ಭಂಡಾರಿ ಅವರನ್ನು ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ರಾಷ್ಟ್ರೀಯ ಆಟಗಾರರಾದ ಶಾಲಿನಿ ಹೆಗಡೆ ಹಾಗೂ ಪ್ರಿಯಾ ಭಟ್ ಅವರು ಸಮಗ್ರವಾಗಿ ಕಾರ್ಯಕ್ರಮದ ನಿರೂಪಣೆ ನಿರ್ವಹಿಸಿದರು.

ಸಮಾರೋಪ ಸಮಾರಂಭದಲ್ಲಿ ಮಾಜಿ ನಗರಸಭಾ ಅಧ್ಯಕ್ಷ ಪ್ರದೀಪ ಶೆಟ್ಟಿ, ಸ್ಫೂರ್ತಿ ಕೇರಂ ಅಸೋಸಿಯೇಷನ್ ಅಧ್ಯಕ್ಷ ಚಂದ್ರು ಭಟ್, ಉಪಾಧ್ಯಾಕ್ಷ ಮಹೇಶ್ ಗುಡಿಗಾರ್,ಉದ್ಯಮಿ ದಿನೇಶ್ ನಾಯ್ಕ್ ಮತ್ತು ಕೆನರಾ ಬ್ಯಾಂಕ್ ಪ್ರಬಂಧಕರಾದ ರೋಹಿತ್ ಕುಡಾಲ್ಕರ್ ಉಪಸ್ಥಿತರಿದ್ದರು. ವಿಜೇತರಿಗೆ ಆಕರ್ಷಕ ಟ್ರೋಫಿ ಹಾಗೂ ನಗದು ಬಹುಮಾನವನ್ನು ವಿತರಿಸಿ ಶುಭ ಹಾರೈಸಲಾಯಿತು.

ಗೋಮಾತೆಗೆ ವಿಶೇಷ ಸ್ಥಾನಮಾನ ಸಿಗಲಿ

ಗೋಹತ್ಯಾ ನಿಷೇಧ ಮತ್ತು ಗೋಮಾತೆಗೆ ರಾಷ್ಟ್ರದಲ್ಲಿ ವಿಶೇಷ ಸ್ಥಾನಮಾನ ಗೌರವ ನೀಡುವಂತೆ ಆಗ್ರಹಿಸಿ ಗೋಪ್ರೇಮಿಗಳು ರಾಷ್ಟಪತಿಗಳಿಗೆ ಕಳಿಸುವ ಮನವಿ ಪತ್ರವನ್ನು ಕುಮಟಾ ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ಕುಮಟಾ: ಗೋಹತ್ಯಾ ನಿಷೇಧ ಮತ್ತು ಗೋಮಾತೆಗೆ ರಾಷ್ಟ್ರದಲ್ಲಿ ವಿಶೇಷ ಸ್ಥಾನಮಾನ ಗೌರವ ಪ್ರಾಪ್ತಿಗಾಗಿ ಸಂತರ ನೇತೃತ್ವದಲ್ಲಿ ಗೋಮಾತಾ ಸಮ್ಮಾನ್ ಅಭಿಯಾನ ಆರಂಭವಾಗಿದ್ದು, ಈ ಅಭಿಯಾನದ ಅಂಗವಾಗಿ ಗೋ ಸಂರಕ್ಷಣೆ ಮತ್ತು ಗೋವಂಶ ಸಂರಕ್ಷಣಾ ಕುರಿತು ಶ್ರೀ ರಾಮಚಂದ್ರಪುರ ಮಠದ ನಿರ್ದೇಶನದಂತೆ ಇಲ್ಲಿನ ಗೋಪ್ರೇಮಿಗಳು ಸೋಮವಾರ ಇಲ್ಲಿನ ತಹಸೀಲ್ದಾರರ ಮೂಲಕ ರಾಷ್ಟ್ರಪತಿ, ಪ್ರಧಾನ ಮಂತ್ರಿ, ರಾಜ್ಯಪಾಲರು ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಿಗೆ ಪ್ರತ್ಯೇಕ ಮನವಿ ಪತ್ರವನ್ನು ಕಳಿಸಿಕೊಟ್ಟರು.

ಈ ಮನವಿಯನ್ನು ಹವ್ಯಕ ಮಹಾ ಮಂಡಲದ ಪ್ರಾಂತದ ಉಪಾಧ್ಯಕ್ಷ ಜಿ. ಎಸ್. ಹೆಗಡೆ, ಹೊಸಾಡ್ ಗೋ ಬ್ಯಾಂಕಿನ ಅಧ್ಯಕ್ಷ ಮುರಳಿಧರ್‌ಪ್ರಭು ಕುಮಟಾ ಹವ್ಯಕ ಮಂಡಲ ಅಧ್ಯಕ್ಷ ಎಸ್.ವಿ. ಹೆಗಡೆ, ಭದ್ರನ್, ಮಂಡಲದ ಕೋಶಾಧಿಕಾರಿ ಗಣಪತಿ ಉಪ್ಪುಂದ, ಗೋಶಾಲೆ ಹೊಸಾಡ್ ಮತ್ತು ಕುಮಟಾವಲಯ ಕಾರ್ಯದರ್ಶಿ ಗೋಪಾಲಕೃಷ್ಣ ಉಗ್ರು, ಕುಮಟಾ ಮಂಡಲ ಸಹಾಯ ಪ್ರದಾನ ಪ್ರದೀಪ ಹೆಗಡೆ ತಹಸೀಲ್ದಾರರಿಗೆ ಸಲ್ಲಿಸಿದರು.

ಏಜೆಂಟಿಕ್ ಎಐ ಹ್ಯಾಕಥಾನ್- 2026 ಯಶಸ್ವಿ

ಹುಬ್ಬಳ್ಳಿ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವತಿಯಿಂದ ಏಜೆಂಟಿಕ್ ಎಐ ಹ್ಯಾಕಥಾನ್ - 2026 ಎಂಬ ಎರಡು ದಿನಗಳ ಅಂತರ ಕಾಲೇಜು ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಹ್ಯಾಕಥಾನ್‌ಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧ ಕಾಲೇಜುಗಳಿಂದ 20ಕ್ಕೂ ಹೆಚ್ಚು ಕಾಲೇಜುಗಳಿಂದ 135 ತಂಡಗಳು ಆಗಮಿಸಿದ್ದು, ಸ್ಪರ್ಧಾತ್ಮಕ ಆಯ್ಕೆ ಪ್ರಕ್ರಿಯೆಯ ಬಳಿಕ 25 ತಂಡಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಯಿತು.

ಎನ್ವಿಡಿಯಾ ಸಂಸ್ಥೆಯ ನಾಯಕ ಬಾಲಾಜಿ ಹೊಳೂರು ಅವರು, ಬುದ್ಧಿವಂತ ಯಂತ್ರಗಳಲ್ಲಿ ಏಜೆಂಟಿಕ್ ಎಐ: ಗ್ರಹಿಕೆಯಿಂದ ಸ್ವಯಂ ಕ್ರಿಯೆಗೆ ಎಂಬ ವಿಷಯ ಕುರಿತು ಮಾತನಾಡಿದರು. ಎಂಬೆಡೆಡ್ ಎಐ ಮತ್ತು ಸುಧಾರಿತ ದೃಶ್ಯ ತಂತ್ರಜ್ಞಾನಗಳು ಯಂತ್ರಗಳಿಗೆ ವಾಸ್ತವಿಕ ಪರಿಸರಗಳಲ್ಲಿ ಗ್ರಹಿಸಲು, ವಿಶ್ಲೇಷಿಸಲು ಮತ್ತು ಸ್ವಯಂ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತಿರುವುದನ್ನು ವಿವರಿಸಿದರು. ನಂತರ ವಿದ್ಯಾರ್ಥಿಗಳಿಗೆ ಏಜೆಂಟಿಕ್ ಎಐ ಕುರಿತ ತೀವ್ರವಾದ ಕೈಗಾರಿಕಾ ಆಧಾರಿತ ಕಾರ್ಯಾಗಾರ ನಡೆಸಲಾಯಿತು. ಆಧುನಿಕ ಎಐ ಫ್ರೇಮ್ ವರ್ಕ್‌ಗಳು, ವ್ಯವಸ್ಥೆಗಳು ಹಾಗೂ ಮಲ್ಟಿ-ಏಜೆಂಟ್ ಆರ್ಕಿಟೆಕ್ಚರ್ಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು. ಇದು ಹ್ಯಾಕಥಾನ್ ಸವಾಲುಗಳಿಗೆ ಉತ್ತಮ ನೆಲೆ ಒದಗಿಸಿತು.

ತಂಡಗಳು ಏಜೆಂಟಿಕ್ ಎಐ ಆಧಾರಿತ ನವೀನ ಪರಿಹಾರ ಅಭಿವೃದ್ಧಿಪಡಿಸಿದರು. ಎನ್ವಿಡಿಯಾ ಸಂಸ್ಥೆಯ ಹಿರಿಯ ಪ್ರಾಜೆಕ್ಟ್ ಮ್ಯಾನೇಜರ್‌ಗಳಾದ ನರೇಂದ್ರ ಹಾಗೂ ಶಂತನು ನಾಥ್ ಸೃಜನಶೀಲತೆ, ತಾಂತ್ರಿಕ ಸಾಮರ್ಥ್ಯ ಮತ್ತು ವಾಸ್ತವಿಕ ಅನ್ವಯಿಕತೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಿದರು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವತಿಯಿಂದ ಏಜೆಂಟಿಕ್ ಎಐ ಹ್ಯಾಕಥಾನ್ - 2026 ಕಾರ್ಯಕ್ರಮ ನಡೆಯಿತು.

ವಿಜೇತ ಕಾಲೇಜಿನ ತಂಡಗಳು

ಏಜೆಂಟಿಕ್ ಎಐ ಹ್ಯಾಕಥಾನ್ - 2026 ಎಂಬ ಎರಡು ದಿನಗಳ ಅಂತರ ಕಾಲೇಜು ಕಾರ್ಯಕ್ರಮದಲ್ಲಿ ವಿಜೇತ ತಂಡಗಳ ವಿವರ. ಪ್ರಥಮ ಬಹುಮಾನ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ, ದ್ವಿತೀಯ: ಆರ್‌ವಿ ಕಾಲೇಜ್ ಆಫ್ ಎಂಜಿನಿಯರಿಂಗ್, ತೃತೀಯ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ, ಪ್ರೋತ್ಸಾಹ: ಎಂವಿಐಟಿ ತಂಡ ಪಡೆದುಕೊಂಡವು.

ಪ್ಯಾನ್-ಐಐಟಿ ಬೆಂಗಳೂರು ಸಮಿಟ್ ಮೇ 16ರಂದು

ಕಾರವಾರ: ಪ್ಯಾನ್ ಐಐಟಿ ಅಲ್ಯೂಮ್ನಿ ಇಂಡಿಯಾ ಅಸೋಸಿಯೇಷನ್ ಮತ್ತು ಕರ್ನಾಟಕ ಸರಕಾರದ ಸಹಯೋಗದಲ್ಲಿ, ಮೇ.16ರಂದು ಬೆಂಗಳೂರಿನಲ್ಲಿ 'ಪ್ಯಾನ್ -ಐಐಟಿ ಬೆಂಗಳೂರು ಸಮಿಟ್ 2026' ಆಯೋಜಿಸಲಾಗಿದೆ.

'ತಂತ್ರಜ್ಞಾನದಲ್ಲಿನ ಸ್ವಾಯತ್ತತೆ' ಎಂಬ ವಿಷಯದಡಿ ಈ ಸಮಿಟ್ ನಡೆಯಲಿದೆ ಎಂದು ಕರ್ನಾಟಕ ಸರಕಾರದ ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ, ವಿಶೇಷವಾಗಿ ಬೆಂಗಳೂರು, ಇಂದು ಭಾರತದ ತಂತ್ರಜ್ಞಾನ ಮಹತ್ವಾಕಾಂಕ್ಷೆಯ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ದೇಶದ ಪ್ರಮುಖ ಜಿಡಿಪಿ ಕೊಡುಗೆ ನೀಡುವ ನಗರಗಳಲ್ಲಿ ಬೆಂಗಳೂರು ಒಂದಾಗಿದ್ದು, ವೆಂಚರ್ ಕ್ಯಾಪಿಟಲ್ ಹೂಡಿಕೆಗಳ ಪ್ರಮುಖ ಕೇಂದ್ರವಾಗಿಯೂ ಗುರುತಿಸಿಕೊಂಡಿದೆ. ಸ್ಟಾರ್ಟ್‌ಅಪ್‌ಗಳ ನಿಧಿ ಸಂಗ್ರಹ ಹಾಗೂ ನವೀನ ಚಟುವಟಿಕೆಗಳಲ್ಲಿ ಮಹತ್ತರ ಪಾತ್ರವಹಿಸಿರುವುದು, ಸಾವಿರಾರು ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿಶ್ವದ ಅತಿ ದೊಡ್ಡ ಪ್ರತಿಭಾ ಸಂಪನ್ಮೂಲಗಳಲ್ಲಿ ಒಂದನ್ನು ಹೊಂದಿರುವುದು. ಈ ಎಲ್ಲ ಕಾರಣಗಳಿಂದ ಬೆಂಗಳೂರು 'ಪೂರ್ವದ ಸಿಲಿಕಾನ್ ವ್ಯಾಲಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಅವರು ಹೇಳಿದರು.

ಸಾರ್ವಜನಿಕ ವಲಯ ಮತ್ತು ತಾಂತ್ರಿಕ ಕಂಪನಿಗಳ ಮೂಲಕ ಏರೋಸ್ಪೇಸ್, ರಕ್ಷಣಾ ಹಾಗೂ ಮೂಲ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಕರ್ನಾಟಕವು ಬಲವಾದ ನೆಲೆ ನಿರ್ಮಿಸಿತು. ಬಳಿಕ ಇನ್ಫೋಸಿಸ್, ಟಿಸಿಎಸ್, ಎಚ್‌ಸಿಎಲ್ ಮತ್ತು ವಿಪ್ರೋ ಮುಂತಾದ ಐಟಿ ದಿಗ್ಗಜಗಳ ಉದಯದೊಂದಿಗೆ ಭಾರತವನ್ನು ಜಾಗತಿಕ ತಂತ್ರಜ್ಞಾನ ನಕ್ಷೆಯಲ್ಲಿ ಸ್ಥಾಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ ಎಂದು ಅವರು ವಿವರಿಸಿದರು.

ಪ್ರಸ್ತುತ ದೇಶವು ಡೀಪ್ ಟೆಕ್, ಕೃತಕ ಬುದ್ಧಿಮತ್ತೆ ಮತ್ತು ವೈಜ್ಞಾನಿಕ ನವೀನತೆಯ ಹಂತಕ್ಕೆ ಸಾಗುತ್ತಿದೆ. ಈ ಹಂತದಲ್ಲಿ ಅಕಾಡೆಮಿಯಾ, ಕೈಗಾರಿಕೆ ಮತ್ತು ಸರಕಾರಗಳ ನಡುವಿನ ಗಟ್ಟಿಯಾದ ಸಹಕಾರ ಅತ್ಯವಶ್ಯಕವಾಗಿದೆ. ತಂತ್ರಜ್ಞಾನ ಸ್ವಾಯತ್ತತೆಯನ್ನು ಸಾಧಿಸಲು ಇದು ಪ್ರಮುಖ ಹಂತವಾಗಿದ್ದು, ಈ ಹಿನ್ನೆಲೆಯಲ್ಲಿ ಪ್ಯಾನ್-ಐಐಟಿ ಬೆಂಗಳೂರು ಸಮಿಟ್ 2026 ರೂಪುಗೊಂಡಿದೆ ಎಂದು ತಿಳಿಸಿದರು. ಪ್ಯಾನ್ ಐಐಟಿ ಅಧ್ಯಕ್ಷ ಪ್ರಭಾತ್ ಕುಮಾರ್(ಐ.ಆರ್.ಎಸ್) ಅವರು ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸರಕಾರದ ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮಾತನಾಡಿದರು.

ಮಾರಿಕಾಂಬಾ ಶಾಲೆಯ ಲತಿಕಾ ಜಿಲ್ಲಾ ಟಾಪರ್

ಶಿರಸಿ: ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಿರಸಿಯ ಶ್ರೀ ಮಾರಿಕಾಂಬಾ ಸರಕಾರಿ ಪ್ರೌಢಶಾಲೆಯು ಅತ್ಯುತ್ತಮ ಸಾಧನೆ ಮಾಡಿದ್ದು, ಶಾಲೆಯ ವಿದ್ಯಾರ್ಥಿಗಳು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮಿಂಚಿದ್ದಾರೆ.

ಶಾಲೆಯ ವಿದ್ಯಾರ್ಥಿನಿ ಲತಿಕಾ ನಾಗೇಶ್ ಮೊಗೇರ ಅವರು ಒಟ್ಟು 625 ಅಂಕಗಳಿಗೆ 623 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ 3ನೇ ರ್ಯಾಂಕ್ ಹಾಗೂ ಶಿರಸಿ ಶೈಕ್ಷಣಿಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಸಾಧನೆಗೈದಿದ್ದಾರೆ.

ಕೇವಲ ಜಿಲ್ಲಾ ಟಾಪರ್‌ಮಾತ್ರವಲ್ಲದೆ, ಈ ಶಾಲೆಯ ಒಟ್ಟು 8 ವಿದ್ಯಾರ್ಥಿಗಳು ರಾಜ್ಯ ಮಟ್ಟದ ''ಟಾಪ್ 10'' ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಲತಿಕಾ ನಾಗೇಶ್ ಮೊಗೇರ 623 ಅಂಕ, ಅಲಂಕೃತ ದೇವಸೂರ 620 ಅಂಕ, ಪ್ರಥೀಕಾ ಹಸ್ಲರ್619 ಅಂಕ, ಅಮಿತ್ ಆರ್. ಭಟ್ಟ 619 ಅಂಕ, ನಿಖಿತಾ ಎಲ್. ಜಿ. 619 ಅಂಕ, ನಿಶ್ಚಲಾ ಮರಾಠೆ 617 ಅಂಕ, ಅಮಿತ್ ಜಿ. ಹೆಗಡೆ 617 ಅಂಕ, ಸೌರವ್ ಅರ್ಗೇಕರ್617 ಅಂಕ ಪಡೆದಿದ್ದಾರೆ.

ಶ್ರೀ ಮಾರಿಕಾಂಬಾ ಸರಕಾರಿ ಪ್ರೌಢಶಾಲೆಯಿಂದ ಈ ಬಾರಿ ಒಟ್ಟು 501 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 493 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶಾಲೆಗೆ ಒಟ್ಟು ಶೇ 98.40 ಫಲಿತಾಂಶ ಲಭಿಸಿದೆ.

ಗುಣಮಟ್ಟದ ಫಲಿತಾಂಶದಲ್ಲಿಯೂ ಶಾಲೆ ಮತ್ತೊಮ್ಮೆ ಎ ಗ್ರೇಡ್ ಸಾಧನೆ ಮಾಡಿದೆ. ಸರಕಾರಿ ಶಾಲೆಯ ವಿದ್ಯಾರ್ಥಿಗಳ ಈ ಅಪೂರ್ವ ಸಾಧನೆಗೆ ಸ್ಥಳೀಯ ಶಾಸಕರು, ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು, ಮುಖ್ಯ ಶಿಕ್ಷಕರು, ಬೋಧಕ ಸಿಬ್ಬಂದಿ ಹಾಗೂ ಪೋಷಕರು ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಕಬಡ್ಡಿ: ಶಿರಸಿ ಲಾ ಕಾಲೇಜು ದ್ವಿತೀಯ ರನ್ನರ್ ಅಪ್

ಶಿರಸಿ: ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಚಿತ್ರದುರ್ಗದ ಸರಸ್ವತಿ ಕಾನೂನು ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಶಿರಸಿಯ ಎಮ್.ಇ.ಎಸ್. ಕಾನೂನು ಮಹಾವಿದ್ಯಾಲಯದ ತಂಡವು ದ್ವಿತೀಯ ರನ್ನರ್ ಅಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ರಾಜ್ಯದ ವಿವಿಧ ಭಾಗಗಳಿಂದ ಒಟ್ಟು 34 ಕಾನೂನು ಮಹಾವಿದ್ಯಾಲಯಗಳ ತಂಡಗಳು ಭಾಗವಹಿಸಿದ್ದ ಈ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಶಿರಸಿಯ ತಂಡವು ಅತ್ಯುತ್ತಮ ಪ್ರದರ್ಶನ ನೀಡಿತು. ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಗೌತಮ ಎಮ್., ಕೃಷ್ಣ ಸಿ. ಕಬ್ಬೇರ, ಭಾಸ್ಕರ ಜಿ. ನಾಯ್ಕ, ಪ್ರಕಾಶ ಎಸ್. ಮಾರಾಠಾ, ದರ್ಶನ್ ಕೆ.ಪಿ., ತರುಣ ನಾಯ್ಕ, ಚಿನ್ನಪ್ಪ ಎ. ವಡ್ಡರ್, ಪ್ರದೀಪ ಡಿ., ಕಿರಣ ಕಲ್ಯಾಣಮಠ ಹಾಗೂ ಸುದೀಪ ಗೋರನ್ನನವರ್ ಅವರನ್ನೊಳಗೊಂಡ ತಂಡವು ಸರಣಿಯುದ್ದಕ್ಕೂ ಸ್ಥಿರ ಪ್ರದರ್ಶನ ತೋರಿ ಪ್ರಶಸ್ತಿಗೆ ಭಾಜನವಾಯಿತು. ತಂಡದ ಆಟಗಾರ ದರ್ಶನ್ ಕೆ.ಪಿ. ಅವರು ಪಂದ್ಯಾವಳಿಯಲ್ಲಿ ತೋರಿದ ಚಾಣಾಕ್ಷ ಆಟಕ್ಕಾಗಿ 'ಉತ್ತಮ ಆಲ್ ರೌಂಡರ್' ಪ್ರಶಸ್ತಿಯನ್ನು ಪಡೆದು ವೈಯಕ್ತಿಕ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳ ಈ ಕ್ರೀಡಾ ಸಾಧನೆಗೆ ಎಮ್.ಇ.ಎಸ್. ಆಡಳಿತ ಮಂಡಳಿ, ಮಹಾವಿದ್ಯಾಲಯದ ಉಪಸಮಿತಿ, ಪ್ರಾಚಾರ್ಯರು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ, ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಪಿಯು ಪರೀಕ್ಷೆ-2 ಯಶಸ್ವಿಯಾಗಿ ನಡೆಸಿ

ಕಾರವಾರ: ಏ.30 ರಿಂದ ಮೇ.13 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-2 ನಡೆಯಲಿದ್ದು, ಈ ಪರೀಕ್ಷೆಗಳಿಗೆ ಜಿಲ್ಲೆಯಲ್ಲಿ ಒಟ್ಟು 2820 ಪರೀಕ್ಷಾರ್ಥಿಗಳು ನೋಂದಾಯಿಸಿಕೊಂಡಿದ್ದು, 11 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯು ಜರುಗಲಿದ್ದು, ಯಾವುದೇ ಗೊಂದಲಕ್ಕೆ ಆಸ್ಪದ ನೀಡದೇ ಪರೀಕ್ಷಾ ಕಾರ್ಯವನ್ನು ನಡೆಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ-1 ಅನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲಾಗಿದ್ದು, ಅದೇ ರೀತಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ-2 ಯಲ್ಲಿ ಯಾವುದೇ ಸಮಸ್ಯೆಯಾಗದಂತೆ ವ್ಯವಸ್ಥಿತವಾಗಿ ಪರೀಕ್ಷಾ ಕಾರ್ಯನಿರ್ವಹಿಸಬೇಕು. ಪರೀಕ್ಷಾ ಮಂಡಳಿಯು ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ಎಲ್ಲ ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ ಕ್ಯಾಮರವನ್ನು ಪರಿಶೀಲಿಸಿಕೊಂಡು ಸುಸ್ಥಿತಿಯಲ್ಲಿಡಲು ಪರೀಕ್ಷಾ ಕೇಂದ್ರ ಮುಖ್ಯಸ್ಥರಿಗೆ ಸೂಚನೆ ನೀಡಿದ ಅವರು, ಸಿಸಿಟಿವಿ ಅಡಿಯಲ್ಲಿ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆ ಬಂಡಲ್ ತೆರೆಯುವುದು ಮತ್ತು ಉತ್ತರ ಪತ್ರಿಕೆಗಳನ್ನು ಸ್ವೀಕರಿಸಿ ಬಂಡಲ್ ಮಾಡುವ ಕಾರ್ಯಗಳನ್ನು ನಿರ್ವಹಿಸಬೇಕು.

ಜಿಲ್ಲಾ ಪಂಚಾಯತ್ ನಲ್ಲಿ ಸಿಸಿಟಿವಿ ವೀಕ್ಷಣೆಗೆ ವೆಬ್ ಕಾಸ್ಟಿಂಗ್ ವ್ಯವಸ್ಥೆಗೆ ಅಗತ್ಯವಿರುವ ಸಿದ್ದತೆಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಇನ್ನಿತರ ಸೌಕರ್ಯಗಳನ್ನು ಸುಸ್ಥಿತಿಯಲ್ಲಿಡಲು ಪರೀಕ್ಷಾ ಕೇಂದ್ರ ಮುಖ್ಯಸ್ಥರಿಗೆ ಸೂಚಿಸಿ, ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಮತ್ತು ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಸಾಗಾಟ ವಾಹನಗಳಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು ಎಂದರು.

ಎಲ್ಲ ಪರೀಕ್ಷೆ ಕೇಂದ್ರಗಳಿಗೆ ಆರೋಗ್ಯ ಸಹಾಯಕರುಗಳನ್ನು ನಿಯೋಜಿಸಬೇಕು, ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷೆ ನಡೆಯುವ ದಿನದಂದು ವಿದ್ಯುತ್ ವ್ಯತ್ಯಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಹೆಸ್ಕಾಂ ಅಧಿಕಾರಿಗಳಿಗೆ ಮತ್ತು ಪರೀಕ್ಷಾ ದಿನದಂದು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತಲುಪಲು ಬಸ್ಸಿನ ವ್ಯವಸ್ಥೆಯನ್ನು ಒದಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸತೀಸ್ ನಾಯ್ಕ ಹಾಗೂ ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲ ಅಧಿಕಾರಿಗಳು ಹಾಗೂ ವೀಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ತಾಲೂಕುಗಳ ತಹಸೀಲ್ದಾರ್‌ಗಳು ಇದ್ದರು.

ಗ್ರಾಮ ದೇವತೆಯರ ಪ್ರತಿಷ್ಠಾಪನೆ ಮೇ 1 ರಂದು

ಹುಬ್ಬಳ್ಳಿ : ಸ್ಥಳೀಯ ಉನಕಲ್ ಗ್ರಾಮದ ಗ್ರಾಮ ದೇವತೆಯರ ಜಾತ್ರೆ ಹತ್ತು ವರ್ಷಗಳ ಬಳಿಕ ನಡೆಯುತ್ತಿದೆ. ಗ್ರಾಮದೇವಿಯರ ಮೂರ್ತಿಗಳನ್ನು ಸಕಲ ವಾದ್ಯ ವೈಭವಗಳೊಂದಿಗೆ, ಕುಂಭ ಕಳಸದೊಂದಿಗೆ ಮೆರವಣಿಗೆ ಮೂಲಕ ಚೌಕಿಮನೆ ಶ್ರೀ ಮೈಲಾರಲಿಂಗನ ಗುಡಿ ಹತ್ತಿರದ ಕೂಗುಬಸಪ್ಪನ ಕಟ್ಟೆ ಹತ್ತಿನ ತಾತ್ಕಾಲಿಕವಾಗಿ ಸ್ಥಾಪಿಸಿ ಪೂಜೆ ಸಲ್ಲಿಸಲಾಗುವುದು ಎಂದು ಶ್ರೀ ದ್ಯಾಮವ್ವದೇವಿ ಹಾಗೂ ಶ್ರೀ ಮರ್ಗಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿಯ ಗಂಗಾಧರ ದೊಡವಾಡ ಹೇಳಿದರು. ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, ಶ್ರೀ ದ್ಯಾಮವ್ವ ದೇವಸ್ಥಾನವನ್ನು ಸುಮಾರು 15 ಲಕ್ಷ ರೂ ವೆಚ್ಚದಲ್ಲಿ ನೂತನವಾಗಿ ಗೋಪುರ ಸಹಿತ ನಿರ್ಮಿಸಲಾಗಿದೆ. ಉಭಯ ದೇವತೆಯರ ನೂತನ ಮೂರ್ತಿಗಳನ್ನು ತಯಾರಿಸಲಾಗಿದೆ. ಏ. 30 ರಂದು ಡಂಬಳದ ಶ್ರೀ ವೇದಮೂರ್ತಿ ಗುರುಶಾಂತಯ್ಯ ಹಿರೇಮಠ ಶಾಸ್ತ್ರಿಗಳು ನೂತನ ದೇವಸ್ಥಾನದಲ್ಲಿ ವಾಸ್ತುಶಾಂತಿ, ಹೋಮ, ಹವನ, ಪೂಜಾ ಕಾರ್ಯಕ್ರಮ ನಡೆಸಲಿದ್ದಾರೆ. ಅಂದು ಭಂಡಾರದ ಮೆರವಣಿಗೆ ಮೂಲಕ ದೇವಿಯರ ಮೂರ್ತಿಯನ್ನು ಚೌಕಿ ಮನೆಯಿಂದ ದೇವಸ್ಥಾನಕ್ಕೆ ಕತ್ತಲಿನಲ್ಲಿ ಕರೆತರಲಾಗುವುದು ಎಂದರು. ಮೇ.1ರಂದು ಸುಳ್ಯದ ಪಂಚಗ್ರಹ ಹಿರೇಮಠದ ಶಿವಸಿದ್ಧರಾಮ ಶಿವಯೋಗಿ ಶಿವಾಚಾರ್ಯರು ಗ್ರಾಮ ದೇವತೆಯರ ಪ್ರಾಣ ಪ್ರತಿಷ್ಠಾಪನೆಯನ್ನು ಗ್ರಾಮದ ಗುರು ಹಿರಿಯರ ಸಮ್ಮುಖ ಜರುಗುವುದು. ವೇದಮೂರ್ತಿ ಗುರುಸಿದ್ದಯ್ಯ ಹಿರೇಮಠ, ಗುರುಸ್ವಾಮಿ ಹಿರೇಮಠ ಉಪಸ್ಥಿತರಿರುವರು ಎಂದು ತಿಳಿಸಿದರು. ಏ.28 ಮತ್ತು 29 ರಂದು ದೇವಸ್ಥಾನದ ಬಯಲಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯ ಲಿವೆ. ಭಕ್ತರಿಗೆ ದಿನಂಪತಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಸಮಾಜಮುಖಿ ಕೇಶವಗೆ ಪ್ರಶಂಸನಾ ಗೌರವ

ಧಾರವಾಡ : ಕೋವಿಡ್-19 ವೇಳೆ ಅನೇಕ ಸಮಾಜಮುಖಿ ಸೇವೆ ಗುರುತಿಸಿ, ಕರ್ನಾಟಕ ರಾಜ್ಯ ವಿಶೇಷಚೇತನರ ಒಕ್ಕೂಟದ ನಿಕಟಪೂರ್ವ ಜಿಲ್ಲಾಧ್ಯಕ್ಷ ಹಾಗೂ ಸಕ್ಷಮ ಜಿಲ್ಲಾಧ್ಯಕ್ಷ ಕೇಶವ ಪ್ರಭಾಕರ ತೆಲಗು ಅವರಿಗೆ ಅಮೇರಿಕಾದ ಯುರೋಪಿಯನ್ ಬುಕ್ ಆಫ್ ಗ್ಲೋಬಲ್ ರಿಕಾರ್ಡ್ಸ್ ಸಂಸ್ಥೆಯು ಪ್ರಸಂಶನಾ ಪತ್ರ ನೀಡಿ ಗೌರವಿಸಿದೆ. ಇದು ಇಡೀ ಏಷಿಯಾ ಖಂಡದಲ್ಲಿಯೇ ಸಮಾಜಮುಖಿ ಕೆಲಸಕ್ಕೆ ನೀಡುವ ಬಹುದೊಡ್ಡ ಗೌರವವಾಗಿದೆ.

ಜಮೀರ್ ವಿರುದ ಪಿತೂರಿ ಸಹಿಸಲ್ಲ

ಹಾವೇರಿ: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಬರಲು ಮುಸ್ಲಿಂರ ಪಾತ್ರ ಮಹತ್ವದ್ದಾಗಿದೆ. ದಾವಣಗೆರೆ ಉಪ ಚುನಾವಣೆಯಲ್ಲಿ ಜಮೀರ ಅಹ್ಮದ ಯಾವುದೇ ತಪ್ಪು ಮಾಡಿಲ್ಲ.ಆದರೆ ಮುಸ್ಲಿಂ ನಾಯಕರಾದ ಜಮೀರ್ ಅಹಮ್ಮದರನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ ಎಂದು ವಕೀಲ ಹಾಗೂ ಮುಸ್ಲಿಂ ಮುಖಂಡ ಎಸ್. ಜೆ. ಸವಣೂರು ಆರೋಪಿಸಿದರುಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಮುಖ ಮುಸ್ಲಿಂ ನಾಯಕ ಜಮೀರ್‌ಅಹಮ್ಮದ್ ಅವರ ವಿರುದ್ಧ ಕೆಲವರು ಪಿತೂರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.ಜಮೀರ್ ಅಹಮ್ಮದ್ ಅವರು ಪ್ರಶ್ನಾತೀತ ನಾಯಕತ್ವ ಹೊಂದಿದ್ದು, ಅವರು ತಮ್ಮನ್ನು ತಾವು ನಾಯಕ ಎಂದು ಹೇಳಿಕೊಳ್ಳದಿದ್ದರೂ, ಜನತೆ ಅವರನ್ನು ಲೀಡರ್ ಎಂದು ಒಪ್ಪಿಕೊಂಡಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿದ್ದಾರೆ. ಇದನ್ನು ಸಹಿಸಲಾಗದ ಕೆಲವರಿಂದ ಅವರ ಹೆಸರನ್ನು ಕೆಡಿಸುವ ಪ್ರಯತ್ನ ನಡೆಯುತ್ತಿದೆ ಎಂದರು. ಅಬ್ದುಲ್ ಜಬ್ಬಾರ್ ಹಾಗೂ ನಸೀರ್‌ಅಹಮ್ಮದ್ ವಿರುದ್ಧ ಕೈಗೊಳ್ಳಲಾದ ಕ್ರಮ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿಅಂಜುಮನ್ ಇಸ್ಲಾಂ ಕಮೀಟಿ ಮಾಜಿ ಅಧ್ಯಕ್ಷ, ಇಮಾಮ್ಸಾಬ ಜಮಾದಾರ, ನಗರಸಭೆ ಮಾಜಿ ಸದಸ್ಯ ಪೀರಸಾಬ್ ಚೋಪದಾರ ಮಾತನಾಡಿದರು. ಮೌಲಾನಾ ಮಹ್ಮದ್ಶಾಕ್ ನಾರಲವಾಡಿ, ಅಜೀಜುಲ್ಲಾ ಮಕಾನದಾರ, ಮೌಲಾನಾ ಇಫ್ತಿಯಾರ ಖಾಜಿ, ಮೌಲಾನಾ ಅಬ್ದುಲ್ರಜಾಕ ಖಾದ್ರಿ, ಉಪಸ್ಥಿತರಿದ್ದರು.

ಕಾಂಗ್ರೆಸ್ ಅನಗತ್ಯ ಆರೋಪ ನಿಲ್ಲಿಸಲಿ

ಧಾರವಾಡ: ಯೋಗೀಶ ಗೌಡರ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷದವರು ಮತ್ತೊಬ್ಬರ ಏಳ್ಗೆ ಸಹಿಸದೇ ವಿನಾಕಾರಣ ಆರೋಪ ಮಾಡುತ್ತಿದ್ದಾರೆ ಎಂದು ಭಾಜಪ ನಾಯಕಿ ಸವಿತಾ ಅಮರಶೆಟ್ಟಿ ಹೇಳಿದರು.ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗೀಶಗೌಡ ಕೊಲೆ ಪ್ರಕರಣದ ವಿಚಾರಣೆ ನಡೆಸಿ ನ್ಯಾಯಾಲಯ ತೀರ್ಪು ನೀಡಿದೆ. ಆದರೆ, ಈ ವಿಷಯದಲ್ಲಿ ಷಡ್ಯಂತ್ರ ಮಾಡಿ ಸಿಲುಕಿಸಲಾಗಿದೆ ಎಂದು ಬೇರೊಬ್ಬರನ್ನು ದೂಷಿಸುತ್ತಿರುವುದು ಸರಿಯಲ್ಲ. ಈ ರೀತಿ ಆರೋಪ ಮಾಡುವವರು ಷಡ್ಯಂತ್ರವನ್ನು ಸಾಬೀತುಪಡಿಸಿ, ನಂತರ ಮಾತನಾಡಲಿ. ಅದು ಬಿಟ್ಟು ಅನವಶ್ಯಕವಾಗಿ ಆರೋಪ ಮಾಡುವುದನ್ನು ನಿಲ್ಲಿಸಲಿ ಎಂದು ಸಲಹೆ ನೀಡಿದರು. ಪ್ರಮೀಳಾ ಜಕ್ಕಣ್ಣವರ, ಪ್ರೇಮಾ ನಡುವಿನಮನಿ, ಉಷಾ ಗದಗಿಮಠ, ಲೀಲಾವತಿ ಮಿಣಜಗಿ, ನೇಹಾ ಬುದ್ನಿ, ಪ್ರಿಯದರ್ಶಿನಿ ಅಂಗಡಿ, ಮಂಜುಳಾ ರಾಮಡಗಿ, ಕಾವ್ಯಾ ಪಾಟೀಲ, ಯಲ್ಲವ್ವ ಜಾಧವ, ಸಂಗೀತಾ ಬಡವಣ್ಣವರ, ಸಾವಿತ್ರಿ ಅಮರಾಪೂರ ಸುದ್ದಿಗೋಷ್ಠಿಯಲ್ಲಿದ್ದರು.

ಅಂಜುಮನ್‌ಗೆ ಇಂದು ಮತದಾನ, ರಿಸಲ್ಟ

ರಟ್ಟೀಹಳ್ಳಿ: ಪಟ್ಟಣದ ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ವ್ಯವಸ್ಥಾಪಕ ಸಮಿತಿಯ ಚುನಾವಣೆಗೆ ಮಂಗಳವಾರ ಮತದಾನ ನಡೆಯುತ್ತಿದ್ದು, ಚುನಾವಣೆಗೆ ಸಂಬಂಧಿಸಿದ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತಗಟ್ಟೆ ಸ್ಥಾಪಿಸಲಾಗಿದ್ದು, ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಒಟ್ಟು 17 ಸ್ಥಾನಗಳಿಗೆ 40 ಅಭ್ಯರ್ಥಿಗಳು ಸ್ಪರ್ಧಿಸಿದ್ದು ತೀವ್ರ ಪೈಪೋಟಿಗೆ ಸಾಕ್ಷಿಯಾಗಲಿದೆ. ಮತಗಟ್ಟೆಯಲ್ಲಿ ಕುಡಿಯುವ ನೀರು, ಕುಳಿತುಕೊಳ್ಳುವ ವ್ಯವಸ್ಥೆ ಒದಗಿಸಲಾಗಿದೆ. ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಚುನಾವಣಾಧಿಕಾರಿ ಶ್ವೇತಾ ಅಮರಾವತಿ ಮಾತನಾಡಿ, ಮತದಾರರು ತಮ್ಮ ಮತದಾನದ ಹಕ್ಕು ಚಲಾಯಿಸುವಂತೆ ಮನವಿ ಮಾಡಿದ್ದಾರೆ. ಸಂಜೆ 5 ಗಂಟೆಯಿಂದಲೇ ಮತ ಎಣಿಕೆ ಪ್ರಾರಂಭವಾಗಲಿದ್ದು, ಫಲಿತಾಂಶವನ್ನು ಘೋಷಿಸಲಾಗುತ್ತದೆ.

ವಿರಾಮ
ಪ್ರತಿ ಭಾನುವಾರ

{ ದಿನೇಶ ಗುಂಡೂರಾವ್ } ಆರೋಗ್ಯ ಸಚಿವ

ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಸಂಪುಟ ಪುನಾರಚನೆಯಾಗಿ ಬೇರೆಯವರಿಗೆ ಅವಕಾಶ ಸಿಗಬೇಕು ಎಂಬದು ನಮ್ಮ ಅಪೇಕ್ಷೆ. ಈ ಬಗ್ಗೆ ಹೈಕಮಾಂಡ್ ಮತ್ತು ಸಿಎಂ ಸಿದ್ದರಾಮಯ್ಯ ತೀರ್ಮಾನ ಕೈಗೊಳ್ಳುತ್ತಾರೆ. ಸದ್ಯದಲ್ಲೇ ಸಂಪುಟ ವಿಸ್ತರಣೆ ಆಗಬಹುದು.

ಧಾರವಾಡದಲ್ಲಿ ಹಗಲಿಡೀ ರಣ ಬಿಸಿಲು | ಸಂಜೆ ಗುಡುಗಿನ ಮಳೆ | ರಾತ್ರಿಯಾದರೆ ವಿಪರೀತ ಸೆಖೆ...!

ಸೂರ್ಯನ ಉಗ್ರ ಅವತಾರ, ಜನತೆ ತತ್ತರ

ಶ್ರೀಕಾಂತ ಬೆಟಗೇರಿ, ಧಾರವಾಡ:

ರಾಜ್ಯದಲ್ಲಿ ಈ ಹಿಂದೆ ಎಂದೂ ಅನುಭವಿಸದಷ್ಟು ಈ ವರ್ಷದಲ್ಲಿ ಜನತೆ ಬಿಸಿಲಿನ ಸೆಖೆಗೆ ಹೈರಾಣಾಗಿದ್ದಾರೆ.

ಹೌದು. ಇದು ನಿಜಾನೇ...! ಬೆಳಿಗ್ಗೆಯಿಂದ ಸಂಜೆವರೆಗೂ ಉರಿ ಬಿಸಿಲಿನಲ್ಲಿ ಕಾಲ ಕಳೆದರೆ, ಸಂಜೆಯಾಗುತ್ತಿದ್ದಂತೆ ಗೂಡು ಸೇರಲೇಬೇಕು. ಇಲ್ಲ ಅಂದ್ರೆ, ಸಂಜೆಯ ಗುಡುಗು ಸಹಿತ ಮಳೆಗೆ ಸಿಲುಕಿಕೊಳ್ಳುವುದು ಗ್ಯಾರಂಟಿ.

ಕಳೆದ ಒಂದು ತಿಂಗಳಿದ ಜನತೆ ಈ ಸಮಸ್ಯೆಗೆ ಒಳಗಾಗುತ್ತಾ ಬರುತ್ತಿದ್ದಾರೆ. ಆದರೆ, ಇದು ಪ್ರಕೃತಿ ನಿಯಮ. ಹೊಂದಿಕೊಂಡೇ ಬದುಕಬೇಕು. ಇದು ಅನಿವಾರ್ಯ. ಇದಕ್ಕೆ ಒಂದಷ್ಟು ಮುಂಜಾಗ್ರತೆ ಕೂಡಾ ವಹಿಸಬೇಕು. ಇಲ್ಲದೇ ಹೋದರೆ ಸಮಸ್ಯೆಗೆ ಒಳಗಾಗುವುದು ಖಂಡಿತ.

ಹೊರಗೆ ಕಾಲಿಡಲಾಗದು : ಬೆಳ್ಳಿಗ್ಗ 10 ಗಂಟೆಯಾದರೆ ಸಾಕು ಸೂರ್ಯನ ರುದ್ರಾವತಾರ ತಾಂಡವ ಸುರುವಾಗುತ್ತದೆ. ಸಂಜೆ 4 ಗಂಟೆವರೆಗೂ ಹೊರಗೆ ಕಾಲಿಡಲು ಆಗದು. ಇಂತಹ ಬಿಸಿಲು ಕಂಡಿದ್ದು ನಾವು ಇದೇ ಮೊದಲು ಎಂದು ಹೇಳುತ್ತಾರೆ ಹಿರಿಯರು.

ಸಾಕಾಗಿ ಹೋಗಿದೇರೀ...
ಈ ಬಿಸಿಲಿನ ತಾಪಕ್ಕೆ ಸಾಕಾಗಿ ಹೋಗಿದೆ. ಇಷ್ಟೊಂದು ಪ್ರಮಾಣದಲ್ಲಿ ಬಿಸಿಲು ಕಂಡಿದ್ದು ಇದೇ ಮೊದಲು. ಬಿಸಿಲಿನ ಝಳಕ್ಕೆ ತಾಳಲಾರದೇ ತಂಪು ಪಾನಿಯ ಮೊರೆ ಹೋಗುವಂತಾಗಿದೆ.

ಕೆಲಸ ಕಾರ್ಯ ಇರುವುದರಿಂದ ಹೊರಗೆ ಹೋಗುವ ಅನಿವಾರ್ಯ ಕೂಡಾ ಇದೆ. ಸಾಕಷ್ಟು ಜನ ಮನೆಯಲ್ಲಿಯೇ ಹೆಚ್ಚು ಸಮಯ ಕಳೆಯುವುದು ಕಂಡು ಬರುತ್ತಿದೆ.

ಸಂಜೆ ಐದರ ಮಳೆ: ಸಂಜೆ 5ರ ಹೊತ್ತಿಗೆಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಗೂಡು ಸೇರಲು ಹರಸಾಹಸ ಪಡುತ್ತಿದ್ದ ದೃಶ್ಯ ಕಂಡು ಬರುತ್ತಿವೆ. ಹಗಲು ಇಡೀ ಬಿಸಿಲ ಧಗೆ ದಾಟಿ ಸಂಜೆಯಾಗುತ್ತಿದ್ದಂತೆ ಗುಡುಗು ಸಹಿತ ಭಾರಿ ಮಳೆಯಾಗುತ್ತಿದೆ. ವಾರದಲ್ಲಿ ನಾಲ್ಕೈದು ಬಾರಿಯಾದರೂ ಸಂಜೆಯ ಮಳೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಏನಾದರೂ ಸಿಲುಕಿಕೊಂಡರೆ ಮುಗಿತು ರಾತ್ರಿಯೇ ಮನೆ ಸೇರುವುದು.

ಬರುವ ಇನ್ನೊಂದು ವಾರದೊಳಗೆ ತಾಪಮಾನ 40 ಡಿಗ್ರಿಗಿಂತ ಹೆಚ್ಚಾಗುವ ಸಾಧ್ಯತೆ ಇದೆ. ಅದಕ್ಕಾಗಿ ಈ ಬೇಸಿಗೆಯಲ್ಲಿ ಜನತೆ ಹೆಚ್ಚು ನೀರು ಕುಡಿಯಬೇಕು. ಜಾಸ್ತಿ ಬಿಸಿಲಿಗೆ ಹೊಗದಂತೆ ಆರೋಗ್ಯದ ಕಡೆಗೆ ಗಮನ ವಹಿಸಬೇಕು. ಮಕ್ಕಳು ಹಾಗೂ ವಯಸ್ಸಾದವರೂ ಹೆಚ್ಚಾಗಿ ಮನೆಯಲ್ಲಿ ಇರುವಂತೆ ನೋಡಿಕೊಳ್ಳಬೇಕು.
-ಡಾ. ಆರ್.ಎಚ್. ಪಾಟೀಲ, ಕೃಷಿ ವಿವಿ ಹವಾಮಾನ ತಜ್ಞರು

ಸೆಖೆಗೆ ಸುಳಿಯದ ನಿದ್ದೆ: ಮಳೆಯಾಗುವ ಮುನ್ಸೂಚನೆ ಬರುತ್ತಿದ್ದಂತೆ ಹೆಸ್ಕಾಂನವರು ಎಚ್ಚೆತ್ತುಕೊಂಡು ವಿದ್ಯುತ್ ಸಂಪರ್ಕ ಕಡಿತಗೊಳಿಸಿಯೇ ಬಿಡುತ್ತಾರೆ. ಅತ್ತ ಅವರ ದೂರವಾಣಿ ಕರೆಗಳು ಸಹಿತ ಕಡಿತಗೊಂಡು ಬಿಡುತ್ತದೆ. ಎಷ್ಟೋ ದೂರವಾಣಿ ಕರೆ ಮಾಡಿದರೂ ಕೂಡಾ ಅವರು ಸ್ಪಂದಿಸುವುದಿಲ್ಲ. ಹೀಗಾಗಿ ವಿದ್ಯುತ್ ಇಲ್ಲದೇ ರಾತ್ರಿ ಪೂರ್ತಿ ಸೆಖೆಯಲ್ಲೇ ಕಾಲ ಕಳೆಯುವಂತಾಗಿದೆ. ತಾಪಮಾನ ಹೆಚ್ಚಾದ ಕಾರಣ ರಾತ್ರಿ ಸೆಖೆ ಕೂಡಾ ಹೆಚ್ಚಾಗಿ ನಿದ್ದೆ ಸುಳಿಯುತ್ತಿಲ್ಲ ಎನ್ನುತ್ತಾರೆ ಜನತೆ.

ತಂಪು ಪಾನಿಯ ಮೊರೆ : ಬಿಸಿಲಿನ ತಾಪ ಹೆಚ್ಚಾಗಿರುವ ಕಾರಣ ಜನ ತಂಪುಪಾನಿಯಗಳ ಮೊರೆ ಹೋಗುತ್ತಿದ್ದಾರೆ. ಪಿಯುಸಿ ಹಾಗೂ ಪದವಿ ಪ್ರವೇಶಗಳು ಪ್ರಾರಂಭವಾದ ಕಾರಣ ವಿದ್ಯಾರ್ಥಿಗಳು ಹಾಗೂ ಪಾಲಕರು ಬಿಸಿಲಿನಲ್ಲಿಯೇ ಕಾಲೇಜಿನಿಂದ ಕಾಲೇಜಿಗೆ ಅಲೆದಾಡುವ ಸ್ಥಿತಿಯಿದೆ. ಹೀಗಾಗಿ ಬೇಸಿಗೆ ಬಿಸಿಲಿನ ದಾಹ ನೀಗಿಸಿಕೊಳ್ಳಲು ಕೂಲ್ ಡ್ರಿಂಕ್ಸ್ , ಜ್ಯೂಸ್ ಸ್ಟಾಲ್ ಗಳಿಗೆ ಮುಗಿ ಬೀಳುತ್ತಿದ್ದಾರೆ. ಎಳೆ ನೀರಿನ ಪಾನೀಯಕ್ಕೂ ಸಖತ್ ಬೇಡಿಕೆ. ಹಾಗೇ ಬೆಲೆ ಕೂಡ ದುಬಾರಿ.

ಶಿಗ್ಗಾವಿ ನೂತನ ಆಸ್ಪತ್ರೆಗೆ ಶೀಘ್ರ ಸಿಬ್ಬಂದಿ ನೇಮಿಸಿ

ಹಾವೇರಿ (ಶಿಗ್ಗಾವಿ) : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶಿಗ್ಗಾವಿಯಲ್ಲಿ 250 ಹಾಸಿಗೆಯ ಆಸ್ಪತ್ರೆ ಉದ್ಘಾಟನೆ ಆದ ತಕ್ಷಣ ಆಸ್ಪತ್ರೆ ಆರಂಭ ಆಗುವುದಿಲ್ಲ. ವೈದ್ಯಕೀಯ ಸಲಕರಣೆ, ವೈದ್ಯರ ನೇಮಕ ವ್ಯವಸ್ಥೆ ಮಾಡಿ ಸುಸಜ್ಜಿತ ಆಸ್ಪತ್ರೆ ಉದ್ಘಾಟಿಸಿದ್ದರೆ ಸಾರ್ಥಕ ಆಗುತ್ತಿತ್ತು. ಮುಂದಿನ ಎರಡು ಮೂರು ತಿಂಗಳಲ್ಲಿ ವೈದ್ಯರ ನೇಮಕ ಮಾಡಿ ಎಲ್ಲ ವೈದ್ಯ ಕೀಯ ಸಲಕರಣೆ, ಬೆಡ್ ವ್ಯವಸ್ಥೆ ಮಾಡಿ ಬಡ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ನಾನು ಸಿಎಂ ಆಗಿದ್ದಾಗ 250 ಬೆಡ್ ಆಸ್ಪತ್ರೆಗೆ ಮಂಜೂರಾತಿ ಮಾಡಿದ್ದೆ. ಗುತ್ತಿಗೇದಾರರಿಗೆ 7-10-2022 ರಿಂದ 24 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವ ಕರಾರಿನೊಂದಿಗೆ 96.5 ಕೋಟಿ ರೂ. ಮೊತ್ತದ ಕಾಮಗಾರಿ ಗುತ್ತಿಗೆ ನೀಡಲಾಗಿದೆ. ಇದರ ಜೊತೆಗೆ ಸುಮಾರು 50 ಕೋಟಿ ವೆಚ್ಚದ ವೈದ್ಯಕೀಯ ಸಲಕರಣೆಗಳು, ಲ್ಯಾಬ್, ಹಾಸಿಗೆ, ಆಪರೇಷನ್ ಥೇಟರ್‌ಗೆ ಬೇಕಾದ ಸಲಕರಣೆಗಳನ್ನು ಮಂಜೂರಾತಿ ಆಗಿತ್ತುವು. ಈಗಾಗಲೇ 2024 ಕ್ಕೆ ಮುಗಿಯಬೇಕಾಗಿದ್ದು 2026 ಕ್ಕೆ ಮುಗಿಯುತ್ತಿದೆ. ಎರಡು ವರ್ಷ ತಡವಾಗಿ ಮುಗಿಯುತ್ತಿದೆ. ಆದಾಗ್ಯೂ ಕೂಡ ಅಲ್ಲಿ ಯಾವುದೇ ವೈದ್ಯಕೀಯ ಸಲಕರಣೆ, ಬೆಡ್ ಕೂಡ ಇಲ್ಲ ಎಂದು ತಿಳಿಸಿದ್ದಾರೆ.

ಸಿಬ್ಬಂದಿ ಕೊರತೆ: ಈಗಿರುವ ನೂರು ಬೆಡ್ಡಿನ ಆಸ್ಪತ್ರೆಗೆ ವೈದ್ಯರು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿ ಕೊರತೆ ಇದೆ. 250 ಬೆಡ್ ಆಸ್ಪತ್ರೆಗೆ ಹೊಸ ಹುದ್ದೆಗಳು ಮಂಜೂರಾಗಿಲ್ಲ, ಹಾಗಾಗಿ ಶಿಗ್ಗಾವಿ ತಾಲೂಕಿನ ಜನರಿಗೆ ಏನು ಪ್ರಯೋಜನ ಆಗುತ್ತದೆ. ಸುಸಜ್ಜಿತ ಆಸ್ಪತ್ರೆ ಉದ್ಘಾಟನೆ ಮಾಡಿದ್ದರೆ ಸಚಿವರ ಕಾರ್ಯ ಸಾರ್ಥಕ ಆಗುತ್ತಿತ್ತು. ಕೂಡಲೇ ವೈದ್ಯರ ನೇಮಕ ಮಾಡಿ ಎಲ್ಲ ವೈದ್ಯಕೀಯ ಸಲಕರಣೆ, ಬೆಡ್ ವ್ಯವಸ್ಥೆ ಮಾಡಿ ಬಡ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಆಗ್ರಹಿಸಿದ್ದಾರೆ.

ಮಹಿಳಾ ಮೀಸಲು ಮಸೂದೆ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ

ರಟ್ಟಿಹಳ್ಳಿ: ಪಟ್ಟಣದಲ್ಲಿ ಮಹಿಳಾ ಮೀಸಲಾತಿ ವಿಚಾರವಾಗಿ ಬಿಜೆಪಿ ತಾಲೂಕು ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮಹಿಳೆಯರಿಗೆ ಶೇ. 33ರಷ್ಟು ರಾಜಕೀಯ ಮೀಸಲಾತಿ ನೀಡುವ ಮಸೂದೆಗೆ ಕಾಂಗ್ರೆಸ್ ಪಕ್ಷ ಬೆಂಬಲ ನೀಡದೆ ವಿರೋಧ ವ್ಯಕ್ತಪಡಿಸಿದ್ದನ್ನು ಖಂಡಿಸಿ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಪ್ರತಿಭಟನೆ ವೇಳೆ ಬಿಜೆಪಿ ಕಾರ್ಯಕರ್ತರು ಕೈಯಲ್ಲಿ ಫಲಕಗಳು ಹಿಡಿದು ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಾತನಾಡಿದ ತಾಲೂಕು ಅಧ್ಯಕ್ಷ ದೇವ ರಾಜ ನಾಗಣ್ಣನವರ್ ಅವರು, ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಪಾಸಾಗಲು ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ. ಇದು ಮಹಿಳೆಯರ ಭವಿಷ್ಯಕ್ಕೆ ಹೊಡೆತ ನೀಡಿದಂತಾಗಿದೆ. ಮಹಿಳೆಯರ ರಾಜಕೀಯ ಪ್ರತಿನಿಧಿತ್ವ ಹೆಚ್ಚಿಸಲು ಅಗತ್ಯವಾದ ಮಹತ್ವದ ಮಸೂದೆಗೆ ಕಾಂಗ್ರೆಸ್ ತೋರಿದ ನಿರ್ಲಕ್ಷ್ಯ ಖಂಡನೀಯ ಎಂದು ಟೀಕಿಸಿದರು.ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಯೋಜನೆ ಯಾದ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತರಲು ಬಿಜೆಪಿ ಬದ್ಧವಾಗಿದೆ ಎಂದು ಅವರು ಹೇಳಿದರು. ಪ್ರತಿಭಟನೆಯಲ್ಲಿ ಪಟ್ಟಣದ ಬಿಜೆಪಿ ಅಧ್ಯಕ್ಷ ದೇವರಾಜು ನಾಗಣ್ಣವರ್,ಶಂಭಣ್ಣ ಗುಳಪ್ಪನವರ್,ಬಸವರಾಜ ಆಡಿನವರ್,ಸುನಿಲ್ ಸರಶೆಟ್ಟರ್,ಪ್ರಶಾಂತ್. ದ್ಯಾವಕಳವರ , ರಾಘವೇಂದ್ರ ಹರವಿ ಶೆಟ್ಟರ್ ,ಸುಶೀಲ್ ನಾಡಿಗೇರ್,ಗಿರೀಶ್ ಅಂಗರಗಟ್ಟಿ, ಹನುಮಂತಪ್ಪ ಗಾಂಜೀರ್,ಶ್ರೀನಿವಾಸ್ ಬೈರೋಜಿ ಬಸವರಾಜ್ ಕಟ್ಟಿಮನಿ ಸುನಿಲ್, ಸರೋಜಮ್ಮ ಹುರುಕಡ್ಲಿ, ಕಾವ್ಯ ಪಾಟೀ ಲ್ ಸೇರಿದಂತೆ ಅನೇಕ ಮಹಿಳಾ ಕಾರ್ಯ ಕರ್ತರು ಸಹ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಕೊನೆಗೆ ಮಹಿಳಾ ಮೀಸಲಾತಿ ಮಸೂದೆ ಶೀಘ್ರ ಜಾರಿಗೆ ತರಬೇಕೆಂದು ಆಗ್ರಹಿಸಿದರು.

ಏ.30ರಿಂದ ಪಿಯುಸಿ ಪರೀಕ್ಷೆ-2

ಹಾವೇರಿ: ದ್ವಿತೀಯ ಪಿಯುಸಿ ಪರೀಕ್ಷೆ-2 ಇದೇ ಏ ಪ್ರಿಲ್ 30 ರಿಂದ ಮೇ 13ರ ವರೆಗೆ ಜಿಲ್ಲೆಯ 7 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಯಾವುದೇ ಲೋಪವಾಗದಂತೆ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಸೋಮವಾರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2ರ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಲ್ಲರೂ ಪರೀಕ್ಷಾ ಗೌಪ್ಯತೆ ಕಾಪಾಡಿ ಕೊಳ್ಳಬೇಕು. ಪರೀಕ್ಷಾ ಮಾರ್ಗ ಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಈ ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ವಿವಿಧ ಇಲಾಖೆ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಪರೀಕ್ಷಾ ನಿಯಮಾವಳಿ ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷಾ ಕೇಂದ್ರದ ಹೊರಗೆ ಹಾಗೂ ಒಳಗೆ ನಿಯಮಗಳ ಉಲ್ಲಂಘ ನೆಯಾಗದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಸಬೇಕು. ವಿದ್ಯಾರ್ಥಿಗಳು ನಿರ್ಭಯವಾಗಿ ಪರೀಕ್ಷೆ ಬರೆಯುವ ವಾತಾವರಣವಿರಬೇಕು ಎಂದು ನಿರ್ದೇಶನ ನೀಡಿದರು.

ತ್ರಿ ಸದಸ್ಯ ಸಮಿತಿ : ಪ್ರಶ್ನೆ ಪತ್ರಿಕೆ ಬಂಡಲ್ ಸಾಗಣೆಗೆ ಪ್ರತಿ ತಾಲೂಕಿಗೂ ತಹಸೀಲ್ದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪ್ರಿನ್ಸಿಪಾಲ್ ಒಳಗೊಂಡ ತ್ರಿ ಸದಸ್ಯ ಸಮಿತಿ ರಚಿಸಲಾಗಿದೆ. ಪ್ರಶ್ನೆ ಪತ್ರಿಕೆಯ ವಾಹನಕ್ಕೆ ಜಿಪಿಎಸ್ ಕಡ್ಡಾಯಗೊಳಿಸಲಾಗಿದೆ ಎಂದರು. ಇಲಾಖೆ ಉಪನಿರ್ದೇಶಕ ಅಶೋಕ ಶಾಸ್ತ್ರಿ , ಜಿಲ್ಲೆಯಲ್ಲಿ 6,230 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಡಿವೈಎಸ್ಪಿ ಗಿರಿಮಲ್ಲ ತಳಕಟ್ಟಿ, ವಿವಿಧ ತಾಲೂಕುಗಳ ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2ರ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಿಯು ಸಾಧಕರಿಗೆ ರಾಜ್ ಫೌಂಡೇಶನ್ ಸನ್ಮಾನ

ರಾಜ್ ಫೌಂಡೇಶನ್ ವತಿಯಿಂದ ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ಪ್ರಿಯದರ್ಶಿನಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎ. ಜಿ. ರಾಘವೇಂದ್ರ ಇತರರು ಇದ್ದರು.

ರಟ್ಟಿಹಳ್ಳಿ: ಡಾ. ರಾಜ್ ಫೌಂಡೇಶನ್ ಸೇವಾ ಸಮಿತಿಯ ವತಿಯಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಆರ್ಟ್ಸ್ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿಸುವ ಕಾರ್ಯಕ್ರಮ ನಡೆಯಿತು.

ಪ್ರಿಯದರ್ಶಿನಿ ಕಾಲೇಜಿನ ಪ್ರಾಚಾರ್ಯರಾದ ಎ. ಜಿ. ರಾಘವೇಂದ್ರ, ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಶ್ರಮ, ಶಿಸ್ತು ಮತ್ತು ದೃಢನಿಶ್ಚಯದೊಂದಿಗೆ ಶಿಕ್ಷಣದಲ್ಲಿ ಮುನ್ನಡೆಯಬೇಕು ಎಂದರು

ಆರ್ಟ್ಸ್ ವಿಭಾಗದಲ್ಲಿ ನಾಗರತ್ನ ಶಿವಪುತ್ರಪ್ಪ ಸಣ್ಣಪ್ಪನವರ ಶೇ.95 (ಪ್ರಥಮ)ಯಶವಂತ ಆನಂದಪ್ಪ ಕೆಂಗಣ್ಣನವರ ಶೇ. 89 (ದ್ವಿತೀಯ) ಬೀರೇಶ್ ಪರಮೇಶಪ್ಪ ಬಳಗಾವಿ ಶೇ.89 (ತೃತೀಯ). ವಿಜ್ಞಾನ ವಿಭಾಗದೆಲ್ಲಿ ನಿರಂಜನ ರೇವಣೆಪ್ಪ ಸಣ್ಣಪ್ಪನವರ ಶೇ.87 (ಪ್ರಥಮ) ವಂದನ ಕೆಂಚಪ್ಪ ಕರಿಯಣ್ಣನವರ ಶೇ.85 (ದ್ವಿತೀಯ)ಅನುಷಾ ಬಸಪ್ಪ ಬಳಗಾವಿ ಶೇ.81 (ತೃತೀಯ).

ರಾಜ್ ಫೌಂಡೇಶನ್ ಸೇವಾ ಸಂಸ್ಥೆಯ ಅಧ್ಯಕ್ಷ ಬೀರೇಶ್ ಶಿವಲಿಂಗಪ್ಪ ಕರಡಣ್ಣನವರ ಅಧ್ಯಕ್ಷತೆವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯನ್ನು ಮೆಚ್ಚಿ, ಭವಿಷ್ಯದಲ್ಲಿಯೂ ಇಂತಹಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಸಂಸ್ಥೆ ಮುಂದುವರಿಸಲಿದೆ ಎಂದು ತಿಳಿಸಿದರು. ಅಣಜಿ ಗ್ರಾಪಂ ಕಾರ್ಯದರ್ಶಿ ಸುದೀರಪ್ಪ ಕರಡಣ್ಣನವರ, ಟ್ರಸ್ಟ್ನ ಕಾನೂನು ಸಲಹೆಗಾರ ಫಕೀರೇಶ ತುಮ್ಮಿನಕಟ್ಟಿ , ರಾಮಪ್ಪ ಸಣ್ಣಪ್ಪನವರ, ರೇವಣೆಪ್ಪ ಸಣ್ಣಪ್ಪನವರ, ಶಿವಪುತ್ರಪ್ಪ ಸಣ್ಣಪ್ಪನವರ, ಚನ್ನಬಸಪ್ಪ ಸಣ್ಣಪ್ಪನವರ, ರವಿ ಎತ್ತಿನಹಳ್ಳಿ, ಬೀರೇಶ್ ಸಣ್ಣಪ್ಪನವರ, ಬೀರೇಶ್ ಪೂಣೆ ಬೆಳಕೇರಿ ಉಪಸ್ಥಿತರಿದ್ದರು.

ಡಾ.ಹಿರೇಮಠ್ ಹೆಸರಲ್ಲಿ ಪ್ರಶಸ್ತಿ ನೀಡಲು ನಿರ್ಧಾರ

ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿದ್ದ ಡಾ. ಬಿ.ಆರ್. ಹಿರೇಮಠರು ತಾಯಿಗರುಳಿನ ಶ್ರೇಷ್ಠ ಪ್ರಾಧ್ಯಾಪಕ ಆಗಿದ್ದರು. ಅವರ ಸಂಶೋಧನೆ ಮತ್ತು ವಿಮರ್ಶೆ ಕಾರ್ಯಗಳು ಇಂದಿನ ಸಂಶೋಧನೆಗಳಿಗೆ ಮಾದರಿ ಎಂದು ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ. ಎ. ಮುರಿಗೆಪ್ಪ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಡಾ. ಬಿ.ಆರ್. ಹಿರೇಮಠ ಅಭಿಮಾನಿ ಬಳಗ ಆಯೋಜಿಸಿದ್ದ ಲಿಂ. ಡಾ. ಬಿ.ಆರ್. ಹಿರೇಮಠರ ಸವಿನೆನಪು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಾ. ಬಿ.ಆರ್. ಹಿರೇಮಠರ ಹೆಸರಿನಲ್ಲಿ ಒಂದು ಟ್ರಸ್ಟ್ ರಚನೆ ಮಾಡಿ, ಬಿ.ಆರ್. ಅವರ ಸಾಧನೆ ಮತ್ತು ಸಾಹಿತ್ಯ, ಸಂಸ್ಕೃತಿ ಕಾರ್ಯಗಳನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಸಂಶೋಧನಾ ವಿದ್ಯಾರ್ಥಿಗಳಿಗೆ ಡಾ. ಬಿ.ಆರ್. ಹಿರೇಮಠರ ಹೆಸರಿನ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಬಿ.ಆರ್. ಅವರ ಶಿಷ್ಯ ಬಳಗ ರಾಜ್ಯದ ವಿವಿಧ ಸಂಸ್ಥೆಗಳಲ್ಲಿ, ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸಹಕಾರದಲ್ಲಿ ಸಂಶೋಧನಾತ್ಮಕ ಕಾರ್ಯಾಗಾರಗಳನ್ನು ಆಯೋಜಿಸಲು ಚಿಂತಿಸಲಾಗಿದೆ. ಸಂಶೋಧನಾತ್ಮಕ ಕೃತಿ ಪ್ರಕಟಿಸಲು ಯೋಜಿಸಲಾಗಿದೆ. ಯುವ ಪ್ರಾಧ್ಯಾಪಕರಿಗೆ, ಸಂಶೋಧಕರಿಗೆ ತರಬೇತಿ ನೀಡುವ, ಹೊಸ ಸಂಶೋಧನೆಗೆ ಪ್ರೋತ್ಸಾಹಿಸುವ ಕಾರ್ಯಗಳನ್ನು ನೂತನ ಟ್ರಸ್ಟ್ ದಿಂದ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಡಾ. ಬಿ.ಆರ್. ಹಿರೇಮಠ ಅಭಿಮಾನಿ ಬಳಗದಿಂದ ಲಿಂ. ಡಾ. ಬಿ.ಆರ್. ಹಿರೇಮಠರ ಸವಿ ನೆನಪು ಕಾರ್ಯಕ್ರಮ ನಡೆಯಿತು.

ಹಂಪಿ ವಿವಿ ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ ಘಂಟಿ, ರಾಯಚೂರು ವಾಲ್ಮೀಕಿ ವಿವಿ ಕುಲಪತಿ ಡಾ. ಶಿವಾನಂದ ಕೆಳಗಿನಮನಿ, ಶಿಕ್ಷಣ ಇಲಾಖೆಯ ವಿಶ್ರಾಂತ ಅಪರ ಆಯುಕ್ತ ಡಾ. ವೆಂಕಟೇಶ ಮಾಚಕನೂರ, ಡಾ. ಬಸವರಾಜ ಸಾದರ, ಡಾ. ವಿ.ಎಸ್. ಮಾಳಿ, ಡಾ. ಅಶೋಕ ನರೋಡೆ, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ವೀರೇಶ ಬಡಿಗೇರ, ಡಾ. ಎಸ್.ಸಿ. ಪಾಟೀಲ, ಶೈಲಜಾ ಹೊಸಳ್ಳೇರ ಇದ್ದರು. ವಿಶಾಲ ಕುಲಕರ್ಣಿ ಮಾತನಾಡಿ, ಡಾ.ಬಿ.ಆರ್. ಹಿರೇಮಠರ ಒಡನಾಟ, ಸಾಂಸ್ಕೃತಿಕ ಸೇವೆಗಳನ್ನು ಸ್ಮರಿಸಿದರು.

ಡಾ. ಮೃತ್ಯುಂಜಯ ಹಿರೇಮಠ ಸ್ವಾಗತಿಸಿದರು. ಡಾ. ವೈ.ಎಂ. ಯಾಕೊಳ್ಳಿ ನಿರೂಪಿಸಿದರು. ಶಿವಪೂಜಯ್ಯ ಹಿರೇಮಠ ವಂದಿಸಿದರು. ಅನುಷಾ ಹಿರೇಮಠ, ದಾನಮ್ಮ ಹಿರೇಮಠ, ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಡಾ. ಬಸವರಾಜ ಡೋಣೂರ, ಪ್ರೊ. ರವಿ ಹಿರೇಮಠ, ಡಾ. ಜಗದೀಶ ಕಾಡದೇವರಮಠ, ಡಾ. ಎಸ್.ಬಿ. ಹಿರೇಮಠ, ಡಾ. ಆರ್.ಬಿ. ಚಿಲುಮಿ, ಡಾ. ಚಂದ್ರಶೇಖರ ರೊಟ್ಟಿಗವಾಡ, ಡಾ. ಎಸ್.ಬಿ. ಸಾತಿಹಾಳ, ಡಾ. ಸಮಂಗಮೇಶ ಕಲ್ಯಾಣಿ, ಡಾ. ಮಲ್ಲಿಕಾರ್ಜುನ.ಕೆ ಭಾಗವಹಿಸಿದ್ದರು.

ಶ್ರಾವಣ-ಶ್ರವಣ ಕಾರ್ಯಕ್ರಮ | ಬಸವಣ್ಣ, ಅಂಬೇಡ್ಕರ್,ಡಾ.ರಾಜುಕುಮಾರ ಪ್ರಸ್ತುತತೆ ಕುರಿತ ಉಪನ್ಯಾಸ

ಸಮಾಜ ಸುಧಾರಕರ ಸ್ಮರಣೆ ನಮ್ಮ ಜವಾಬ್ದಾರಿ

ಧಾರವಾಡ: ಸಮಾಜದ ಬದಲಾವಣೆಗಾಗಿ ಶ್ರಮಿಸಿದ ಸಮಾಜ ಸುಧಾರಕರನ್ನು ಸ್ಮರಿಸುವದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಎಂದು ರಾಯಚೂರಿನ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ರ.ಹಾ.ದೇಶಪಾಂಡೆ ಸಭಾಂಗಣದಲ್ಲಿ ಧಾರವಾಡ ಕಟ್ಟೆ ಆಯೋಜಿಸಿದ ಶ್ರಾವಣ-ಶ್ರವಣ ಕಾರ್ಯಕ್ರಮ ಉದ್ಘಾಟಿಸಿ ಬಸವಣ್ಣ, ಅಂಬೇಡ್ಕರ್ ,ಶೇಕ್‌ಸ್ಪಿಯರ್‌ಮತ್ತು ರಾಜಕುಮಾರರ ಪ್ರಸ್ತುತತೆ ಕುರಿತು ಮಾತನಾಡಿದರು.

ಅಂಬೇಡ್ಕರ್‌ಮತ್ತು ಬಸವಣ್ಣ ಸಮಾಜದಲ್ಲಿನ ತಾರತಮ್ಯ ಹೋಗಲಾಡಿಸಲು ಶ್ರಮಿಸಿದ ಮಹಾನ್ ವ್ಯಕ್ತಿಗಳು. ಅಸಮಾನತೆ ವಿರುದ್ಧ ಈ ಇಬ್ಬರು ಮಹನಿಯರು ತಮ್ಮದೇ ಆದ ಚಳುವಳಿ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಶ್ರಮಿಸಿದರು ಎಂದರು. ಇನ್ನು ಆಂಗ್ಲ ಕವಿ, ನಾಟಕಕಾರ ಶೇಕ್ ಸ್ಪಿಯರ್‌ನಾಟಕಗಳು ಸಮಾಜದ ಮೇಲೆ ಹೆಚ್ಚು ಪ್ರಭಾವ ಬೀರಿವೆ. ಶೇಕ್‌ಸ್ಪಿಯರ್‌ನಾಟಕಗಳು ಜೀವನದ ಪ್ರತಿಬಿಂಬವಾಗಿವೆ. ಪ್ರೀತಿ, ದುರಂತ, ರಾಜಕೀಯ, ಹಾಸ್ಯ, ಮಾನವ ಸ್ವಭಾವಗಳ ಸಮನ್ವಯ ದಿಂದ ಅವರ ಕೃತಿಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು. ಸಮಾ ಜದಲ್ಲಿ ಡಾ. ರಾಜಕುಮಾರ ಅವರ ಸಿನಿಮಾಗಳು ಪ್ರಭಾವ ಅಧಿಕವಾಗಿದ್ದು, ಅವರ ಸಿನಿಮಾ ಗಳಲ್ಲಿ ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ಸಾಮರಸ್ಯವನ್ನು ಕಾಣ ಬಹುದು. ಡಾ. ರಾಜಕುಮಾರ ಒಬ್ಬ ಅಪ್ರತಿಮ ಕಲಾವಿದ ಎಂದರು.ಬಾಗಲಕೋಟ ಬಸವೇಶ್ವರ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಪ್ರೊ. ವಿ.ಎಸ್. ಕಟಗಿಹಳ್ಳಿಮಠ ಮಾತನಾಡಿ, ಸಮಾಜದಲ್ಲಿ ಸಾಮಾಜಿಕ ಸಮಾನತೆ ತರಲು ಬಸವಣ್ಣನವರ ಕೊಡುಗೆ ಅಪಾರವಾಗಿದೆ. ವಚನಗಳ ಮೂಲಕ ಇಂದಿಗೂ ಪ್ರಸ್ತುತತೆಯನ್ನು ಪಡೆದಿದ್ದಾರೆ. ನಾಡಿನಲ್ಲಿ ಬಸವಣ್ಣನ ಸಾಮಾಜಿಕ ಚಳವಳಿ ಅತಿ ದೊಡ್ಡ ಕ್ರಾಂತಿ ಎಂದರು.ಕೇಂದ್ರೀಯ ವಿವಿ ಪ್ರಾಧ್ಯಾಪಕ ಗಣೇಶ ಪವಾರ್ ಮಾತನಾಡಿ, ಅಂಬೇಡ್ಕರ್‌ಅವರು ಹಾಕಿಕೊಟ್ಟ ತತ್ವ ಆದರ್ಶ ಅನುಸರಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ರ.ಹಾ.ದೇಶಪಾಂಡೆ ಸಭಾಂಗಣದಲ್ಲಿ ಶ್ರಾವಣ-ಶ್ರವಣ ಕಾರ್ಯಕ್ರಮದಲ್ಲಿ ಪ್ರೊ. ಶಿವಾನಂದ ಕೆಳಗಿನಮನಿ ಮಾತನಾಡಿದರು.

ರಂಗಕರ್ಮಿ ಡಾ. ಶಶಿಧರ ನರೇಂದ್ರ ಮಾತನಾಡಿ, ಡಾ. ರಾಜಕುಮಾರ ಕನ್ನಡದ ಅಸ್ಮಿತೆ ಆಗಿದ್ದಾರೆ. ವೈವಿಧ್ಯಮಯ ಪಾತ್ರಗಳನ್ನು ಮಾಡಿದ ಮಹಾನ್ ಕಲಾವಿದ. 209 ಚಿತ್ರಗಳು ''ಯು'' ಸರ್ಟಿಫಿಕೇಟ್ ಪಡೆದ ಚಿತ್ರಗಳಾಗಿವೆ. ರಾಜಕುಮಾರ ಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೊಂದಿವೆ. ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುತಿದ್ದ ರಾಜಕುಮಾರ್ ಜನಮನ್ನಣೆ ಗಳಿಸಿದ ಕಲಾವಿದರಾಗಿದ್ದರು. ಗೋಕಾಕ ಚಳವಳಿ ನೇತೃತ್ವವಹಿಸಿ ಅಸ್ಮಿತೆಗಾಗಿ ಹೋರಾಡಿದ ಮಹಾನ್ ಕಲಾವಿದ ಎಂದರು.

ಕಲಬುರ್ಗಿಯ ಕೇಂದ್ರೀಯ ವಿವಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ.ಬಸವರಾಜ ಡೋಣೂರ ಮಾತನಾಡಿ, ಬಸವಣ್ಣ ಅಂಬೇಡ್ಕರ್‌ಎಲ್ಲಾ ಸಮುದಾಯಗಳ ಪ್ರತಿನಿಧಿಗಳು ಎಂದರು. ಪ್ರೊ. ಮುಕುಂದ ಲಮಾಣಿ, ಡಾ. ಡಿ.ಎಂ. ಹಿರೇಮಠ, ಡಾ. ಪೊಲೀಸ್ ಪಾಟೀಲ, ಪ್ರೊ.ಗುಂಡೂರ, ಪ್ರೊ.ಗಣೇಶ ಪವಾರ, ಸುಶೀಲಾ ಡೋಣೂರ ಡಾ. ಹರಿಹರ ಇದ್ದರು.

255 ವೈದ್ಯರ ನೇಮಕಕ್ಕೆ ಅನುಮೋದನೆ ಸಿಕ್ಕಿದೆ

ಹುಬ್ಬಳ್ಳಿ: ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಸಹ ಬದ್ಧರಾಗಿದ್ದೇವೆ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ನಗರದಲ್ಲಿ ಮಾಧ್ಯಮದವರೊಡನೆ ಮಾತನಾಡಿದ ಅವರು, ಸಂಪುಟ ಪುನರಚನೆಯಾಗಿ ಬೇರೆಯವರಿಗೆ ಅವಕಾಶ ಸಿಗಬೇಕು. ಈ ಬಗ್ಗೆ ಹೈಕಮಾಂಡ್ ಮತ್ತು ಸಿಎಂ ಸಿದ್ದರಾಮಯ್ಯ ತೀರ್ಮಾನ ಕೈಗೊಳ್ಳುತ್ತಾರೆ. ಸಂಪುಟ ವಿಸ್ತರಣೆ ಆಗುವ ನಿರೀಕ್ಷೆ ಇದೆ ಎಂದು ಹೇಳಿದರು.



ರಾಜ್ಯದಲ್ಲಿ 255 ವೈದ್ಯರ ನೇಮಕಾತಿಗೆ ಅನುಮೋದನೆ ಸಿಕ್ಕಿದೆ. ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ನೇಮಕಕ್ಕೆ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೋವಿಡ್ ಸಮಯದಲ್ಲಿ ಹಗರಣದ ಬಗ್ಗೆ ಸಮಿತಿ ವರದಿ ವಿಚಾರವಾಗಿ ನಿವೃತ್ತ ನ್ಯಾಯಮೂರ್ತಿ ಕುನ್ಹಾ ಸಮಿತಿ ವರದಿ ಆಧಾರದಲ್ಲಿ ತನಿಖೆ ನಡೆಯುತ್ತಿದೆ. ಕೊರೋನಾ ಸಂಕಷ್ಟದ ಸಮಯದಲ್ಲಿ ಸಾಕಷ್ಟು ದುರುಪಯೋಗವಾಗಿದೆ. ಆದರೆ ಸಾಕ್ಷಿ ಆಧಾರದಲ್ಲಿ ಸರಕಾರ ಕ್ರಮ ಕೈ ಗೊಳ್ಳುತ್ತದೆ ಎಂದರು.

ರಾಜ್ಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಎಲ್ಲಾ ಕಡೆಗೂ ಮಾರ್ಗಸೂಚಿ ನೀಡಲಾಗಿದೆ ಎಂದರು.

ಹೀಟ್ ಸ್ಟ್ರೋಕ್ ನಿಂದ ಬರುವವರಿಗೆ ತುರ್ತು ಚಿಕಿತ್ಸೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಬೆಡ್ಗಳನ್ನು ಮೀಸಲಿಡಲಾಗಿದೆ. ಇದುವರೆಗೂ ಯಾವುದೇ ಅಹಿತಕರ ಘಟನೆ ನಡೆದಿಲ್ಲ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ನೂತನ ದಂಪತಿಗೆ ಪ್ರಧಾನಿ ಶುಭಾಶಯ

ರಾಯಚೂರು: ಪ್ರಧಾನಿ ನರೇಂದ್ರ ಮೋದಿಗೆ ಮದುವೆ ಆಹ್ವಾನ ಪತ್ರ ಕಳುಹಿಸಿದ್ದ ರಾಯಚೂರಿನ ಯುವಕನಿಗೆ ಪ್ರಧಾನಿ ಕಚೇರಿಯಿಂದ ಮದುವೆ ಶುಭಾಶಯ ಪತ್ರ ಬಂದಿದ್ದು, ಯುವಕ ಖುಷಿ ವ್ಯಕ್ತಪಡಿಸಿದ್ದಾರೆ. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ರಾಜೇಶ್ ನಾಯಕ್ ಅವರು ಪ್ರಧಾನಿ ಮೋದಿಗೆ ಮದುವೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದರು. ಪ್ರಧಾನಿ ಕಚೇರಿಯಿಂದ ನವ ದಂಪತಿಗೆ ಶುಭಾಶಯ ಪತ್ರ ಬಂದಿದೆ. ಪ್ರತಿಯಾಗಿ ಶುಭಾಶಯ ಬರಬಹುದು ಎನ್ನುವ ನಿರೀಕ್ಷೆಯಲ್ಲೇ ಲಗ್ನ ಪತ್ರಿಕೆಯನ್ನು ಪೋಸ್ಟ್ ಮಾಡಿ, ಪ್ರಧಾನಿ ಮೋದಿ ಅವರಿಗೆ ಆಹ್ವಾನ ನೀಡಿದ್ದರು. ಏ.13ರಂದು ರಾಜೇಶ್ ನಾಯಕ್ ಹಾಗೂ ಸವಿತಾ ಮದುವೆ ನಡೆದಿದ್ದು, ನವಜೋಡಿಗೆ ಪ್ರಧಾನಿ ಮೋದಿಯಿಂದ ಶುಭಾಶಯ ಪತ್ರ ಬಂದಿದೆ. ದಾಂಪತ್ಯ ಜೀವನಕ್ಕೆ ಶುಭ ಹಾರೈಸಿ ಪತ್ರ ಬರೆದಿದ್ದು, ಪ್ರಧಾನಿ ಕಚೇರಿಯಿಂದ ಪತ್ರ ಬಂದಿರುವುದಕ್ಕೆ ರಾಜೇಶ್ ಅವರು ಖುಷಿ ವ್ಯಕ್ತಪಡಿಸಿ, ಪ್ರಧಾನಿಗೆ ಧನ್ಯವಾದ ತಿಳಿಸಿದ್ದಾರೆ.

ಟ್ರಂಪ್‌ಗೆ ಮಧ್ಯದ ಬೆರಳು ತೋರಿದ ಲಾಡ್

ಬಳ್ಳಾರಿ: ಭಾರತವನ್ನು ನರಕ ಎಂದು ಕರೆದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಧ್ಯದ ಬೆರಳು ತೋರಿಸಿದ್ದಾರೆ. ಸಂಡೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ನೀವು ನಮ್ಮ ಪ್ರಧಾನಿಗೆ ಅವಮಾನಿಸಿದ್ದೀರಿ. ಭಾರತವನ್ನು ನರಕ ಎಂದು ಕರೆದಿದ್ದೀರಿ. ಮಿಸ್ಟರ್ ಟ್ರಂಪ್ ನೀವೊಬ್ಬ ಮ್ಯಾಡ್ ಮ್ಯಾಕ್ಸ್ ಎಂದು ಹರಿಹಾಯ್ದರು. ನೀವು ಅಮೆರಿಕದ ಅಧ್ಯಕ್ಷರಾದ ಕಾರಣಕ್ಕೆ ಭಾರತದ ಬಗ್ಗೆ ಏನೇನೋ ಮಾತನಾಡುವಂತಿಲ್ಲ. ನನ್ನ ದೇಶದ ಬಗ್ಗೆ ನೀವು ಆಡಿದ ಮಾತುಗಳನ್ನು ಖಂಡಿಸಬೇಕಿದೆ. ನಾನು ನಿಮಗೆ ಮಧ್ಯದ ಬೆರಳು ತೋರಿಸಬೇಕೆಂದು ಅನ್ನಿಸುತ್ತಿದೆ ಎಂದು ಬೆರಳು ತೋರಿದರು. ನಾವು ನಮ್ಮ ದೇಶದ ಪರವಾಗಿರುತ್ತೇವೆ. ಭಾರತ ಎಂದಿಗೂ ಒಗ್ಗಟ್ಟಾಗಿ ಇರಲಿದೆ. ಟ್ರಂಪ್ ನೀವು ನರಕಕ್ಕೆ ಹೋಗಿ ಎಂದು ಮತ್ತೆ ಬೆರಳು ಪ್ರದರ್ಶನ ಮಾಡಿದರು.

ಪಂಚಮಸಾಲಿ ಪೀಠದಲ್ಲಿ ಲೆಕ್ಕದ ಲಡಾಯಿ

ವಚನಾನಂದ ಸ್ವಾಮೀಜಿ ಭಕ್ತರ ವಿರೋಧದ ನಡುವೆ ಲೆಕ್ಕಕೊಟ್ಟ ಟ್ರಸ್ಟಿ

ದಾವಣಗೆರೆ ಜಿಲ್ಲೆ ಹರಿಹರದ ಪಂಚಮಸಾಲಿ ಪೀಠದಲ್ಲಿ ಲೆಕ್ಕಕೊಡಿ ಚಳವಳಿ ಸಂಬಂಧ ಸೋಮವಾರ ಪಂಚಮಸಾಲಿ ಸಂಬಂಧ 2 ಬಣಗಳ ನಡುವೆ ಮಾತಿನ ಚಕಮಕಿ ನಡೆಯಿತು.

ದಾವಣಗೆರೆ: ಕಳೆದ ಎರಡು ವಾರಗಳಿಂದ ಹರಿಹರ ಪಂಚಮಸಾಲಿ ಪೀಠದ ಚಾರದಲ್ಲಿ ನಡೆಯುತ್ತಿರುವ ವಾದವಾದ ತಾರಕಕ್ಕೇರಿದ್ದು, ಸೋಮವಾರ ಮಠದ ಆವರಣದಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ನೂರಾರು ಸಂಖ್ಯೆಯಲ್ಲಿ ಪೊಲೀಸರು ಜಮಾವಣೆಗೊಂಡು ಪರಿಸ್ಥಿತಿ ಹತೋಟಿಗೆ ತಂದರು.

ಬೆಳಗ್ಗೆ 11 ಗಂಟೆ ವೇಳೆ ಮಠದ ಆವರಣದಲ್ಲಿ ಜಮಾಯಿಸಿರುವ ಸಮಾಜದ ಭಕ್ತರು, ಲೆಕ್ಕ ಮಂಡನೆ ಸಭೆಗೆ ನಾವು ಬರುವುದಿಲ್ಲ, ನೀವು ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ಸ್ವಾಮೀಜಿ ಪರ ಭಕ್ತರು ಜಯಘೋಷಣೆ ಕೂಗಿದರು.

ಬೆಳಗ್ಗೆ 12.30 ಗಂಟೆಯ ಸುಮಾರಿನಲ್ಲಿ ಮಠದಲ್ಲಿದ್ದ ಲೆಕ್ಕಪತ್ರದ ದಾಖಲೆಗಳನ್ನು ಗಂಟು ಕಟ್ಟಿದ ಮೂಟೆಯನ್ನು ಸಭೆಯ ವೇದಿಕೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಟ್ರಸ್ಟಿಗಳ ಪರ ಇರುವ ಭಕ್ತರು ಮತ್ತು ಉಚ್ಚಾಟಿತ ಶ್ರೀ ವಚನಾನಂದ ಸ್ವಾಮೀಜಿ ಪರ ಇರುವ ಭಕ್ತರು ಪರಸ್ಪರ ಘೋಷಣೆ ಕೂಗಿದರು. ಈ ವೇಳೆ ಒಂದು ರೀತಿ ಗೊಂದಲ ಸೃಷ್ಟಿಯಾಯಿತು. ಮಧ್ಯ ಪ್ರವೇಶಿಸಿದ ಪೊಲೀಸರು ಭಕ್ತರನ್ನು ಸಮಾಧಾನ ಮಾಡಿದರು.

ಈ ವೇಳೆ ಬಿ.ಸಿ.ಉಮಾಪತಿ ಮಾತನಾಡಿ, ಅವರು ಕೇಳಿದಂತೆ ಲೆಕ್ಕ ಕೊಡಲು ಬಂದಿರುವೆ. ನಮ್ಮನ್ನು ಉಚ್ಚಾಟನೆ ಮಾಡಲು ಸಂಘಕ್ಕೆ ಯಾವುದೇ ಅಧಿಕಾರಲ್ಲ. ಅವರು ಲೆಕ್ಕ ಕೇಳಿದ್ದು ಕೊಡುತ್ತಿದ್ದೇವೆ ಅಷ್ಟೇ. ಆದರೆ, ಅವರಿಗೆ ಲೆಕ್ಕ ಬೇಕಿಲ್ಲ. ಸ್ವಾಮೀಜಿಯ ನ್ಯೂನತೆ ಮುಚ್ಚಿಡಲು ಲೆಕ್ಕ ಚಳವಳಿ ಆರಂಭಿಸಿದ್ದಾರೆ. ಪಂಚಮಸಾಲಿ ಸಮಾಜ ಈ ಸ್ಥಿತಿಗೆ ಬರಲು ಸಂಪೂರ್ಣವಾಗಿ ಉಚ್ಚಾಟಿತ ವಚನಾನಂದ ಶ್ರೀಗಳೇ ಕಾರಣ ಎಂದು ದೂರಿ ವೇದಿಕೆಯತ್ತ ತೆರಳಿದರು.

ಗೊಂದಲದ ಗೂಡಾದ ಸಭೆ: ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಟ್ರಸ್ಟ್‌ನ ಲೆಕ್ಕಪತ್ರ ಮಂಡನೆಗೆ ಸ್ವಾಮೀಜಿ ಪರ ಭಕ್ತರು ವಿರೋಧ ವ್ಯಕ್ತಪಡಿಸಿದರು. ಇದರಿಂದ ಲೆಕ್ಕಪತ್ರ ಮಂಡನೆ ಸಭೆ ಗೊಂದಲದ ಗೂಡಾಯಿತು. ಮಠದ ಆವರಣದಲ್ಲಿ ಏರ್ಪಡಿಸಿದ್ದ ಸಮಾರಂಭಕ್ಕೆ ಭಕ್ತರು ಆಗಮಿಸಿದ್ದರು. ಸಭೆ ಆರಂಭವಾದ ಕೆಲ ಹೊತ್ತಿನ ಬಳಿಕ ಸಭೆಯಿಂದ ಹೊರ ನಡೆದ ಕೆಲವರು ಲೆಕ್ಕಪತ್ರ ಮಂಡನೆ ಸಭೆಗೆ ಬಹಿಷ್ಕಾರ ಹಾಕಿ ಶ್ರೀಗಳ ಜತೆ ಮಠದ ಹೊರಗಡೆ ತೆರಳಿದರು.

ತದನಂತರ ಸ್ವಾಮೀಜಿ ಪರ ಗುಂಪು ವೇದಿಕೆ ಸಮೀಪ ಧಾವಿಸಿ ಟ್ರಸ್ಟ್ ಸದಸ್ಯ ಎಚ್.ಎಸ್. ನಾಗರಾಜ್ ಅವರ ಭಾಷಣಕ್ಕೆ ಅಡ್ಡಿಪಡಿಸಿತು. ಇದರಿಂದ ಸಭೆಯಲ್ಲಿ ಕೋಲಾಹಲ ಸೃಷ್ಟಿ ಆಯಿತು. ವೇದಿಕೆಗೆ ನುಗ್ಗುವ ಪ್ರಯತ್ನವನ್ನು ಪೊಲೀಸರು ವಿಫಲಗೊಳಿಸಿದರು. ಟ್ರಸ್ಟ್ ಪರವಾಗಿರುವವರು 'ಹರ ಹರ ಮಹಾದೇವ', 'ಜೈ ಪಂಚಮಸಾಲಿ' ಘೋಷಣೆ ಮೊಳಗಿಸಿದರು.

ಮಧ್ಯೆ ಪ್ರವೇಶಿಸಿದ ಪೊಲೀಸರು ಸ್ವಾಮೀಜಿ ಪರ ಬಣದ ಭಕ್ತರನ್ನು ದೇಗುಲದ ಸಮೀಪ ತಡೆದರು. ಗೊಂದಲ ಉಂಟಾಗದಂತೆ ಎಚ್ಚರಿಕೆ ನೀಡಿದರು. ಕೆಲ ಹೊತ್ತಿನ ಬಳಿಕ ಸ್ವಾಮೀಜಿ ಪರ ಭಕ್ತರು ಗುರುಪೀಠದ ಕಟ್ಟಡದ ಕಡೆ ಸಾಗಿದರು. ಬಳಿಕ ಟ್ರಸ್ಟ್ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅವರು ಲೆಕ್ಕಪತ್ರ ಮಂಡನೆ ಮಾಡಿದರು.

ಧರ್ಮದರ್ಶಿ ಮಠ ತೊರೆಯಲಿ

ನಾನು ಬಡ ಪಂಚಮಸಾಲಿ ರೈತ ಕುಟುಂಬದಿಂದ ಬೆಳೆದು ಬಂದಿದ್ದೇನೆ. ಮಠದಲ್ಲಿ ಐಷಾರಾಮಿ ಜೀವನ ನಡೆಸುತಿದ್ದೇನೆ ಎಂಬ ಆರೋಪದಲ್ಲಿ ಹುರುಳಿಲ್ಲ. ನಾನು ಐಷಿ ಸಂಸ್ಕೃತಿ ಪಾಲನೆ ಮಾಡಿದ್ದರೆ ಸಾಮಾನ್ಯ ಭಕ್ತರು ನನ್ನ ಪರವಾಗಿ ಮಠಕ್ಕೆ ಬರುತ್ತಿದ್ದರೇ? ಎಂದು ಪ್ರಶ್ನಿಸಿದರು. ನನ್ನ ಪರ ಇಡೀ ಭಕ್ತ ಸಮೂಹವಿದೆ. ನಾವು ಮಠ ತೊರೆಯುವುದಿಲ್ಲ. ಭಾನುವಾರ ಉಚ್ಚಾಟಿತಗೊಂಡಿರುವ ಧರ್ಮದರ್ಶಿಗಳು ಮಠವನ್ನು ತೊರೆದು ಹೊರಗೆ ಹೋಗಬೇಕೆಂದು ಉಚ್ಚಾಟಿತ ವಚನಾನಂದ ಸ್ವಾಮೀಜಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು. ಮತ್ತೆ ನೀವು ಸಭೆ ಹೋಗುವುದಿಲ್ಲವೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾವ ಸಭೆ? ನಮ್ಮ ಸಂಬಂಧ ಇಲ್ಲ, ಅದು ಭಕ್ತರ ಸಭೆ. ಭಕ್ತರ ಸಭೆಯಲ್ಲಿ ಇದ್ದೇವಲ್ಲ. ನಾವು ಎಲ್ಲೂ ಹೋಗಲ್ಲ, ಇರೋದು ಇಲ್ಲೇ. ಯಾರೇ ಇದ್ದರೂ ಇಲ್ಲೇ ಬರಬೇಕು ಎಂದು ತಿಳಿಸಿದರು.

ಸೋಮವಾರ ಹರಿಹರ ಪೀಠದಲ್ಲಿ ಆಗಿದ್ದೇನು?

- 2008ರಿಂದ ಇಲ್ಲಿ ತನಕ ಪಂಚಮಸಾಲಿ ಪೀಠಕ್ಕೆ ಬಂದ ದೇಣಿಗೆ ಲೆಕ್ಕ ಒಪ್ಪಿಸಿದ ಟ್ರಸ್ಟಿ ಉಮಾಪತಿ
- ವಚನಾನಂದ ಸ್ವಾಮೀಜಿ ಭಕ್ತರ ವಿರೋಧದ ನಡುವೆಯೇ ವಿವರವಾಗಿ ಹಣದ ಲೆಕ್ಕ, ಅಭಿವೃದ್ಧಿ ಲೆಕ್ಕವನ್ನು ಕೊಟ್ಟ ಧರ್ಮದರ್ಶಿ
- ಮಠದ ಆವರಣದಲ್ಲಿ ಎರಡು ಬಣಗಳ ನಡುವೆ ಹೈಡ್ರಾಮಾ, ತಳ್ಳಾಟ-ನೂಕಾಟ. ಮಠದ ಆವರಣದಲ್ಲಿ ಸ್ವಾಮೀಜಿ ಪರ-ವಿರೋಧ ಘೋಷಣೆ
- 2 ಗುಂಪುಗಳ ಭಕ್ತರನ್ನು ಹರಸಾಹಸಪಟ್ಟು ನಿಯಂತ್ರಿಸಿದ ಪೊಲೀಸರು

ಧರ್ಮದರ್ಶಿಗಳು ಕೊಡುವ ಕೃಷ್ಣನ ಲೆಕ್ಕ ನಮಗೆ ಬೇಕಿಲ್ಲ. ಅದನ್ನು ನಾವು ಒಪ್ಪುವುದಿಲ್ಲ. ಶ್ರೀರಾಮನ ಲೆಕ್ಕ ಕೊಡಲಿ. ಜತೆಗೆ, ನನ್ನೊಂದಿಗೆ ಇಡೀ ಪಂಚಮಸಾಲಿ ಸಮಾಜದೆ. ನಾನು ಮಠ ತೊರೆಯುವ ಪ್ರಶ್ನೆಯೇ ಬರುವುದಿಲ್ಲ.

– ವಚನಾನಂದ ಸ್ವಾಮೀಜಿ
ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠ

ಪಂಚಮಸಾಲಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರು ನಾವು. ನಾವು ಮಠಕ್ಕೆ ಬಂದರೆ ವಚನಾನಂದ ಶ್ರೀ ಬೆಂಬಲಿತ ಭಕ್ತರು ನಮ್ಮನ್ನು ಕಳ್ಳ.. ಕಳ್ಳ ಎಂದು ಕೂಗುತ್ತಾರೆ. ಇದು ವಚನಶ್ರೀ ತನ್ನ ಭಕ್ತರಿಗೆ ಕಲಿಸಿದ ಸಂಸ್ಕೃತಿ. ಅವರು ಮಾಡಿದಂತೆ ನಾವೂ ಮಾಡಿದರೆ ನಮ್ಮ ಸಮಾಜಕ್ಕೆ ಕೆಟ್ಟ ಹೆಸರು.

–ಬೆಟ್ಟಪ್ಪ ಪಂಚಮಸಾಲಿ ಟ್ರಸ್ಟಿ

ಕೇಂದ್ರ ಸಚಿವ ಎಚ್‌ಡಿಕೆ ಒತ್ತಾಯ

ಸಚಿವ ಸುಧಾಕರ್ ಆರೋಗ್ಯದ ಬಗ್ಗೆ ವಾಸ್ತವಾಂಶ ತಿಳಿಸಿ

ಕೋಲಾರ: ಸಚಿವ ಡಿ.ಸುಧಾಕರ್ ಅವರ ಆರೋಗ್ಯದ ವಾಸ್ತವಾಂಶವನ್ನು ಸರಕಾರವು ಜನರ ಮುಂದೆ ಇಡಬೇಕು. ಅವರನ್ನು ನಂಬಿರುವ ಅಭಿಮಾನಿಗಳು, ಕ್ಷೇತ್ರದ ಜನರ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೆಲ ದುರ್ಬುದ್ಧಿ ಜನರು ಇರುತ್ತಾರೆ. ಅಂಥ ಜನರಿಂದ ಹಬ್ಬಟ್ಟಿನ ಘಟನೆ ನಡೆಯುತ್ತವೆ. ದುರ್ಬಳಕೆ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ ತುಸು ಎಚ್ಚರದಿಂದ ಇರಬೇಕು ಎಂದಷ್ಟೇ ಹೇಳಿದ್ದೆ. ಸುಧಾಕರ್ ವಿಚಾರದಲ್ಲಿ ಹೇಳಿದ್ದಲ್ಲ, ನನ್ನ ಮಾತಿನಲ್ಲಿ ಮಾರ್ಮಿಕ ಅರ್ಥವೂ ಇಲ್ಲ ಎಂದರು.

ಒಳಮೀಸಲಾತಿ ವಿಚಾರವನ್ನು ನಾನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳಲು ಇಷ್ಟ ಪಡುವುದಿಲ್ಲ. ಈಗಾಗಲೇ ರಾಜ್ಯ ಸರಕಾರವು ವಿಂಗಡಣೆ ಮಾಡಿದ್ದು, ಸಮುದಾಯಕ್ಕೆ ತೃಪ್ತಿಯಾದರೆ ಮುಗಿಯಿತು. ರಾಜಕೀಯವಾಗಿ ನಾನೇಕೆ ಎತ್ತಿಕಟ್ಟಿ ಸಂಘರ್ಷಕ್ಕೆಡೆ ಮಾಡಿಕೊಡಲಿ?

-ಎಚ್.ಡಿ.ಕೆ
ಕೇಂದ್ರ ಸಚಿವ

ರಾಜ್ಯದಲ್ಲಿ ಮುಖ್ಯಮಂತ್ರಿ ಗಾದಿ ಪೈಪೋಟಿ ಕುರಿತು ಪ್ರತಿಕ್ರಿಯಿಸಿ, ದೆಹಲಿಗೆ ತೆರಳಲು 40ರಿಂದ 50 ಶಾಸಕರ ವಿಮಾನದ ಟಿಕೆಟ್ ಬುಕ್ಕಿಂಗ್ ನಡೆಯುತ್ತಿದೆ. ಮುಖ್ಯಮಂತ್ರಿ ಆಗಬೇಕೆಂದು ಪದೇಪದೆ ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ವರ್ಷದಿಂದ ಈ ಪೈಪೋಟಿ ನಡೆಯುತ್ತಿದೆ. ಈಗಾಗಲೇ ಸಂಕ್ರಾಂತಿ, ಯುಗಾದಿ ಕ್ರಾಂತಿ ಮಾತು ಮುಗಿದಿದೆ. ಚುನಾವಣೆ ಫಲಿತಾಂಶದ ಬಳಿಕ ಕ್ರಾಂತಿ ಆಗುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. ಯಾವ ರೀತಿ ಕ್ರಾಂತಿ ನಡೆಯಬಹುದೆಂದು ನಾನು ಕುತೂಹಲದಿಂದ ಕಾಯುತ್ತಿದ್ದೇನೆ. ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಏನೆಲ್ಲಾ ವ್ಯವಹಾರ ನಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ ಎಂದರು.

ಮೇಕೆದಾಟು ವಿಚಾರದಲ್ಲಿ ಕಾಂಗ್ರೆಸ್‌ನ ಮಿತ್ರ ಪಕ್ಷವಾದ ಡಿಎಂಕೆ ತಕರಾರು ಅರ್ಜಿ ಸಲ್ಲಿಸಿದೆ. ಸುಪ್ರೀಂಕೋರ್ಟ್ ತಮ್ಮ ಪರವಾಗಿ ತೀರ್ಪು ನೀಡಿದ್ದು, ಕೇಂದ್ರ ಸರಕಾರ ಅನುಮತಿ ಕೊಡಿಸಬೇಕೆಂದು ರಾಜ್ಯ ಕಾಂಗ್ರೆಸ್ ಸರಕಾರ ಹೇಳುತ್ತಿದೆ. ಶೀಘ್ರದಲ್ಲೇ ಡಿಪಿಆರ್ ಸಲ್ಲಿಸುವುದಾಗಿಯೂ ಸಚಿವರು ಹೇಳಿದ್ದಾರೆ. ಈಚೆಗೆ ತಮಿಳುನಾಡಿನಲ್ಲಿ ಪ್ರಚಾರ ಕೂಡ ನಡೆಸಿ ಬಂದಿದ್ದಾರೆ. ಡಿಎಂಕೆ ಜತೆ ಕುಳಿತು ಈ ಸಮಸ್ಯೆ ಬಗೆಹರಿಸಿಕೊಳ್ಳಬಹುದಲ್ಲವೇ? ನ್ಯಾಯಾಲಯಕ್ಕೆ ಹೋಗಬೇಡಿ ಎಂದು ಕೇಳಿಕೊಳ್ಳಬಹುದಲ್ಲವೇ? ಎಂದರು.

ಹೊಂಡಕ್ಕೆ ಬಿದ್ದು ತಾಯಿ-ಮಗಳ ಸಾವು

ಆನೇಕಲ್: ಕೃಷಿ ಹೊಂಡಕ್ಕೆ ಬಿದ್ದು ತಾಯಿ ಮಗಳು ಸಾವನ್ನಪ್ಪಿದ ಘಟನೆ ಲಕ್ಷ್ಮೀಸಾಗರ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಲಾವಣ್ಯ (28), ಲಕ್ಷಾ (8) ಎಂದು ಗುರುತಿಸಲಾಗಿದೆ. ತಾಯಿ ಮಗಳ ಸಾವಿನ ವಿಚಾರವಾಗಿ ಮಹಿಳೆಯ ಪೋಷಕರು ಪತಿ ವಿರುದ್ಧ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಎಂದು ಮಹಿಳೆಯ ಪೋಷಕರು ಪ್ರಕರಣ ದಾಖಲಿಸಿದ್ದಾರೆ.

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ.
ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/08/2026-27 ದಿನಾಂಕ:16-04-2026
ಇ-ಟೆಂಡರ್ ಪ್ರಕಟಣೆ
2026-27ನೇ ಸಾಲಿಗಾಗಿ ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿಯಲ್ಲಿ ಖಾಲಿ ಇರುವ25ಗ್ರೂಪ್ ಡಿ ಮತ್ತು10ನಾನ್‌ಕ್ಲಿನಿಕ್ ಒಟ್ಟು 10 ಹುದ್ದೆಗಳಿಗೆ ಹೊರಗುತ್ತಿಗೆಆಧಾರದ ಮೇಲೆ ನೇಮಕ ಮಾಡಲು ಇ-ಪ್ರೊಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿಟೆಂಡರನ್ನುಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೊಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲುಕೋರಿದೆ.
e-Tender No.: **TGH/TENDER/08 /2026-27.** E-Procurement Tender No: **DHFWS/2026-27/SE2186.** Commencement of downloading of e-Tender forms from website http://kppp.karnataka.gov.in: **ದಿನಾಂಕ:21-04-2026ರಿಂದ20-05-2026ರಂದು ಸಂಜೆ 4.30 ಗಂಟೆಯವರೆಗೆ.** Last Date for seeking clarification if any: **ದಿನಾಂಕ: 20-05-2026ರಂದುಬೆಳಗ್ಗೆ11.00 ಗಂಟೆಯವರೆಗೆ.** Last date for uploading of Tender ine-procurement platform: **ದಿನಾಂಕ:20-05-2026ರಂದು ಸಂಜೆ 4.30 ಗಂಟೆಯವರೆಗೆ.** Date, Time & Venue of Opening of Tenders: **ದಿನಾಂಕ:22-05-2026ರಂದುಬೆಳಗ್ಗೆ11.30ಗಂಟೆಗೆ, ಮುಖ್ಯ ವೈದ್ಯಾಧಿಕಾರಿಗಳು, ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿ ಇವರ ಕಛೇರಿಯಲ್ಲಿ ಇ-ಪ್ರೊಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** Tender Value: **Rs.60,00,000/-.** EMD : **Rs.1,20,000/-**
ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರುಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಮುಖ್ಯ ವೈದ್ಯಾಧಿಕಾರಿಗಳು
ತಾಲೂಕು ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ, ವಿಜಯನಗರಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/50

ಎಸಿ ಕಚೇರಿ ಪೀಠೋಪಕರಣ ಜಪ್ತಿ

ಧಾರವಾಡ: ಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ರೈತನಿಗೆ ಬಾಕಿ ಹಣವನ್ನು ಕೊಡದ ಹಿನ್ನೆಲೆ ನ್ಯಾಯಾಲಯದ ಆದೇಶದಂತೆ ಧಾರವಾಡ ಉಪವಿಭಾಗಾಧಿ ಕಾರಿ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು. ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಕೊಂಡಿಕೊಪ್ಪ ಗ್ರಾಮದ ರೈತ ನಾಗನಗೌಡ ಪಾಟೀಲ ಎಂಬುವವರಿಗೆ ಸೇರಿದ ಎರಡು ಎಕರೆ ಜಮೀನನ್ನು ರುದ್ರಭೂಮಿಗಾಗಿ 2010ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆಗ ಪ್ರತಿ ಗುಂಟೆ ಜಮೀನಿಗೆ 10,500 ರು. ಲೆಕ್ಕ ಹಾಕಿ 2 ಎಕರೆ ಜಮೀನಿಗೆ 35 ಲಕ್ಷ ಪರಿಹಾರ ನೀಡುವ ಭರವಸೆಯನ್ನು ಜಿಲ್ಲಾಡಳಿತ ನೀಡಿತ್ತು. ಆ ಪ್ರಕಾರ ರೈತನಿಗೆ 20 ಲಕ್ಷ ಹಣ ನೀಡಿ 15 ಲಕ್ಷ ಹಣವನ್ನು ಬಾಕಿ ಇರಿಸಿಕೊಳ್ಳಲಾಗಿತ್ತು.

ಹಲವು ಬಾರಿ ರೈತ ಬಾಕಿ ಹಣ ನೀಡುವಂತೆ ಮನವಿ ಮಾಡಿದ್ದರೂ ಉಪವಿಭಾಗಾಧಿಕಾರಿಗಳು ತಲೆ ಕೆಡಿಸಿಕೊಂಡಿರಲಿಲ್ಲ. ಹೀಗಾಗಿ ರೈತ ನಾಗನಗೌಡ ಕೋರ್ಟ್ ಮೊರೆ ಹೋಗಿದ್ದರು. ಹೀಗಾಗಿ ಧಾರವಾಡದ 2ನೇ ಅಧಿಕ ದಿವಾಣಿ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿನ ಪೀಠೋಪಕರಣಗಳನ್ನು ಜಪ್ತಿ ಮಾಡುವಂತೆ ಆದೇಶ ಮಾಡಿತ್ತು. ಆ ಹಿನ್ನೆಲೆ ಕೋರ್ಟ್ ಸಿಬ್ಬಂದಿ ಪೀಠೋಪಕರಣಗಳನ್ನು ಜಪ್ತಿ ಮಾಡಿ, ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಬಿಸಿಲ ಝಳಕ್ಕೆ ಜನ ತತ್ತರ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ವರುಣನ ಮುನಿಸಿನ ಜತೆಗೆ ಸೂರ್ಯನ ಪ್ರಖರತೆ ಮಿತಿಮೀರಿದೆ. ಹಲವು ವರ್ಷಗಳ ಬಳಿಕ ರಾಜ್ಯವು ಅತ್ಯಂತ ತೀವ್ರ ಸ್ವರೂಪದ ಶಾಖದ ಅಲೆಗೆ (ಹೀಟ್‌ವೇವ್‌ಗೆ) ತತ್ತರಿಸಿ ಹೋಗಿದೆ.

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗಗಳಲ್ಲಿ ತಾಪಮಾನ 44 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದ್ದು, ಅಕ್ಷರಶಃ ಜನಜೀವನ ಅಸ್ತವ್ಯಸ್ತಗೊಂಡಿದೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಐನಾಪುರ ಹೋಬಳಿಯಲ್ಲಿ ಗರಿಷ್ಠ 44.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಈ ಸಂಬಂಧ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿ-ಅಂಶಗಳು ನಿಜಕ್ಕೂ ಬೆಚ್ಚಿಬೀಳಿಸುವಂತಿವೆ. ಇನ್ನು ಬೀದರ್‌ನಲ್ಲಿ44.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಬಿಸಿಲ ಝಳಕ್ಕೆ ಹೆದರಿ ಜನ ಹಗಲಿನಲ್ಲಿ ಮನೆ ಬಿಟ್ಟು ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ರಾಯಚೂರಿನಲ್ಲಿ 44.2 ಡಿಗ್ರಿ ಸೆಲ್ಸಿಯಸ್, ಕಲಬುರಗಿಯಲ್ಲಿ 42 ಡಿಗ್ರಿ ಸೆಲ್ಸಿಯಸ್‌ನಿಂದ 45 ಡಿಗ್ರಿ ಸೆಲ್ಸಿಯಸ್ ಹಾಗೂ ವಿಜಯಪುರ, ಬಳ್ಳಾರಿ, ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳಲ್ಲಿ ನಿರಂತರವಾಗಿ 40 ಡಿಗ್ರಿಗಿಂತ ಅಧಿಕ ತಾಪಮಾನ ದಾಖಲಾಗುತ್ತಿದೆ. ಕಲಬುರಗಿ ಜಿಲ್ಲೆಯ ಫರಹತಾಬಾದ್ ಹೋಬಳಿಯಲ್ಲಿ ಏಪ್ರಿಲ್ 16ರಂದು ದಾಖಲಾದ 45.3 ಡಿಗ್ರಿ ಸೆಲ್ಸಿಯಸ್ ಈ ಬೇಸಿಗೆ ಸೀಸನ್‌ನಲ್ಲಿ ರಾಜ್ಯದ ಅತ್ಯಧಿಕ ತಾಪಮಾನ ಎಂಬ ಹೆಗ್ಗಳಿಕೆ ಪಡೆದಿದೆ. ಭಾರತೀಯ ಹವಾಮಾನ ಇಲಾಖೆ, ಏಕಕಾಲದಲ್ಲಿ ರಾಜ್ಯದ 8 ಜಿಲ್ಲೆಗಳಿಗೆ ಸತತ 4 ದಿನಗಳ ಕಾಲ 'ಹೀಟ್‌ವೇವ್ ಅಲರ್ಟ್' ಘೋಷಿಸಿದೆ. ಆದಾಗ್ಯೂ, ಕರಾವಳಿಯಲ್ಲಿ ಬಿಸಿಲಿನ ಜತೆಗೆ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದೆ.

ವಾಡಿಕೆ ಮೀರಿದ ಬೆಂಗಳೂರಿನ ತಾಪಮಾನ

ಸದಾ ತಂಪಾದ ಹವಾಮಾನಕ್ಕೆ ಹೆಸರಾಗಿದ್ದ ಸಿಲಿಕಾನ್ ಸಿಟಿ ಬೆಂಗಳೂರು ಈ ಬಾರಿ ಕುದಿಯುತ್ತಿದೆ. ನಗರದಲ್ಲಿ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ನಿಂದ 38 ಡಿಗ್ರಿ ಸೆಲ್ಸಿಯಸ್ ಗಡಿ ತಲುಪಿದ್ದು, ಇದು ವಾಡಿಕೆಗಿಂತ 4-5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಅವೈಜ್ಞಾನಿಕ ನಗರೀಕರಣ ಹಾಗೂ ಮರಗಳ ಮಾರಣಹೋಮದಿಂದಾಗಿ ನಗರದಲ್ಲಿ ಉಷ್ಣಾಂಶ ವರ್ಷದಿಂದ ವರ್ಷಕ್ಕೆ ಏರುತ್ತಿದೆ ಎಂದು ಹೇಳಲಾಗಿದೆ. ಜತೆಗೆ ನಗರದ ಹಲವೆಡೆ ಅನಧಿಕೃತ ಲೋಡ್ ಶೆಡ್ಡಿಂಗ್ ಶುರುವಾಗಿದ್ದು, ಸೆಕೆಗೆ ಫ್ಯಾನ್, ಎಸಿ ಬಳಸಲಾಗದೆ ಹಿರಿಯ ನಾಗರಿಕರು, ಕಾರ್ಮಿಕರು ಪರದಾಡುತ್ತಿದ್ದಾರೆ.

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102, ದೂರವಾಣಿ: (08472) – 256767, 239556, 255564, ಫ್ಯಾಕ್ಸ್ : (08472) 227527
E-mail: hkadbgulb@gmail.com, Website : kkrdb.karnataka.gov.in
ಸಂಖ್ಯೆ:ಕಕಪ್ರಅಮಂ/ಲೆಕ್ಕ ಶಾಖೆ/ ಲೆಅ-2/33/2023-24/640 ದಿನಾಂಕ: 24.04.2026
-: ಸೇರ್ಪಡೆ ಅಧಿಸೂಚನೆ :-
ಈ ಕೆಳಕಂಡ ಸೇರ್ಪಡೆ ಅಧಿಸೂಚನೆಯನ್ನು ಮಂಡಳಿಯಿಂದ ಈಗಾಗಲೇ ಪ್ರಕಟಿಸಿದ ಇ-ಹರಾಜು ಟೆಂಡರ್ ಅಧಿಸೂಚನೆ ಸಂಖ್ಯೆ:KKRDB/Acc/AS-2/33/2025-26 ದಿನಾಂಕ:17-04-2026 ರಲ್ಲಿ ಸಾಮಾನ್ಯ ಷರತ್ತು ಹಾಗೂ ನಿರ್ಭಂಧನೆಗಳ ಕ್ರಮ ಸಂಖ್ಯೆ: xxviii ರ ನಂತರ ಈ ಕೆಳಕಂಡ ಹೊಸ ಷರತ್ತನ್ನು ಸೇರ್ಪಡಿಸಲಾಗಿದೆ.
(xxix) "ಬಿಡ್‌ದಾರರು ನಿಶ್ಚಿತ ಠೇವಣಿಗೆ Non-Callable ಬಡ್ಡಿ ದರವನ್ನು ನಮೂದಿಸಬೇಕು"
ಮೇಲ್ತಿಳಿಸಿದ ಟೆಂಡರ್ ಅಧಿಸೂಚನೆಯಲ್ಲಿ ಇನ್ನಾವುದೇ ಬದಲಾವಣೆಗಳು ಇರುವುದಿಲ್ಲ.
ಸಹಿ/- ಉಪ ಕಾರ್ಯದರ್ಶಿಗಳು,
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/84/ಕೆ.ಎಸ್.ಎಂ.ಸಿ.&ಎ/2026-27

ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರಿಂದ ಪ್ರತಿಭಟನೆ

ಬೆಂಗಳೂರು: ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಸೋಮವಾರ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕನಿಷ್ಠ 7,500 ಪಿಂಚಣಿ, ಇಪಿಎಸ್ ವ್ಯಾಪ್ತಿಯಲ್ಲಿ ಬಾರದ ನಿವೃತ್ತ ನೌಕರರಿಗೆ 5 ಸಾವಿರ ಭತ್ಯೆ ನೀಡಬೇಕು ಹಾಗೂ ವೈದ್ಯಕೀಯ ಸೌಲಭ್ಯ ನೀಡಬೇಕು. ಆರ್. ಸಿ ಗುಪ್ತ ಹಾಗೂ ಸುನಿಲ್ ಕುಮಾರ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಡೋಲಪ್ಪ, ಬ್ರಹ್ಮಚಾರಿ, ಚಂದ್ರೇಗೌಡ ಹಾಗೂ ಇತರರು ಪಾಲ್ಗೊಂಡಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೊಮ್ಮೆ ಭದ್ರತಾಲೋಪ

← ಮೊದಲಪುಟದಿಂದ

ಆದರೂ ಬೆಳಿಗ್ಗೆ 11:30ರ ಸುಮಾರಿಗೆ ನಿಷ್ಕ್ರಿಯಗೊಂಡ ಹಳೆಯ ಕಾರ್ಡ್ ಬಳಸಿಕೊಂಡು ಕ್ರೀಡಾಂಗಣಕ್ಕೆ ಅನಧಿಕೃತವಾಗಿ ಪ್ರವೇಶಿಸಿದ್ದರು. ಬಳಿಕ ಸಿಸಿಟಿವಿ ನಿಯಂತ್ರಣ ಕೊಠಡಿಗೆ ಪ್ರವೇಶಿಸಿ ಎನ್‌ವಿಆರ್ ಮತ್ತು ಆಪ್ಟಿಕಲ್ ಫೈಬರ್ ಸಂಪರ್ಕಗಳನ್ನು ತಪ್ಪಾಗಿ ಜೋಡಿಸಿದ್ದರು. ಕೆಲವು ಕೇಬಲ್‌ಗಳಿಗೆ ಕತ್ತರಿ ಹಾಕಿದ್ದರು. ಇದರಿಂದಾಗಿ ಸಿಸಿಟಿವಿ ಕ್ಯಾಮೆರಾಗಳ ಸಂಪರ್ಕ ಕಡಿತಗೊಂಡಿತ್ತು. ಈ ಹಿಂದೆ ಭದ್ರತೆಗಾಗಿ ಮಾಡಲಾಗಿದ್ದ ಎಲ್ಲಾ ಪ್ರಮುಖ ಆರಂಭಿಕ ತಾಂತ್ರಿಕ ಕೆಲಸಗಳನ್ನು ಇವರು ಹಾಳು ಮಾಡಿದ್ದರು. ಆರೋಪಿಗಳು ಅನುಮತಿ ಇಲ್ಲದೆಯೇ ಕ್ರೀಡಾಂಗಣದ ಅತ್ಯಂತ ಸೂಕ್ಷ್ಮ ಪ್ರದೇಶವಾದ ಸಿಸಿಟಿವಿ ನಿಯಂತ್ರಣ ಕೊಠಡಿಯನ್ನು ಪ್ರವೇಶಿಸಿರುವುದು ಮತ್ತು ನಂತರ ಪಾರ್ಕಿಂಗ್ ಪ್ರದೇಶದ ಬಳಿ ಇರುವ ಕನೆಕ್ಷನ್ ಬಾಕ್ಸ್ ಕಡೆಗೆ ಚಲಿಸುತ್ತಿರುವ ದೃಶ್ಯಗಳು ಲಭ್ಯವಾಗಿದೆ. ಆರೋಪಿಗಳ ಈ ಕೃತ್ಯದಿಂದ ಕ್ರೀಡಾಂಗಣದ ಅತ್ಯಂತ ಪ್ರಮುಖ ಭದ್ರತಾ ಪ್ರದೇಶಗಳಲ್ಲಿನ ಸಿಸಿಟಿವಿ ಕ್ಯಾಮೆರಾಗಳು ಸ್ಥಗಿತಗೊಂಡಿದ್ದವು. ಪ್ರಮುಖ ಸ್ಥಳಗಳ ಕ್ಯಾಮೆರಾಗಳು ಬಂದ್ ಆಗಿದ್ದರಿಂದ ಪಂದ್ಯದ ಸಂದರ್ಭದಲ್ಲಿ ಭದ್ರತಾ ಮೇಲ್ವಿಚಾರಣೆ ನಡೆಸಲು ಪೊಲೀಸರಿಗೆ ಅಗತ್ಯವಾದ ದತ್ತಾಂಶ ಅಥವಾ ಫೀಡ್‌ಗಳನ್ನು ಒದಗಿಸಲು ದೂರುದಾರರಿಗೆ ಸಾಧ್ಯವಾಗಲಿಲ್ಲ ಉದ್ದೇಶಪೂರ್ವಕ ಮತ್ತು ವಿಧ್ವಂಸಕ ಕೃತ್ಯದ ಬಗ್ಗೆ ಸ್ಟಾಕ್ಯೂ ಟೆಕ್ನಾಲಜಿಸ್‌ನ ಆದಿತ್ಯ ಭಟ್ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಮಂಜುನಾಥ್ ಇ. ಮತ್ತು ಅಬ್ದುಲ್ ಕಲಾಂ ವಿರುದ್ಧ ದೂರು ನೀಡಿದ್ದಾರೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
Ph.08472 - 220196 e-mail: midnglb@rediffmail.com/midnglb1@gmail.com
ಐಎಫ್‌ಟಿ.ನಂ.ಕಾನಿಅ/ಸನೀಅವಿ/ಕ/ಯೋಶಾ-4/ಕೆ.ಡಬ್ಲ್ಯೂ-4/2026-27/534 ದಿನಾಂಕ : 27.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-4)
1) **ಕಾಮಗಾರಿ ವಿವರ :** ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025-26ನೇ ಸಾಲಿನ 4702-ಆಣೆಕಟ್ಟು, ಪಿಕಪ್, ಬಂದಾರ ಯೋಜನೆ ಅಡಿ ಹಾಗೂ 4702-ಕೆರೆಗಳ ಆಧುನಿಕರಣ – ಪ್ರಧಾನ ಕಾಮಗಾರಿಗಳು ಯೊಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಈ-ಟೆಂಡರ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ. 14,49,15,217.67 ಕನಿಷ್ಠ ರೂ. 3,93,37,522.22,** 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ನಂತೆ **ಇ.ಎಂ.ಡಿ. ಗರಿಷ್ಠ ರೂ. 14,50,000.00, ಕನಿಷ್ಠ ರೂ.5,96,100.00,** 5) ಪ್ರಿ-ಬಿಡ್ ಮೀಟಿಂಗ್ ದಿನಾಂಕ : **08.05.2026 ಬೆಳಿಗ್ಗೆ 11.00 ಗಂಟೆಯವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : **11.05.2026 ಬೆಳಿಗ್ಗೆ 11.00 ಗಂಟೆಯವರೆಗೆ** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **12.05.2026 ಸಾಯಂಕಾಲ 17.30** ಗಂಟೆಯವರೆಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13.05.2026 ಸಾಯಂಕಾಲ 17.30 ಗಂಟೆಯವರೆಗೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14.05.2026 ಸಾಯಂಕಾಲ 17.30 ಗಂಟೆಯವರೆಗೆ,** 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : https://kppp.karnataka.gov.in
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/78/
ದೇಶಪಾಂಡೆ ಪಬ್ಲಿಸಿಟಿ/2026-27

ಪಂಚಮಶಾಲಿ ಪೀಠದ ಗದ್ದಲ ತಾರಕಕ್ಕೆ

← ಮೊದಲಪುಟದಿಂದ

ಬಂದಿರುವ ಅಷ್ಟೂ ಹಣವನ್ನು ಮಠದ ಆವರಣದಲ್ಲಿ ದೇವಸ್ಥಾನ, ಗುರುಧ್ಯಾನ ಮಂದಿರ, ದಾಸೋಹ ಭವನ, ಮಠದ ಸ್ಥಳ ಮಣ್ಣು ತುಂಬಿ ಸಮತಟ್ಟು ಮಾಡಲು, ಹರ ಜಾತ್ರೆ, ಶ್ರೀಗಳ ಪೀಠಾರೋಹಣ, ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ಅನ್ನ ದಾಸೋಹ ಸೇರಿದಂತೆ ಧರ್ಮ ಕಾರ್ಯಗಳಿಗೆ ವ್ಯಯಿಸಲಾಗಿದೆ. ಅದರಲ್ಲಿ ಉಳಿದ 1.68 ಕೋಟಿ ರು. ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ ಎಂದು ಅವರು ತಿಳಿಸಿದರು.

ಸರಕಾರಕ್ಕೆ ಪ್ರತಿ ವರ್ಷ ನನ್ನ ಉದ್ಯಮದಿಂದ 30 ಕೋಟಿ ರೂ. ತೆರಿಗೆ ಪಾವತಿಸುವ ನನಗೆ ಮಠದ ಹಣ ಕಬಳಿಸುವ ದರ್ದು ಇಲ್ಲ. ಆದರೆ, ಕಳೆದ ಎರಡೂವರೆ ದಶಕಗಳಿಂದ ಸಮಾಜದ, ಮಠದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ನನ್ನನ್ನು ವಚನಾನಂದ ಶ್ರೀಗಳು 'ಗಂಟು ಕಳ್ಳ' ಎಂದು ಕರೆದದ್ದು ಬೇಸರ ತರಿಸಿದೆ ಎಂದರು.

ಮನಗುಳಿಯ ಶ್ರೀ ಸಂಗನಬಸವ ಶ್ರೀ, ನಿಕಟಪೂರ್ವ ರಾಜ್ಯಾಧ್ಯಕ್ಷ ಬಸವರಾಜ ದಿಂಡೂರು, ಟ್ರಸ್ಟಿ ಕಳಕನಗೌಡ ಪಾಟೀಲ್, ಬಿ.ಡಿ. ಶಿರೂರು, ಚಂದ್ರಶೇಖರ್ ಪೂಜಾರ್, ಸಮಾಜದ ಮುಖಂಡರಾದ ಸಿರಿಗೆರೆ ನಾಗನಗೌಡ, ಎಚ್. ಎಸ್. ನಾಗರಾಜ್, ಸಿ.ಆರ್. ಬಳ್ಳಾರಿ, ಎಂ.ಬಿ. ಪಾಟೀಲ್, ವಸಂತ ಹುಲ್ಲತ್ತಿ, ತಿಪ್ಪಣ್ಣ, ಕಿಚಡಿ ಕೊಟ್ರೇಶ್ ಮತ್ತಿತರರು ಭಾಗವಹಿಸಿದ್ದರು.

ಆಸ್ತಿ ಎಷ್ಟು? ಎಲ್ಲೆಲ್ಲಿದೆ?

- 4.28 ಎಕರೆ ಮಠದ ಜಾಗ
- 174 ಕೆಜಿ ಬೆಳ್ಳಿ
- ರೇಕೆರೂರಿನಲ್ಲಿ 1 ಸೈಟ್
- ಬಳ್ಳಾರಿಯಲ್ಲಿ 1 ಎಕರೆ 18 ಗುಂಟೆ
- ಶಿಗ್ಗಾಂವಿಯಲ್ಲಿ 2 ಎಕರೆ
- ಹರಪಹಳ್ಳಿಯಲ್ಲಿ 2 ಎಕರೆ
- ಕುಷ್ಟಗಿಯಲ್ಲಿ 1 ಎಕರೆ 8 ಗುಂಟೆ
- ಕೂಡ್ಲಗಿಯಲ್ಲಿ 1 ಎಕರೆ
- 1 ಟಾಟಾ ಸಫಾರಿ ವಾಹನ
- 1 ಬುಲೆರೋ ವಾಹನ

ಸಚಿವ ಸೋಮಣ್ಣ ಕರೆ

ಕಾರ್ಯಕ್ರಮದ ವೇದಿಕೆಯಲ್ಲಿ ಲೆಕ್ಕ ಒಪ್ಪಿಸುವ ವೇಳೆಯಲ್ಲೇ ಬಿ.ಸಿ. ಉಮಾಪತಿ ಅವರಿಗೆ ಕೇಂದ್ರ ಸಚಿವ . ಸೋಮಣ್ಣ ದೂರವಾಣಿ ಕರೆ ಮಾಡಿದ್ದರು. ಮೈಕ್ ಎದುರೇ ಮಾತನಾಡಿದ ಉಮಾಪತಿ ಅವರು, ನಮ್ಮವರೇ ಕೆಲವರು ನಮ್ಮ ಮಾನ ಮರ್ಯಾದೆ ತೆಗೆದೇ ಹೋಗುವುದು ಎಂದು ಚಾಲೆಂಜ್ ಮಾಡಿದ್ದಾರಂತೆ. ಹೀಗಿದ್ದಾಗ ನಾವು ಸುಮ್ಮನಿರುವುದು ಹೇಗೆ? ನೀವೇ ಹೇಳಿ? ನಾವು ಸರಿ ದಾರಿಯಲ್ಲಿರುವುದು ತಪ್ಪೇ? ಎಂದು ಸೋಮಣ್ಣ ಅವರನ್ನು ಪ್ರಶ್ನಿಸಿ, ಕಾರ್ಯಕ್ರಮ ಮುಗಿದ ಮೇಲೆ ಕರೆ ಮಾಡುವೆ ಎಂದು ಕರೆ ಸ್ಥಗಿತಗೊಳಿಸಿದರು.

...10 ವರ್ಷಗಳ ಕಠಿಣ ಸಜೆ

← ಮೊದಲಪುಟದಿಂದ

ತನಗೆ 4 ವರ್ಷದ ಮಗಳಿದ್ದು, ಕುಟುಂಬದಲ್ಲಿ ದುಡಿಯುವ ವ್ಯಕ್ತಿ ತಾನಾಗಿದ್ದು, ಕಡಿಮೆ ಶಿಕ್ಷೆ ನೀಡುವಂತೆ ಸಿಆರ್‌ಪಿಸಿ ಸೆಕ್ಷನ್ 229ರಡಿ ತಪ್ಪೊಪ್ಪಿಗೆ ಅರ್ಜಿಯಲ್ಲಿ ಶಾರೀಕ್ ಮನವಿ ಮಾಡಿದ್ದ. ಮಾರ್ಚ್ 26ರಂದು ಈತನ ಅರ್ಜಿಯನ್ನು ಪುರಸ್ಕರಿಸಿದ್ದ ನ್ಯಾಯಾಲಯ ಎರಡು ತಿಂಗಳ ಬಳಿಕ ಐಪಿಸಿ ಹಾಗೂ ಯುಎಪಿಎ ಕಾಯಿದೆಗಳ ಸೆಕ್ಷನ್ ನಡಿ 10 ವರ್ಷ ಕಠಿಣ ಸಜೆ ಪ್ರಕಟಿಸಿದೆ. 2022ರಿಂದ ಜೈಲಿನಲ್ಲಿರುವ ಶಾರೀಕ್, ಈಗಾಗಲೇ ಮೂರುವರೆ ವರ್ಷ ಸಜೆ ಅನುಭವಿಸಿದ್ದಾನೆ. ಬಾಕಿ ಏಳೂವರೆ ವರ್ಷ ಜೈಲಿನಲ್ಲಿ ಇರಬೇಕಿದೆ. ಧರ್ಮಸ್ಥಳ, ಕದ್ರಿ ಮಂಜುನಾಥ ದೇವಾಲಯ ಸೇರಿದಂತೆ ದಕ್ಷಿಣ ಭಾರತದ ದೇವಾಲಯಗಳಲ್ಲಿ ಬಾಂಬ್ ಸ್ಫೋಟಗೊಳಿಸುವುದು ಶಂಕಿತರ ಉಗ್ರರ ಹುನ್ನಾರವಾಗಿತ್ತು. ಇದೇ ಭಾಗವಾಗಿ ಕುಕ್ಕರ್‌ನಲ್ಲಿ ಇಎಲ್ ಡಿ ಇಟ್ಟು ಟೈಮರ್ ಫಿಕ್ಸ್ ಮಾಡಲಾಗಿತ್ತು. 90 ನಿಮಿಷಗಳ ಅವಧಿಗೆ ಫಿಕ್ಸ್ ಮಾಡುವ ಬದಲು 9 ನಿಮಿಷಕ್ಕೆ ತಪ್ಪಾಗಿ ನಿಗದಿಪಡಿಸಿದ್ದರಿಂದ ಆಟೋದಲ್ಲಿ ತೆರಳುವಾಗಲೇ ಮಾರ್ಗ ಮಧ್ಯೆ ಸ್ಫೋಟಗೊಂಡಿತ್ತು. ಪ್ರಕರಣದ ಎರಡನೇ ಆರೋಪಿ ಸಯ್ಯದ್ ಯಾಸೀನ್‌ನನ್ನು ಬಾಂಬ್ ತಯಾರಿಕೆಗೆ ಅಗತ್ಯವಾದ ಉಪಕರಣಗಳನ್ನು ಪೂರೈಸಿದ ಆರೋಪದಡಿ ಬಂಧಿಸಲಾಗಿತ್ತು.

ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ ಸ್ವೀಕರಿಸಿದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್

ಜೀವನದ ಅತ್ಯಂತ ಧನ್ಯತೆಯ ಕ್ಷಣವಿದು

ಕುಮಟಾ: ರಾಷ್ಟ್ರೀಯ ಸೌರಭ್ ಸಮ್ಮಾನ್ ಪ್ರಶಸ್ತಿಯನ್ನು ಅಂತಃಕರಣಪೂರ್ವಕವಾಗಿ, ಪ್ರೀತಿಯಿಂದ ಸ್ವೀಕರಿಸಿದ್ದೇನೆ. ಅವಿಸ್ಮರಣೀಯ, ಧನ್ಯತೆಯ ಕ್ಷಣವನ್ನು ಅನುಭವಿಸುತ್ತಿದ್ದೇನೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ, ಜನಶಕ್ತಿ ವಿಶ್ವಸ್ಥ ಮಂಡಳಿ ಅಧ್ಯಕ್ಷ ವಿಶ್ವೇಶ್ವರ ಭಟ್ ಹೇಳಿದರು.

ಇಲ್ಲಿನ ಹವ್ಯಕ ಸಭಾಭವನದಲ್ಲಿ ಸೌರಭ ಸಂಸ್ಥೆ ಆಯೋಜಿಸಿದ್ದ ಸಾಧನಾ ಸೌರಭ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೌರಭ್ ಸಮ್ಮಾನ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಈ ಕ್ಷಣದಲ್ಲಿ ನಾನು ಹತ್ತು ಕೆ.ಜಿ ಜಾಸ್ತಿಯಾಗಿದ್ದೇನೆ ಎಂದು ಅನಿಸುತ್ತಿದೆ. ಯಾಕೆಂದರೆ ಎಲ್ಲರೂ ಹೇಳಿದ ಪ್ರಶಂಸೆ ನುಡಿಯಿಂದ ಮನಸ್ಸು ತುಂಬಿ ಬಂದಿದೆ. ದೇಹವು ಹಿಗ್ಗಿದೆ ಎಂದರು.

ಮೋಹನ ಹೆಗಡೆ, ಶ್ರೀಕಾಂತ ಭಟ್ಟರು ಪ್ರಶಸ್ತಿ ಕೊಡುತ್ತೇನೆ ಎಂದರು. ಇದೊಂದು ರೀತಿ ಮುಜುಗರದ ಸಂಗತಿ. ಯಾಕೆಂದರೆ, ಪ್ರಶಸ್ತಿ, ಸನ್ಮಾನ ಎಂದರೆ ಅನುಮಾನದಿಂದ ನೋಡುವ ಸ್ಥಿತಿ ಇದೆ. ಆದರೆ ಸೌರಭದ ಕಾರ್ಯಚಟುವಟಿಕೆ ಕಂಡು ಒಪ್ಪಿದ್ದೇನೆ. ಸೌರಭದ ಸರ್ವ ಸದಸ್ಯರಿಗೆ ನನ್ನ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಒಬ್ಬನೇ ಸಾಧನೆ ಮಾಡಿದ್ದೇನೆ ಎಂದರೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಒಬ್ಬ ವಿಶ್ವೇಶ್ವರ ಭಟ್ ಒಂದು ಸಾಧನೆ ಅಲ್ಲ. ಇದು ಸಾಧನೆಯೇ ಅಲ್ಲ. ನಾನು ಮಾಡಿದ ಕಾರ್ಯ ಸಾಧನೆ ಎಂದು ಗ್ರಹಿಸಿದರೆ ಇದರ ಹಿಂದೆ ಅನೇಕರಿದ್ದಾರೆ ಎಂದು ತಿಳಿಸಿದರು.

ಮೂರೂರಿನಲ್ಲಿ ಹುಟ್ಟು, ಹತ್ತು ವರ್ಷ ಶಿರಸಿ, ಮತ್ತೆ ಎರಡು ವರ್ಷ ಕುಮಟಾ, ಏಳು ವರ್ಷ ಧಾರವಾಡ, ಒಂದು ವರ್ಷ ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡಿದೆ. ನೌಕರಿಗಾಗಿ ಮೊದಲು ಸಂಜೆವಾಣಿ ಬಾಗಿಲು ಬಡಿದಿದ್ದೆ. ಹೆಚ್ಚು ಕಲಿತಿದ್ದೆ ಎಂದು ನೌಕರಿ ಕೊಡಲಿಲ್ಲ. ಮೊದಲು ನೌಕರಿ ಕೊಟ್ಟಿದ್ದು ಶಾಮರಾಯರು. ಕೆಲಸ ಕೊಟ್ಟವರು ಮತ್ತು ಕೆಲಸ ಕೊಡದಿದ್ದವರನ್ನು ನೆನಪಿಸಿಕೊಳ್ಳಬೇಕು. ಕೆಲಸ ಕೊಡದಿದ್ದರೆ ಬೇಸರಿಸಬೇಡಿ, ಮುಂದೊಂದು ದೊಡ್ಡ ಕೆಲಸ ಅಥವಾ ಉತ್ತಮ ಕೆಲಸ ಸಿಗುತ್ತದೆ ಎಂದೇ ಅರ್ಥ ಎಂದರು.

ವೃತ್ತಿ ಬದುಕಿನ ತಾಕಲಾಟ: ನಾವು ಟೀಕೆ ಮಾಡದ ರಾಜಕಾರಣಿಗಳಿಲ್ಲ. ಹಿಂದಿನ ದಿವಸ ಒಟ್ಟಿಗೆ ಊಟ ಮಾಡಿದ್ವಿ. ಆದರೆ ಮರು ದಿನ ಎಂಟು ಕಾಲಂ ಹೆಡ್ಡಿಂಗ್ ಅವರ ವಿರುದ್ಧವೇ ಇತ್ತು. ಇಂತಹ ತಾಕಲಾಟಗಳು ನಿತ್ಯ ಇರುತ್ತವೆ. ಟೀಕೆ ಮಾಡಿಯೂ ರಾಜಕಾರಣಿಗಳ ಜತೆ ಚೆನ್ನಾಗಿ ಇರಬಹುದು. ಭಾವನೆಗಳನ್ನು ವೃತ್ತಿಯಲ್ಲಿ ಸೇರಿಸಿಕೊಂಡರೆ ಸಮಸ್ಯೆ ಆಗುತ್ತದೆ ಎಂದರು.

ಕನಸು ನನಸಾಗಿದೆ: ಮೂರು ದಶಕಗಳ ಹಿಂದೆಯೇ ನನ್ನ ಡೈರಿಯಲ್ಲಿ ನನಗೆ 60 ವರ್ಷ ಆಗುವುದರೊಳಗೆ ಒಂದು ಪತ್ರಿಕೆ ಸಂಪಾದಕನಾಗಬೇಕು. 100 ಪುಸ್ತಕ ಬರೆಯಬೇಕು, 100 ದೇಶ ಸುತ್ತಬೇಕು ಎಂದು ಬರೆದುಕೊಂಡಿದ್ದೆ. ಆದರೆ ಇಂದು ಐದು ಪತ್ರಿಕೆಗೆ ಸಂಪಾದಕನಾಗಿದ್ದೇನೆ. 107 ಪುಸ್ತಕ ಬರೆದಿದ್ದೇನೆ. ಇವೆಲ್ಲವೂ ಕೂಡ ನಿಮ್ಮ ಆಶೀರ್ವಾದ, ಪ್ರೋತ್ಸಾಹದಿಂದ ಆಗಿದ್ದು. ಈ ಪ್ರೋತ್ಸಾಹ, ಬೆಂಬಲ, ಆಶೀರ್ವಾದ ಹೀಗೆಯೇ ಇರಲಿ. ಇಂದಿನ ಸನ್ಮಾನವನ್ನು ನನ್ನ ವೃತ್ತಿ ಬದುಕಿಗೆ ದೀವಿಗೆಯಾಗಿ ಬಳಸಿಕೊಳ್ಳುತ್ತೇನೆ ಎಂದು ಹೇಳಿದರು.

ಉತ್ತಮ ಸ್ಥಾನದಲ್ಲಿ ಇದ್ದಾರೆ: ನನ್ನ ಜತೆ ಹತ್ತಾರು ಜನ ಉತ್ತಮ ಕೆಲಸ ಮಾಡುವ ಪತ್ರಕರ್ತರು ಇದ್ದರು. ಪ್ರತಾಪ ಸಿಂಹ ಲೇಖನ ಲೈವ್‌ಬಾಂಬ್ ಹಾಗೆ ಇರುತ್ತಿತ್ತು. ಅವರ ಬರಹದ ಅಭಿಮಾನಿಗಳು ಸಾಕಷ್ಟಿದ್ದಾರೆ. ನನ್ನ ಜತೆ ಕೆಲಸ ಮಾಡಿದವರು ಇಂದು ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಪಿ.ತ್ಯಾಗರಾಜ, ಕೆ.ವಿ.ಪ್ರಭಾಕರ, ವಿನಾಯಕ ಭಟ್ ಮೂರೂರು, ಹೀಗೆ ಐವತ್ತಕ್ಕೂ ಅಧಿಕ ಜನರ ಹೆಸರನ್ನು ಹೇಳಬಹುದು ಎಂದು ಭಟ್ಟರು ಹೆಮ್ಮೆಯಿಂದ ಹೇಳಿದರು.

ಕುಮಟಾದಂತಹ ಊರಲ್ಲಿ ಇಂತಹ ಸದಭಿರುಚಿಯ ಕಾರ್ಯಕ್ರಮ ಮಾಡುತ್ತಿರುವುದು ನಿಜಕ್ಕೂ ಖುಷಿ ಕೊಡುವ ಸಂಗತಿ. ಕುಮಟಾ ಮತ್ತು ಸುತ್ತಲಿನ ಊರಿನಲ್ಲಿ ಪ್ರಜ್ಞಾವಂತರು ಇದ್ದಾರೆ. ಇಂತಹ ಕಾರ್ಯಕ್ರಮ ಹೆಚ್ಚು ನಡೆಯಲಿ. ಸೌರಭಕ್ಕೆ ಸರಕಾರದ ಮಟ್ಟದಲ್ಲಿ ಅಥವಾ ಬೇರೆ ಸಂಸ್ಥೆಗಳಿಂದ ಸಹಕಾರ ಕೊಡಿಸುವ ಪ್ರಯತ್ನ ಮಾಡುತ್ತೇನೆ. ನಿಮ್ಮ ಜತೆ ನಾನೂ ಒಬ್ಬ ಕಾರ್ಯಕರ್ತನಾಗಿ ಇರುತ್ತೇನೆ ಎಂಬ ಭರವಸೆ ನೀಡಿದರು.

ಸಮಾರೋಪ ಭಾಷಣ ಮಾಡಿದ ಅಧ್ಯಕ್ಷ ಶ್ರೀಕಾಂತ ಭಟ್, ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಯನ್ನು ವಿಶ್ವಕೋಶದಂತಿರುವ ವಿಶ್ವೇಶ್ವರ ಭಟ್ಟರಿಗೆ ನೀಡಿದ್ದು ಪ್ರಶಸ್ತಿಯ ಮೌಲ್ಯ ಹೆಚ್ಚಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಸಹಕರಿಸಿದ ಪೋಷಕರನ್ನು ಸೌರಭದ ಉಪಾಧ್ಯಕ್ಷ ಮೋಹನ ಭಾಸ್ಕರ ಹೆಗಡೆ ಅವರು ಪರಿಚಯಿಸಿದರು. ಸನ್ಮಾನ ಪತ್ರವನ್ನು ಪ್ರಧಾನ ಕಾರ್ಯದರ್ಶಿ ಅರುಣ ಹೆಗಡೆ ವಾಚಿಸಿದರು. ಗಣೇಶ ಜೋಶಿ ಸಂಕೊಳ್ಳಿ ನಿರೂಪಿಸಿದರು.

ಕುಮಟಾ ಹವ್ಯಕ ಸಭಾ ಭವನದಲ್ಲಿ ಸೌರಭ ಸಂಸ್ಥೆ ಆಯೋಜಿಸಿದ್ದ ಸಾಧನಾ ಸೌರಭ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ, ಜನಶಕ್ತಿ ವಿಶ್ವಸ್ಥ ಮಂಡಳಿ ಅಧ್ಯಕ್ಷ ವಿಶ್ವೇಶ್ವರ ಭಟ್ ಅವರಿಗೆ ರಾಷ್ಟ್ರೀಯ ಸೌರಭ್ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಾಜಿ ಸಂಸದ ಪ್ರತಾಪ್ ಸಿಂಹ, ಸೌರಭ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಭಟ್, ಉಪಾಧ್ಯಕ್ಷ ಮೋಹನ ಹೆಗಡೆ ಸೇರಿದಂತೆ ಇತರ ಪದಾಧಿಕಾರಿಗಳು ಇದ್ದರು.

ವಿಜಯ ಸಂಕೇಶ್ವರ ಅವರನ್ನು ಸ್ಮರಿಸಿದ ಭಟ್ಟರು

ವಿಜಯ ಸಂಕೇಶ್ವರ ಅವರನ್ನು ನೆನಪಿಸಿಕೊಳ್ಳಬೇಕು. ಅನಂತಕುಮಾರ ಅವರಿಗೆ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದೆ. ಆಗ ವಿಜಯ ಸಂಕೇಶ್ವರ ಅವರು ಬರುತ್ತಿದ್ದರು. ಅವರಿಗೆ ನಾನು ಬರೆದ 'ತಲೆಬರಹ ಪುಸ್ತಕದ ಹಣೆಬರಹ' ಪುಸ್ತಕವನ್ನು ನೀಡಿದೆ. ಅದು ನನ್ನ ಜೀವನದ ಹಣೆಬರಹ ಬದಲಿತು. 33 ವರ್ಷದವನಾದ ನನ್ನನ್ನು ಸಂಪಾದಕರನ್ನಾಗಿ ಆಗುವಂತೆ ಹೇಳಿದರು. ಸಂಬಳ ಎಷ್ಟು ಬೇಕು ಎಂದು ಕೇಳಿದರು. ನನಗೆ ಆಗ ಇದ್ದ ಸಂಬಳಕ್ಕಿಂತ ಹೆಚ್ಚಿಗೆ ನೀಡಿದರು. ಆದರೆ ನನಗೊಂದು ಟಾಸ್ಕ್ ನೀಡಿದರು. ಅದು ಏನೆಂದರೆ, 6 ತಿಂಗಳಲ್ಲಿ ಒಂದು ಲಕ್ಷ, ವರ್ಷದಲ್ಲಿ ಮೂರು ಲಕ್ಷ ಪ್ರಸರಣ ಮಾಡಬೇಕು. ಟಾರ್ಗೆಟ್ ರೀಚ್ ಮಾಡಬೇಕು. ಪತ್ರಿಕೆ ಕೆಲಸ ಹೊಸತಲ್ಲ, ಜವಾಬ್ದಾರಿ ನನಗೆ ಹೊಸತು. ಆಗ ನಮ್ಮದು ಬಹಳ ಯಂಗ್ ಪತ್ರಿಕೆ. ಪ್ರಯೋಗ ಮಾಡಲು ಅವಕಾಶ ಇತ್ತು. ಸಂಪಾದಕೀಯ ಪುಟ ನಿರ್ವಹಣೆ ಮಾಡಲು ಪ್ರತಾಪ ಅವರಿಗೆ ಅವಕಾಶ ನೀಡಿದ್ದೆ. ಅವರಿಗೆ 23 ವರ್ಷ. ಇಡೀ ಆಫೀಸ್ ನಲ್ಲಿ ಇದ್ದವರು 40 ವರ್ಷಕ್ಕಿಂತ ಕೆಳಗಿನ ವರು. ಅಂತಹ ಯಂಗ್ ಪತ್ರಿಕೆ ಮತ್ತೆ ಬರುವುದಿಲ್ಲ. ಹತ್ತು ವರ್ಷ ಹೊಸ ಹೊಸ ಪ್ರಯೋಗದಿಂದ ಪತ್ರಿಕೆ ಕಟ್ಟಿದೇವು. ಉಲ್ಟಾ ಮಾಡಿ ಪತ್ರಿಕೆ ಪ್ರಿಂಟ್ ಮಾಡಿದ್ವಿ. ಮನುಷ್ಯ ಮೊದಲು ಜಗತ್ತು ನೋಡಿದ್ದು ತಲೆಕೆಳಗಾಗಿ ಎಂಬ ವಾಕ್ಯವನ್ನು ನೀಡಿದ್ದೇವು ಎಂದು ವಿಶ್ವೇಶ್ವರ ಭಟ್ ತಿಳಿಸಿದರು.

ವಿಶ್ವವಾಣಿ ಪತ್ರಿಕೆ ಕಟ್ಟಿ ಬೆಳೆಸಿದ ಬಗೆ ವಿವರಿಸಿದ ವಿಶ್ವೇಶ್ವರ ಭಟ್

ಯಾರಿಗಾದರೂ ಹಾಳಾಗಬೇಕು ಎಂದರೆ ಲಾರಿ ಬ್ಯುಸಿನೆಸ್, ಬಸ್ ವ್ಯವಹಾರ, ಪತ್ರಿಕೆ ಮಾಡು ಎಂಬ ಸಲಹೆ ನೀಡಬೇಕಂತೆ. ನಾನು ಹಾಗೆ ಸ್ವಂತ ಪತ್ರಿಕೆ ವಿಶ್ವವಾಣಿ ಆರಂಭಿಸಿದೆ. ಹಣ ಸಹಾಯ ಮಾಡುತ್ತೇನೆ ಎಂದವರು ಕೈಕೊಟ್ಟಿದ್ದರು. ಕಷ್ಟ ಆದಾಗ ಪತ್ರಿಕೆ ಮುಚ್ಚಬಹುದಿತ್ತು. ಕನ್ನಡದಲ್ಲಿ ಪತ್ರಿಕೆ ಆರಂಭಿಸುವುದು ಮುಚ್ಚುವುದು ದೊಡ್ಡದಲ್ಲ. ಆದರೆ ನಾನು ದೊಡ್ಡ ಭಾನಗಡಿ ಮಾಡಿದೆ. ಅದು ಏನೆಂದರೆ, ಪತ್ರಿಕೆ ಮುನ್ನಡೆಸುವ ಮನಸ್ಸು ಮಾಡಿದೆ. ಪತ್ರಿಕೆ ಎಂದರೆ ನೀವು ದುಡ್ಡನ್ನು ಚೆಲ್ಲಬೇಕು. ಜಾಹೀರಾತು ಬರುವುದಿಲ್ಲ. ಪ್ರತಿ ತಿಂಗಳು ನನ್ನ ಖರ್ಚು ನಾಲ್ಕೂವರೆ ಕೋಟಿ ಬರುತ್ತಿತ್ತು. ದೇವರ ದಯೆಯಿಂದ ಪತ್ರಿಕೆ 11 ವರ್ಷಕ್ಕೆ ಕಾಲಿಟ್ಟಿದೆ ಎಂದ ವಿಶ್ವೇಶ್ವರ ಭಟ್, ಇಂದು ಬಹುತೇಕ ಪತ್ರಿಕೆಗಳು ಉದ್ಯಮಿ, ಟ್ರಸ್ಟ್, ರಾಜಕಾರಣಿಗಳ ಕೈಯಲ್ಲಿದೆ. ಆದರೆ ಒಬ್ಬ ಕಾರ್ಯನಿರತ ಪತ್ರಕರ್ತನೇ ಮಾಲೀಕನಾಗಿರುವುದು ವಿಶ್ವವಾಣಿ ಪತ್ರಿಕೆಗೆ ಮಾತ್ರ. ವಿಶ್ವವಾಣಿ ಟಿವಿ, ಲೋಕಧ್ವನಿ, ಪ್ರವಾಸಿ ಪ್ರಪಂಚ ಪತ್ರಿಕೆಯನ್ನು ನಡೆಸುತ್ತಿದ್ದೇನೆ. ನನ್ನ ಜತೆಯಲ್ಲಿ 211 ಪತ್ರಕರ್ತರು ಕೆಲಸ ಮಾಡುತ್ತಿದ್ದಾರೆ. ಪತ್ರಕರ್ತನಾಗಿ ಮಾಡಿದ ಕೆಲಸದ ಕುರಿತು ಧನ್ಯತೆ ಇದೆ. ಪತ್ರಿಕೆಯಿಂದ ಬದಲಾವಣೆಯನ್ನು ತರಲಿಕ್ಕೆ ಸಾಧ್ಯವಿದೆ ಎಂದು ವಿವರಿಸಿದರು.

ವಿಧಾನಸಭೆ ಮಾಜಿ ಸ್ಪೀಕರ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ

ಹವ್ಯಕ ಭಾಷಾ ಅಕಾಡೆಮಿ ಘೋಷಣೆಯ ಹಿಂದೆ ವಿಶ್ವೇಶ್ವರ ಭಟ್ಟರ ಪ್ರಭಾವ ಪ್ರಮುಖ

ಕುಮಟಾ: ಈ ಬಾರಿ ಬಜೆಟ್‌ನಲ್ಲಿ ರಾಜ್ಯ ಸರಕಾರ ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆ ಮಾಡುವ ಘೋಷಣೆ ಮಾಡಿದೆ. ಈ ಘೋಷಣೆಯ ಹಿಂದೆ ವಿಶ್ವೇಶ್ವರ ಭಟ್ ಅವರ ಪ್ರಭಾವ ಪ್ರಮುಖವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಇಲ್ಲಿನ ಹವ್ಯಕ ಸಭಾ ಮಂಟಪದಲ್ಲಿ ಸೌರಭ ಸಂಸ್ಥೆ ಆಯೋಜಿಸಿದ್ದ ಸಾಧನಾ ಸೌರಭ-ಸಾಂಸ್ಕೃತಿಕ ಅನುಸಂಧಾನ ಹಾಗೂ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರೊಂದಿಗೂ ಬೆರೆತು ತಮ್ಮ ವಿಚಾರಗಳ ಮೂಲಕ ನಾಡಿಗೆ ಅದ್ಭುತ ಕೊಡುಗೆಯನ್ನು ವಿಶ್ವೇಶ್ವರ ಭಟ್ ಅವರು ನೀಡಿದ್ದಾರೆ. ನೂರಾರು ದೇಶ ಸುತ್ತಿ, ನೂರಕ್ಕೂ ಅಧಿಕ ಪುಸ್ತಕಗಳನ್ನು ಬರೆದ ಜಿಲ್ಲೆಯ ಅಪರೂಪದ ಪತ್ರಕರ್ತರಾದ ಭಟ್ಟರು ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಗೆ ಭಾಜನರಾಗಿದ್ದು ಸಂತಸದ ವಿಚಾರ. ಭಟ್ಟರಿಗೆ ತಮ್ಮ ಹುಟ್ಟೂರಿನಲ್ಲಿ ಸಿಗುತ್ತಿರುವ ಈ ಗೌರವ ಅತ್ಯಂತ ದೊಡ್ಡದು ಎಂದು ಕಾಗೇರಿ ಬಣ್ಣಿಸಿದರು.

ಸಾಂಸ್ಕೃತಿಕ ಅಸ್ಮಿತೆ ಉಳಿವಿನಿಂದ ಮಾತ್ರ ದೇಶದ ಅಖಂಡತೆ ಸಾಧ್ಯ: ಅನೇಕ ಗಣ್ಯರು ಸೌರಭ ಸಂಸ್ಥೆಯ ಕಾರ್ಯಕ್ರಮಕ್ಕೆ ಆಗಮಿಸಿರುವುದು ಈ ಸಂಸ್ಥೆಯ ಸಾಧನೆಗೆ ಸಾಕ್ಷಿಯಾಗಿದ್ದು, ಇಲ್ಲಿನ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಗುರುತಿಸಿ ಭಾಗವಹಿಸಿದವರನ್ನು ನೋಡಿದಾಗ ಸಂಸ್ಥೆಯ ಘನತೆ ಅರಿವಾಗುತ್ತದೆ. ಸೌರಭ ಸಂಸ್ಥೆಯ ಪ್ರಭಾವವು ಹೂವು ಅರಳಿದಾಗ ಸೂಸುವ ಪರಿಮಳದಂತಿದ್ದು, ಇದರ ಸಾಂಸ್ಕೃತಿಕ ಚಟುವಟಿಕೆಗಳು ಜಿಲ್ಲೆಯಾದ್ಯಂತ ವಿಸ್ತರಿಸಬೇಕು ಎಂದು ಸಂಸದ ಕಾಗೇರಿ ಆಶಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಗೆ ಹಣದ ಕೊರತೆ ಇರುವ ಕುರಿತು ಪ್ರಸ್ತಾಪಿಸಿದ ಅವರು, ದೇಶದ ಹಿರಿಮೆ ಹೆಚ್ಚುವುದು ಅಲ್ಲಿನ ಸಾಂಸ್ಕೃತಿಕ ಪ್ರಬಲತೆಯಿಂದ ಮಾತ್ರ. ರಸ್ತೆ ಮತ್ತು ಫ್ಲೈಓವರ್‌ಗಳಂತಹ ಭೌತಿಕ ಅಭಿವೃದ್ಧಿ ನಿರಂತರವಾದ ಪ್ರಕ್ರಿಯೆಯಾಗಿದ್ದು, ಜನರ ಅಗತ್ಯಕ್ಕೆ ತಕ್ಕಂತೆ ಸೌಲಭ್ಯಗಳು ಬದಲಾಗುತ್ತಿರುತ್ತವೆ, ಆದರೆ ದೇಶದ ಏಕತೆ ಮತ್ತು ಅಖಂಡತೆಯನ್ನು ಉಳಿಸುವುದು ಇಲ್ಲಿನ ಸಾಂಸ್ಕೃತಿಕ ಹಿರಿಮೆಯಾಗಿದೆ ಎಂದು ತಿಳಿಸಿದರು.

ಕಲಾ ಕ್ಷೇತ್ರದ ಸೌಜನ್ಯವನ್ನು ಸರಕಾರವು ದೌರ್ಬಲ್ಯ ಎಂದು ಭಾವಿಸದಂತೆ ಸೌರಭ ಸಂಸ್ಥೆಯು ಸರಕಾರದ ಮೇಲೆ ಪ್ರಭಾವ ಬೀರುವ ಕೆಲಸ ಮಾಡಬೇಕು. ನಮ್ಮ ಜಿಲ್ಲೆಯ ಯಕ್ಷಗಾನ, ಸಂಗೀತ, ನಾಟಕ, ಭರತನಾಟ್ಯದ ಕೊಡುಗೆ ಅಪಾರವಾಗಿದ್ದು, ಆಧುನಿಕ ಭರಾಟೆಯ ನಡುವೆ ಸನಾತನ ಧರ್ಮದ ವಾರಸುದಾರರಾದ ನಾವು ನಮ್ಮ ಕಲೆಗಳಿಗೆ ಆಧುನಿಕತೆಯ ಸ್ಪರ್ಶ ನೀಡಿ ಇಂದಿನ ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಳ್ಳಬೇಕು ಎಂದರು.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ರೀಲ್ಸ್ ಸಮಸ್ಯೆಗೆ ಕಲೆ ಸೀಮಿತವಾಗಬಾರದು ಹಾಗೂ ಸಮಾಜವನ್ನು ಒಡೆಯುವ ರಾಕ್ಷಸೀ ಪ್ರವೃತ್ತಿಯನ್ನು ಬಿಟ್ಟು ಒಳ್ಳೆಯದನ್ನು ಮಾಡುವ ಮೂಲಕ ಸಮಾಜ ಬೆಳೆಸಬೇಕು ಎಂದರು.

ಕುಮಟಾ ಹವ್ಯಕ ಸಭಾ ಮಂಟಪದಲ್ಲಿ ಆಯೋಜಿಸಿದ್ದ ಸಾಧನಾ ಸೌರಭ ಕಾರ್ಯಕ್ರಮದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಹೊರನಾಡು ಕ್ಷೇತ್ರದ ಧರ್ಮದರ್ಶಿ ರಾಮನಾರಾಯಣ ಜೋಯಿಸ್, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಸೌರಭದ ಅಧ್ಯಕ್ಷ ಶ್ರೀಕಾಂತ ಭಟ್, ಮೋಹನ ಭಾಸ್ಕರ ಹೆಗಡೆ ಹೆರವಟ್ಟಾ ಇತರರು ಇದ್ದರು.

ಭಟ್ಟರು ಅನುಭವದ ಗಣಿ

ಹೊರನಾಡು ಕ್ಷೇತ್ರದ ಧರ್ಮದರ್ಶಿ ರಾಮನಾರಾಯಣ ಜೋಯಿಸ್ ಮಾತನಾಡಿ, ವಿಶ್ವೇಶ್ವರ ಭಟ್ಟರ ವ್ಯಕ್ತಿತ್ವವು ಪಿಎಚ್.ಡಿ ಮಾಡಲು ಯೋಗ್ಯವಾಗಿದ್ದು, ಕಷ್ಟಪಟ್ಟು ಮೇಲೆ ಬಂದಿರುವ ಅವರು ಅನುಭವದ ಗಣಿಯಾಗಿದ್ದಾರೆ ಎಂದರು. ಭಟ್ಟರ ಬರವಣಿಗೆಯಲ್ಲಿ ಪ್ರಭುತ್ವವಿದ್ದು, ಅವರು ವ್ಯಕ್ತಿಯ ತಪ್ಪನ್ನು ತಿದ್ದುತ್ತಾರೆಯೇ ಹೊರತು ವ್ಯಕ್ತಿತ್ವವನ್ನು ತೆಗಳುವುದಿಲ್ಲ. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲು ಭಟ್ಟರಂತಹ ಪತ್ರಕರ್ತರೇ ಕಾರಣ. ಹವ್ಯಕ ಭಾಷಾ ಅಕಾಡೆಮಿಯ ಹಿಂದೆ ಅವರ ಶ್ರಮವಿದ್ದರೂ ಅವರು ಅದನ್ನು ಹೇಳಿಕೊಳ್ಳುತ್ತಿಲ್ಲ. ಭಟ್ಟರ ಸ್ನೇಹವೆಂದರೆ ಅದೊಂದು ರೀತಿಯ ಜ್ಞಾನದ ಚಟವಿದ್ದಂತೆ ಎಂದು ಮಾರ್ಮಿಕವಾಗಿ ನುಡಿದರು.

ಪತ್ರಿಕೋದ್ಯಮದಲ್ಲಿ ಹೊಸ ಸಂಚಲನ ಮೂಡಿಸಿದ ಭಟ್ಟರು



ಕುಮಟಾ: ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಸಂಚಲನ ಮೂಡಿಸಿದ ವಿಶ್ವೇಶ್ವರ ಭಟ್ಟರು, ನನ್ನಂತಹ ಹತ್ತಾರು ಅಂಕಣಕಾರರನ್ನು ಹಾಗೂ ಸ್ಟಾರ್ ಪತ್ರಕರ್ತರನ್ನು ಸಮಾಜಕ್ಕೆ ಪರಿಚಯಿಸಿದವರು. ಅವರು ಕೇವಲ ನನ್ನ ಪತ್ರಿಕೋದ್ಯಮದ ಗುರುವಲ್ಲ, ನನ್ನ ರಾಜಕೀಯ ಬೆಳವಣಿಗೆಯ ಹಿಂದಿನ ಶಕ್ತಿಯೂ ಹೌದು ಎಂದು ಮಾಜಿ ಸಂಸದ ಪ್ರತಾಪ ಸಿಂಹ ಅಭಿಪ್ರಾಯಪಟ್ಟರು.

'ಅಂತರಂಗ ಪಥ' ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ಟರ ಕುರಿತು ಮಾತನಾಡಿದ ಅವರು, ಭಟ್ಟರೊಂದಿಗಿನ ತಮ್ಮ ಸುದೀರ್ಘ ಒಡನಾಟ ಮತ್ತು ವೃತ್ತಿಜೀವನದ ಮೈಲಿಗಲ್ಲುಗಳನ್ನು ಸ್ಮರಿಸಿದರು. ವಿಶ್ವೇಶ್ವರ ಭಟ್ಟರು ವಿಜಯ ಕರ್ನಾಟಕ ಸಂಪಾದಕರಾಗಿ ಜವಾಬ್ದಾರಿ ವಹಿಸಿಕೊಂಡ ನಂತರ ಪತ್ರಿಕೆಯ ಎಡಿಟೋರಿಯಲ್ ಮತ್ತು ಓಪೆಡ್ ಪುಟಗಳ ಚಿತ್ರಣವೇ ಬದಲಾಯಿತು. ಈ ಹಿಂದೆ ಕೇವಲ ಪರಿಚಿತ ಮುಖಗಳು ಅಥವಾ ಎಡಪಂಥೀಯ ವಿಚಾರಧಾರೆಗಳಿಗೆ ಸೀಮಿತ ವಾಗಿದ್ದ ಪುಟಗಳಲ್ಲಿ ವೈವಿಧ್ಯತೆಯನ್ನು ತಂದರು. ವೀರ್ ಸಾಂಘ್ವಿ, ಚಂದನ ಮಿಶ್ರ ಅಂತಹ ರಾಷ್ಟ್ರೀಯ ಲೇಖಕರನ್ನು ಕನ್ನಡಕ್ಕೆ ತಂದರಲ್ಲದೆ, ಶತಾವಧಾನಿ ಆರ್.ಗಣೇಶ್ ಹಾಗೂ ಸಿ.ಆರ್.ಸಿಂಹ ಅವರಂತಹ ವಿದ್ವಾಂಸರಿಂದ ಲೇಖನಗಳನ್ನು ಬರೆಯಿಸುವ ಮೂಲಕ ಬೌದ್ಧಿಕ ಚರ್ಚೆಗೆ ನಾಂದಿ ಹಾಡಿದರು ಎಂದು ಸಿಂಹ ವಿವರಿಸಿದರು.

ಸಮಾಚಾರ ಸಣ್ಣದಲ್ಲ

ನಕಲಿ ಜಾತಿ ಪ್ರಮಾಣ ಪತ್ರ: ಕ್ರಮದ ಎಚ್ಚರಿಕೆ

ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಹಾಗೂ ಭೂ ಕಬಳಿಕೆ ವಿರುದ್ಧ ಸಾಕಷ್ಟು ದೂರುಗಳು ಕೇಳಿ ಬಂದಿದ್ದು, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ರಾಜ್ಯ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ.ಎಲ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯೋಗದ ಮುಂದೆ ಪ್ರಸ್ತುತ 4,500 ಅರ್ಜಿಗಳು ಬಾಕಿಯಿವೆ. ಇದರಲ್ಲಿ ಸುಮಾರು 3,850 ಪ್ರಕರಣಗಳು ವಿಚಾರಣಾ ಹಂತದಲ್ಲಿವೆ. ಅಚ್ಚರಿಯ ವಿಷಯವೆಂದರೆ, ಎಸ್‌ಸಿ/ಎಸ್‌ಟಿ ಸಮುದಾಯದ ಜನರಿಗೆ ಸರಕಾರದಿಂದ ವಿತರಿಸಲಾದ ಜಮೀನುಗಳು ಹೆಚ್ಚಾಗಿ 'ಲಿಟಿಗೇಶನ್ ಪ್ರಾಪರ್ಟಿ' (ಕಾನೂನು ಸಂಘರ್ಷವಿರುವ ಆಸ್ತಿ) ಗಳಾಗಿವೆ. ಇದರಿಂದ ಬಡವರು ನ್ಯಾಯಾಲಯಕ್ಕೆ ಅಲೆಯುವಂತಾಗಿದೆ ಎಂದರು. ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಸಮರ್ಪಕವಾಗಿ ಬಳಸಲಾಗಿಲ್ಲ. ಪೌರ ಕಾರ್ಮಿಕರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ಸ್ಥಳೀಯ ಸಂಸ್ಥೆಗಳು ವಿಫಲವಾಗಿವೆ. ಅಲ್ಲದೆ, ಪರಿಶಿಷ್ಟ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸಂಖ್ಯೆ ತೀರಾ ಕಡಿಮೆ ಇರುವುದನ್ನು ಗಮನಿಸಲಾಗಿದೆ. ಪ.ಜಾತಿ, ಪ.ಪಂಗಡದ ಜನರ ಅಹವಾಲುಗಳಿಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸ್ಪಂದಿಸದೆ ಇರುವ ಕುರಿತು ಹಾಗೂ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದೂರುಗಳು ದಾಖಲಾತಿಯಲ್ಲಿ ವಿಳಂಬವಾಗುತ್ತಿರುವ ಕುರಿತು ದೂರುಗಳು ಬಂದಿವೆ. ಈ ಕುರಿತು ಆಯೋಗವು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ದಿನ ವಿಶೇಷ

28 ಏಪ್ರಿಲ್ 2026 ಮಂಗಳವಾರ

» ಸೂರ್ಯೋದಯ	: 5-57
» ಸೂರ್ಯಾಸ್ತ	: 6-51
» ತಿಥಿ	: ದ್ವಾದಶಿ
» ನಕ್ಷತ್ರ	: ಉತ್ತರಫಾಲ್ಗುಣಿ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ವೈಶಾಖ
» ಪಕ್ಷ	: ಶುಕ್ಲಪಕ್ಷ

ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಸಚಿವ ಸುಧಾಕರ್ ಅವರ ಆರೋಗ್ಯ ವಿಚಾರಿಸಿ, ವೈದ್ಯ ಮತ್ತು ಕುಟುಂಬದವರ ಜತೆ ಮಾತನಾಡಿದರು.

ಸಚಿವ ಸುಧಾಕರ್ ಆರೋಗ್ಯ ವಿಚಾರಿಸಿದ ಜಿ. ಪರಮೇಶ್ವರ

ಬೆಂಗಳೂರು: ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಸೋಮವಾರ ಎಲೆಕ್ಟ್ರಾನಿಕ್ ಸಿಟಿಯ ಕೃಷ್ಣ ಆರೋಗ್ಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿ ಸಚಿವ ಸುಧಾಕರ್ ಅವರ ಆರೋಗ್ಯ ವಿಚಾರಿಸಿದರು. ನಂತರ ಸುಧಾಕರ್ ಅವರಿಗೆ ಚಿಕಿತ್ಸೆ ನೀಡುತ್ತಿರುವ ಕುರಿತು ಆಸ್ಪತ್ರೆಯ ವೈದ್ಯರಿಂದ ಮಾಹಿತಿ ಪಡೆದು, ಕುಟುಂಬದವರೊಂದಿಗೆ ಮಾತನಾಡಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಜಿ.ಪರಮೇಶ್ವರ, ಸಚಿವ ಸುಧಾಕರ್ ಅವರ ಆರೋಗ್ಯ ಸ್ಥಿರವಾಗಿದ್ದು, ಗುಣಮುಖರಾಗುತ್ತಾರೆ ಎಂದು ವೈದ್ಯರು ಪಾಸಿಟಿವ್ ಆಗಿ ಪ್ರತಿಕ್ರಿಯಿಸಿದ್ದಾರೆ. ಚೇತರಿಸಿಕೊಳ್ಳುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಇದಕ್ಕೆ ಕಾಯಬೇಕು. ಸುಧಾಕರ್ ಅವರ ಆರೋಗ್ಯದ ವಿಚಾರದಲ್ಲಿ ಮುಚ್ಚಿಡುತ್ತಿದ್ದಾರೆ ಎಂಬುದಾಗಿ ಬಿಂಬಿಸುತ್ತಿರುವಂತೆ ಏನೂ ಇಲ್ಲ ಎಂದರು.

ಪ್ರಾಚಾರ್ಯೆ ಕಾಲಿಗೆ ಬಿದ್ದ ಶಾಸಕ ಗಂಟಿಹೊಳೆ

ಶಿರೂರು ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಜಯಂತಿ ಅವರ ಕಾಲಿಗೆ ಬಿದ್ದು ಗೌರವ ಸಲ್ಲಿಸಿದರು.

ಉಡುಪಿ: ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅವರು ಶಿರೂರು ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಜಯಂತಿ ಅವರ ಕಾಲಿಗೆರಗಿ ಭಾವುಕರಾದರು.

ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೇವಲ ಶೇ.35ರಷ್ಟು ಫಲಿತಾಂಶ ಪಡೆದು ಇಡೀ ಕ್ಷೇತ್ರದ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದ್ದ ಶಿರೂರು ಸರಕಾರಿ ಪದವಿ ಪೂರ್ವ ಕಾಲೇಜು ಈ ಬಾರಿ ಶೇ.94%ರಷ್ಟು ಫಲಿತಾಂಶ ದಾಖಲಿಸಿದೆ. ಕಳೆದ ಬಾರಿ ಫಲಿತಾಂಶ ಕುಸಿದ ಹಿನ್ನೆಲೆಯಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಶಾಲಾ ಪ್ರಾಂಶುಪಾಲರನ್ನು ಹಾಗೂ ಶಿಕ್ಷಕರನ್ನು ಕಟು ಮಾತುಗಳಿಂದ ತರಾಟೆಗೆ ತೆಗೆದುಕೊಂಡಿದ್ದರು. ಕ್ಷೇತ್ರದ ಶೈಕ್ಷಣಿಕ ಗುಣಮಟ್ಟ ಕುಸಿಯಬಾರದೆಂಬ ಕಳಕಳಿಯಿಂದ ಅಂದು ಮಾತುಗಳನ್ನಾಡಿದರು. ಅಂದು ಕಠಿಣರಾಗಿದ್ದ ಶಾಸಕರು ಇಂದು ಶಿಕ್ಷಕರ ತ್ಯಾಗ ಮತ್ತು ಶ್ರಮವನ್ನು ಕಂಡು ಭಾವುಕರಾಗಿ, ಅವರ ಚರಣಗಳಿಗೆ ಶಿರಬಾಗಿದರು. ಈ ಯಶಸ್ಸಿನ ಹಿಂದೆ ಪ್ರಾಂಶುಪಾಲೆ ಜಯಂತಿ ಅವರ ಪರಿಶ್ರಮವಿತ್ತು. ಶಾಲೆಯ ಫಲಿತಾಂಶ ಸುಧಾರಿಸಲೇಬೇಕೆಂಬ ಛಲ ತೊಟ್ಟ ಅವರು, ಸ್ವಂತ ಮನೆ ಬಿಟ್ಟು ಕಾಲೇಜಿನ ಹತ್ತಿರವೇ ಬಾಡಿಗೆ ಮನೆ ಮಾಡಿಕೊಂಡಿದ್ದರು. ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸಿದ್ದರು. ಇದರ ಪರಿಣಾಮ ಶೇ.94 ಫಲಿತಾಂಶ ದೊರೆಯಿತು.

ವಿಶ್ವ ಬೌದ್ಧ ಮಹಾ ಸಮ್ಮೇಳನ ಸಮಿತಿ, ಉಪಾಸಿಕ ಅಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್ (ರಿ), ಚಾಮರಾಜನಗರದ ಉತ್ತವಳ್ಳಿಯ ಪಂಚಶೀಲ ಬೆಟ್ಟದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರವು ಸದಾಶಿವ ನಗರದ ನಾಗಸೇನಾ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ವಿಶ್ವ ಬೌದ್ಧ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿ, 888 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ನಿರ್ಮಾಣ ಯೋಜನೆಗೆ ಚಾಲನೆ ನೀಡಿ, ಪಂಚಶೀಲ ಪಾದಯಾತ್ರೆಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿದರು.

ರೈಲಿನಲ್ಲೇ ಮಗುವಿಗೆ ಜನ್ಮ

ಬಂಟ್ವಾಳ: ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಯೊಬ್ಬರಿಗೆ ಹೆರಿಗೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ರೈಲ್ವೆ ಸಿಬ್ಬಂದಿ ತುರ್ತು ವೈದ್ಯಕೀಯ ನೆರವು ನೀಡಿ, ಹೆರಿಗೆ ಮಾಡಿಸಿದ ಘಟನೆ ಬಂಟ್ವಾಳದಲ್ಲಿ ನಡೆದಿದೆ. ಸದ್ಯ ನವಜಾತ ಶಿಶು ಮತ್ತು ತಾಯಿ ಆರೋಗ್ಯವಾಗಿದ್ದಾರೆ. ರೈಲು (ಸಂಖ್ಯೆ 16586, ಮುರ್ಡೇಶ್ವರ ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್)ನಲ್ಲಿ ಸಾಮಾನ್ಯ ಬೋಗಿಯಲ್ಲಿ ಗರ್ಭಿಣಿ ಪೊನ್ನಮ್ಮ ಪ್ರಯಾಣಿಸುತ್ತಿದ್ದರು. ಬಂಟ್ವಾಳ ರೈಲು ನಿಲ್ದಾಣಕ್ಕೆ ಸಂಜೆ 07:22 ಗಂಟೆಗೆ ರೈಲು ಆಗಮಿಸಿದಾಗ ಪೊನ್ನಮ್ಮ ಅವರು ಗಂಭೀರ ಸ್ಥಿತಿಯಲ್ಲಿ ರಕ್ತಸ್ರಾವದಿಂದ ಬಳಲುತ್ತಿದ್ದರು. ಈ ವೇಳೆ ತಕ್ಷಣವೇ ರೈಲ್ವೆ ಸಿಬ್ಬಂದಿ ತುರ್ತು ವೈದ್ಯಕೀಯ ಸೇವೆಗಳಿಗೆ ಮಾಹಿತಿ ನೀಡಿ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿದ್ದರು. ಆದರೆ ಆಂಬ್ಯುಲೆನ್ಸ್ ಬರುವುದಕ್ಕೂ ಮುನ್ನವೇ ಮಹಿಳೆಗೆ ಹೆರಿಗೆ ಆಗಿದ್ದು, ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

ಒಳಮೀಸಲಾತಿ ಗೊಂದಲದಿಂದ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿತ್ತು: ಶಿಕ್ಷಣ ಸಚಿವ ಮಧು ಬಂಗಾರಪ್ಪ

ನಾಲ್ಕೈದು ತಿಂಗಳಲ್ಲಿ ಶಿಕ್ಷಕರ ನೇಮಕಾತಿ ಮುಕ್ತಾಯ

ಶಿವಮೊಗ್ಗ: ನಾಲ್ಕೈದು ತಿಂಗಳಲ್ಲಿ ಶಿಕ್ಷಕರ ನೇಮಕಾತಿ ಮಾಡಲಾಗುವುದು ಎಂದು ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಒಳಮೀಸಲಾತಿ ಘೋಷಣೆಯಾದ ನಂತರ ಶುಕ್ರವಾರ ನೇಮಕಾತಿ ಕುರಿತು ಪ್ರಥಮ ಸಭೆ ನಡೆಸಲಾಗಿದೆ. ಶಿಕ್ಷಕರ ನೇಮಕಾತಿಯ ಸಿಇಟಿ ಆದಷ್ಟು ಬೇಗ ಮಾಡುತ್ತೇವೆ ಎಂದರು.

ಕಳೆದ ವರ್ಷ 6 ತಿಂಗಳ ಒಳಗೆಯೇ ಮಾಡಿ ಮುಗಿಸಬೇಕೆಂದು ಕೊಂಡಿದ್ದೆವು. ಈಗ ಒಳ ಮೀಸಲಾತಿ ಮುಗಿದಿದೆ. ಇದನ್ನು ನಾಲ್ಕೈದು ತಿಂಗಳಲ್ಲಿ ಮಾಡಿ ಮುಗಿಸಬೇಕೆಂದು ತೀರ್ಮಾನಿಸಿದ್ದೇವೆ. ಜೂನ್‌ನಲ್ಲಿಯೇ ಶಿಕ್ಷಕರ ನೇಮಕ ಮಾಡಬೇಕು ಅಂದುಕೊಂಡಿದ್ವಿ. ನಂತರ ಜುಲೈನಲ್ಲಿ ಅಂದುಕೊಂಡಿದ್ದೆವು. ಎರಡು ಮೂರು ತಿಂಗಳಲ್ಲಿ ಮ್ಯಾಜಿಕ್ ಮಾಡಲು ಆಗಲ್ಲ, ಆದಷ್ಟು ಬೇಗ ಮಾಡಿ ಮುಗಿಸುತ್ತೇವೆ ಎಂದು ಹೇಳಿದರು.

ಸರಕಾರದಿಂದ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕೋರ್ಟ್‌ನಲ್ಲಿ ವ್ಯಾಜ್ಯ ಇರುವುದರಿಂದ ನೇಮಕಾತಿ ತಡವಾಗುತ್ತಿದೆ. ರಾಜ್ಯದಲ್ಲಿ ಅತಿ ಹೆಚ್ಚು ನೇಮಕಾತಿ ಇರುವುದು ನಮ್ಮ ಇಲಾಖೆಯಲ್ಲಿ. ನಮ್ಮ ಇಲಾಖೆಯ ಟಿಇಟಿ ಪರೀಕ್ಷೆ ಮುಗಿದಿದೆ. ಈಗ ಸಿಇಟಿ ಪರೀಕ್ಷೆ ಆಗಬೇಕಿದೆ. ಈಗ ಒಳ ಮೀಸಲಾತಿ ಘೋಷಣೆ ಆಗಿರುವುದರಿಂದ ನೇಮಕಾತಿ ಹಾದಿ ಸುಗಮವಾಗಿದೆ ಎಂದು ಹೇಳಿದರು.

ವಿಶ್ವನಾಥ್‌ಗೆ ವಯಸ್ಸಾಗಿದೆ ಇರಲಿ, ಕ್ಷಮಿಸಿ ಬಿಡೋಣ

ನಕಲು ಮಾಡಿಸಿದ್ದರಿಂದಲೇ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳ ಆಗಿದೆ ಎಂಬ ಎಂಎಲ್‌ಸಿ ಎಚ್.ವಿಶ್ವನಾಥ್ ಹೇಳಿಕೆಗೆ ಸಚಿವ ಮಧು ಬಂಗಾರಪ್ಪ ಹೇಳಿದರು. ವಿಶ್ವನಾಥ್ ಅವರ ಹೇಳಿಕೆ ದೇಶದ ಭವಿಷ್ಯಕ್ಕೆ, ತಂದೆ ತಾಯಿಗೆ, ಅವರ ಶಿಕ್ಷಕರಿಗೆ ಮಾಡಿದ ಅವಮಾನವಾಗಿದೆ. ಅವರು ಕಾಪಿ ಹೊಡೆಯಿಸಿ ಪಾಸ್ ಮಾಡಿದ್ದರೆಂದು ಹೇಳಿದ್ದಾರೆ. ಆದರೆ ಹಿಂದೆ ಅಂಬಿ ನಿಂಗೆ ವಯಸ್ಸಾಯ್ತು ಎಂಬ ಫಿಲಂ ಮಾಡಿದ್ದರು. ಅದೇ ರೀತಿ ವಿಶ್ವನಾಥ್ ಅವರಿಗೆ ವಯಸ್ಸಾಗಿದೆ ಅಂತ ಹೇಳಬಹುದು. ಅವರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ ಎಂದು ಹೇಳಿದರು. ವಿಶ್ವನಾಥ್ ಎಲ್ಲಿದ್ದಾರೆಂದು ಯಾರಿಗೂ ತಿಳಿಯುತ್ತಿಲ್ಲ. ಅವರು ಯಾವ ಪಕ್ಷದಲ್ಲಿದ್ದಾರೆಂದು ತಿಳಿಯುತ್ತಿಲ್ಲ. ಮೈಸೂರು ಜಿಲ್ಲೆಗೆ ವಿಶ್ವನಾಥ್ ಅವಮಾನ ಮಾಡಿದ್ದಾರೆ. ಹೀನಾಯವಾಗಿ ಸೋತು, ಪುಕ್ಸಟ್ಟೆಯಾಗಿ ಪರಿಷತ್ ಸದಸ್ಯರಾಗಿದ್ದಾರೆ. ವಿಶ್ವನಾಥ್?ಗೆ ವಯಸ್ಸಾಗಿದೆ. ಅವರನ್ನು ಕ್ಷಮಿಸಿ ಬಿಡೋಣ ಎಂದರು.

225 ವೈದ್ಯರ ನೇಮಕಕ್ಕೆ ಶೀಘ್ರ ಚಾಲನೆ

ಹುಬ್ಬಳ್ಳಿ: ರಾಜ್ಯದಲ್ಲಿ ಖಾಲಿ ಇರುವ 225 ವೈದ್ಯರ ನೇಮಕಾತಿಗೆ ಆರ್ಥಿಕ ಇಲಾಖೆಯ ಅನುಮೋದನೆ ಸಿಕ್ಕಿದ್ದು, ಒಳಮೀಸಲಾತಿ ಅನ್ವಯ ಶೀಘ್ರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ತಾಲೂಕು ಆಸ್ಪತ್ರೆ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿರಬೇಕು ಎನ್ನುವ ನಿಟ್ಟಿನಲ್ಲಿ, ಕೆಲವು ಮೂಲ ಸೌಕರ್ಯಗಳನ್ನು ಒದಗಿಸಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಬಿಸಿಲಿನ ತಾಪ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ರಾಜ್ಯ ಸರಕಾರ ಅಗತ್ಯ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಹೀಟ್‌ಸ್ಟ್ರೋಕ್ ಪ್ರಕರಣಗಳಿಗೆ ತುರ್ತು ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಸರಕಾರಿ ಆಸ್ಪತ್ರೆಗಳಲ್ಲಿ ಸರಕಾರಿ ಔಷಧಗಳೇ ಸಿಗಬೇಕು ಎನ್ನುವ ಉದ್ದೇಶದಿಂದ, ಈಗಿರುವ ಜೆನರಿಕ್ ಮಳಿಗೆಗಳನ್ನು ತೆರವು ಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ.

ಈ ಕುರಿತು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವು ಸಹ ನ್ಯಾಯಾಲಯದಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು.

ತಾಪಮಾನ ಹೆಚ್ಚಳ 2 ನಾಯಿಗಳು ಸಾವು

ಮೈಸೂರು: ಬಿಸಿಲಿನ ತಾಪಮಾನ ಏರಿಕೆಯಿಂದ ಮೈಸೂರಿನಲ್ಲಿ ಎರಡು ನಾಯಿಗಳು ಸಾವನ್ನಪ್ಪಿದ್ದು, ಮತ್ತೊಂದು ಶ್ವಾನದ ಸ್ಥಿತಿ ಗಂಭೀರ ವಾಗಿದೆ ಎನ್ನಲಾಗಿದೆ.

ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋನಿ, ಬಿಗಲ್ ವರ್ಗಕ್ಕೆ ಸೇರಿದ 4 ವರ್ಷದ ಸೋನು ಎಂಬ ಸಾಕು ನಾಯಿ ಮೃತಪಟ್ಟಿವೆ. ಮತ್ತೊಂದು ಸಾಕು ನಾಯಿಯ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಮೈಸೂರಿನ ವಿಜಯ ನಗರದ 3ನೇ ಹಂತದ ನಿವಾಸಿ ತೇಜಸ್ ಅವರು ಸಾಕಿದ್ದ ರೋನಿ ಶನಿವಾರ ಕುವೆಂಪು ನಗರದ ಬಾಸು ದೇವ ಸೋಮಾನಿ ಕಾಲೇಜಿನಲ್ಲಿ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಂಡಿತ್ತು. ಪ್ರದರ್ಶನದ ನಂತರ ಮಧ್ಯಾಹ್ನ 3ರ ವೇಳೆಗೆ ಅಸ್ವಸ್ಥಗೊಂಡ ರೋನಿಯನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ಕೊಡಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಪ್ರಾಣ ಬಿಟ್ಟಿದೆ. ಮತ್ತೊಂದು ಪ್ರಕರಣದಲ್ಲಿ ಮೋಹನ್ ಅವರು ತಮ್ಮ ಸೋನು ನಾಯಿಯನ್ನು ಶನಿವಾರ ಮಧ್ಯಾಹ್ನ ವಾಕಿಂಗ್‌ಗೆ ಕರೆದುಕೊಂಡು ಹೋಗಿದ್ದು, ಈ ವೇಳೆ ಬಿಸಿಲಿನ ತಾಪಕ್ಕೆ ಅಸ್ವಸ್ಥಗೊಂಡಿತ್ತು. ತಕ್ಷಣ ಪೆಟ್ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದೆ.

ವಿಶ್ವವಾಣಿ

ಸಂಪಾದಕೀಯ

ಯೋಜನೆ ಪ್ರಚಾರದ ಸರಕಾಗದಿರಲಿ

ರಾಜಧಾನಿ ಬೆಂಗಳೂರು ಈಗ ಗಾರ್ಡನ್ ಸಿಟಿಯಿಂದ ಕಾಂಕ್ರೀಟ್ ಸಿಟಿಯಾಗಿ ಬದಲಾಗಿದೆ. ಬೇಸಿಗೆಯಲ್ಲೂ ತಂಪಾಗಿರುತ್ತಿದ್ದ ಸಿಲಿಕಾನ್ ನಗರ ಈಗ 37 ಸೆಂಟಿಗ್ರೇಡ್ ತನಕದ ತಾಪಮಾನಕ್ಕೆ ಸಾಕ್ಷಿಯಾಗಿದೆ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಏರಬಹುದು. ವೇಗವಾಗಿ ವಿಸ್ತರಿಸುತ್ತಿರುವ ಕಾಂಕ್ರೀಟ್ ಕಾಡು, ಕುಗ್ಗುತ್ತಿರುವ ಹಸಿರು ವಲಯ, ಏರುತ್ತಿರುವ ತಾಪಮಾನ ಮತ್ತು ಕುಸಿಯುತ್ತಿರುವ ವಾಯು ಗುಣಮಟ್ಟ ನಗರದ ಪರಿಸರ ಸಮತೋಲನಕ್ಕೆ ದೊಡ್ಡ ಸವಾಲಾಗಿವೆ. ನಗರದ ತಾಪಮಾನವು ಕಳೆದ ಎರಡು ದಶಕಗಳಲ್ಲಿ ಸರಾಸರಿ 2 ರಿಂದ 2.5 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಿದೆ. ಮತ್ತೊಂದೆಡೆ ವಾಹನಗಳ ಸಂಖ್ಯೆ 1.2 ಕೋಟಿಗೂ ಮೀರಿ ವಾಯುಮಾಲಿನ್ಯ ಹೆಚ್ಚಿಸುತ್ತಿದೆ. ದಿನವೊಂದಕ್ಕೆ ಸುಮಾರು ಎರಡೂವರೆ ಸಾವಿರ ವಾಹನಗಳು ರಾಜಧಾನಿಯ ಬೀದಿಗಿಳಿಯುತ್ತಿವೆ. ಇಂತಹ ಸಂದರ್ಭದಲ್ಲಿ ಬಿಡಿಎ 15 ಲಕ್ಷ ಸಸಿ ನೆಡುವ ಯೋಜನೆಯನ್ನು ಘೋಷಿಸಿರುವುದು ಸ್ವಾಗತಾರ್ಹ. ಆದರೆ ಇದು ಕೇವಲ ಮತ್ತೊಂದು ಪ್ರಚಾರದ ಸರಕಾಗದೇ ಫಲಿತಾಂಶ ನೀಡುವ ಕಾರ್ಯಯೋಜನೆಯಾಗಬೇಕಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅರಣ್ಯ ಇಲಾಖೆ ಹಾಗೂ ಇತರ ಸಂಸ್ಥೆಗಳು ದಶಕಗಳಿಂದ ಲಕ್ಷಾಂತರ ಸಸಿಗಳ ನೆಡುವ ಕಾರ್ಯಕ್ರಮ ನಡೆಸುತ್ತಲೇ ಬಂದಿವೆ. ಆದರೆ ಘೋಷಿಸಿ, ಬೆಳೆಸಿದ ಸಸಿಗಳ ಪ್ರಮಾಣಕ್ಕಿಂತ ಕತ್ತರಿ ಹಾಕಿದ ಸಸಿಗಳ ಪ್ರಮಾಣವೇ ಹೆಚ್ಚು. ಸಸಿ ನೆಡುವ ನೆಪದಲ್ಲಿ ನೂರಾರು ಕೋಟಿ ವ್ಯಯಿಸಿದರೂ ನಿರ್ವಹಣೆಯ ಕೊರತೆಯಿಂದ ಯೋಜನೆ ವಿಫಲವಾದ ಉದಾಹರಣೆ ಕಣ್ಣ ಮುಂದಿದೆ. ಹೀಗಾಗಿ ಎಷ್ಟು ಗಿಡ ನೆಟ್ಟೆವು ಎನ್ನುವುದಕ್ಕಿಂತ ಎಷ್ಟು ಗಿಡಗಳನ್ನು ಉಳಿಸಿದೆವು ಎಂಬುದು ಯೋಜನೆಯ ಯಶಸ್ಸಿನ ಮಾನದಂಡವಾಗಬೇಕು. ಅಲ್ಲದೇ, ಕೇವಲ ನೆರಳು ಕೊಡುವ, ಗಾಳಿ ಮಳೆಗೆ ಉರುಳುವ ಅಲಂಕಾರಿಕ ಮರಗಳ ಬದಲು, ಮಳೆ,ಗಾಳಿಯನ್ನು ತಾಳಿಕೊಂಡು ಬೆಳೆಯಬಲ್ಲ, ಪ್ರಾಣಿ–ಪಕ್ಷಿಗಳಿಗೂ ಆಸರೆಯಾಗಬಲ್ಲ ಗಿಡಗಳನ್ನು ನೆಡುವುದು ಅಗತ್ಯ. ದೇವದಾರು, ಮಾವು, ನೇರಳೆ, ಹುಣಸೆ, ಹಲಸು ಮುಂತಾದ ಸ್ಥಳೀಯ ಜಾತಿಯ ಗಿಡಗಳು ಪರಿಸರಕ್ಕೆ ಅನುಕೂಲಕರ. ಇವು ಜೀವ ವೈವಿಧ್ಯ ಉಳಿಸಲು ಸಹಕಾರಿಯಾಗುತ್ತವೆ. ನಗರದಲ್ಲಿ ಪಕ್ಷಿಗಳ ಸಂತತಿ ಕುಸಿಯುತ್ತಿರುವ ಸಂದರ್ಭದಲ್ಲಿ ಇದು ಪರಿಸರಪೂರಕ ಹೆಜ್ಜೆಯಾಗಲಿದೆ. ಬೆಂಗಳೂರು ತಂಪಾಗಬೇಕಾದರೆ ಘೋಷಣೆ ಮಾಡುವಾಗ ತೋರಿದ ಉತ್ಸಾಹ ಯೋಜನೆಯ ಕೊನೆಯವರೆಗೂ ಇರುವಂತೆ ನೋಡಿಕೊಂಡಾಗ ಮಾತ್ರ ಸಾಧ್ಯ. ಕೋಟಿಗಟ್ಟಲೆ ಹಣ ವ್ಯಯಿಸುವ ಪ್ರಚಾರದ ಸರಕಾಗದೇ ಪರಿಸರ ಪುನರುಜ್ಜೀವನದ ಮಾದರಿಯಾಗಬೇಕು.

ಸೊಂಪಾದಕೀಯ

ಟಾಯ್ಲೆಟ್ ಮುಚ್ಚಳದ ಮೇಲೆ ಜಾಹೀರಾತು!

ಕೆಲವು ತಾಲೂಕುಗಳು, ಹಳ್ಳಿಗಳು ಕಡೆ ಹೋಗುವಾಗ ರಸ್ತೆ ಪಕ್ಕದಲ್ಲಿರುವ ಮನೆಗಳ ಹೊರ ಗೋಡೆಗಳ ಮೇಲೆ ಕೆಲವು ಕಂಪನಿಗಳ ಜಾಹೀರಾತು ರಾರಾಜಿಸುತ್ತಿರುತ್ತದೆ. ನಿಮ್ಮ ಮನೆಯ ಮೇಲೆ ಜಾಹೀರಾತು ಹಾಕ್ತೀವೆ ಅಂತ ಯಾವುದಾದರೂ ಕಂಪನಿ ಒಂದೊಳ್ಳೆ ಆಫರ್ ಕೊಟ್ರೆ ನೀವೇನು ಮಾಡ್ತೀರಿ? ಆಫರ್ ನಿಮಗಿಷ್ಟವಾದರೆ ನಿಮ್ಮ ಮನೆಯ ಹೊರಗೋಡೆ, ಮೇಲ್ಛಾವಣಿ, ನಿಮ್ಮ ಮನೆಯ ಮೇಲಿನ ನೀರಿನ ಟ್ಯಾಂಕ್ ಮುಂತಾದ ಕಡೆಗಳಲ್ಲಿ ಜಾಹೀರಾತು ಹಾಕಲು ಅವಕಾಶ ಕೊಡ್ತೀರಿ ತಾನೇ? ಆದರೆ, ಅಮೆರಿಕಾದ ಫಿಲಿಡೆಲ್ಫಿಯಾದಲ್ಲಿ ನಿಕ್ ಗಿನೋವಾಲ್ಟ್ ಎಂಬ ಒಬ್ಬ ನಿರುದ್ಯೋಗಿ ತನ್ನ ಮನೆಯ ಟಾಯ್ಲೆಟ್ ಮುಚ್ಚಳವನ್ನೂ ಬಿಟ್ಟಿಲ್ಲ... ಅದಕ್ಕೂ ಜಾಹೀರಾತು ಹಾಕಲು ಅವಕಾಶ ನೀಡಿದ್ದಾನೆ! ಅಲ್ಲಿಯೂ ಜಾಹೀರಾತು ಪ್ರಕಟಿಸಲು ಆಸಕ್ತಿ ವಹಿಸಿದ ಕ್ರಿಪ್ಟೋ ಹಣಕಾಸು ಸಂಸ್ಥೆಯಾದ ಮೂನ್‌ಪೇ, ಅದಕ್ಕಾಗಿ ಒಂದಿಷ್ಟು ಡಾಲರ್ ನೀಡಿ ಆ ಟಾಯ್ಲೆಟ್ ಮುಚ್ಚಳದ ಮೇಲೆ ಜಾಹೀರಾತು ಹಾಕಿದೆ. ಸರಿ ಅದನ್ನು ನೋಡೋವ್ರು ಯಾರು ಅಂತ ನೀವು ಕೇಳಬಹುದು. ತನ್ನ ಟಾಯ್ಲೆಟ್ಟಿನ ಮುಚ್ಚಳದ ಮೇಲೆ ಹಾಕಿರುವ ಜಾಹೀರಾತನ್ನು ಆ ಕಂಪನಿ, ಹೊಸ ಪ್ರಯೋಗ ಎಂಬರ್ಥದಲ್ಲಿ ಇಂಟರ್ನೆಟ್‌ನಲ್ಲಿ ಹರಿಬಿಟ್ಟಿದೆ. ಅದು ವೈರಲ್ ಆಗಿದೆ. 24 ಗಂಟೆಗಳಲ್ಲಿ 1 ಮಿಲಿಯನ್ (10 ಲಕ್ಷ) ವ್ಯೂಸ್ ಪಡೆದುಕೊಂಡಿದೆ. ಹಲವಾರು ಮಂದಿ ಈ ಸೋಷಿಯಲ್ ಮೀಡಿಯಾ ಪೋಸ್ಟ್ ನೋಡುವಾಗ ಮೂನ್‌ಪೇ ಕಂಪನಿಯ ಆ್ಯಪ್ ಕೂಡ ಡೌನ್‌ಲೋಡ್ ಮಾಡಿದ್ದಾರೆ. ಕಂಪನಿಯ ಸೋಷಿಯಲ್ ಮೀಡಿಯಾ ಟ್ಯಾಗ್‌ಗೆ ಸುಮಾರು 1,000 ಮಂದಿ ಹೊಸ ಫಾಲೋವರ್ಸ್ ಬಂದಿದ್ದಾರೆ.

ಸಂಪಾದಕರ ಸದ್ಯಶೋಧನೆ

ನೆಟ್ ವರ್ಕಿಂಗ್ ಅಂದ್ರೆ ಏನು?

ಇತ್ತೀಚಿನ ವರ್ಷಗಳಲ್ಲಿ ಜನರಿಗೆ ನೆಟ್ ವರ್ಕಿಂಗ್ ಬಹಳ ಚಾಲ್ತಿಯಲ್ಲಿರುವ ಪದ. ಅನೇಕರಿಗೆ ನೆಟ್ ವರ್ಕಿಂಗ್ ಬಗ್ಗೆ ಅಪಾರ ಆಸಕ್ತಿ. ನೆಟ್ ವರ್ಕಿಂಗ್ ಎನ್ನುವುದು ಕೇವಲ ನಾವು ಎಷ್ಟು ಜನರನ್ನು ಭೇಟಿಯಾಗುತ್ತೇವೆ ಎನ್ನುವುದಲ್ಲ, ಬದಲಿಗೆ ಎಷ್ಟು ಜನರಿಗೆ ನಮ್ಮ ಬಗ್ಗೆ ಮತ್ತು ನಮ್ಮ ಸಾಮರ್ಥ್ಯದ ಬಗ್ಗೆ ತಿಳಿದಿದೆ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. Networking is not about who you know, it's about who knows you ಎಂಬ ಈ ಜನಪ್ರಿಯ ಮಾತನ್ನು ಅರ್ಥ ಮಾಡಿಕೊಂಡವರು ಕಮ್ಮಿ. ನಾವು ನೂರಾರು ಗಣ್ಯ ವ್ಯಕ್ತಿಗಳ ಫೋನ್ ನಂಬರ್ ಹೊಂದಿರಬಹುದು ಅಥವಾ ಅವರೊಂದಿಗೆ ಫೋಟೋ ತೆಗೆಸಿಕೊಂಡಿರಬಹುದು. ಆದರೆ, ನಮಗೆ ಯಾವುದಾದರೂ ತುರ್ತು ಕೆಲಸ ಬಂದಾಗ ಅಥವಾ ಒಂದು ಅವಕಾಶದ ಅಗತ್ಯವಿದ್ದಾಗ ಅವರು ನಮ್ಮನ್ನು ನೆನಪಿಸಿಕೊಳ್ಳುತ್ತಾರೆಯೇ? ಎಂಬುದು ಮುಖ್ಯ. ನಮಗೆ ಯಾರು ಗೊತ್ತು ಎನ್ನುವುದಕ್ಕಿಂತ, ಅವರಿಗೆ ನಾವು ಯಾರು ಎಂದು ತಿಳಿದಿದೆಯೇ? ಎನ್ನುವುದು ನೆಟ್ ವರ್ಕಿಂಗ್‌ನ ನಿಜವಾದ ಯಶಸ್ಸು. ನೀವು ಒಂದು ಕ್ಷೇತ್ರದಲ್ಲಿ ನೈಪುಣ್ಯ ಹೊಂದಿದ್ದೀರಿ ಎಂದು ಜನರಿಗೆ ತಿಳಿದಾಗ ಮಾತ್ರ ಅವರು ನಿಮ್ಮನ್ನು ಹುಡುಕಿಕೊಂಡು ಬರುತ್ತಾರೆ. ಉದಾಹರಣೆಗೆ, ನೀವು ಒಬ್ಬ ಉತ್ತಮ ಗ್ರಾಫಿಕ್ ಡಿಸೈನರ್ ಆಗಿದ್ದರೆ, ಮಾರುಕಟ್ಟೆಯಲ್ಲಿ ಯಾರಿಗಾದರೂ ಡಿಸೈನ್ ಕೆಲಸ ಬೇಕಾದಾಗ ತಕ್ಷಣ ನಿಮ್ಮ ಹೆಸರು ಅವರ ನೆನಪಿಗೆ ಬರಬೇಕು. ನಿಮ್ಮ ಕೆಲಸದ ಗುಣಮಟ್ಟ ಮತ್ತು ನಿಮ್ಮ ವ್ಯಕ್ತಿತ್ವವೇ ನಿಮ್ಮನ್ನು ಇತರರಿಗೆ ಪರಿಚಯಿಸುತ್ತದೆ. ಜನರು ನಮ್ಮನ್ನು ನೆನಪಿಟ್ಟುಕೊಳ್ಳಬೇಕಾದರೆ ನಾವು ಅವರ ಜೀವನಕ್ಕೆ ಅಥವಾ ಕೆಲಸಕ್ಕೆ ಏನಾದರೂ ಮೌಲ್ಯವನ್ನು ನೀಡಬೇಕು. ಸುಮ್ಮನೆ ಹಾಯ್, ಹಲೋ ಹೇಳುವುದರಿಂದ ನೆಟ್ ವರ್ಕಿಂಗ್ ಬೆಳೆಯುವುದಿಲ್ಲ. ಬದಲಿಗೆ ಇತರರಿಗೆ ಸಹಾಯ ಮಾಡುವುದು, ನಿಮ್ಮ ಜ್ಞಾನವನ್ನು ಹಂಚಿಕೊಳ್ಳುವುದು, ಸರಿಯಾದ ಸಮಯದಲ್ಲಿ ಸರಿಯಾದ ಸಲಹೆ ನೀಡುವುದು.. ಈ ರೀತಿ ನೀವು ಇತರರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆಯಬಹುದು. 'ಯಾರು ನಿಮ್ಮನ್ನು ಬಲ್ಲರು' ಎಂಬುದು ನಿಮ್ಮ ವಿಶ್ವಾಸಾರ್ಹತೆ ಮೇಲೆ ನಿಂತಿದೆ. ನೀವು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಮತ್ತು ನಿಮ್ಮ ಮಾತು ಉಳಿಸಿಕೊಂಡರೆ, ನಿಮ್ಮ ನೆಟ್‌ವರ್ಕ್‌ನಲ್ಲಿರುವವರು ನಿಮ್ಮ ಹೆಸರನ್ನು ಇತರರಿಗೆ ಶಿಫಾರಸು ಮಾಡುತ್ತಾರೆ. ಒಬ್ಬರಿಂದ ಒಬ್ಬರಿಗೆ ಹರಡುವ ನಿಮ್ಮ ಒಳ್ಳೆಯ ಹೆಸರೇ ಅತ್ಯಂತ ದೊಡ್ಡ ನೆಟ್ ವರ್ಕಿಂಗ್ ಶಕ್ತಿ. 'ಪರಿಚಯಗಳ ಸಂಗ್ರಹಕ್ಕಿಂತ ಪ್ರಭಾವದ ಸೃಷ್ಟಿ' ಮುಖ್ಯ. ನೀವು ಯಾರನ್ನೋ ಬಲ್ಲೆ ಎಂದು ಹೆಮ್ಮೆಪಡುವುದಕ್ಕಿಂತ, ಸಮಾಜ ಅಥವಾ ನಿಮ್ಮ ವೃತ್ತಿಕ್ಷೇತ್ರ ನಿಮ್ಮನ್ನು ಒಬ್ಬ ದಕ್ಷ ಮತ್ತು ನಂಬಿಕಸ್ತ ವ್ಯಕ್ತಿಯಾಗಿ ಗುರುತಿಸುವಂತೆ ಮಾಡುವುದೇ ನಿಜವಾದ ನೆಟ್ ವರ್ಕಿಂಗ್. ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರಬೇಕಾದರೆ, ನೀವು ಯಾರೆಂದು ಜಗತ್ತಿಗೆ ತಿಳಿದಿರಬೇಕು. ನಮ್ಮ ಫೋನ್‌ನಲ್ಲಿ ಸಾವಿರಾರು ಕಾಂಟ್ಯಾಕ್ಟ್‌ಗಳಿರಬಹುದು, ಆದರೆ ಸಂಕಷ್ಟದ ಸಮಯದಲ್ಲಿ ಅಥವಾ ಹೊಸ ಉದ್ಯಮ ಆರಂಭಿಸುವಾಗ ಎಷ್ಟು ಜನ ನಮಗಾಗಿ ನಿಲ್ಲುತ್ತಾರೆ ಎಂಬುದು ಮುಖ್ಯ. ಸಾವಿರ ಜನರಿಗೆ ನಿಮ್ಮ ಮುಖ ತಿಳಿದಿರುವುದಕ್ಕಿಂತ, ಹತ್ತು ಜನರಿಗೆ ನಿಮ್ಮ ಶಕ್ತಿ ಮತ್ತು ಬದ್ಧತೆ ತಿಳಿದಿರುವುದು ಹೆಚ್ಚು ಪ್ರಯೋಜನಕಾರಿ. ಬಲವಾದ ನೆಟ್ ವರ್ಕಿಂಗ್ ಎಂದರೆ ಸಂಖ್ಯೆಯನ್ನು ಹೆಚ್ಚಿಸುವುದಲ್ಲ, ಬದಲಿಗೆ ಗಾಢವಾದ ಸಂಬಂಧಗಳನ್ನು ಬೆಳೆಸುವುದು. ಯಾರೋ ಒಬ್ಬರು ಇನ್ನೊಬ್ಬರ ಮುಂದೆ ನಿಮ್ಮ ಬಗ್ಗೆ ಮಾತನಾಡುವಾಗ, 'ಅವರು ಈ ಕೆಲಸಕ್ಕೆ ಅತ್ಯಂತ ಸೂಕ್ತ ವ್ಯಕ್ತಿ' ಎಂದು ಹೇಳಿದರೆ, ಅದು ನೀವು ಗಳಿಸಿದ ಅತಿದೊಡ್ಡ ಆಸ್ತಿ. ನೀವು ಇಲ್ಲದಿದ್ದಾಗಲೂ ನಿಮ್ಮ ಪರವಾಗಿ ನಿಮ್ಮ ಕೆಲಸ ಅಥವಾ ವ್ಯಕ್ತಿತ್ವ ಮಾತನಾಡಬೇಕು. 'Who knows you' ಎಂಬುದು ಇಲ್ಲಿ ನಿಮ್ಮ ಖ್ಯಾತಿ ಆಗಿ ಬದಲಾಗುತ್ತದೆ. ಬಲವಾದ ನೆಟ್‌ವರ್ಕ್ ಕೇವಲ ಪಡೆಯುವುದರ ಬಗ್ಗೆ ಇರುವುದಿಲ್ಲ, ಅದು ಕೊಡುವುದರ ಬಗ್ಗೆಯೂ ಇರುತ್ತದೆ. ಇತರರಿಗೆ ಸಹಾಯ ಮಾಡುವ ಗುಣ ನಿಮ್ಮಲ್ಲಿದ್ದರೆ, ಜನರು ನಿಮ್ಮನ್ನು ಕೃತಜ್ಞತೆಯಿಂದ ನೆನಪಿಟ್ಟುಕೊಳ್ಳುತ್ತಾರೆ. ಜನರು ತಮ್ಮನ್ನು ಯಾರು ಬೆಳೆಸಿದರೋ ಅಥವಾ ಯಾರಿಂದ ತಾವು ಉಪಕೃತರಾದರೋ ಅವರನ್ನು ಎಂದಿಗೂ ಮರೆಯುವುದಿಲ್ಲ. ನಿಮ್ಮ ಜ್ಞಾನ ನಿಮ್ಮನ್ನು ದಾರಿಯವರೆಗೆ ಕರೆದುಕೊಂಡು ಹೋದರೆ, ನಿಮ್ಮನ್ನು ಬಲ್ಲವರು ಮತ್ತು ನಿಮ್ಮನ್ನು ಗೌರವಿಸುವವರು ನಿಮ್ಮನ್ನು ಗುರಿಯವರೆಗೆ ತಲುಪಿಸುತ್ತಾರೆ. ನಿಮ್ಮ ನೆಟ್‌ವರ್ಕ್ ನಿಮ್ಮ 'ನೆಟ್ ವರ್ತ್' ಇದ್ದಂತೆ!

ಪರೀಕ್ಷೆ ನಡೆಸೋದು ಬರೀ ಪಾಸ್ ಮಾಡೋಕಲ್ಲ!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ಬದಲಾವಣೆ ಜಗದ ನಿಯಮ. ಆದರೆ ಯಾವುದೇ ಬದಲಾವಣೆ ನೈಜವಾಗಿ ಆಗಬೇಕಾದ ಕನಿಷ್ಠ ಸಮಯ ಸರ್ವೇ ಸಾಮಾನ್ಯ. ಆದರೆ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಂದಿರುವ ಐತಿಹಾಸಿಕ ಫಲಿತಾಂಶ ನೈಜವಾಗಿ ಆಗಿರುವ ಪ್ರಕ್ರಿಯೆಯೇ ಎನ್ನುವ ಪ್ರಶ್ನೆಯನ್ನು ಕೇಳಿದಾಗ ಸರಕಾರ, ಸಚಿವ ಮಧು ಬಂಗಾರಪ್ಪ, ಇಲಾಖೆ ಅಧಿಕಾರಿಗಳು ಹೌದು ಎನ್ನುವ ಉತ್ತರ ನೀಡುತ್ತಿದ್ದಾರೆ ಹೊರತು, ಶಿಕ್ಷಕರು ಹಾಗೂ ಶೈಕ್ಷಣಿಕ ಕ್ಷೇತ್ರದ ತಜ್ಞರನ್ನು ಕೇಳಿದಾಗ ಇಲ್ಲ ಎನ್ನುವವರ ಸಂಖ್ಯೆಯೇ ಹೆಚ್ಚಾಗಿದೆ.

ಕಳೆದ ವಾರ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆ 1ರ ಫಲಿತಾಂಶವೇ ಸದ್ಯ ರಾಜ್ಯದ ಹಾಟ್ ಟಾಪಿಕ್ ಎಂದರೆ ತಪ್ಪಾಗುವುದಿಲ್ಲ. ತೃತೀಯ ಭಾಷಾ ಪರೀಕ್ಷೆ ಎರಡು ದಿನ ಬಾಕಿಯಿರುವಾಗ ಅಂಕದ ಬದಲು ಗ್ರೇಡಿಂಗ್ ವ್ಯವಸ್ಥೆಯ ಘೋಷಣೆ, ಬಳಿಕ ಹೈಕೋರ್ಟ್ ಮಧ್ಯಪ್ರವೇಶ, ಪುನಃ ಗ್ರೇಡ್ ಬದಲು ಅಂಕ ನೀಡಲು ಹೈಕೋರ್ಟ್ ಸೂಚನೆ, ಅದಕ್ಕೆ ಸರಕಾರದ ಮೇಲ್ಮನವಿಯ ಸರ್ಕಸ್ ಎಲ್ಲದರ ಹೊರತಾಗಿ ಫಲಿತಾಂಶ ಪ್ರಕಟವಾಗಿದೆ. ಈ ಎಲ್ಲ ಗೊಂದಲಗಳ ಹೊರತಾಗಿಯೂ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಸುದ್ದಿಗೋಷ್ಠಿಯಲ್ಲಿ ರಾಜ್ಯದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಪೈಕಿ ಶೇ.94ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ ಎಂದು ಘೋಷಿಸಿದರು. ಇನ್ನೊಂದು ರೀತಿ ಹೇಳುವುದಾದರೆ ಪರೀಕ್ಷೆ ಬರೆದಿದ್ದ 7.70 ಲಕ್ಷ ವಿದ್ಯಾರ್ಥಿಗಳ ಪೈಕಿ 45ಸಾವಿರ ಚಿಲ್ಲರೆ ವಿದ್ಯಾರ್ಥಿಗಳು ಮಾತ್ರ ಫೇಲಾಗಿದ್ದಾರೆ ಎನ್ನುವುದು. ಅದರಲ್ಲಿಯೂ ಮೊದಲ ಸ್ಥಾನದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರೀಕ್ಷೆ ಬರೆದಿದ್ದ 27,707 ವಿದ್ಯಾರ್ಥಿಗಳ ಪೈಕಿ 400 ಚಿಲ್ಲರೆ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಇನ್ನು ಕಳೆದ ವರ್ಷ ಶೇ.60ರಷ್ಟು ಪಾಸಿಂಗ್‌ನೊಂದಿಗೆ ಕೊನೆಯ ಸ್ಥಾನದಲ್ಲಿದ್ದ ಯಾದಗಿರಿಯಲ್ಲಿ ಏಕಾಏಕಿ ಶೇ.30ರಷ್ಟು ಪಾಸಿಂಗ್ ಪರ್ಸೆಂಟ್ ಹೆಚ್ಚಾಗಿದೆ. ಈ ಬಾರಿ ಕೊನೆಯ ಸ್ಥಾನಕ್ಕೆ ಕುಸಿದಿರುವ ಕಲಬುರಗಿಯೂ ಶೇ.86ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ!

ಇನ್ನು ವೈಯಕ್ತಿಕವಾಗಿ ವಿದ್ಯಾರ್ಥಿಗಳ ಫಲಿತಾಂಶವನ್ನು ಗಮನಿಸುವುದಾದರೆ 625ಕ್ಕೆ 625 ಅಂಕ ಪಡೆದವರ ಸಂಖ್ಯೆ ಏಳರಲ್ಲಿದೆ. 624 ಅಂಕವನ್ನು 32 ವಿದ್ಯಾರ್ಥಿಗಳು, 623 ಅಂಕವನ್ನು 28 ವಿದ್ಯಾರ್ಥಿಗಳು, 622 ಅಂಕವನ್ನು 74 ವಿದ್ಯಾರ್ಥಿಗಳು, 621 ಅಂಕವನ್ನು 98 ವಿದ್ಯಾರ್ಥಿಗಳು, 620 ಅಂಕವನ್ನು 150 ವಿದ್ಯಾರ್ಥಿಗಳು ಪಡೆದಿದ್ದಾರೆ. ಮಧು ಬಂಗಾರಪ್ಪನವರು ಈ ಫಲಿತಾಂಶವನ್ನು ಪ್ರಕಟಿಸುತ್ತಿದ್ದಂತೆ ರಾಜ್ಯದ ಬಹುತೇಕರು ಖುಷಿ ಪಡುವುದಕ್ಕಿಂತ ಅಚ್ಚರಿಗೆ ಒಳಗಾದರು. ಏಕೆಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.30ರಷ್ಟು ಹೆಚ್ಚುವರಿ ಫಲಿತಾಂಶ ಪ್ರಕಟವಾಗಿದೆ. ಈ ಪ್ರಮಾಣದಲ್ಲಿ ಫಲಿತಾಂಶದ ಏರಿಕೆಗೆ ಸುಮಾರು 10 ಪುಟಗಳ ಸುದೀರ್ಘ ಆಕ್ಷನ್ ಪ್ಲಾನ್‌ಅನ್ನು ಸಚಿವರು ಹಾಗೂ ಇಲಾಖೆ ನೀಡಿದೆ. ಆದರೆ, ಈ ಪ್ಲಾನ್ ತಳಮಟ್ಟದಲ್ಲಿ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎನ್ನುವ ಪ್ರಶ್ನೆಗೆ ಬಹುತೇಕರ ಬಳಿ ಉತ್ತರವಿಲ್ಲ. ಅಷ್ಟಾದರೂ, ಭಾರಿ ಫಲಿತಾಂಶ ಸಿಕ್ಕಿರುವ ಹಿಂದಿನ ಮರ್ಮವೇನು? ಎನ್ನುವುದು ಬಹುತೇಕರ ಕುತೂಹಲ!

ಫಲಿತಾಂಶವನ್ನು ಇನ್ನಷ್ಟು ಸೂಕ್ಷ್ಮವಾಗಿ ನೋಡುವುದಾದರೆ, ತೀವ್ರ ಗೊಂದಲಕ್ಕೆ ಕಾರಣವಾಗಿರುವ ತೃತೀಯ ಭಾಷಾ ಫಲಿತಾಂಶವನ್ನು ಹೈಕೋರ್ಟ್ ಸೂಚನೆಯಂತೆ ಅಂಕದ ಆಧಾರದಲ್ಲಿ ನೀಡಲಾಗಿದೆ. ಒಂದು ವೇಳೆ ಗ್ರೇಡಿಂಗ್‌ನಲ್ಲಿಯೇ ಮುಂದುವರೆದಿದ್ದರೆ ಮತ್ತೆ 16ರಿಂದ 17 ಸಾವಿರ ವಿದ್ಯಾರ್ಥಿಗಳು ಪಾಸಾಗುತ್ತಿದ್ದರು. ಅಂದರೆ, ಫೇಲಾದವರ ಸಂಖ್ಯೆ 30 ಸಾವಿರದ ಆಸುಪಾಸಿಗೆ ಬಂದು ನಿಲ್ಲುತ್ತಿತ್ತು. ಅಂದರೆ ಪರೀಕ್ಷೆ ನಡೆಸುವ ಉದ್ದೇಶ, ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಒರೆಗಲ್ಲಿಗೆ ಹಚ್ಚುವುದೇ ಅಥವಾ ಪಾಸ್ ಮಾಡುವುದೇ? ಪಾಸ್ ಮಾಡುವುದೇ ಉದ್ದೇಶವಾದರೆ, ಈ ಪ್ರಮಾಣದಲ್ಲಿ ಕಷ್ಟಪಟ್ಟು ಪರೀಕ್ಷೆಗಳನ್ನು ನಡೆಸುವುದೇಕೆ? ಎನ್ನುವ ಪ್ರಶ್ನೆಗಳು ಏಳುತ್ತಿವೆ.

ಹಾಗೆ ನೋಡಿದರೆ, 10ರಿಂದ 15 ವರ್ಷದ ಹಿಂದಿನ ಫಲಿತಾಂಶವನ್ನು ಗಮನಿಸಿದರೆ ಭಾರಿ ಪ್ರಮಾಣದಲ್ಲಿ ಬದಲಾವಣೆಯಾಗಿದೆ ಎನ್ನುವುದು ಸ್ಪಷ್ಟ. ಒಟ್ಟಾರೆ ರಾಜ್ಯದ ಫಲಿತಾಂಶ ಶೇ.65ರಷ್ಟು ದಾಟಿದರೆ ಬಹುದೊಡ್ಡ ಸಾಧನೆ ಎನ್ನಲಾಗುತ್ತಿತ್ತು. ಇದಿಷ್ಟೇ ಅಲ್ಲದೇ, ವೈಯಕ್ತಿಕವಾಗಿಯೂ ವಿದ್ಯಾರ್ಥಿಗಳು ಶೇ.70ರಷ್ಟು ಅಥವಾ ಪ್ರಥಮ ಶ್ರೇಣಿ ಪಾಸಾದರೆ ಬಹುದೊಡ್ಡ ಸಾಧನೆ ಎನ್ನುವಂತಾಗಿತ್ತು. ಆದರೀಗ ಉತ್ತಮ ಶ್ರೇಣಿ(ಶೇ.75ರಷ್ಟು ಮೇಲ್ಪಟ್ಟು) ಪಡೆದ ವಿದ್ಯಾರ್ಥಿಗಳ ಸಂಖ್ಯೆಯೇ ಶೇ.25ರಿಂದ 30ರ ಆಸುಪಾಸಿನಲ್ಲಿದೆ. ಇನ್ನು ಪ್ರಥಮ ಶ್ರೇಣಿಯಲ್ಲಿ ಶೇ.40ರಿಂದ 45ರಷ್ಟಿದೆ. ಹಾಗೆಂದು, ಈ ಪ್ರಮಾಣದಲ್ಲಿ ಫಲಿತಾಂಶ ಸುಧಾರಿಸಲು, ಶೈಕ್ಷಣಿಕವಾಗಿ ಕ್ರಾಂತಿಕಾರಕ ಬದಲಾವಣೆಯಾಗಿದೆ ಅಥವಾ ಕ್ವಾಲಿಟಿಯಲ್ಲಿ ಬಹುದೊಡ್ಡ ಬದಲಾವಣೆ ಎನ್ನುವ ಮಾತನ್ನು ಈಗಲೂ ಶಿಕ್ಷಕರಾಗಲಿ, ಶಿಕ್ಷಣ ತಜ್ಞರಾಗಲಿ ಒಪ್ಪುತ್ತಿಲ್ಲ. ಇದೇ ವರ್ಷದ ಉದಾಹರಣೆ ಕೊಟ್ಟು ಹೇಳುವುದಾದರೆ, ಖಾಸಗಿ ಶಾಲೆಯೊಂದರಲ್ಲಿ ಅಭ್ಯಾಸ ಮಾಡಿದ್ದ ವಿದ್ಯಾರ್ಥಿ ಆ ಶಾಲೆಯ ನಾಲ್ಕು ಆಂತರಿಕ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಫೇಲಾಗಿದ್ದ. ಆದ್ದರಿಂದ ಆ ಶಾಲೆಯ ಆಡಳಿತ ಮಂಡಳಿ ಆ ವಿದ್ಯಾರ್ಥಿಯ ಫಲಿತಾಂಶದಲ್ಲಿ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಆದರೆ, ಕಳೆದ ವಾರದ ಪ್ರಕಟವಾದ ಫಲಿತಾಂಶದಲ್ಲಿ ಅದೇ ವಿದ್ಯಾರ್ಥಿ ಶೇ.92–93ರ ಆಸುಪಾಸಿನಲ್ಲಿ ಪಾಸಾಗಿದ್ದಾನೆ! ಈ ವಿಷಯವನ್ನು ಸ್ವತಃ ಆ ಶಾಲೆಯ ಮುಖ್ಯಸ್ಥರೇ ಹಂಚಿಕೊಂಡಿದ್ದರು. ಮುಖ್ಯ ಪರೀಕ್ಷೆಯ ಹಿಂದಿನ ವಾರ ನಡೆದ ಪರೀಕ್ಷೆಯಲ್ಲಿಯೂ ಫೇಲಾಗಿದ್ದ ವಿದ್ಯಾರ್ಥಿ ಪರೀಕ್ಷೆಯಲ್ಲಿ ಶೇ.50–60ರಷ್ಟು ಅಂಕ ಪಡೆದಿದ್ದಾನೆ ಎಂದರೆ ಅದು ಆ ವಿದ್ಯಾರ್ಥಿ, ಪೋಷಕರ ಶ್ರಮ ಎನ್ನಬಹುದು. ಆದರೆ ಏಕಾಏಕಿ ಶೇ.90ರಷ್ಟು ಫಲಿತಾಂಶ ಬಂದಿದೆ ಎಂದರೆ ಅದು ಇಡೀ ಪ್ರಕ್ರಿಯೆಯ ಮೇಲೆ ಅನುಮಾನ ತರುವುದು ಸಹಜ. ಇಂತಹ ಹತ್ತಾರು ಅಚ್ಚರಿಯ ಫಲಿತಾಂಶಗಳು ಈ ಬಾರಿಯ ಪರೀಕ್ಷೆಯಲ್ಲಿ ಉದಾಹರಣೆ ಕೊಟ್ಟು ಹೇಳಬಹುದು.

ಹಾಗಾದರೆ, ನಾಲ್ಕು ಬಾರಿ ಫೇಲಾಗಿದ್ದ ವಿದ್ಯಾರ್ಥಿ ಉತ್ತಮ ಅಂಕ ಪಡೆಯುವುದು ತಪ್ಪೇ? ಎನ್ನುವ ಪ್ರಶ್ನೆ ಬರಬಹುದು. ಶಾಲೆಯಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿ ಎಷ್ಟು ಅಂಕಗಳಿಸಬಹುದು ಎಂದು ವಿದ್ಯಾರ್ಥಿಗಿಂತ ಹೆಚ್ಚಾಗಿ ಆ ಶಾಲೆಯ ಶಿಕ್ಷಕರಿಗೆ, ಆಡಳಿತ ಮಂಡಳಿಗೆ ಸ್ಪಷ್ಟ ಚಿತ್ರಣವಿರುತ್ತದೆ. ಶಿಕ್ಷಕರ ನಿರೀಕ್ಷೆಯನ್ನು ಮೀರಿ ಆ ವಿದ್ಯಾರ್ಥಿ ಉತ್ತಮ ಅಂಕ ಪಡೆದಿದ್ದರೆ ನಿಜಕ್ಕೂ ಶಹಬಾಸ್‌ಗಿರಿ ಕೊಡೋಣ. ಆದರೆ ಈ ಪ್ರಮಾಣದಲ್ಲಿ ಅಜಗಜಾಂತರ ಅಂಕಗಳು ಪರೀಕ್ಷಾ ಪ್ರಕ್ರಿಯೆಯಿಂದ ಸಿಗುವುದು ಸರಿಯಲ್ಲ ಎನ್ನುವುದಷ್ಟೇ ಎಲ್ಲರ ಕಾಳಜಿ. ಏಕೆಂದರೆ, ಗೊತ್ತಿದ್ದೋ ಗೊತ್ತಿಲ್ಲದೆಯೋ ಕರ್ನಾಟಕದ ಶಿಕ್ಷಣ ವ್ಯವಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಪಡೆಯುವ ಅಂಕದ ಆಧಾರದಲ್ಲಿ ಪಿಯುಸಿಯಲ್ಲಿ ಯಾವ ವಿಭಾಗ ಪಡೆಯಬೇಕು ಎನ್ನುವುದನ್ನು ಬಹುತೇಕ ಸನ್ನಿವೇಶದಲ್ಲಿ ನಿರ್ಧಾರವಾಗುತ್ತದೆ. ಹೀಗಿರುವಾಗ, ವಿದ್ಯಾರ್ಥಿ ಭಾರಿ ಅಂಕ ಪಡೆದ ಎನ್ನುವ ಉತ್ಸಾಹದಲ್ಲಿ ಆತನಿಗೆ ಇಷ್ಟವೇ ಇಲ್ಲದ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದು ಅಲ್ಲಿ ಅನಿವಾರ್ಯವಾಗಿ ಓದಬೇಕಾದ ಸ್ಥಿತಿ ನಿರ್ಮಾಣವಾಗಬಾರದು. ಇದರೊಂದಿಗೆ ಯಾವುದೋ ಕಾರಣಕ್ಕೆ ಭಾರಿ ಅಂಕ ಪಡೆದ ವಿದ್ಯಾರ್ಥಿಯಿಂದ ಇನ್ನೊಬ್ಬ ಅರ್ಹ ವಿದ್ಯಾರ್ಥಿಗೆ ಸೀಟು ತಪ್ಪುವ ಸಾಧ್ಯತೆಯಿರುತ್ತದೆ. ಈ ಎರಡರಲ್ಲಿ ಯಾವುದೇ ಆದರೂ ಅದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಬಹುದೊಡ್ಡ ಹೊಡೆತ ಎನ್ನುವುದು ಸತ್ಯ.

10ನೇ ತರಗತಿಯಲ್ಲಿ ಈ ಪ್ರಮಾಣದ ಫಲಿತಾಂಶ ಬಂದಿರುವುದರ ಮತ್ತೊಂದು ಸೈಡ್ ಎಫೆಕ್ಟ್ ಬಗ್ಗೆ ಸರಕಾರವಾಗಲಿ, ಸಚಿವರಾಗಲಿ ಆಲೋಚನೆ ಮಾಡಿದಂತಿಲ್ಲ. ಅದೇನೆಂದರೆ, ಈ ಬಾರಿ ಪರೀಕ್ಷೆ ಬರೆದಿದ್ದ 7.70 ಲಕ್ಷ(ಮೊದಲ ಬಾರಿಗೆ

ಬರೆದವರು) ವಿದ್ಯಾರ್ಥಿಗಳ ಪೈಕಿ 7.24 ಲಕ್ಷ ವಿದ್ಯಾರ್ಥಿಗಳು ಪಾಸಾಗಿದ್ದರೆ, 45 ಸಾವಿರ ವಿದ್ಯಾರ್ಥಿಗಳು ಫೇಲಾದರು. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶಕ್ಕೂ ಮೊದಲು ಪ್ರಕಟವಾದ ಪಿಯುಸಿ ಫಲಿತಾಂಶದ ಅಂಕಿ–ಅಂಶ ನೋಡಬೇಕಿದೆ. ಪಿಯುಸಿಯಲ್ಲಿ ಈ ಬಾರಿ ಸುಮಾರು 6.3 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, ಪಾಸಾದವರ ಸಂಖ್ಯೆ 4.6ಲಕ್ಷದ ಆಸುಪಾಸಿನಲ್ಲಿ, ಅಂದರೆ, ಕಳೆದ ವರ್ಷ ಕರ್ನಾಟಕದಲ್ಲಿ ಪಿಯುಸಿ ಕಾಲೇಜಿನಲ್ಲಿದ್ದ ಸೀಟುಗಳ ಸಂಖ್ಯೆಯೇ 6.3 ಲಕ್ಷ ಚಿಲ್ಲರೆ. ಆದರೆ ಈ ಬಾರಿ ಸುಮಾರು 7.20 ಲಕ್ಷ ಮೊದಲ ಬಾರಿಗೆ ಪರೀಕ್ಷೆ ಬರೆದ ವಿದ್ಯಾರ್ಥಿಗಳೇ ಪಾಸಾಗಿದ್ದರೆ. ಇದರೊಂದಿಗೆ ಸಿಬಿಎಸ್‌ಸಿ ಪರೀಕ್ಷೆ ಬರೆದವರು, ಒಂದು ವರ್ಷ ಫೇಲಾಗಿ ಈ ಬಾರಿ ಪಾಸಾಗಿರುವವರು, ಖಾಸಗಿಯಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳನ್ನು ಲೆಕ್ಕಹಾಕಿದರೆ ಸರಿಸುಮಾರು ಎಂಟು ಲಕ್ಷಕ್ಕೆ ಬಂದು ತಲುಪಲಿದೆ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಸುಮಾರು ಒಂದುವರೆ ಲಕ್ಷಕ್ಕೂ ಹೆಚ್ಚು ಪಿಯುಸಿ ಸೀಟುಗಳನ್ನು ಈ ಬಾರಿ ಹೆಚ್ಚಿಸಬೇಕಿದೆ. ಈ ಹೆಚ್ಚುವರಿ ಸೀಟುಗಳನ್ನು ಎಲ್ಲಿಂದ ಹೊಂದಾಣಿಕೆ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಇಲಾಖೆಯ ಬಳಿ ಉತ್ತರವಿಲ್ಲ.

ಫಲಿತಾಂಶ ಹೆಚ್ಚಾಗಿರುವಷ್ಟೇ ಪ್ರಮಾಣದಲ್ಲಿ ಪಿಯುಸಿ ಪ್ರವೇಶವನ್ನು ಹೆಚ್ಚಿಸಬೇಕಾದ ಒತ್ತಡದಲ್ಲಿ ಸರಕಾರ ಸಿಲುಕಿದೆ. ಹಾಗೆಂದು, ಸರಕಾರಿ ಪಿಯು ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ ಏರಿಸುವುದಕ್ಕೆ ಉಪನ್ಯಾಸಕರ ಕೊರತೆ ಸಹಜವಾಗಿಯೇ ಕಾಡುತ್ತದೆ. ಈಗಲೇ ಅನೇಕ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ನಡೆಯುತ್ತಿದೆ. ಹೀಗಿರುವಾಗ, ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದರೆ ಯಾವ ರೀತಿಯ ಶಿಕ್ಷಣ ನೀಡಲು ಸಾಧ್ಯ? ಅದರಲ್ಲಿಯೂ ವಿಜ್ಞಾನ ವಿಭಾಗದಲ್ಲಿರುವ ಪ್ರಾಕ್ಟಿಕಲ್ ಕ್ಲಾಸ್‌ಗಳನ್ನು ಯಾವ ರೀತಿ ನಿಭಾಯಿಸುತ್ತಾರೆ ಎನ್ನುವುದಕ್ಕೆ ಉತ್ತರವಿಲ್ಲ. ಇದರಿಂದಾಗಿ ಸರಕಾರವೂ ಅನಿವಾರ್ಯವಾಗಿ ಹೆಚ್ಚುವರಿ ಪ್ರವೇಶ ಪಡೆಯುವುದಕ್ಕೆ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಲೇಬೇಕಾಗುತ್ತದೆ. ಸಹಜವಾಗಿಯೇ ಖಾಸಗಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಆದರೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಏರಿಸಿದಷ್ಟೇ ಪ್ರಮಾಣದಲ್ಲಿ ಉಪನ್ಯಾಸಕರ ಸಂಖ್ಯೆ ಏರಿಸಲು ಸಾಧ್ಯವೇ? ಏಕಾಏಕಿ ಮೂರು ತಿಂಗಳಲ್ಲಿ ಅರ್ಹ ಉಪನ್ಯಾಸಕರು ಸಿಗಲು ಸಾಧ್ಯವೇ? ಎನ್ನುವ ಪ್ರಶ್ನೆಗಳಿಗೆಲ್ಲ ಉತ್ತರ ಮೌನವಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಾಗಲಿ, ದ್ವಿತೀಯ ಪಿಯುಸಿಯಾಗಲಿ ಪರೀಕ್ಷೆಯನ್ನು ನಡೆಸುವುದೇ ವಿದ್ಯಾರ್ಥಿಗಳನ್ನು ಪಾಸು ಮಾಡುವುದಕ್ಕೆ ಎನ್ನುವ ಅರ್ಥದಲ್ಲಿ ಶಿಕ್ಷಣ ಸಚಿವರು ಹಲವು ಬಾರಿ ಮಾತನಾಡಿದ್ದಾರೆ. ದೇಶದಲ್ಲಿಯೇ ಮೊದಲ ಬಾರಿಗೆ ಮೂರನೇ ಪರೀಕ್ಷೆಯ ಪರಿಕಲ್ಪನೆಯನ್ನು ಜಾರಿಗೊಳಿಸಿದಾಗಲೂ, ಮಕ್ಕಳು ಫೇಲಾಗಿ ಮನೆಯಲ್ಲಿರುವುದಕ್ಕಿಂತ ಪಾಸಾಗಲು ಹೆಚ್ಚುವರಿ ಅವಕಾಶ ನೀಡುತ್ತೇವೆ ಎನ್ನುವ ಸಮರ್ಥನೆಯನ್ನು ನೀಡಿದ್ದರು. ವಿದ್ಯಾರ್ಥಿಗಳು ಫೇಲಾಗಿ ಒಂದು ವರ್ಷ ವ್ಯರ್ಥ ಮಾಡಿಕೊಳ್ಳುವುದಕ್ಕಿಂತ ಮುಂದಿನ ಶಿಕ್ಷಣದ ದಾರಿಯಲ್ಲಿ ಸಾಗುವುದಕ್ಕೆ ಅವಕಾಶ ನೀಡುವುದು ಕೆಟ್ಟ ಆಲೋಚನೆಯಲ್ಲ. ಆದರೆ ವಿದ್ಯಾರ್ಥಿಗಳ ಜೀವನ ಎನ್ನುವ ನೆಪದಲ್ಲಿ ಪಾಸ್ ಮಾಡಿಸಲೇಬೇಕೆಂಬ ಹಠಕ್ಕೆ ಬಿದ್ದು ಪಾಸ್ ಮಾಡುವ, ಕಷ್ಟಬಿದ್ದು ಫೇಲಾಗಬೇಕು ಎನ್ನುವ ವಾತಾವರಣವನ್ನು ಸೃಷ್ಟಿಸುವುದು ಸರಿಯಲ್ಲ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗೆ ಬೇಕಿರುವಷ್ಟು ಕೌಶಲ, ವಿಷಯದ ಮೇಲಿನ ಹಿಡಿತ, ಅಧ್ಯಯನವಿಲ್ಲದ ವಿದ್ಯಾರ್ಥಿಗಳನ್ನು ಸರಕಾರಿ ಪಾಸ್ ಕೋಟದಲ್ಲಿ ಮುಂದಕ್ಕೆ ತಳ್ಳುವುದರಿಂದ ವಿದ್ಯಾರ್ಥಿಗಳು ಅಂಕಪಟ್ಟಿಯಲ್ಲಿ ಪಾಸಾಗಿರುತ್ತಾನೆ ಹೊರತು, ಆತನ ಬುದ್ಧಿಮತ್ತೆಯಲ್ಲಿ ಅಲ್ಲ. ಆದ್ದರಿಂದ ಸರಕಾರ, ಇಲಾಖೆ ಹಾಗೂ ಶಿಕ್ಷಣ ಸಚಿವರು ತಮ್ಮ ಸಾಧನೆಯನ್ನು ತೋರಿಸಲು ಹೋಗಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಮಸ್ಯೆಯಾಗುವಂತಹ ತೀರ್ಮಾನಗಳತ್ತ ನೋಡುವುದು ಸರಿಯಲ್ಲ.

ಕೊನೆಯದಾಗಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುವಂತೆ ಮಾಡುವುದು ಒಂದು ನಿರಂತರ ಪ್ರಕ್ರಿಯೆ. ಒಂದೇ ವರ್ಷದಲ್ಲಿ ಮ್ಯಾಜಿಕ್ ಮಾಡಿ ಭಾರಿ ಫಲಿತಾಂಶ ಪಡೆದರೆ, ಮುಂದಿನ ವರ್ಷವೂ ಅದೇ ಮ್ಯಾಜಿಕ್‌ನ ನಿರೀಕ್ಷೆಯಲ್ಲಿ ಮಕ್ಕಳಿರುತ್ತಾರೆ. ಇದರೊಂದಿಗೆ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳವಾಗಲು ವಿದ್ಯಾರ್ಥಿಗಳಿಗೆ ನೀಡಬೇಕಾದ ಹೆಚ್ಚುವರಿ ತರಬೇತಿ, ಶೈಕ್ಷಣಿಕ ನೆರವನ್ನು ನೀಡುವುದರೊಂದಿಗೆ, ಪಿಯು ಕಾಲೇಜುಗಳಲ್ಲಿನ ಮೂಲ ಸೌಕರ್ಯ, ವಿದ್ಯಾರ್ಥಿಗಳ ಪ್ರವೇಶ ಹೆಚ್ಚಾದರೂ ಮೌಲ್ಯ ಶಿಕ್ಷಣ ನೀಡುವುದಕ್ಕೆ ಬೇಕಾಗಿರುವ ಹೆಚ್ಚುವರಿ ಸಿಬ್ಬಂದಿ ನೇಮಕ ಸೇರಿದಂತೆ ಹತ್ತು ಹಲವು ಕ್ರಮಗಳಿಗೆ ಇಲಾಖೆ ಸಜ್ಜಾಗಬೇಕಿದೆ. ಇದಾಗದೇ ಹೋದರೆ, ಫಲಿತಾಂಶ ನೂರಕ್ಕೆ ನೂರು ಬಂದರೂ, ಒಟ್ಟಾರೆ ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ.

ನರಕದ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳ ಬಲೆಗೆ ಬೀಳದಿರಿ!

ಪದಸಾಗರ

ನವೀನ್ ಸಾಗರ್
vveditoped@gmail.com

ಕಳೆದ ಕೆಲವು ವಾರಗಳಿಂದ ಮತಾಂತರದ ವಿವಿಧ ಬಣ್ಣಗಳು ವಿಪರೀತ ಡಿಸ್ಟರ್ಬ್ ಮಾಡುವಂತಿವೆ. ಟಿಸಿಎಸ್‌ನಲ್ಲಿ ಬೆಳಕಿಗೆ ಬಂದ ಕಾರ್ಪೊರೇಟ್ ಜಿಹಾದ್ ನೋಡಿದಾಗಿನಿಂದ, ಮತಾಂತರದ ಕರಾಳ ರೂಪ ಎಲ್ಲೆಲ್ಲಿ ಹೇಗೇಗೆಲ್ಲ ತನ್ನ ಕೈಗಳನ್ನು ಚಾಚಿ ಹಿಂದೂಸ್ಥಾನವನ್ನು ಆಪೋಶನ ತೆಗೆದುಕೊಳ್ಳುತ್ತಿದೆಯಲ್ಲ ಎಂದು ಭಯವಾಗುತ್ತಿದೆ. ಇತ್ತೀಚೆಗೆ ಕೇರಳ ಸ್ಟೋರಿ–2 ಚಿತ್ರ ತೆರೆಕಂಡಾಗ, ಅದನ್ನು ನೋಡಿ ಬಂದು ಇದು ಪ್ರತಿ ಹಿಂದೂ ಕುಟುಂಬದ ಯುವತಿಯರು ಕಡ್ಡಾಯವಾಗಿ ನೋಡಬೇಕೆಂದು ರೆಕಮೆಂಡ್ ಮಾಡಿದ್ದೆ. ಯಾಕಂದ್ರೆ ಈ ಮತಾಂತರದ ತಕ್ಷಣದ ಬಲಿಗಳೇ ಅವರು. ಕ್ರೈಸ್ತ ಮಿಷನರಿಗಳದ್ದೊಂದು ಥರದ ಮತಾಂತರವಾದರೆ ಮುಸಲ್ಮಾನರ ಮತಾಂತರಜಾಲ ಭಯ ಹುಟ್ಟಿಸುವಂಥದ್ದು. ಅದರ ನಡುವೆ ರವೂಫ್ ಎಂಬ ಮುಸಲ್ಮಾನನೊಬ್ಬ ಹಿಂದೂ ಹೆಸರಿಟ್ಟುಕೊಂಡು ಪತ್ರಕರ್ತನ ಸೋಗಿನಲ್ಲಿ ಸಮಾಜಕ್ಕೆ ಮಾಡಿರುವ ವಂಚನೆ, ಹಿಂದೂ ಯುವತಿಗೆ ಪ್ರೀತಿಯ ಹೆಸರಿನಲ್ಲಿ ಮಾಡಿದ ಮೋಸ ಇವೆಲ್ಲವನ್ನೂ ಗಮನಿಸುತ್ತಾ ಹೋದಂತೆಲ್ಲ ಮತಾಂತರ ಮತ್ತು ಜಿಹಾದ್ ಇವುಗಳ ಗಂಭೀರತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯ ತಕ್ಷಣದಲ್ಲಿ ಮತ್ತು ಬಿರುಸಿನಲ್ಲಿ ನಡೆಯಬೇಕಿದೆ ಎಂದು ಅನಿಸುತ್ತಿದೆ.

ಕೇರಳ ಸ್ಟೋರಿ ಚಿತ್ರಗಳು ಮತಾಂತರ ಮತ್ತು ಲವ್ ಜಿಹಾದ್‌ನ ಆಫ್ಟರ್ ಎಫೆಕ್ಟ್‌ಗಳನ್ನು ಸತ್ಯಘಟನೆಗಳ ಆಧಾರದ ಮೇಲೆಯೇ ಚಿತ್ರಿಸಲಾಗಿತ್ತು. ಆದರೆ ಅದನ್ನು ನಮ್ಮ ಹಿಂದೂ ಜಾತ್ಯತೀತರು, ಪ್ರಗತಿಪರರು ಅಜೆಂಡಾ, ಪ್ರೊಪಗ್ಯಾಂಡ, ಧಾರ್ಮಿಕ ದ್ವೇಷ ಉಂಟು ಮಾಡಲು ಕಟ್ಟಿರುವ ಸುಳ್ಳು ಕಥೆ ಅಂದುಬಿಟ್ಟರು. ಕೇರಳದ ಹೆಣ್ಣು ಮಗಳ ಬ್ರೇನ್ ವಾಷ್ ಮಾಡಿ, ಪ್ರೀತಿ ಬಲೆಯಲ್ಲಿ ಬೀಳಿಸಿ, ಮತಾಂತರಗೊಳಿಸಿ ನಂತರ ಐಸಿಸ್‌ನಲ್ಲಿ ಆತ್ಮಾಹುತಿ ದಳಕ್ಕೆ ದೂಡಿದ ಕಥೆ ಸತ್ಯದ್ದು ಎಂದು ಜಗತ್ತಿಗೆ ಗೊತ್ತು. ಅದೇ ರೀತಿ ಕೇರಳ ಸ್ಟೋರಿಯಲ್ಲಿ ಹೇಳಲಾಗಿರುವ ಪ್ರತಿ ಕಥೆಯೂ ನೈಜಘಟನೆಯ ಪ್ರತಿಬಿಂಬವೇ. ಆದರೆ, ಆ ಚಿತ್ರಗಳು ಹಿಂದೂ ಹೆಣ್ಣುಮಕ್ಕಳನ್ನು ತಲುಪದಂತೆ ತಡೆಯುವ ಶತಪ್ರಯತ್ನ ನಡೆದವು. ಅದರಲ್ಲಿರುವ ಕಥೆ ಸುಳ್ಳು ಎಂದು ನಂಬಿಸುವ ಸಾಹಸ ನಡೆದವು. ಸಿನಿಮಾವನ್ನು ಪ್ರೊಪಗ್ಯಾಂಡ ಅನ್ನುವ ಇವರು ಟಿಸಿಎಸ್ ಘಟನೆಯನ್ನು ಏನೆನ್ನುತ್ತಾರೆ? ಈಗ ಟಿಸಿಎಸ್ ಘಟನೆ ಆಧರಿಸಿ ಸಿನಿಮಾ ಬಂದರೆ ಏನನ್ನುತ್ತಾರೆ? ಹಿಂದೂಗಳಲ್ಲಿರುವ ಸೋ ಕಾಲ್ಡ್ ಪ್ರಗತಿಪರರೇ ಹಿಂದೂ ಧರ್ಮದ ಶತ್ರುಗಳು ಮತ್ತು ವಿನಾಶಕರು. ರವೂಫ್ ಎಂಬಾತ ಹಿಂದೂ ಹೆಸರಿಟ್ಟುಕೊಂಡು, ತಂದೆಯ ಹೆಸರನ್ನೂ ಹಿಂದೂ ಹೆಸರಿಗೆ ಬದಲಿಸಿ ಸಮಾಜವನ್ನು ವಂಚಿಸುತ್ತಿದ್ದರೆ, ಆತನನ್ನು ಬೆಂಬಲಿಸುತ್ತಿರುವವರು ಮುಸಲ್ಮಾನರಲ್ಲ. ಉಂಡಮನೆಯ ನಮ್ಮ ನಡುವಿನ ಗಳಹಿರಿಯುವ ಹಿಂದೂ ಪ್ರಗತಿಪರರೇ.

ಶಾಲಾಕಾಲೇಜುಗಳಲ್ಲಿ, ಖಾಸಗಿ ಕಂಪನಿಗಳಲ್ಲಿ, ಎಲ್ಲೆಂದರಲ್ಲಿ ಮತಾಂತರದ ಬಲೆ ಬೀಸಲಾಗುತ್ತಿದೆ. ಪ್ರೀತಿ ಹೆಸರಿನಲ್ಲಿ ಯುವತಿಯರ ಮನಸು ಕೆಡಿಸಿ ತಮ್ಮೆಡೆಗೆ ಎಳೆದುಕೊಳ್ಳುವ ಜಿಹಾದಿಗಳು ಒಂದೆಡೆಯಾದರೆ, ಮುಸಲ್ಮಾನ ಧರ್ಮದಲ್ಲಿ ಸಮಾನತೆ ಇದೆ, ಜಾತಿಭೇದ ಇಲ್ಲ, ಆರ್ಥಿಕ ಪರಿಸ್ಥಿತಿ ಉನ್ನತವಾಗುತ್ತದೆ ಎಂದೆಲ್ಲ ಆಮಿಷ ತೋರಿಸಿ ಸೆಳೆಯುವ ತಂತ್ರ ಮತ್ತೊಂದೆಡೆ. ಅತ್ತ ಮುಸಲ್ಮಾನ ಹುಡುಗರ ರೂಪಕ್ಕೆ, ಸ್ಟೈಲು ಶೋಕಿಗಳಿಗೆ, ಅವರು ಮಾಡುವ ಖರ್ಚುಗಳಿಗೆ, ಕೊಡುವ ಗಿಫ್ಟುಗಳಿಗೆ, ದೈಹಿಕ ಸುಖಕ್ಕೆ ಮರುಳಾಗುವ ಯುವತಿಯರು ಬೀಳುತ್ತಿದ್ದರೆ, ಇತ್ತ ಸಾಮಾಜಿಕ–ಆರ್ಥಿಕ ಆಮಿಷಗಳನ್ನು ನಂಬಿ ಬಡಹಿಂದೂಗಳು, ದಲಿತ–ಹಿಂದುಳಿದ ವರ್ಗದ ಹಿಂದೂಗಳು ಮತಾಂತರಗೊಳ್ಳಲು ಮುಂದಾಗುತ್ತಿದ್ದಾರೆ. ಮತಾಂತರಗೊಂಡ ನಂತರ ಯಾರೊಬ್ಬರ ಬದುಕೂ ಚೆಂದಗೊಂಡ ಉದಾಹರಣೆ ಇಲ್ಲ. ಪಂಜರದ ಹಕ್ಕಿಯಾಗಿ, ಬುರ್ಖಾ ಹಿಜಾಬುಗಳ ನಡುವೆ ಪ್ರತಿನಿತ್ಯ ಹಿಂಸೆ ಅನುಭವಿಸುವ ಯುವತಿಯರು ಘರ್ ವಾಪಸಿ ಮಾಡಲಾಗದೇ ಪ್ರಾಣಭಯದಿಂದ ಬದುಕುತ್ತಿದ್ದಾರೆ. ಕೆಲವರಂತೂ ಫ್ರಿಜ್ಜು, ವಾಷಿಂಗ್ ಮಷಿನ್‌ಗಳಲ್ಲಿ, ಕಸಾಯಿ ಖಾನೆಗಳಲ್ಲಿ ಮಾಂಸದ ತುಂಡುಗಳಾಗಿ ಹೋಗಿದ್ದಾರೆ. ಇನ್ನು ಬಡತನ–ಜಾತೀಯತೆ ಕಾರಣಗಳಿಗೆ ಮತಾಂತರವಾದವರು, ಮೊದಲೇ ಚೆನ್ನಾಗಿದ್ವಿ ಎಂದು ಪರಿತಪಿಸುವಷ್ಟು ಕಂಗಾಲಾಗಿ ಹೋಗಿದ್ದಾರೆ.

ಈ ಹಂತದಲ್ಲಿ ಮತಾಂತರದ ಆಮಿಷಕ್ಕೆ ನಿತ್ಯವೂ ಒಳಗಾಗುತ್ತಿರುವ ಹಿಂದೂಗಳು, ಮುಸಲ್ಮಾನ ಧರ್ಮದಲ್ಲಿರುವ ಜಾತಿಪದ್ಧತಿ ಬಗ್ಗೆ ತಿಳಿದುಕೊಳ್ಳುವುದು ಅತ್ಯಗತ್ಯ ಎಂಬುದು ನನ್ನ ಅನಿಸಿಕೆ.

ಬಡತನ, ಅನಾರೋಗ್ಯ, ಜಾತಿಭೇದ ಇಂಥ ವಿಷಯಗಳನ್ನು ಮುಂದಿಟ್ಟುಕೊಂಡು, ಇಸ್ಲಾಂಗೆ ಕನ್ವರ್ಟ್ ಆಗ್ತಾರಲ್ಲ, ಅವರಿಗೆ ನಿಜಕ್ಕೂ ಅಲ್ಲಿ ನ್ಯಾಯ ಸಮಾನತೆ ಸಿಗುತ್ತದೆಯಾ? ರಾಯಲ್ ಟ್ರೀಟ್ ಮೆಂಟು ಸಿಗುತ್ತಾ? ಉಹೂಂ. ಭ್ರಮೆ ಅಷ್ಟೇ. ಮೇಲ್ನೋಟಕ್ಕೆ ಹಿಂದೂಗಳು ನೂರಾರು ಜಾತಿ ಉಪಜಾತಿಗಳಿಂದ ನಲುಗಿ ಹೋಗಿದ್ದಾರೆ, ಮುಸಲ್ಮಾನರಲ್ಲಿ ಮಾತ್ರ ಜಾತಿಗಳೇ ಇಲ್ಲ. ಅಲ್ಲಿ ಎಲ್ಲರೂ ಧರ್ಮದಿಂದ ಮಾತ್ರ ಗುರುತಿಸಿಕೊಳ್ಳುತ್ತಾರೆ ಎಂಬಂತೆ ಬಿಂಬಿಸಲಾಗಿದೆ. ಆದರೆ ಅದು ಸತ್ಯ ಅಲ್ಲ. ಮುಸಲ್ಮಾನರಲ್ಲೂ ಜಾತಿ ಇದೆ, ಪಂಗಡ ಇದೆ. ವ್ಯತ್ಯಾಸ ಏನಂದ್ರೆ ಮುಸಲ್ಮಾನರು ಧರ್ಮ ಅಂತ ಬಂದಾಗ ಒಗ್ಗಟ್ಟಾಗಿ ನಿಲ್ಲುತ್ತಾರೆ. ಆದರೆ ಹಿಂದೂಗಳು ಜಾತಿಗಳಲ್ಲಿ ಒಡೆದು ಹೋಗುತ್ತಾರೆ. ಇದೇ ರಾಜಕಾರಣಿಗಳ ಟ್ರಂಪ್ ಕಾರ್ಡ್ ಕೂಡ.

ಹೌದು. ಮುಸಲ್ಮಾನರಲ್ಲೂ ಜಾತಿ ಅಸಮಾನತೆ ಇದೆ, ಜಾತಿ ವೈಷಮ್ಯ ಇದೆ, ಮೇಲ್ಜಾತಿಯವರು ಕೆಳಜಾತಿಯವರ ಮೇಲೆ ದೌರ್ಜನ್ಯ ನಡೆಸೋ ಉದಾಹರಣೆ ಇದೆ. ಆದರೆ ರಾಜಕಾರಣಿಗಳು ಮಾತ್ರ ಹಿಂದೂಗಳನ್ನು ಒಡೆಯೋ ಹಾಗೆ ಮುಸಲ್ಮಾನರನ್ನು ಜಾತಿ ಹೆಸರಲ್ಲಿ ಒಡೆಯೋ ಕೆಲಸ ಮಾಡಿಲ್ಲ, ಮಾಡುವುದೂ ಇಲ್ಲ. ಯಾಕಂದ್ರೆ, ಅಲ್ಪಸಂಖ್ಯಾತರನ್ನು ಒಗ್ಗೂಡಿಸ್ಕೊಂಡು ಇದ್ರೆ ಲಾಭ. ಬಹುಸಂಖ್ಯಾತರನ್ನು ಒಡೆದು ಆಳಿದ್ರೆ ಲಾಭ ಅನ್ನೋ ಸತ್ಯ ರಾಜಕೀಯದವ್ರಿಗೆ ಚೆನ್ನಾಗಿ ಗೊತ್ತಿದೆ. ಬಹಳಷ್ಟು ಮಂದಿ ಅಂದುಕೊಂಡಿರೋದು ಮುಸ್ಲಿಮರಲ್ಲಿ ಎರಡು ಪಂಗಡ ಮಾತ್ರ ಇದೆ– ಶಿಯಾ ಮತ್ತು ಸುನ್ನಿ ಅಷ್ಟೇ ಅಂತ. ಆದರೆ ಅದು ತಪ್ಪು ಕಲ್ಪನೆ. ಇಸ್ಲಾಂ ನಾವೆಲ್ಲ ಒಂದೇ ಅಂತ ಹೇಳುತ್ತೆ. ಆದರೆ ಮುಸಲ್ಮಾನ ಸಮಾಜ ಮಾತ್ರ ಈ ಏಕತೆ ಮಂತ್ರವನ್ನು ಒಪ್ಪುವುದಿಲ್ಲ. ಅವರಲ್ಲಿ ಜಾತಿಭೇದ ಹೇರಳವಾಗಿ ಇದೆ.

ನೀವು ಮುಸಲ್ಮಾನ ಮ್ಯಾಟ್ರಿಮೊನಿ, ಅರ್ಥಾತ್ ಶಾದಿ ವೆಬ್ ಸೈಟ್‌ಗಳಿಗೆ ಹೋದರೆ ನಿಮಗೆ ಮುಸಲ್ಮಾನರಲ್ಲಿ ಎಷ್ಟು ಜಾತಿ ಇದೆ, ಎಷ್ಟು ಉಪಜಾತಿ ಇದೆ ಅನ್ನೋ ವಾಸ್ತವ ಅರ್ಥ ಆಗತ್ತೆ. ಅಂದಹಾಗೆ, ಪಸ್ಮಂಡಾ ಮುಸ್ಲಿಂ ಅಂತ ಕರೆಯೋದನ್ನು ನೀವು ಎಂದಾದರೂ ಕೇಳಿದ್ದೀರಾ? ಪಸ್ಮಂಡಾ ಮುಸ್ಲಿಂ ಅನ್ನೋದು ಮುಸಲ್ಮಾನರ ಪ್ರಕಾರ ಒಂದು ಕೆಳವರ್ಗ. ಹಿಂದೂಗಳಲ್ಲಿ ದಲಿತ ಮತ್ತು ಹಿಂದುಳಿದವರು ಅಂತ ಹೇಗೆ ಇದ್ದಾರೋ, ಹಾಗೆ ಮುಸಲ್ಮಾನರಲ್ಲಿ ಪಸ್ಮಂಡಾ ಮುಸ್ಲಿಂ ಅಂತ ಇದ್ದಾರೆ. ಒಂದು ನಿದರ್ಶನದ ಮೂಲಕ ಹೇಳು ವುದಾದರೆ, ಡಿಸೆಂಬರ್ 2019ರಲ್ಲಿ ಒಬ್ಬ ಮುಸಲ್ಮಾನ ಯುವಕ ಪಠಾಣರ ಡ್ರೆಸ್ ಹಾಕ್ಕೊಂಡು ಗುಜರಾತ್‌ನ ಒಂದು ಜಾಗದಲ್ಲಿ ಟೀ ಕುಡೀತಾ ನಿಂತಿರುತ್ತಾನೆ. ಅವನ ಮೇಲೆ ಮುಸಲ್ಮಾನರೇ ಬಂದು ದಾಳಿ ಮಾಡ್ತಾರೆ. ಕಾರಣ ಅವನು ಕೀಳು ಜಾತಿಯ ಮುಸ್ಲಿಂ ಎಂಬುದು. ಅವನು ಪಠಾಣರ ಡ್ರೆಸ್ ಹಾಕುವಂತಿಲ್ಲವಂತೆ. ಆತನ ಮೇಲೆ ಹಲ್ಲೆ ಮಾಡಿದ್ದು ಮೇಲ್ಜಾತಿಯ ಮುಸ್ಲಿಮರು. ಮುಸ್ಲಿಮರಲ್ಲಿ ಮೇಲ್ಜಾತಿ ಅಂದರೆ ಯಾವುದು?

ಭಾರತೀಯ ಮುಸ್ಲಿಮರಲ್ಲಿ ಮುಖ್ಯವಾಗಿ ಮೂರು ಜಾತಿಗಳಿವೆ. ಅತ್ಯಂತ ಶ್ರೇಷ್ಠ ಅಥವಾ ಮೇಲ್ಜಾತಿಯನ್ನು ಅಶ್ರಫ್ ಮುಸ್ಲಿಮ್ಸ್ ಅಂತಾರೆ. ಸೈಯದ್, ಶೇಖ್, ಪಠಾಣ್, ಮುಘಲ್ ಇವರೆಲ್ಲ ಅಶ್ರಫ್ ಮುಸ್ಲಿಮರು. ಇವರನ್ನು ತುಂಬ ಶ್ರೇಷ್ಠರು ಅಂತ ಪರಿಗಣಿಸಲಾಗತ್ತೆ. ಈ ಅಶ್ರಫ್ ಮುಸಲ್ಮಾನರಲ್ಲಿ ಕೂಡ ಕನ್ವರ್ಟೆಡ್ ಮುಸಲ್ಮಾನರು ಇರುತ್ತಾರೆ. ಆದರೆ ಬೇರೆ ಧರ್ಮದಲ್ಲಿರುವ ಮೇಲ್ಜಾತಿಯವರು ಇಸ್ಲಾಮಿಗೆ ಕನ್ವರ್ಟ್ ಆದ್ರೆ ಅವರನ್ನು ಈ ಮೇಲ್ಜಾತಿ ಮುಸಲ್ಮಾನರನ್ನಾಗಿ ಟ್ರೀಟ್ ಮಾಡಲಾಗುತ್ತೆ. ಉದಾಹರಣೆಗೆ, ಹಿಂದೂಗಳಲ್ಲಿ ಬ್ರಾಹ್ಮಣ ಅಥವಾ ಲಿಂಗಾಯತ ಒಬ್ಬ ಇಸ್ಲಾಮಿಗೆ ಕನ್ವರ್ಟ್ ಆದ ಅಂದುಕೊಳ್ಳಿ, ಅವನನ್ನು ಅಶ್ರಫಿ ಮುಸಲ್ಮಾನ ಎಂಬ ಕೆಟಗರಿಗೆ ಸೇರಿಸುತ್ತಾರೆ. ಮುಸಲ್ಮಾನರಲ್ಲಿ ಅಪ್ಪರ್ ಕ್ಯಾಸ್ಟ್ ಅಂದ್ರೆ, ಅದು ಅಶ್ರಫ್ ಮುಸ್ಲಿಮ್ಸ್.

ಅವರ ನಂತರ, ಅಂದ್ರೆ, ಅವರಿಗಿಂತ ಸ್ವಲ್ಪ ಕೆಳಗೆ ಬರುವ ವರ್ಗ, ಅಜ್ಲಫ್ಸ್. ವ್ಯಾಪಾರ ವ್ಯವಹಾರ ಜಮೀನಿನ ಕೆಲಸ, ಇತ್ಯಾದಿ ಮಾಡುವವರನ್ನು ಈ ಅಜ್ಲಫ್ ಜಾತಿಯವರೆಂದು ಪರಿಗಣಿಸಲಾಗುತ್ತದೆ. ಮೂರನೇ ಕೆಟಗರಿ ಅರ್ಜಲ್! ಹಿಂದೂಗಳಲ್ಲಿರುವ ದಲಿತರು, ಬಡವರು, ಜಾತಿ ಪದ್ಧತಿ ಬೇಸತ್ತು ಕನ್ವರ್ಟ್ ಆಗಿರುವವರು ಈ ಅರ್ಜಲ್ ಮುಸಲ್ಮಾನರು. ಕೂಲಿನಾಲಿ ಮಾಡ್ತಾ ಇರೋವ್ರು, ಕ್ಷೌರಿಕ ವೃತ್ತಿ, ಬಟ್ಟೆ ಒಗೆಯೋ ಕೆಲಸ, ಕಸಾಯಿ ಕೆಲಸ ಇಂಥದ್ದನ್ನೆಲ್ಲ ಮಾಡುವವರು ಮುಸಲ್ಮಾನರಾಗಿ ಕನ್ವರ್ಟ್ ಆದಾಗ ಅವರನ್ನು ಅರ್ಜಲ್ ಮುಸ್ಲಿಂ ಪಂಗಡಕ್ಕೆ ಸೇರಿಸುತ್ತಾರೆ.

ಸರಳವಾಗಿ ಅರ್ಥವಾಗುವ ಹಾಗೆ ಹೇಳುವುದಾದರೆ, ಹಿಂದೂಗಳಲ್ಲಿ ಬ್ರಾಹ್ಮಣ, ವೈಶ್ಯ, ಶೂದ್ರ ಅಂತ ಇರುವ ಹಾಗೆ ಇಲ್ಲಿ ಅಶ್ರಫ್ ಅಜ್ಲಫ್ ಮತ್ತು ಅರ್ಜಲ್ ಎಂಬ ವಿಭಾಗ ಇದೆ. ಹಾಗಾದರೆ ಪಸ್ಮಂಡಾ ಮುಸ್ಲಿಂ ಅಂದ್ರೆ ಯಾರು? ಅಜ್ಲಫ್ ಹಾಗೂ ಅರ್ಜಲ್ ಮುಸಲ್ಮಾನರ ಒಟ್ಟು ಸಮೂಹವೇ ಪಸ್ಮಂಡಾ ಮುಸ್ಲಿಂ! ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತ, ದಲಿತ ಮತ್ತು ಹಿಂದುಳಿದವರನ್ನು ಸೇರಿಸಿ ಅಹಿಂದ ಮಾಡಿದ ಹಾಗೆ, ಒಬ್ಬ ಮುಸಲ್ಮಾನ ರಾಜಕಾರಣಿ ಅಜ್ಲಫ್ ಮತ್ತು ಅರ್ಜಲ್ ಮುಸ್ಲಿಮರನ್ನು ಸೇರಿಸಿ ಪಸ್ಮಂಡಾ ಮಾಡಿದ. ಆತನ ಹೆಸರು ಡಾಕ್ಟರ್ ಅಲಿ ಅನ್ವರ್ ಅನ್ಸಾರಿ. 1998ರಲ್ಲಿ ರಾಜಕೀಯ ಲಾಭಗಳಿಗಾಗಿ ಈ ಪಸ್ಮಂಡಾ ಎಂಬ ಪದ ಹುಟ್ಟುಹಾಕಲಾಯಿತು.

ಅಚ್ಚರಿ ಏನೆಂದರೆ, ಭಾರತದಲ್ಲಿ ಇರುವ ಶೇ.85ರಷ್ಟು ಮುಸ್ಲಿಮರು ಪಸ್ಮಂಡಾ ಮುಸ್ಲಿಮ್ಸ್! ಅಂದರೆ, ನಮ್ಮಲ್ಲಿ ಕನ್ವರ್ಷನ್ ಎಂಬುದು ಯಾವ ಪ್ರಮಾಣದಲ್ಲಿ ಆಗಿದೆ ಅನ್ನೋದಕ್ಕೆ ಈ ಸಂಖ್ಯೆಯೇ ಸಾಕ್ಷಿ. ನೀವು ಕೇರಳಕ್ಕೆ ಹೋದರ ಅಲ್ಲಿ ತಂಗಲ್ಸ್, ಅರೇಬೀಸ್, ಮಲಬಾರೀಸ್, ಒಸಾನ್ ಪುಸಲಾನ್ಸ್ ಅಂತ ಬೇರೆ ಬೇರೆ ಜಾತಿ ಮುಸ್ಲಿಮ್ ಇದ್ದಾರೆ. ಅಲ್ಲಿ ಅರೇಬೀಸ್ ಮತ್ತು ಥಂಗಲ್ ಮುಸ್ಲಿಮರದ್ದು ಮೇಲ್ಜಾತಿ ಆದ್ರೆ, ಮಲಬಾರೀಸ್ ಮತ್ತು ಒಸಾನ್‌ಗಳದ್ದು ಕೆಳಜಾತಿ. ಅದೇ ತಮಿಳುನಾಡಿಗೆ ಹೋದರೆ, ಮೂರು ಥರದ ಮುಸ್ಲಿಮ್ಸ್ ಸಿಗುತ್ತಾರೆ. ಅರಬ್ ದೇಶದಿಂದ ಬಂದು ಸೆಟ್ಲ್ ಆದ ಮುಸ್ಲಿಮ್ಸ್, ತಮಿಳುನಾಡಿನಲ್ಲೇ ಇಸ್ಲಾಮಿಗೆ ಕನ್ವರ್ಟ್ ಆಗಿರೋ ಮುಸ್ಲಿಮ್ಸ್ ಹಾಗೂ ದೇಶದ ಬೇರೆ ಭಾಗದಿಂದ ಬಂದು ತಮಿಳುನಾಡಿನಲ್ಲಿ ಸೆಟ್ಲ್ ಆಗಿರೋ ಮುಸ್ಲಿಮ್ಸ್.

ಅಷ್ಟೇ ಅಲ್ಲ, ಇವರೆಲ್ಲರ ನಡುವೆ ಜಾತಿ ವೈಷಮ್ಯ ಜೋರಾಗಿಯೇ ಇದೆ. ಮುಸಲ್ಮಾನರಲ್ಲಿ ಸರ್‌ನೇಮ್ ನೋಡಿಯೇ ಇವ್ರು ಮೇಲ್ಜಾತಿಯ ಮುಸಲ್ಮಾನರೋ, ಕೀಳು ಜಾತಿಯ ಮುಸಲ್ಮಾನರೋ ಎಂದು ನಿರ್ಧಾರ ಮಾಡುತ್ತಾರೆ. ತಮ್ಮನ್ನು ಗೌರವದಿಂದ ನೋಡಲಿ ಎಂದೇ ಎಷ್ಟೋ ಮುಸ್ಲಿಮರು ಅನ್ಸಾರಿ, ಸಲ್ಮಾನಿ, ಖುರೇಶಿ, ಜುಬೇರಿ ಎಂಬ ಸರ್‌ನೇಮ್‌ಗಳನ್ನು ಬಳಸುವುದಿದೆ. ಯಾಕಂದ್ರೆ ಅವೆಲ್ಲ ಮೇಲ್ಜಾತಿಯ ಮುಸ್ಲಿಮರು ಇಟ್ಟುಕೊಳ್ಳುವಟ್ಟೋಲೋ ಸರ್‌ನೇಮ್‌ಗಳು. ಅಂತೆಯೇ ಖಾನ್, ಖಾನ್ ಬಹದೂರ್, ಖಾನ್ ಸಾಹೇಬ್ ಅನ್ನೋ ಟೈಟಲ್‌ಗಳೂ ಕೂಡ, ಕ್ರಮೇಣ ಮೇಲ್ಜಾತಿಯ ಸೂಚಕ ಆಗಿಬಿಟ್ಟಿದೆ.

ಮುಸಲ್ಮಾನರಲ್ಲಿ ಮದುವೆ ಆಗುವಾಗ ಕೂಡ ಮೇಲ್ಜಾತಿ ಕೀಳುಜಾತಿ ಅಂತ ನೋಡುತ್ತಾರೆ. ಅದೇ ಕಾರಣಕ್ಕೆ ಮ್ಯಾಟ್ರಿಮೋನಿಯಲ್ ಸೈಟ್‌ಗಳಲ್ಲಿ ಸರ್ಚ್ ಬೈ ಕಾಸ್ಟ್ ಎಂಬ ಆಯ್ಕೆ ಇಟ್ಟಿದ್ದಾರೆ. ಇವರಲ್ಲಿ ಜಾತೀಯತೆ ಎಷ್ಟು ತೀವ್ರವಾಗಿದೆ ಎಂಬುದಕ್ಕೆ ಒಂದು ಉದಾಹರಣೆ– ಉತ್ತರಪ್ರದೇಶದಲ್ಲಿ ಒಂದು ರಜಪೂತ ಕುಟುಂಬ ಇಸ್ಲಾಮಿಗೆ ಕನ್ವರ್ಟ್ ಆಗಿತ್ತು. ಆ ಕನ್ವರ್ಟೆಡ್ ಕುಟುಂಬದ ಒಬ್ಬ ಮುಸ್ಲಿಂ ಹುಡುಗಿಗೆ, ಹಿಂದೂ ದಲಿತ ಹುಡುಗನ ಮೇಲೆ ಲವ್ ಆಯಿತು. ಹುಡುಗಿ ಅವನನ್ನು ಮದುವೆ ಮಾಡಿಕೊಳ್ಳುವ ನಿರ್ಧಾರ ಮಾಡಿದಳು. ದಲಿತನ ಜತೆ ಮದುವೇನಾ? ಸಾಧ್ಯನೇ ಇಲ್ಲ ಅಂದುಬಿಟ್ಟಿತು ಕುಟುಂಬ. ಆಗ ಆ ಹುಡುಗ ಪ್ರೀತಿಗೋಸ್ಕರ ಇಸ್ಲಾಮಿಗೆ ಕನ್ವರ್ಟ್ ಆಗಲು ಸಿದ್ಧನಾದ. ಆದರೂ ಆ ಮುಸ್ಲಿಂ ಫ್ಯಾಮಿಲಿ ಒಪ್ಪುವುದಿಲ್ಲ. ಒಬ್ಬ ದಲಿತ ಇಸ್ಲಾಮಿಗೆ ಕನ್ವರ್ಟ್ ಆದ ಮಾತ್ರಕ್ಕೆ ಅವನು ನಮ್ಮವನಾಗುವುದಿಲ್ಲ. ನಾವು ಮೇಲ್ಜಾತಿ ಮುಸ್ಲಿಮರು. ಅವನು ದಲಿತ ಮುಸ್ಲಿಮ್ ಅಂತ ಹೇಳಿ ಅವನನ್ನು ದೂರ ತಳ್ಳಿದರು. ಮದುವೆ ಅಂದ್ರೆ ಸಾಯಿಸಿಬಿಡ್ತೀವಿ ಅಂತ ಹೆದರಿಸಿದರು. ಹೌದು, ಮುಸಲ್ಮಾನರಾಗಿ ಕನ್ವರ್ಟ್ ಆದ ತಕ್ಷಣ ಒಬ್ಬ ದಲಿತ ಹಿಂದೂವನ್ನು ಮುಸ್ಲಿಂ ಸಮಾಜ ಸಮಾನತೆಯಿಂದ ನೋಡುವುದಿಲ್ಲ. ಮಹಾನ್ ಜಾತ್ಯತೀತ ಅಲಿಘರ್ ಯೂನಿವರ್ಸಿಟಿ ಒಳಗೂ ಈ ಜಾತಿ ಭೇದ ಇದೆ. ಬಿಹಾರದ ಮುಜಾಫರ್‌ಪುರದಲ್ಲಿ ಒಂದು ಏರಿಯಾ ಇದೆ. ಅದು ಮುಸ್ಲಿಂ ಏರಿಯಾ. ಅಲ್ಲಿ ರಸ್ತೆಯ ಮಧ್ಯಕ್ಕೆ ಒಂದು ಕಂಪೌಂಡ್ ಹಾಕಿದ್ದಾರೆ. ಕಾರಣ, ಶೇಖ್ ಮತ್ತು ಅನ್ಸಾರಿ ಎಂಬ ಎರಡು ಮೇಲ್ಜಾತಿ ಕೆಳಜಾತಿ ಮಧ್ಯ ಇರುವ ವೈಷಮ್ಯ!

ಇವತ್ತಿಗೂ ಮೇಲ್ಜಾತಿ ಮುಸ್ಲಿಮರು ದಲಿತ ಮುಸ್ಲಿಮರನ್ನು ಮದುವೆಗೆ ಕರೆಯುವುದಿಲ್ಲ, ಹಾಗೊಮ್ಮೆ ಕರೆದರೂ ಪ್ರತ್ಯೇಕವಾಗಿಯೇ ಕೂರಿಸುತ್ತಾರೆ. ಪ್ರತ್ಯೇಕ ಊಟ ಹಾಕುತ್ತಾರೆ. ಮೇಲ್ಜಾತಿಯವ್ರು ಊಟ ಮಾಡಿದ ನಂತರವೇ ಊಟ ಮಾಡಬೇಕು ಎಂದು ಕಂಡಿಷನ್ ಹಾಕ್ತಾರೆ. ಅಷ್ಟೇ ಯಾಕೆ, ಮುಸ್ಲಿಮರ ಸ್ಮಶಾನದಲ್ಲೂ ಜಾತಿ ಭೇದ ಇದೆ. ಪಮಡಿಯಾ, ಮನ್ಸೂರಿ, ಸೈಯದ್, ದೂನಿಯಾ ಹೀಗೆ ಒಂದೊಂದು ಜಾತಿ ಮುಸ್ಲಿಮರಿಗೆ ಒಂದೊಂದು ಸ್ಮಶಾನ ಇದೆ. ಹೊರಗಿನವರಿಗೆ ಎಲ್ಲವೂ ಮುಸ್ಲಿಂ ಸ್ಮಶಾನ ಅಂತಷ್ಟೇ ಅನಿಸುತ್ತದೆ. ಇನ್ನು ರಾಜಕೀಯದಲ್ಲಿ ನಾವು, 1952ರಿಂದ 2004ರ ತನಕದ ಡೇಟಾ ನೋಡಿದರೆ, ಅಶ್ರಫ್ ಮುಸಲ್ಮಾನರಿಗೆ ಇರೋ ಪ್ರಾಧಾನ್ಯ ಪಸ್ಮಂಡಾ ಮುಸಲ್ಮಾನರಿಗೆ ಇಲ್ಲ. ಭಾರತದಲ್ಲಿ ಇರುವ ಅಶ್ರಫ್ ಮುಸ್ಲಿಮ್ಸ್ ಶೇ.2.1ರಷ್ಟು ಮಾತ್ರ. ಪಸ್ಮಂಡಾ ಮುಸ್ಲಿಮರು ಶೇ.11.4ರಷ್ಟು ಇದ್ದಾರೆ. ಆದರೆ ಸ್ಥಾನಮಾನ ಸಿಕ್ತಾ ಇರೋದು ಅಶ್ರಫ್ ಮುಸಲ್ಮಾನರಿಗೆ ಮಾತ್ರ ಅನ್ನುತ್ತೆ ಅಂಕಿ–ಅಂಶ. ಇದೇ ಕಾರಣಕ್ಕೆ, ಪಸ್ಮಂಡಾ ಮುಸಲ್ಮಾನರು ತಮಗೆ ಪರಿಶಿಷ್ಟ ಜಾತಿ ಸ್ಥಾನಮಾನ ಕೊಡಿ ಅಂತ ಕೇಳ್ತಾ ಇದ್ದಾರೆ. ಹಿಂದೂಗಳಲ್ಲಿ ದಲಿತರಿಗೆ, ಹಿಂದುಳಿದವರಿಗೆ ರಿಸರ್ವೇಶನ್ ಕೊಡ್ತೀರಿ, ಮುಸಲ್ಮಾನರಲ್ಲಿ ಮಾತ್ರ ಯಾಕೆ ಪಸ್ಮಂಡಾಗಳಿಗೆ ರಿಸರ್ವೇಶನ್ ಇಲ್ಲ ಅಂತ ಕೇಳ್ತಿದ್ದಾರೆ. ಖುದ್ದು ಮಸೀದಿಗಳಲ್ಲೇ ನಮಗೆ ಸಮಾನತೆ ಸಿಗುವುದಿಲ್ಲ. ನಮ್ಮಂಥ ದಲಿತ ಮುಸಲ್ಮಾನರನ್ನು ಕೊನೆಯ ಸಾಲಲ್ಲಿ ನಿಲ್ಲಿಸ್ತಾರೆ ಅಂತ ಪಸ್ಮಂಡಾ ಮುಸ್ಲಿಮರು ಇವತ್ತಿಗೂ ತಮ್ಮ ದುಃಖ ತೋಡಿಕೊಳ್ಳುತ್ತಾರೆ. ಇವತ್ತಿಗೂ ಮದರಸಾಗಳಲ್ಲಿ ಕಲೀತಾ ಇರುವವರು, ಕೆಳವರ್ಗದ ಮುಸಲ್ಮಾನರೇ. ಮೇಲ್ಜಾತಿಯವರೆಲ್ಲ ಒಳ್ಳೊಳ್ಳೆ ಸ್ಕೂಲ್ ಕಾಲೇಜ್‌ಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಮುಸ್ಲಿಮರಲ್ಲಿ ಹೀಗೆ ಜಾತಿಪದ್ಧತಿ ಎಲ್ಲಿಂದ ಬಂತು.. ಹೇಗೆ ಶುರು ಆಯ್ತು ಅಂತ ಹೇಳ್ತಾ ಹೋದ್ರೆ ಅದು ತುಂಬ ದೊಡ್ಡ ಕತೆಯೇ ಆದೀತು. ಆದರೆ ಇಲ್ಲಿ ಗಮನಿಸಬೇಕಿರುವುದು ಏನೆಂದರೆ, ಕನ್ವರ್ಟ್ ಆಗಿರುವ ದಲಿತರು ಹಿಂದುಳಿದವರು ಇಸ್ಲಾಮಿಗೆ ಬಂದನಂತರ ಸಮಾನತೆಯನ್ನು ಗಳಿಸುವುದಿಲ್ಲ ಎಂಬ ವಾಸ್ತವ.

ಮತಾಂತರ ಆದರೆ ಜೀವನ ಚೆನ್ನಾಗಿ ಆಗಿಬಿಡುತ್ತದೆ ಎಂಬುದೆಲ್ಲ ಭ್ರಮೆ ಹಾಗೂ ಜಿಹಾದಿಗಳು ಹುಟ್ಟಿಸುವ ಆಮಿಷ ಅಷ್ಟೇ. ಒಬ್ಬ ದಲಿತ ಹಿಂದೂ ಧರ್ಮದಲ್ಲಿ ತನಗೆ ಅನ್ಯಾಯ ಆಗ್ತಿದೆ, ದೌರ್ಜನ್ಯ ಆಗ್ತಿದೆ ಅಂತ, ಇಸ್ಲಾಮಿಗೆ ಹೋದರೆ ಅಲ್ಲಿ ಕೂಡ ಆತ ದಲಿತನಾಗಿಯೇ ಇರುತ್ತಾನೆ. ಅಗ್ಗದ ಆಮಿಷಗಳಿಗೆ ಬಲಿಯಾಗಿ ಮತಾಂತರಗೊಳ್ಳುವ ಮುನ್ನ ನಿಮ್ಮ ಗಮನಕ್ಕಿರಲಿ. ಆಯ್ಕೆ ಮಾಡಿಕೊಂಡು ನರಕ ಪ್ರವೇಶಿಸದಿರಿ.

ಭಟ್ಟರ್ ಸ್ಕಾಚ್

- **ಜುಂಜಪ್ಪ, ಶಕ್ತಿನಗರ, ಮೈಸೂರು**
ಭಟ್ರೇ, ನೀವು ಸ್ಕಾಚ್ ಅಂಕಣದಲ್ಲಿ 'ರಾಜ' ರನ್ನು ಎದುರುಹಾಕಿಕೊಳ್ಳುತ್ತಿದ್ದೀರೆಂದು ಅನಿಸುತ್ತದಲ್ಲ?
– **ನೀವು ಪ್ರಕಾಶ್ ರಾಜ್, ಮುಕುಂದ ರಾಜ್, ಆರ್.ಜಿ.ಹಳ್ಳಿ ನಾಗರಾಜ್ ಕುರಿತ ಪ್ರಶ್ನೋತ್ತರಗಳನ್ನು ನೋಡಿ ಈ ನಿರ್ಧಾರಕ್ಕೆ ಬಂದಂತೆ ಕಾಣುತ್ತದಲ್ಲ?!**

- **ಮುಕುಂದ ಹೆಗಡೆ, ಸಿದ್ದಾಪುರ**
ಭಟ್ರೇ, ಒಬ್ಬ ವ್ಯಕ್ತಿ ಮಳೆ ಬರುತ್ತಿರುವಾಗ ತಲೆ ಮೇಲೆ ಛತ್ರಿ ಹಿಡಿಯದೇ ಹೋಗುತ್ತಿದ್ದರೂ ಅವನ ತಲೆ ಕೂದಲು ಒದ್ದೆಯಾಗಲಿಲ್ಲ, ಯಾಕೆ?
– **ಯಾಕೆಂದರೆ ಅವನ ತಲೆಯಲ್ಲಿ ಕೂದಲೇ ಇರಲಿಲ್ಲ!**

- **ನಾರಾಯಣ, ಬೈಂದೂರು**
ಭಟ್ರೇ, ಜಗತ್ತಿನಲ್ಲೇ ಅತಿ ವೇಗವಾಗಿ ಓಡುವುದು ಯಾವುದು?
– **ಪರೀಕ್ಷಾ ಸಮಯದಲ್ಲಿ ನಮಗೆ ಗೊತ್ತಿಲ್ಲದ ಉತ್ತರವನ್ನು ಪಕ್ಕದವನು ಬರೆಯುವಾಗ ನಮ್ಮ ಕೈ ಓಡುವ ವೇಗ!**

- **ಮನೋಹರ ಪಾಟೀಲ, ಬೆಳಗಾವಿ**
ಭಟ್ರೇ, ಮದುವೆಗೂ, ಯುದ್ಧಕ್ಕೂ ಇರುವ ವ್ಯತ್ಯಾಸವೇನು?
– **ಯುದ್ಧದಲ್ಲಿ ಸತ್ತ ಮೇಲೆ ಶಾಂತಿ ಸಿಗುತ್ತದೆ, ಮದುವೆಯಲ್ಲಿ ಶಾಂತಿ ಹೋದ ಮೇಲೆ ಯುದ್ಧ ನಡೆಯುತ್ತದೆ!**

- **ಕಿರಣ್ ಚಂದ್ರ ಕೆ., ಚಿಕ್ಕನಾಯಕನಹಳ್ಳಿ**
ಭಟ್ರೇ, ಅಳಿಯ ಮತ್ತು ಸೂರ್ಯನಿಗೆ ಇರುವ ಸಾಮ್ಯತೆ ಏನು?
– **ಇಬ್ಬರನ್ನೂ ದೀರ್ಘಕಾಲ ದಿಟ್ಟಿಸಿ ನೋಡಲು ಸಾಧ್ಯವಿಲ್ಲ!**

- **ಸುಧಾಕರ ಕೋಟ್ಯಾನ್, ಉಡುಪಿ**
ಭಟ್ರೇ, ಗಂಡ ಯಾವಾಗಲೂ ಮೌನವಾಗಿರಲು ಕಾರಣವೇನು?
– **ಹೆಂಡತಿ ಮಾತನಾಡುವಾಗ ಮೌನ ಬಂಗಾರ ಎಂಬ ತತ್ವವನ್ನು ಅವರು ಪಾಲಿಸುತ್ತಿರುತ್ತಾರೆ!**

- **ವಿನೋದ ಶಾಸ್ತ್ರಿ, ಹೊನ್ನಾವರ**
ಭಟ್ರೇ, ವೈದ್ಯರು ಮತ್ತು ರಾಜಕಾರಣಿಗಳಿಗೆ ಇರುವ ವ್ಯತ್ಯಾಸವೇನು?
– **ವೈದ್ಯರು ರೋಗಿಯನ್ನು ಮಲಗಿಸಿ ಆಪರೇಷನ್ ಮಾಡುತ್ತಾರೆ, ರಾಜಕಾರಣಿಗಳು ಜನರನ್ನು ಎಚ್ಚರವಾಗಿರುವಾಗಲೇ ಆಪರೇಷನ್ ಮಾಡುತ್ತಾರೆ!**

- **ಜೆ. ಶ್ರೀನಿವಾಸ, ಹಿರಿಯೂರು**
ಭಟ್ರೇ, ಕನ್ನಡಿ ಮತ್ತು ಹೆಂಡತಿ ನಡುವೆ ಇರುವ ಸಾಮ್ಯತೆ ಏನು?
– **ಇಬ್ಬರ ಮುಂದೆ ನಿಂತಾಗಲೂ ನಮ್ಮ ತಪ್ಪುಗಳೇ ನಮಗೆ ಎದ್ದು ಕಾಣುತ್ತವೆ!**

- **ಜೆ.ಕೆ.ಅಣ್ಣಿಗೇರಿ, ಹುಬ್ಬಳ್ಳಿ**
ಭಟ್ರೇ, ಒಬ್ಬ ಆಲಸಿ ವ್ಯಕ್ತಿಗೆ ಪ್ರಪಂಚದ ಎಂಟನೇ ಅದ್ಭುತ ಯಾವುದು?
– **ಬೆಳಗ್ಗೆ ಎದ್ದ ತಕ್ಷಣ ಬೆಡ್‌ಶೀಟ್ ತನ್ನಷ್ಟಕ್ಕೆ ತಾನೇ ಮಡಚಿಕೊಳ್ಳುವುದು!**

ಸಂವಹನದ ರೀತಿ ಬದಲಿಸಿದ ಸೋಶಿಯಲ್ ಮೀಡಿಯಾಗಳು!

ವ್ಯಕ್ತಿ ಅದೆಷ್ಟೇ ಪ್ರಸಿದ್ಧನಿರಲಿ, ಯಶಸ್ವಿಯಾಗಿರಲಿ ಸೋಶಿಯಲ್ ಮೀಡಿಯಾದಲ್ಲಿ ಅವರ ಜನ್ಮವನ್ನು ಜಾಲಾಡಿ ಬಿಡುತ್ತಾರೆ. ಸೋಶಿಯಲ್ ಮೀಡಿಯಾ ಕೆಟ್ಟದ್ದು ಎನ್ನುವ ರೀತಿಯಲ್ಲಿ ಇದನ್ನು ಹೇಳುತ್ತಿಲ್ಲ. ಟ್ಯಾಲೆಂಟ್ ಇದ್ದು ಕೂಡ ಬೇರೆಯವರ ಅನುಮತಿಗೆ, ಒಪ್ಪಿಗೆಗೆ ಕಾಯಬೇಕಾಗಿತ್ತು. ಇಂದು ನಿಜವಾದ ಟ್ಯಾಲೆಂಟ್ ಇದ್ದರೆ ಸಾಕು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನನಗೆ ಪ್ರಕಾಶ್ ರೈ ಇಷ್ಟವಾದದ್ದು ಗುಡ್ಡದ ಭೂತ ಎನ್ನುವ ಸೀರಿಯಲ್ ನೋಡಿದ ಮೇಲೆ. ಆಗಿನ್ನೂ ಇಷ್ಟೊಂದು ಚಾನಲ್, ಓಟಿಟಿ ಯಾವುದೂ ಇರದ ಕಾಲ. ನಟರು, ಆಟಗಾರರು, ಪ್ರಸಿದ್ಧರು ಯಾವ ಪಂಥಕ್ಕೆ ಸೇರಿದವರು ಎನ್ನುವುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಇಷ್ಟೊಂದು ಅಭಿವ್ಯಕ್ತಿ ಸ್ವಾತಂತ್ರ್ಯ ಇರಲಿಲ್ಲ ನೋಡಿ! ಹೀಗಾಗಿ ಪ್ರಕಾಶಣ್ಣ ಬಹಳ ಇಷ್ಟ ಆಗಿದ್ದರು. ಯಾವಾಗ ಪ್ರಕಾಶಣ್ಣ ಸುಮ್ಮ-ಸುಮ್ಮನೆ ಕಾರಣವಿಲ್ಲದೆ, ಕೇವಲ ವಿರೋಧಿಸಬೇಕು ಎನ್ನುವ ಕಾರಣಕ್ಕೆ ವಿರೋಧಿಸುವುದು ಮಾಡಲು ಶುರು ಮಾಡಿದರು ಆಗ ಅಣ್ಣನ ಬಗ್ಗೆ ತಣ್ಣನೆಯ ಭಾವ ಉಂಟಾಗೋಯ್ತು. ನಾವು ಎಂದಿಗೂ ನಮ್ಮತನ ಬಿಡಬಾರದು.

ಒಬ್ಬ ವ್ಯಕ್ತಿ ಇಷ್ಟವಾಗಲಿಲ್ಲ ಎನ್ನುವ ಕಾರಣಕ್ಕೆ ದ್ವೇಷ ಕಾರುವುದನ್ನೇ ಪೂರ್ಣಾವಧಿ ಕಾಯಕ ಮಾಡಿಕೊಂಡರೆ ಹೇಗೆ? ಈ ಕಾರಣದಿಂದ ಪ್ರಕಾಶಣ್ಣ ಲಕ್ಷಾಂತರ ಅಭಿಮಾನಿಗಳನ್ನು ಕಳೆದುಕೊಂಡದ್ದು ಮಾತ್ರ ಸತ್ಯ.ಈತನ ಮಾತುಕತೆಗಳು ಇಂದಿಗೂ ನಿಂತಿಲ್ಲ. ಸುಖಾಸುಮ್ಮನೆ ಒಂದು ಪಂಥದಲ್ಲಿ ನಂಬಿಕೆ ಇಟ್ಟವರನ್ನು ಕೆಣಕುವುದು, ಅವರು ಅದಕ್ಕೆ ತಕ್ಕಂತೆ ಪ್ರತಿಕ್ರಿಯೆ ಕೊಟ್ಟರೆ 'ಇದ್ಯಾವ ಸೀಮೆ ನಾಗರೀಕ ಸಮಾಜ' ಎಂದು ಊಳಿಡುವುದು ಈತನ ಕೆಲಸವಾಗಿ ಹೋಗಿದೆ. ದೇಶದ ಜನರು ಆಯ್ಕೆ ಮಾಡಿ ಕಳಿಸಿರುವ ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿಯವರ ತಾಯಿ ಸತ್ತಾಗ, ಆಕೆಯ ಬಗ್ಗೆಯೂ, ಸಾವಿನ ಸಮಯದಲ್ಲೂ ಕುಹುಕದ ಮಾತನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕಿದ್ದರು. ಪ್ರಕಾಶ್ ರೈ ತಾಯಿಯವರು ಸತ್ತಾಗ ಬಹಳಷ್ಟು ಮಂದಿ ಅದೇ ರೀತಿಯಲ್ಲಿ ಅವರನ್ನು ಟ್ರೊಲ್ ಮಾಡಿದರು. 'ಮಾಡಿದುಣ್ಣೋ ಮಹರಾಯ.'

ಮೊನ್ನೆ ಅಂದರೆ ಏಪ್ರಿಲ್ 24ರಂದು ವರನಟ ಡಾ. ರಾಜಕುಮಾರ್ ಅವರ ಹುಟ್ಟುಹಬ್ಬವಿತ್ತು. ಜಗತ್ತಿನಾದ್ಯಂತ ಹರಡಿಕೊಂಡಿರುವ ಸಕಲ ಕನ್ನಡಿಗರೂ ಆ ದಿನವನ್ನು ಹಬ್ಬದಂತೆ ಆಚರಿಸಿದ್ದಾರೆ. ತಮ್ಮ ಇಷ್ಟದ ನಟನ ಹುಟ್ಟುಹಬ್ಬ ನಿಜಕ್ಕೂ ಕಲಾಭಿಮಾನಿಗಳ ಪಾಲಿಗೆ ಹಬ್ಬವೇ ಸರಿ. ಕನ್ನಡ ನಾಡಿಗೆ ನಾಡೇ ಅಣ್ಣಾವರ ಹುಟ್ಟು ಹಬ್ಬದ ನೆನಪಿನಲ್ಲಿ, ಖುಷಿಯಲ್ಲಿ ಅವರ ನೆನಪಿಗಾಗಿ ಅನ್ನದಾನ, ರಕ್ತದಾನ ಇತ್ಯಾದಿ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಮಗೆ ತೋಚಿದ ರೀತಿಯಲ್ಲಿ ಅಭಿಮಾನವನ್ನು ವ್ಯಕ್ತ ಪಡಿಸುತ್ತಾ ಇರಬೇಕಾದಾಗ ತನ್ನ ಹೆಸರಿನಲ್ಲಿ ಅಹಿಂಸಾ ಸೇರಿಸಿಕೊಂಡಿರುವ ಚೇತನ್ ಎನ್ನುವ ವಿದೇಶಿ ಪ್ರಜೆಯೊಬ್ಬ ರಾಜಕುಮಾರ್ ಅವರ ಸ್ಮಾರಕಕ್ಕೆ ಎರಡೂವರೆ ಎಕರೆ ಜಮೀನು, ಅದೂ ನಗರ ಪ್ರದೇಶದಲ್ಲಿ ಕೊಡುವುದರ ಔಚಿತ್ಯವೇನು? ಎಂದು ಪ್ರಶ್ನಿಸಿದ್ದಾರೆ. ಈತನ ಹುಚ್ಚಾಟಗಳು ಕೂಡ ಒಂದಲ್ಲ, ಎರಡಲ್ಲ. ಅದನ್ನು ಇಲ್ಲಿ ಮತ್ತೆ ಬರೆಯುವ ಕೆಲಸಕ್ಕೆ ನಾನು ಹೋಗುವುದಿಲ್ಲ. ಎಲ್ಲವೂ ಅಸಂಬದ್ಧ. ವಿರೋಧಿಸಬೇಕು ಎಂದು ವಿರೋಧಿಸುವುದು. ನಾನೇನೂ ಸಮಾಜಕ್ಕಿಂತ ವಿಭಿನ್ನ ಎಂದು ತೋರಿಸಿಕೊಳ್ಳುವ ಹೇಳಿಕೆಗಳನ್ನು ನೀಡುವುದು ಈತನ ಪ್ರಮುಖ ಕೆಲಸ. ಪ್ರಕಾಶ್ ರೈ ನಷ್ಟು ಉಡಾಫೆ ಇಲ್ಲದಿದ್ದರೂ, ಆತನಿಗೆ ಅತ್ಯಂತ ಸಮೀಪದಲ್ಲಿ ಸ್ಪರ್ಧೆ ನೀಡುವ ಇನ್ನೊಬ್ಬ ವ್ಯಕ್ತಿ ಕರ್ನಾಟಕದಲ್ಲಿದ್ದರೆ ಅದು ಚೇತನ್ ಎಂದು ಧಾರಾಳವಾಗಿ ಹೇಳಬಹುದು.

ಪ್ರಕಾಶ್ ರೈ ಅವರ ವಿಚಾರದಲ್ಲಿ ಸಾವಿರಾರು ಜನ ಅವರ ನಿಲುವಿಗೆ ವಿರುದ್ಧವಾಗಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಅದನ್ನು ನೀವೆಲ್ಲರೂ ಗಮನಿಸಿರುತ್ತೀರಿ. ಇನ್ನೂ ಚೇತನ್ ವಿಚಾರದಲ್ಲಿ ಏನಾಯ್ತು ಎನ್ನುವುದನ್ನು ಕೂಡ ನೀವೆಲ್ಲಾ ನೋಡಿದ್ದೀರಿ. ಆತನಿಗೆ ಸರಿಯಾಗಿ ಬಿಸಿ ಮುಟ್ಟಿಸಿದ್ದಾರೆ. ಸಾ ರಾ ಗೋವಿಂದ್ ಅವರಂತೂ ಏಕವಚನ ಪ್ರಯೋಗಕ್ಕೂ ಇಳಿದು ಬಿಟ್ಟಿದ್ದರು. ರಾಜ್ ಕುಮಾರ್ ಎಂದರೆ ಇವತ್ತಿಗೂ ಪ್ರಾಣ ಕೊಡಲು ತಯಾರಿರುವ ಅಭಿಮಾನಿಗಳ ಸಂಖ್ಯೆ ಕಡಿಮೆಯೇನಿಲ್ಲ. ಹೀಗಾಗಿ ಅವರ ಬಗ್ಗೆ ಮಾತನಾಡಿದ ಚೇತನ್ ಈ ಬಾರಿ ಮಾಡಿದುಣ್ಣೋ ಮಹರಾಯ ಎನ್ನುವ ಪದದ ಅರ್ಥವನ್ನು ತಿಳಿದುಕೊಳ್ಳುವಂತಾಯ್ತು.

ಈ ಎರಡು ವಿಚಾರಗಳನ್ನು ಕೇವಲ ರೆಫರೆನ್ಸ್ ಪಾಯಿಂಟ್ ಲೆಕ್ಕಾಚಾರದಲ್ಲಿ ನೀಡಿದ್ದೇನೆ. ಉಳಿದಂತೆ ಪ್ರಕಾಶ್ ರೈ ಇರಬಹುದು ಅಥವಾ ಅಹಿಂಸಾ ಚೇತನ್, ಒಂದು ಹಂತ ಮೀರಿದಾಗ ಸಮಾಜವೇ ಅದಕ್ಕೆ ತಕ್ಕ ಉತ್ತರವನ್ನು ನೀಡುತ್ತದೆ. ಈಗ ಮೇಲಿನ ಎರಡು ವಿಚಾರಗಳನ್ನು ಹೇಳಲು ಕಾರಣ ಮತ್ತು ಲೇಖನದಲ್ಲಿ ಪ್ರಮುಖವಾಗಿ ಯಾವ ವಿಚಾರವನ್ನು ಹೇಳಬೇಕು ಎಂದು ಬಯಸಿದ್ದೇನೆ ಆ ವಿಚಾರಕ್ಕೆ ಬರುತ್ತೇನೆ.

ನಾವೀಗ ಸೋಶಿಯಲ್ ಮೀಡಿಯಾ ಜನನಕ್ಕೂ ಹಿಂದಿನ ಸಮಯಕ್ಕೆ ಸ್ವಲ್ಪ ಹೋಗೋಣ. ಅವತ್ತಿನ ದಿನಗಳನ್ನು ನೆನಪು ಮಾಡಿಕೊಳ್ಳಿ. ನಮಗೆ ಒಬ್ಬ ಚಲನಚಿತ್ರ ನಟನಿರಬಹುದು, ಹಾಡುಗಾರನಿರಬಹುದು, ಆಟಗಾರನಿರಬಹುದು ಅಥವಾ ಇನ್ನ್ಯಾವುದೇ ಕ್ಷೇತ್ರದಲ್ಲಿ ಪ್ರಸಿದ್ಧ ವ್ಯಕ್ತಿಯಿರಬಹುದು. ಅವರನ್ನು ನಾವು ಅವರು ಮಾಡುವ ಕೆಲಸದ ಮೂಲಕ ಮಾತ್ರ ಬಲ್ಲವಾಗಿದ್ದೆವು. ಅವರ ಖಾಸಗಿ ಜೀವನ ಸಮಾಜದ ಎಲ್ಲ ಜನರಿಗೂ ತಿಳಿಯುತ್ತಿರಲಿಲ್ಲ. ಅವರ ಖಾಸಗಿ ಅಭಿಪ್ರಾಯಗಳು ಕೂಡ ನಮಗೆ ಗೊತ್ತಾಗುತ್ತಿರಲಿಲ್ಲ. ತೀರಾ ಸಾಮಾಜಿಕ ಬದುಕಿನಲ್ಲಿ ಗದ್ದಲ ಉಂಟು ಮಾಡಿಕೊಂಡರೆ, ಅಂದರೆ ಡೈವೋರ್ಸ್, ಹಣಕಾಸಿನ ಹಗರಣ ಇತ್ಯಾದಿಗಳು ಆದಾಗ ಒಂದಷ್ಟು ಪತ್ರಿಕೆಗಳಲ್ಲಿ ಅದು ಸುದ್ದಿಯಾಗುತ್ತಿತ್ತು. ಆ ಸುದ್ದಿಯನ್ನು ಓದಿದ ಜನ ತಮಗೆ ಬೇಕಾದ ರೀತಿಯಲ್ಲಿ ಆತನ ಅಥವಾ ಆಕೆಯ ಬಗ್ಗೆ ಒಂದು ಭಾವನೆಯನ್ನು ಕಟ್ಟಿಕೊಳ್ಳುತ್ತಿದ್ದರು. ಅವತ್ತಿನ ದಿನದಲ್ಲಿ ಒಬ್ಬ ವ್ಯಕ್ತಿಯ, ಸಂಸ್ಥೆಯ ವ್ಯಕ್ತಿತ್ವನ್ನು ಸಮಾಜಕ್ಕೆ ಹೇಗೆ, ಅಂದರೆ ಸಮಾಜದಲ್ಲಿ, ಜನರ ಮನಸ್ಸಿನಲ್ಲಿ ಒಳ್ಳೆಯ ಭಾವನೆ ಬರುವಂತೆ ನೋಡಿಕೊಳ್ಳಲು ಪಬ್ಲಿಕ್ ರಿಲೇಶನ್(ಪಿಆರ್)ಸಂಸ್ಥೆಗಳಿದ್ದವು. ಇವತ್ತಿಗೂ ಇವೆ. ಆದರೆ ಆ ದಿನಗಳಲ್ಲಿ ಅವು ಹೆಚ್ಚು ಪ್ರಭಾವಶಾಲಿಯಾಗಿದ್ದವು. ಅವತ್ತಿನ ದಿನಗಳಲ್ಲಿ ಸಂವಹನ ಒನ್-ವೇ ಆಗಿತ್ತು. ಅಂದರೆ ಕಮ್ಯುನಿಕೇಷನ್ ಒಮ್ಮುಖವಾಗಿ ಮಾತ್ರ ಆಗುತ್ತಿತ್ತು. ಬಹುತೇಕ ಬಾರಿ ನಾವು ಅಂದರೆ ಸಮಾಜ ಅದನ್ನು ರಿಸೀವ್ ಮಾಡಿಕೊಳ್ಳುತ್ತಿದ್ದೆವು. ನಮಗೆ ಅನ್ನಿಸಿದ್ದು, ನಮ್ಮ ಭಾವನೆ ವ್ಯಕ್ತ ಪಡಿಸಲು ಆಗುತ್ತಿರಲಿಲ್ಲ. ಅಂತಹ ದಿನಗಳಲ್ಲಿ ಪಿಆರ್ ಸಂಸ್ಥೆಗಳು ಹೇರಳವಾಗಿ ಬೆಳೆದುಕೊಂಡಿವೆ. ವ್ಯಕ್ತಿ ಅಥವಾ ಸಂಸ್ಥೆ ಅದೆಷ್ಟೇ ಭ್ರಷ್ಟವಾಗಿರಲಿ, ಕಿಸೆ ತುಂಬಾ ಹಣಕೊಟ್ಟರೆ ಸಾಕು ಹತ್ತು ರುಪಾಯಿ ಕೆಲಸಕ್ಕೆ ನೂರಾರು ರುಪಾಯಿ ಒಗ್ಗರಣೆ ಹಾಕಿ ಅದನ್ನು ಜನರಿಗೆ ತಲುಪಿಸುತ್ತಿತ್ತು. ವ್ಯಕ್ತಿಯನ್ನು ಅಥವಾ ಸಂಸ್ಥೆಯನ್ನು ಒಳ್ಳೆಯವರೆನ್ನುವ ಇಮೇಜ್ ಜನರಲ್ಲಿ ಬರುವಂತೆ ನೋಡಿಕೊಳ್ಳುತ್ತಿತ್ತು.

ಸೋಶಿಯಲ್ ಮೀಡಿಯಾ ಬಂದ ನಂತರ ನಾವು ಕಮ್ಯುನಿಕೇಟ್ ಮಾಡುವ ರೀತಿ ಪೂರ್ಣವಾಗಿ ಬದಲಾಗಿ ಹೋಗಿದೆ. ಇವತ್ತಿಗೂ ಪಿಆರ್ ಸಂಸ್ಥೆಗಳು ನಾಯಿಕೊಡೆಯಂತೆ ಎಲ್ಲಡೆ ಹಬ್ಬಿವೆ. ಕೆಲವು ಬಹುಪ್ರಸಿದ್ಧ. ಕೆಲವು ಸಾಮಾನ್ಯ. ಆದರೆ ಅವುಗಳು ಇಂದಿಗೂ ಅದೇ ಹಳಸಲು ಕೆಲಸವನ್ನು ಮಾಡುತ್ತಿವೆ. ತಮ್ಮ ಕ್ಲೈಂಟ್ ಅತ್ಯುತ್ತಮ ಎನ್ನುವುದನ್ನು ಜನರ ಮನಸ್ಸಿನಲ್ಲಿ ನೆಲೆಯೂರುವಂತೆ ಮಾಡುವುದು ಆ ಕೆಲಸ. ಇದು ಕೇವಲ ವ್ಯಕ್ತಿ, ಸಂಸ್ಥೆಗೆ ಮಾತ್ರ ಸೀಮಿತವಾಗಿಲ್ಲ. ಅದು ಪದಾರ್ಥ ಅಂದರೆ ಪ್ರಾಡಕ್ಟ್‌ಗೂ ಅನ್ವಯ. ಇವುಗಳಿಗೆ ಒಂದು ಉದಾಹರಣೆಯನ್ನು ನೀಡಬಹುದು. ಸಲ್ಮಾನ್ ಖಾನ್ ಎನ್ನುವ ನಟ ಹಲವಾರು ಕೇಸುಗಳಲ್ಲಿ ಇಂದಿಗೂ ಕ್ಲಿಯರೆನ್ಸ್ ಸಿಗದೆ ಇರುವ ವ್ಯಕ್ತಿ. ಆತ ಬಹಳ ಮಾನವತಾವಾದಿ, ಬಹಳಷ್ಟು ಜನರಿಗೆ ಸಹಾಯ ಮಾಡುತ್ತಾರೆ. ಮನೆಯಲ್ಲಿ ಗಣಪತಿ ಪೂಜೆಯನ್ನು

ಸಹ ಮಾಡುತ್ತಾರೆ. ಇತ್ಯಾದಿಗಳು ಆತನ ಕೆಟ್ಟ ಇಮೇಜ್ ತಿಳಿ ಮಾಡಲು ತೇಲಿ ಬಿಡುವ ಹುನ್ನಾರಗಳು. ಕೋಟ್ಯಂತರ ರುಪಾಯಿ ಪಡೆದ ಪಿಆರ್ ಸಂಸ್ಥೆಗಳು ಮಾಡುವುದು ಇದೆ ಕೆಲಸ. ಇವತ್ತಿನ ದಿನವಂತೂ ಸಾವಿರಾರು ಸಂಖ್ಯೆಯಲ್ಲಿ ಯೂಟ್ಯೂಬ್ ಚಾನಲುಗಳು ಹುಟ್ಟಿಕೊಂಡಿವೆ. ಅವುಗಳ ಮೂಲಕ ತಮಗೆ ಬೇಕಾದ ನರೇಟಿವ್ ಸೃಷ್ಟಿಸಿ ಬಿಡುವುದು ಸಾಮಾನ್ಯವಾಗಿ ಹೋಗಿದೆ. ನೂರೈವತ್ತು ಕೋಟಿ ಜನಸಂಖ್ಯೆಯಿರುವ ಭಾರತದಲ್ಲಿ ತೊಂಬತ್ತು ಕೋಟಿಗೂ ಹೆಚ್ಚಿನ ಸ್ಮಾರ್ಟ್ ಫೋನ್‌ಗಳಿವೆ. ಅವುಗಳಲ್ಲಿ ಜಗತ್ತಿನಲ್ಲೇ ಅತ್ಯಂತ ಕಡಿಮೆ ಬೆಲೆಗೆ ಸಿಗುವ ಡೇಟಾ ಲಭ್ಯವಿದೆ. ಜನರ ಬಳಿ ಮಾಡಲು ಕೆಲಸವಿಲ್ಲದೆ ಅಪಾರ ವೇಳೆಯಿದೆ. ಹೀಗಾಗಿ ರೀಲ್ಸ್ ಮೂಲಕ, ಶಾರ್ಟ್ಸ್ ಮೂಲಕ ಅವರನ್ನು ಸುಲಭವಾಗಿ ತಲುಪಬಹುದು. ಇವತ್ತೇನಿದ್ದರೂ ವ್ಯೂಸ್ ಲೆಕ್ಕಾಚಾರ! ಯಾರು ಎಷ್ಟು ಜನರನ್ನು ತಲುಪಬಲ್ಲರು ಎನ್ನುವುದರ ಆಧಾರದ ಮೇಲೆ ಹಣ ಕೂಡ ನಿಗದಿಯಾಗುತ್ತೆ. ಪಿಆರ್ ಸಂಸ್ಥೆಗಳು ಇಂತಹ ನೂರಾರು ಸಣ್ಣ-ಪುಟ್ಟ ವಾಹಿನಿಗಳ, ಇನ್ಫ್ಲುಯೆನ್ಸರ್‌ಗಳನ್ನು ಹಣ ಕೊಟ್ಟು ಖರೀದಿ ಮಾಡಿ ಬಿಡುತ್ತದೆ. ಮಿಕ್ಕದ್ದು ಅದದೇ ಕಥೆ.

ಆದರೆ, ಇವತ್ತಿನ ಸೋಶಿಯಲ್ ಮೀಡಿಯಾ ಯುಗದಲ್ಲಿ ಅಷ್ಟು ಸುಲಭವಾಗಿ ಜಯಿಸಿಕೊಳ್ಳಲು ಆಗುವುದಿಲ್ಲ. ಇವತ್ತು ಒಂದು ವಿಡಿಯೋ ಅಥವಾ ಫೋಟೊ ಅಥವಾ ಒಂದು ಸುದ್ದಿಯ ಸತ್ಯಾಸತ್ಯತೆಯನ್ನು ನೆಟ್ಟಿಗರು ಜಾಲಾಡಿ ಬಿಡುತ್ತಾರೆ. ಈ ಕಾರಣದಿಂದ ಏನೇ ಮಾಡಿದ್ದರೂ ಜಯಿಸಿಕೊಳ್ಳುತ್ತೇನೆ ಎನ್ನುವ ಕಾಲ ಮುಗಿಯುತ್ತ ಬಂದಿದೆ. ಸೋಶಿಯಲ್ ಮೀಡಿಯಾ ಬರುವುದಕ್ಕೆ ಮುಂಚೆ ನಮಗೆ ನಮ್ಮ ನೆಚ್ಚಿನ ಯಶಸ್ವಿ ವ್ಯಕ್ತಿಯ ಜತೆಗೆ ಸಂವಹನ ನಡೆಸಲು ಸಾಧ್ಯವಾಗುತ್ತಿರಲಿಲ್ಲ.

ಇವತ್ತು ಕಾಲ ಬದಲಾಗಿದೆ. ವ್ಯಕ್ತಿ ಅದೆಷ್ಟೇ ಪ್ರಸಿದ್ಧನಿರಲಿ, ಯಶಸ್ವಿಯಾಗಿರಲಿ, ಸೋಶಿಯಲ್ ಮೀಡಿಯಾದಲ್ಲಿ ಅವರ ಜನ್ಮವನ್ನು ಜಾಲಾಡಿ ಬಿಡುತ್ತಾರೆ. ಸೋಶಿಯಲ್ ಮೀಡಿಯಾ ಕೆಟ್ಟದ್ದು ಎನ್ನುವ ರೀತಿಯಲ್ಲಿ ಇದನ್ನು ಹೇಳುತ್ತಿಲ್ಲ. ಟ್ಯಾಲೆಂಟ್ ಇದ್ದು ಕೂಡ ಬೇರೆಯವರ ಅನುಮತಿಗೆ, ಒಪ್ಪಿಗೆಗೆ ಕಾಯಬೇಕಾಗಿತ್ತು. ನಿಜವಾದ ಟ್ಯಾಲೆಂಟ್ ಇದ್ದರೆ ಸಾಕು. ಇಂಟರ್‌ನೆಟ್ ಮೂಲಕ ಲಭ್ಯವಿರುವ ಅನೇಕ ವೇದಿಕೆಗಳನ್ನು ಬಳಸಿಕೊಂಡು ಸಮಾಜದ ಕಣ್ಣಿಗೆ ಬೀಳಬಹುದು. ಒಂದು ಸಣ್ಣ ನೃತ್ಯದ ತುಣುಕು, ಹಾಡಿನ ತುಣುಕು ಇತ್ಯಾದಿಗಳು ಕೋಟ್ಯಂತರ ಜನರನ್ನು ಅತ್ಯಂತ ಕಡಿಮೆ ಸಮಯದಲ್ಲಿ ತಲುಪಿಬಿಡುತ್ತದೆ. ರಾತ್ರಿ ಕಳೆದು ಬೆಳಗಾಗುವುದರಲ್ಲಿ ವ್ಯಕ್ತಿ ಪ್ರಸಿದ್ಧಿಯ ಶಿಖರವನ್ನು ತಲುಪಿ ಬಿಡಬಹುದು. ಹಾಗೆಯೇ ಅತ್ಯಂತ ಪ್ರಸಿದ್ಧ ವ್ಯಕ್ತಿ ಅಥವಾ ಸಂಸ್ಥೆ, ಹತ್ತಾರು, ನೂರಾರು ವರ್ಷಗಳು ಕಟ್ಟಿಕೊಂಡು ಬಂದಿದ್ದ ಇಮೇಜ್ ಕೂಡ ಕ್ಷಣದಲ್ಲಿ ಹರಾಜು ಹಾಕುವ ಶಕ್ತಿಯನ್ನು ಸೋಶಿಯಲ್ ಮೀಡಿಯಾ ಹೊಂದಿದೆ.

ಟಿಸಿಎಸ್ ಸಂಸ್ಥೆಯಲ್ಲಿ ಆದ ಘಟನೆ ಭಾರತದ ಉದ್ದಗಲಕ್ಕೂ ಹಬ್ಬಿದ ನಂತರ ಟಾಟಾ ಸಂಸ್ಥೆಯ ಇಮೇಜಿಗೆ ಧಕ್ಕೆಯಾಗಿರುವುದು ಸತ್ಯ. ಅದೇ ರೀತಿ ಲೆನ್ಸ್‌ಕಾರ್ಟ್ ಎನ್ನುವ ಸಂಸ್ಥೆ ಹಿಂದೂ ವಿರೋಧಿ ಎನ್ನುವ ಹಣೆಪಟ್ಟಿ ಹೊತ್ತುಕೊಂಡ ನಂತರ, ಸೋಶಿಯಲ್ ಮೀಡಿಯಾದಲ್ಲಿ ಈ ಬಗ್ಗೆ ಹೆಚ್ಚು ಹೆಚ್ಚು ವಿಡಿಯೊಗಳು ಬರಲು ಶುರುವಾದ ನಂತರ ಷೇರು ಮಾರುಕಟ್ಟೆಯಲ್ಲಿ ಲೆನ್ಸ್‌ಕಾರ್ಟ್ ಷೇರಿನ ಮೌಲ್ಯ ಕುಸಿತವಾಗಿರುವುದಕ್ಕೆ ಕೂಡ ನಾವೆಲ್ಲ ಸಾಕ್ಷಿಯಾಗಿದ್ದೇವೆ.

ಸೋಶಿಯಲ್ ಮೀಡಿಯಾ ಒಂದರ್ಥದಲ್ಲಿ ವರವೂ ಹೌದು, ಶಾಪವೂ ಹೌದು. ವರ ಏಕೆಂದರೆ ಇದನ್ನು ಸರಿಯಾಗಿ ಬಳಸಿಕೊಂಡರೆ, ಅಂದರೆ ಸಮಾಜಕ್ಕೆ, ಜನರಿಗೆ ಉಪಯೋಗವಾಗುವಂತಹ ಕೆಲಸವನ್ನು ಮಾಡುತ್ತಾ ಹೋದರೆ ಅಪಾರ ಜನಮನ್ನಣೆ ಜತೆಗೆ ಕೈತುಂಬಾ ಹಣವನ್ನು ಗಳಿಸಲು ಕೂಡ ಇದು ಸಹಾಯ ಮಾಡುತ್ತದೆ. ಶಾಪ ಏಕೆಂದರೆ ಇಲ್ಲಿ ಯಾವುದು ಸತ್ಯ, ಯಾವುದು ಸುಳ್ಳು ಎನ್ನುವುದನ್ನು ಬೇರ್ಪಡಿಸಲಾಗದಷ್ಟು ಮಾಹಿತಿ ಬಂದು ಬೀಳುತ್ತದೆ. ಈ ಸೋಶಿಯಲ್ ಮೀಡಿಯಾದಲ್ಲಿ ಬೇರೆಯವರ ಅನುಮತಿ ಬೇಕಿಲ್ಲದ ಕಾರಣ ಮನಸ್ಸಿಗೆ ಬಂದದ್ದು ಬರೆದು, ವಿಡಿಯೋ ಮಾಡಿ ಬದುಕನ್ನೇ ಹಾಳು ಮಾಡಿಕೊಂಡವರನ್ನು ಕೂಡ ಕಾಣಬಹುದು.

ಬದುಕಿನಲ್ಲಿ ಎಲ್ಲವೂ ಹೀಗೆ, ಒಂದು ಅನುಕೂಲದ ಜತೆಗೆ ಅನಾನುಕೂಲ ಜತೆಯಾಗೇ ಬರುತ್ತದೆ. ನಾವು ಅದನ್ನು ಹೇಗೆ ನಮ್ಮ ಅನುಕೂಲಕ್ಕೆ ಬಳಸಿಕೊಳ್ಳಬೇಕು ಎನ್ನುವುದನ್ನು ಕಲಿಯಬೇಕಿದೆ. ಯಾವುದನ್ನೂ, ಯಾರನ್ನೂ ವಿರೋಧಿಸಬೇಕು ಎನ್ನುವ ಕಾರಣಕ್ಕೆ ವಿರೋಧಿಸದೆ, ಸರಿತಪ್ಪುಗಳ ವಿವೇಚನೆ ಇಟ್ಟುಕೊಂಡು, ಜತೆಗೆ ಒಂದಷ್ಟು ಲಕ್ಷ್ಮಣ ರೇಖೆಗಳನ್ನು ಎಳೆದುಕೊಂಡು ಹೋದರೆ ಸೋಶಿಯಲ್ ಮೀಡಿಯಾ ನಿಜಕ್ಕೂ ಅನ್ನದ ದಾರಿಯೂ ಆಗುತ್ತದೆ. ಜನಮನ್ನಣೆಯನ್ನೂ ತಂದು ಕೊಡುತ್ತದೆ. ಹೀಗಾಗಿ ಇನ್ಮುಂದೆ ಸೋಶಿಯಲ್ ಮೀಡಿಯಾ ಎಂದು ಹೀಗೆಳೆಯುವ ಮುನ್ನ ಸ್ವಲ್ಪ ಯೋಚಿಸಿ!

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜನಿವಾರ, ಶಿವದಾರ, ಉಡುದಾರ

ಬೆಂಗಳೂರಿನ, ಕೋರಮಂಗಲದ ಕೃಪಾನಿಧಿ ಪದವಿಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ಬರೆಯಲು ಬಂದಿದ್ದ ಕೆಲ ಅಭ್ಯರ್ಥಿಗಳ ಜನಿವಾರ ತೆಗೆಸಿದ್ದಾರೆ ಎಂಬ ಕಾರಣಕ್ಕೆ ಮೂವರು ಪರೀಕ್ಷಾ ಸಿಬ್ಬಂದಿ ಗಳನ್ನು ಅಮಾನತು ಮಾಡಿ ರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಹಿಂದೆಯೂ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಬಂದ ಅಭ್ಯರ್ಥಿಗಳ ಜನಿ ವಾರ, ಶಿವದಾರ, ಉಡುದಾರ, ಕೈಯಲ್ಲಿ ಕಟ್ಟಿಕೊಂಡಿದ್ದ ದಾರಗಳನ್ನು ತೆಗೆಸಿದ ಬಗ್ಗೆ, ತುಂಬುದೋಳಿನ ಶರ್ಟ್ ಧರಿಸಿದ್ದರೆ, ಅವುಗಳನ್ನು ಕತ್ತರಿಸಿದ ಬಗ್ಗೆ ಹಾಗೂ ಮಹಿಳೆಯರ ಮಾಂಗಲ್ಯಸರ, ಕಿವಿ ಮತ್ತು ಮೂಗಿನ ಆಭರಣಗಳನ್ನು ತೆಗೆಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕ್ರಮಗಳು, ಮಾಹಿತಿ-ತಂತ್ರಜ್ಞಾನದಲ್ಲಿ ಮುಂದುವರಿದ ಈ ಕಾಲದಲ್ಲಿ, ಪರೀಕ್ಷೆಗಳಲ್ಲಿ ಯಾವುದೇ ಅಕ್ರಮ ಗಳು ನಡೆಯುವುದನ್ನು ತಡೆಯುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇ ಹೊರತು, ಪರೀಕ್ಷೆಗೆ ಹಾಜರಾಗುವ ಯಾವುದೇ ಅಭ್ಯರ್ಥಿಯ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಲು ಕೈಗೊಂಡ ಕ್ರಮಗಳಲ್ಲ. ಪರೀಕ್ಷಾರ್ಥಿಗಳು, ಪರೀಕ್ಷಾ ನೀತಿ-ನಿಬಂಧನೆಗಳನ್ನು ತಿಳಿದುಕೊಂಡು, ಅದರಂತೆ ನಡೆದುಕೊಂಡಲ್ಲಿ, ಕರ್ತವ್ಯನಿಷ್ಠ ಪರೀಕ್ಷಾ ಸಿಬ್ಬಂದಿಯ ತಲೆದಂಡವಾಗುವುದನ್ನು ತಪ್ಪಿಸಬಹುದು.

– ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ವಿಜಯನಗರ, ಬೆಂಗಳೂರು.

'ಪ್ರತಿಕ್ರಿಯೆ'ಗೆ ಮುಂದುವರೆದ ಭಾಗ

ಶ್ರೀಮತಿ ಲೀನಾ ಜೋಶಿ ಅವರು ಎರಡು ವಾರದಿಂದ ಮೊರಾರ್ಜಿ ದೇಸಾಯಿ ಅವರ ಬಗ್ಗೆ ಬರೆದಿರುವ ಘಟನೆಗಳು ಅವರ ಸ್ವಂತ ಅನುಭವಕ್ಕೆ ಬಂದವುಗಳಲ್ಲ. ಅವುಗಳೆಲ್ಲವೂ ಬೇರೆಯವರು ಬರೆದ ಪುಸ್ತಕದ ಆಧಾರದ ಮೇಲೆ. ಅವರೇ ತಮ್ಮ ಲೇಖನದ ಕೊನೆಯಲ್ಲಿ ತಿಳಿಸಿರುವಂತೆ ನಾವು ಓದುತ್ತಿರುವ ಇತಿಹಾಸ ಎಲ್ಲಿಂದಲೋ ಭಾರತಕ್ಕೆ ಬಂದ ಪ್ರವಾಸಿಗಳು ಬರೆದ ಪುಸ್ತಕದ ಆಧಾರದ ಮೇಲೆ. ನಮಗೆ ಬೇಕಾದ್ದನ್ನು ಮಾತ್ರ ತಿರುಚಿ ಉಳಿದಿದ್ದನು ಬಿಸಾಡುವುದು ಒಳ್ಳೆಯ ಜಾಯಮಾನವಲ್ಲ. ಅದು ನಿಜ. ಹಾಗಿದ್ದಲ್ಲಿ ಅವರ ಲೇಖನಗಳು ಕೂಡ ಯಾರೋ ಬರೆದಿದ್ದಾರಲ್ಲಿ ತಮಗೆ ಬೇಕಾದದ್ದನ್ನು ತೆಗೆದುಕೊಂಡು (ತಿರುಚಿದ್ದಾರೋ ಗೊತ್ತಿಲ್ಲ) ಉಳಿದಿದ್ದನ್ನು ಬಿಸಾಡಿದ ಹಾಗೆ ಕಾಣಿಸುತ್ತದೆ. ನಾನು ಈ ರೀತಿ ಬರೆಯಲು ಕಾರಣ ನನಗೆ ಈಗ 80 ವರ್ಷ ವಯಸ್ಸು, ಇನ್ನು ಸಾಕಷ್ಟು ಸದೃಢ ಮನಸ್ಸಿನವನು. 1977-80ರಲ್ಲಿ ನನ್ನ ವಯಸ್ಸು 31-34, ಹಾಗೂ ದೇಶದಲ್ಲಿ ಆಗುತ್ತಿದ್ದ ವಿಚಾರಗಳಲ್ಲಿ ಸಾಕಷ್ಟು ಆಸಕ್ತಿ ಹೊಂದಿದ್ದವನು. ಅವರು ತಿಳಿಸಿರುವಂತೆ ರಾ ಮುಖ್ಯಾಧಿಕಾರಿ ಕಾವ್ ಅವರನ್ನು ಆಗಿನ ಪ್ರಧಾನ ಮಂತ್ರಿ ಮೊರಾರ್ಜಿ ದೇಸಾಯಿ ಅವರು ಅವಮಾನಿಸಿದ್ದರೆ / ಕೆಲಸದಿಂದ ತೆಗೆದಿದ್ದರೆ ಅದು ದೊಡ್ಡ ಸುದ್ದಿಯಾಗಬೇಕಿತ್ತು, ಏಕೆಂದರೆ ಆಗ ದೇಶದಲ್ಲಿ ತುರ್ತು ಪರಿಸ್ಥಿತಿ ಇರಲಿಲ್ಲ. ಆದರೆ ಅಂತಃ ಯಾವುದೇ ಸಮಾಚಾರ ಪತ್ರಿಕೆಗಳಲ್ಲಿ ಅಥವ ಆಕಾಶವಾಣಿಯಲ್ಲಿ ಓದಿದ/ ಕೇಳಿದ ನೆನಪಿಲ್ಲ. ಆಗ ನಡೆದ ಎಲ್ಲ ಘಟನೆಗಳು ನೆನಪಿನಲ್ಲಿರುವುದರಿಂದ, ಇದೊಂದೇ ನೆನಪಿನಿಂದ ಅಳಿಸಿ ಹೋಗಿರುವ ಸಾಧ್ಯತೆಯೂ ಇಲ್ಲ.

1977 ಇರಲಿ ಅದಕ್ಕಿಂತ ಮುಂಚೆ 1966ರಲ್ಲಿ ಹಾಗೂ 1971ರಲ್ಲಿ ನಡೆದ ಎರಡು ಘಟನೆಗಳ ಬಗ್ಗೆ ಆಗಿನ ಪ್ರಧಾನ ಮಂತ್ರಿಗಳು ನಡೆದು ಕೊಂಡ ರೀತಿಯ ಮುಂದೆ ಮೊರಾರ್ಜಿ ದೇಸಾಯಿ ಅವರ ನಡವಳಿಕೆ ಏನೇನೂ ಅಲ್ಲ. 1966ರ ಜನವರಿಯಲ್ಲಿ ನಮ್ಮ ನೆಚ್ಚಿನ ಪ್ರಧಾನ ಮಂತ್ರಿ ಲಾಲ್ ಬಹದೂರ್ ಶಾಸ್ತ್ರಿ ಅವರು ತಾಶಕೆಂಟ್‌ನಲ್ಲಿ ಮರಣಿಸಿದ ಮೇಲೆ ಅವರ ದೇಹವನ್ನು ದೆಹಲಿಗೆ ತರಲಾಗಿತ್ತು. ಶಾಸ್ತ್ರಿ ಅವರ ಪತ್ನಿ ಮೃತ ದೇಹದ ಶವಪರೀಕ್ಷೆ ಮಾಡಿಸಲು ಅಥವಾ ತಪಾಸಣೆ ಆಗಿದ್ದರೆ ಅದರ ವರದಿಯನ್ನು ಕೊಡಲು ಕೇಳಿದಾಗ (ಅಂಗಲಾಚಿದಾಗ) ಹಂಗಾಮಿ ಪ್ರಧಾನಿ ಆಗಲಿ ಅಥವಾ ಅವರನ್ನು ಹಿಡಿತದಲ್ಲಿ ಇಟ್ಟು ಕೊಂಡಂತಹ ಮುಂದಿನ ಪ್ರಧಾನಿಯಾಗಲಿ ಅವರ ಬೇಡಿಕೆಗೆ ಸ್ಪಂದಿಸಲಿಲ್ಲ. ಮುಂದೆ, 1971 ಬಾಂಗ್ಲಾ ಕದನವಾದ ಮೇಲೆ ಆಗ ಸೇನಾ ಮುಖ್ಯಸ್ಥರಾದಂತಹ ಜನರಲ್ ಮನೇಕ್ ಶಾ ಅವರನ್ನು ಆಗಿನ ಪ್ರಧಾನ ಮಂತ್ರಿ ಅವಮಾನಿಸಿದ್ದಾಗಲಿ ಲೇಖಕರು(ಲೀನಾ ಜೋಶಿ) ಓದಲೇಬೇಕು. ಮುಂದೆ ಆದ ಪ್ರಧಾನ ಮಂತ್ರಿ, ಹಿಂದಿನ ಪ್ರಧಾನ ಮಂತ್ರಿಯ ದಾರಿಯಲ್ಲಿ ನಡೆದಿದ್ದರೆ ಆಶ್ಚರ್ಯ ಏನಿಲ್ಲ. ಇನ್ನು ಲೇಖಕರು ಶ್ರೀ ಮೊರಾರ್ಜಿ ದೇಸಾಯಿ ಹಾಗೂ ಶ್ರೀಮತಿ ಇಂದಿರಾ ಗಾಂಧಿ ಅವರ ನಡುವಿನ ವೈಮನಸ್ಸಿನ ಬಗ್ಗೆ ಬರೆದಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಯಾರೊಬ್ಬ ಹಿರಿಯ ಕಾಂಗ್ರೆಸ್ ನಾಯಕರೊಂದಿಗೆ (ಅವರ ಹೊಗಳು ಭಟರನ್ನು ಬಿಟ್ಟು) ಒಳ್ಳೆಯ ಸಂಬಂಧ ಇಟ್ಟುಕೊಂಡಿರಲಿಲ್ಲ. ಅದಕ್ಕೆ ಅಲ್ಲವೇ ನಿಜಲಿಂಗಪ್ಪ, ಕಾಮರಾಜ್ ನಾಡರ್, ಜಗಜೀವನರಾಮ್, ಮುಂತಾದವರು ತಾವು ಜೀವ ಸವೆಸಿದ ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷ ಕಟ್ಟಿದ್ದು. ಹಾಗಿದ್ದಾಗ ಕೇವಲ 2-3 ವರ್ಷ ಪ್ರಧಾನ ಮಂತ್ರಿಗಳ ಬಗ್ಗೆ ಬರೆದ ಹಾಗೆ ತಲಾ 17 ವರ್ಷ ಹಿಂದೆ ಪ್ರಧಾನಿ ಆಗಿದ್ದವರ ಅವಗುಣಗಳ ಬಗ್ಗೆಯೂ ಬರಿಯಲಿ. ಆಗ ಮೊರಾರ್ಜಿ ದೇಸಾಯಿ ಅವರಿಗೂ ನ್ಯಾಯ ಸಿಕ್ಕಹಾಗೆ ಆಗುತ್ತದೆ.

– ಮುಕುಂದ, ದಾವಣಗೆರೆ

ಸರಕಾರಿ ಜಿಹಾದ್?

TCS, ಲೆನ್ಸ್‌ಕಾರ್ಟ್ ಮುಂತಾದ ಸಂಸ್ಥೆಗಳಲ್ಲಿ ಜಿಹಾದ್ ಕಂಡು ಮನಸಾರೆ ಬೈದು ಬಹಿಷ್ಕಾರ ಹಾಕಿದ್ದಾಯ್ತು. ಈಗ ಸರಕಾರಿ ಕೃಪಾಪೋಷಿತ ಜಿಹಾದ್! ಸರಕಾರಿ ಅಧಿಕಾರಿಗಳೇ ಜನಿವಾರ ಕತ್ತರಿಸಿ ಬ್ರಾಹ್ಮಣರ ಧಾರ್ಮಿಕ ಶ್ರದ್ಧೆಗೆ ನೇರವಾಗಿ ಏಟು ನೀಡಿದ್ದಾರೆ. ಬ್ರಾಹ್ಮಣರನ್ನು ಮಾನಸಿಕ ಹಿಂಸೆಗೆ ಒಳಪಡಿಸುವುದೇ ಅವರ ಉದ್ದೇಶ ಹೊರತು ಬೇರೆ ಏನೇನೋ ಅಲ್ಲ. ಈ ಹೀನಾಯ ಕೃತ್ಯ ಪ್ರತಿ ವರ್ಷವೂ ಮರುಕಳಿಸುತ್ತಿದೆ. ಇಂತಹ ಕೃತ್ಯ ಎಸಗಿದ ಅಧಿಕಾರಿಗಳನ್ನು ನೆಪಮಾತ್ರಕ್ಕೆ ಎರಡು-ಮೂರು ತಿಂಗಳು ಅಮಾನತ್ತಿನ ಪ್ರಹಸನ ಮಾಡಲಾಗುತ್ತದೆ. ಮನೆಯಲ್ಲೇ ಕೂರಿಸಿ ಅರ್ಧ ಸಂಬಳ ನೀಡಿ, ನಂತರ ಬಾಕಿ ಸಂಬಳವನ್ನೂ ಪಾವತಿಸಲಾಗುತ್ತದೆ. ಕೆಲವರಿಗಂತೂ ವಾಪಸ್ ಬಂದಾಗ ಅದ್ದೂರಿ ಸ್ವಾಗತ, ಇನ್ನು ಕೆಲವರಿಗೆ ಪ್ರಮೋಷನ್ ಕೂಡ ಸಿಗುತ್ತದೆ! ಕಳೆದ ವರ್ಷ ಇಂತಹ ಕೃತ್ಯವೆಸಗಿ ಅಮಾನತುಗೊಂಡ ಅಧಿಕಾರಿಗಳು ಈಗ ಎಲ್ಲಿದ್ದಾರೆ? ಯಾವ ಸ್ಥಾನದಲ್ಲಿದ್ದಾರೆ? ಎಂದು ಮಾಧ್ಯಮಗಳು ಸಂಶೋಧನೆ ಮಾಡಲಿ. ಖಂಡಿತವಾಗಿಯೂ ಅವರಲ್ಲಿ ಯಾರಿಗೂ ಪಶ್ಚಾತ್ತಾಪವಿಲ್ಲ. ಬ್ರಾಹ್ಮಣ ಸಂಘಟನೆಗಳಿಗೆ ಪ್ರತಿಭಟಿಸುವ ಸಂಖ್ಯಾಬಲವಾಗಲಿ, ರಾಜಕೀಯ ಸಾಮರ್ಥ್ಯವಾಗಲಿ ಅಥವಾ ಒಗ್ಗಟ್ಟಾಗಲಿ ಇಲ್ಲ. ಮಠ-ಮಾನ್ಯಗಳು ಆಗೊಮ್ಮೆ ಈಗೊಮ್ಮೆ ಆವಾಜ಼್ ಹಾಕಿ, ನಂತರ ಪೂಜೆ-ನೈವೇದ್ಯಗಳಲ್ಲಿ ಮಗ್ನವಾಗಿಬಿಡುತ್ತವೆ. ಇನ್ನುಳಿದ ಸಮುದಾಯದವರು ಯಾರೂ ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ, ಪ್ರತಿಭಟಿಸುವುದೂ ಇಲ್ಲ. ಬದಲಾಗಿ, ಬ್ರಾಹ್ಮಣರಿಗೆ ತಕ್ಕ ಶಾಸ್ತಿಯಾಯಿತು ಎಂದು ಕುಹಕವಾಡುವವರೂ ಇದ್ದಾರೆ. ಇದೇ ರೀತಿಯ ಕೃತ್ಯ ಬೇರೆ ಕೋಮಿನವರ ವಿಷಯದಲ್ಲಿ ನಡೆದಿದ್ದರೆ, ಅದರ ಪರಿಣಾಮ ಊಹೆಗೂ ನಿಲುಕದಂತಿರುತ್ತಿತ್ತು. ಇಡೀ ರಾಜ್ಯವೇ ಹೊತ್ತಿ ಉರಿಯುತ್ತಿತ್ತು. ಪ್ರತಿಭಟನೆಗೆ ಸರಕಾರ ಹಾಗೂ ಪೊಲೀಸರ ಬೆಂಬಲವೂ ಇರುತ್ತಿತ್ತು. ಕೃತ್ಯವೆಸಗಿದ ಅಧಿಕಾರಿಗಳ ಮನೆ ಮೇಲೆ ಕಲ್ಲು ಬೀಳುತ್ತಿತು. ತೊಳ್ಬಲವಿಲ್ಲದ, ಕೇವಲ ಒಂದೂವರೆ ಪ್ರತಿಶತ ಇರುವ ಬ್ರಾಹ್ಮಣರೇ ಹಿಂದೂ ಸಮಾಜದ ಎಲ್ಲ ಅನಿಷ್ಟಗಳಿಗೆ ಕಾರಣ ಎಂಬ 'ಲೇಬಲ್' ಅನ್ನು ಈಗಾಗಲೇ ಹಚ್ಚಲಾಗಿದೆ. ಈ ಮನಸ್ಥಿತಿ ಎಂತಹ ಅಪಾಯಕಾರಿ ಮಟ್ಟಕ್ಕೆ ತಲುಪಿದೆ ನೋಡಿ. ಬ್ರಾಹ್ಮಣರು ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ ಮಾತ್ರಕ್ಕೆ ಬ್ರಾಹ್ಮಣರಾಗಿದ್ದಾರೆ. ಬಹುಶಃ ಹುಟ್ಟುವ ಮುನ್ನವೇ ಭಗವಂತ ಮಗುವಿಗೆ ಯಾವ ಜಾತಿ ಬೇಕು? ಎಂದು ಆಯ್ಕೆ ನೀಡಿ ಅರ್ಜಿ ಆಹ್ವಾನಿಸಿದ್ದರೆ, ಇಂದು ಯಾರೂ ಬ್ರಾಹ್ಮಣ್ಯವನ್ನು ಆರಿಸಿ ಕೊಳ್ಳುತ್ತಿರಲಿಲ್ಲವೇನೋ! ನೀವೇನಂತೀರಿ?

– ಶರದ್ ದೇಶಪಾಂಡೆ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಹಳಿ ತಪ್ಪುತ್ತಿದೆ ಭಾರತೀಯ ಕುಟುಂಬ ವ್ಯವಸ್ಥೆ

ನಮ್ಮ ಹಿರಿಯರು ಹಾಕಿ ಕೊಟ್ಟ ಸಂಪ್ರದಾಯ, ಮಾನವೀಯ ಸಂಬಂಧ ಹಾಗೂ ಸಂಬಂಧಗಳ ಭದ್ರ ಬುನಾದಿ ಎನ್ನುವುದು ಒಂದೆಯಲ್ಲ ಅದು ತದ್ವಿರುದ್ಧ ಹಾದಿಯಲ್ಲಿ ಸಾಗುತ್ತಿರುವುದು ಭವಿಷ್ಯದ ಸಂಬಂಧ, ಕೌಟುಂಬಿಕ ಜೀವನ, ಬದುಕುವ ಪದ್ಧತಿ ಎಲ್ಲವೂ ಪಾಶ್ಚಾತ್ಯ ಶೈಲಿ, ವ್ಯಾಪಾರ, ವ್ಯವಹಾರಿಕ ದಿಕ್ಕಿನಲ್ಲಿ ಸಾಗಿ ಮನುಷ್ಯ ಸಂಬಂಧಗಳೆಂಬುವುದು ನಗಣ್ಯ ಹಾಗೂ ಅರ್ಥ ಕಳೆದುಕೊಳ್ಳುವತ್ತ ಸಾಗುತ್ತಿದೆ.

ವಾಸ್ತವತೆ
ಆದರ್ಶ್ ಶೆಟ್ಟಿ, ಉಪ್ಪಿನಂಗಡಿ
vveditoped@gmail.com

ಜಗತ್ತಿನಲ್ಲಿ ಭಾರತೀಯ ಕುಟುಂಬ ವ್ಯವಸ್ಥೆ ಹಾಗೂ ಸಂಸ್ಕೃತಿಗೆ ವಿಶೇಷ ಸ್ಥಾನಮಾನಗಳಿವೆ. ಭಾರತದ ತಳಹದಿಯೇ ಕುಟುಂಬ ವ್ಯವಸ್ಥೆ. ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಭಾವನಾತ್ಮಕ ಸಂಬಂಧ, ಸಂಸ್ಕಾರದ ಹಾದಿ, ವಿಶೇಷವಾಗಿ ಮಾನವೀಯ ಗುಣಗಳು ಅಡಕವಾಗಿವೆ. ಬಹುಮುಖ್ಯವಾಗಿ ಸ್ತ್ರೀಯರನ್ನು, ಮಾತೆಯರನ್ನು ಪೂಜನೀಯ ಭಾವದಲ್ಲಿ ಕಂಡ ದೇಶ ಭಾರತ.

ಜಗತ್ತಿನಲ್ಲಿ ಭಾರತೀಯ ಸಂಸ್ಕೃತಿಗೆ ಮಾರುಹೋಗದ ದೇಶಗಳೇ ಕಾಣಸಿಗುವುದು ಅಪರೂಪ. ಇಂತಹದ್ದೊಂದು ನಡೆಗೆ ಹಾದಿ ತೋರಿಸಿಕೊಟ್ಟವರು ನಮ್ಮ ಹಿರಿಯರು, ಪೂರ್ವಜರು, ಗತಿಸಿಹೋದ ಹಲವಾರು ತಲೆಮಾರುಗಳೆಂದರೂ ತಪ್ಪಾಗಲಾರದು. ಆ ಕಾರಣಕ್ಕಾಗಿ ಭಾರತೀಯ ಕೌಟುಂಬಿಕ ಪದ್ಧತಿ, ಸಂಬಂಧಗಳು, ಆಚಾರ ವಿಚಾರ, ಸಂಪ್ರ ದಾಯಗಳು ಇಂದಿಗೂ ಜೀವಂತವಾಗಿ ಉಳಿದಿದೆ ಯೆಂದರೆ ಅತಿಶಯೋಕ್ತಿ ಅಲ್ಲ.

ವರ್ಷಗಳು ಉರುಳಿದಂತೆ ನಮ್ಮ ಹಿರಿಯರು ಹಾಕಿ ಕೊಟ್ಟ ಸಂಪ್ರದಾಯ, ಮಾನವೀಯ ಸಂಬಂಧ ಹಾಗೂ ಸಂಬಂಧಗಳ ಭದ್ರ ಬುನಾದಿ ಎಂಬುವುದೊಂದಿದೆಯಲ್ಲ ಅದು ತದ್ವಿರುದ್ಧ ಹಾದಿಯಲ್ಲಿ ಸಾಗುತ್ತಿರುವುದು ಭವಿಷ್ಯದ ಸಂಬಂಧ, ಕೌಟುಂಬಿಕ ಜೀವನ, ಬದುಕುವ ಪದ್ಧತಿ ಎಲ್ಲವೂ ಪಾಶ್ಚಾತ್ಯ ಶೈಲಿ, ವ್ಯಾಪಾರ, ವ್ಯವಹಾರಿಕ ದಿಕ್ಕಿನಲ್ಲಿ ಸಾಗಿ ಮನುಷ್ಯ ಸಂಬಂಧಗಳೆಂಬುವುದು ನಗಣ್ಯ ಹಾಗೂ ಅರ್ಥ ಕಳೆದುಕೊಳ್ಳುವತ್ತ ಸಾಗುತ್ತಿದೆ.

ಒಂದು ಮಗು ಜನ್ಮ ತಾಳಿ ಭೂಮಿಗೆ ಕಾಲಿಟ್ಟ ದಿನದಿಂದ ಆಚರಿಸಲ್ಪಡುವ ಮಗುವಿನ ನಾಮಕರಣ, ತೊಟ್ಟಿಲು ಹಾಕುವ ಪದ್ಧತಿ ಆಚರಣೆಯಿಂದ ಹಿಡಿದು ಮದುವೆ, ವಯೋಸಹಜ ಸಾವಿನ ಕಾರ್ಯಕ್ರಮದವರೆಗಿನ ಕಟ್ಟುಪಾಡುಗಳು, ಸಂಪ್ರದಾಯಗಳು ಈ ಹಿಂದೆ ಹೇಗಿತ್ತು? ಕಾಲಕಳೆದಂತೆ ಹೇಗೆಲ್ಲ ಮಾರ್ಪಾಡುಗಳಾಗಿವೆ? ಮನೆ ಮಂದಿಯ ಸಂಬಂಧಗಳು, ವೈವಾಹಿಕ ಸಂಬಂಧಗಳು, ಅವಿಭಕ್ತ ಕುಟುಂಬ, ಆಚಾರ ಪದ್ಧತಿ, ಅನುಶಾಸನಗಳು ಯಾವ ಪ್ರಮಾಣದಲ್ಲಿ ಅಧಃಪತನಕ್ಕಿಳಿದಿದೆ ಎಂಬುವುದನ್ನು ಕಲ್ಪಿಸಲು ಅಸಾಧ್ಯ.

ಹಿಂದೆಲ್ಲಾ ಒಂದು ಮನೆಯಲ್ಲಿ ಅವಿಭಕ್ತ ಕುಟುಂಬ ಅಂದರೆ 20 ರಿಂದ 25 ಮಂದಿ ವಾಸಿಸುವ ಕೂಡಿ ಬಾಳುವ ಮನಸ್ಸುಗಳನ್ನು ಕಾಣುತ್ತಿದ್ದೆವು. ಒಟ್ಟಾಗಿ ಮನೆಯಲ್ಲಿ ಭಜನೆ ಹಾಡುವ, ಒಟ್ಟಾಗಿ ಅಂಗಳದಲ್ಲಿ ಆಟವಾಡುವ, ಮನೆಮಂದಿಯೆಲ್ಲ ಒಟ್ಟಾಗಿ ಕುಳಿತು ಉಣ್ಣುವಲ್ಲಿಯವರೆಗೆ ಸಂಸಾರದ ಹೊಂದಾಣಿಕೆಗಳಿದ್ದವು. ಪ್ರಸ್ತುತ ದಿನಗಳಲ್ಲಿ ವಧು-ವರ ಅನ್ವೇಷಣೆಯನ್ನೇ ಗಣನೆಗೆ ತೆಗೆದುಕೊಳ್ಳುವುದಾದರೆ 30, 35, 40 ವರ್ಷಗಳು ದಾಟಿದ ಅದೆಷ್ಟೋ ಯುವಕರಿಗೆ ಹೆಣ್ಣು ಸಿಗದಂತಹ ವಾತಾವರಣ ಎಲ್ಲ ಸಮುದಾಯದಲ್ಲಿ ಕಾಣಬಹುದಾಗಿದೆ. ಸರಕಾರಿ ಉದ್ಯೋಗ, ವಿದೇಶದಲ್ಲಿ ಉದ್ಯೋಗ, ಲಕ್ಷ ಲಕ್ಷ ಸಂಪಾದನೆ, ಕೃಷಿ ಚಟುವಟಿಕೆ, ರೈತ ಕುಟುಂಬಗಳ ನಿರಾಕರಣೆ, ಮನೆಯಲ್ಲಿ ಹಿರಿಯ ಜೀವಗಳು ಅಂದರೆ ಹೆತ್ತ ತಂದೆ ತಾಯಂದಿರು ಇರಬಾರದು. ಇದ್ದರೆ ಆ ಹಿರಿ ಜೀವಗಳಿಗೆ ನಿರುಪಯುಕ್ತ ವಸ್ತುಗಳೆಂಬ ಹಣೆಪಟ್ಟಿ, ವಯಸ್ಸಿನ ಅಂತರ 2 ಅಥವಾ 3 ವರ್ಷಗಳ ಬೇಡಿಕೆ, ಹಿಂದೆಲ್ಲ ಅಪ್ಪ-ಅಮ್ಮ ಅಥವಾ ಹಿರಿಯರು ಒಂದು ಹುಡುಗಿಗೆ ಹುಡುಗನನ್ನು ಗೊತ್ತುಮಾಡಿದರೆ ಅಥವಾ ಹುಡುಗನಿಗೆ ಹುಡುಗಿ ನೋಡಿ ಬಿಟ್ಟರೆ ಅಲ್ಲಿಗೆ ಎಲ್ಲವೂ ಫೈನಲ್ ಆಗಿ ಅಂತಿಮ ಮುದ್ರೆ ಬೀಳುತ್ತಿತ್ತು. ಪ್ರಸ್ತುತ ದಿನಗಳಲ್ಲಿ ಮಕ್ಕಳ ನಿರ್ಧಾರಗಳೇ ಪ್ರಧಾನವಾಗಿ ಕೊನೆಗೆ ಪೋಷಕರು ಮಂಗಳ ಕಾರ್ಯಕ್ಕೆ ಇಳಿಯುವ ಮೂಲಕ ತದ್ವಿರುದ್ಧ ಸ್ಥಿತಿಯಲ್ಲಿದೆ.

ನಾವು ದಿನಪತ್ರಿಕೆಗಳ ಪುಟಗಳನ್ನು ತಿರುವಿದಾಗ ಕಾಣಸಿಗುವ ಆಘಾತಕಾರಿ ಅಂಶಗಳ ಪೈಕಿ ಹೆಣ್ಣು ಸಿಗದೆ ಯುವಕ ಆತ್ಮಹತ್ಯೆ,



ಮದುವೆಯಾಗದ ಕೊರಗು ಯುವಕ ವಿಷ ಸೇವಿಸಿ ಆತ್ಮಹತ್ಯೆಯಂತಹ ಪ್ರಕರಣಗಳನ್ನು ಕಾಣುತ್ತೇವೆ. ಎಲ್ಲಿಯವರೆಗೆ ಪರಿಸ್ಥಿತಿ ತಲುಪಿದೆಯೆಂದರೆ ಇತ್ತೀಚೆಗೆ ಮುಖ್ಯಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮವೊಂದರಲ್ಲಿ ಯುವಕನೊಬ್ಬ ಮದುವೆಯಾಗಿಲ್ಲ ಹೆಣ್ಣು ಸಿಗುತ್ತಾ ಇಲ್ಲ ಹುಡುಗಿ ಹುಡುಕಿ ಕೊಡಿ ಸರ್ ಎಂದು ಯುವಕನೊಬ್ಬ ಖುದ್ದು ಮುಖ್ಯಮಂತ್ರಿಗಳಿಗೇ ಅಹವಾಲು ಸಲ್ಲಿಸಿದ. ಹಿಂದೆಲ್ಲಾ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗಿನ ಹಾವಳಿಗೆ ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು, ವರದಕ್ಷಿಣೆಗಾಗಿ ಹೆಣ್ಣು ಮಕ್ಕಳನ್ನು ಪೀಡಿಸುವ ಗಂಡ, ಮಾವ, ಅತ್ತೆಯಂದಿರು, ಪೆಟ್ರೋಲ್, ಸೀಮೆಎಣ್ಣೆ ಸುರಿಯುವ ಹಂತದವರೆಗೂ ತಲುಪುತ್ತಿತ್ತು ಪರಿಸ್ಥಿತಿ.

ವೈವಾಹಿಕ ಸಂಬಂಧಗಳ ಅನ್ವೇಷಣೆಯಲ್ಲೂ ಮಾನ ವೀಯ ಗುಣಗಳು ನಶಿಸಿ ಹೋಗುತ್ತಿರುವ ಘಟನೆಗಳು ಸಾಕಷ್ಟಿ ವೆ. ವಿವಾಹ ಸಂಬಂಧಗಳು ಎರಡು ಕಡೆಗೆ ಒಪ್ಪಿಗೆಯಾಗಿ, ನಿಶ್ಚಿತಾರ್ಥ ಎಲ್ಲವೂ ನಡೆದು ಮದುವೆ ಮುಂಚಿನ ದಿನ ಪ್ರಿಯಕರನೊಂದಿಗೆ ಪರಾರಿಯಾಗುವ ಯುವಕ, ಯುವತಿಯರು, ಇನ್ನ್ಯಾವುದೋ ವಿಚಾರಗಳಿಗೆ ಹಸೆಮಣೆಯಿಂದ ವಧು ಎದ್ದು ಹೋಗುವ ವಿದ್ಯಮಾನಗಳು, ಒಂದೆಡೆಯಾದರೆ,ದುಬಾರಿ ಮೊಬೈಲ್ ಕೊಡಿಸಿಲ್ಲ, ಒಡವೆ ಕೊಡಿಸಿಲ್ಲ, ಇನ್ನಿತರ ಕ್ಷುಲ್ಲಕ ಕಾರಣಗಳಿಗಾಗಿ ವಿವಾಹ ಸಂಬಂಧಗಳನ್ನೇ ಕಡಿದುಕೊಳ್ಳುವ ಹಲವಾರು ವಿದ್ಯಮಾನಗಳು ಮದುವೆ ಎಂಬ ಸಂಬಂಧದ ಗಂಭೀರತೆಯನ್ನು ಅಣಕಿಸುವಂತಿದೆ. ಇಂತಹ ದುಸ್ಸಾಹಸಕ್ಕೆ ಇಳಿಯುವ, ಐಷಾರಾಮಿ, ಅಮಾನವೀಯ ಬೇಡಿಕೆಗಳಿಗೆ ಸಂಬಂಧವನ್ನು ಅಡವಿಡುವ ಯುವಸಮುದಾಯಗಳು ಒಂದು ಬಾರಿ ತಮ್ಮ ಹೆತ್ತ ತಂದೆ-ತಾಯಂದಿರು, ಅಜ್ಜ-ಅಜ್ಜಿಯಂದಿರು ಎಷ್ಟು ಸಂಕಷ್ಟದ ಸಮಯದಲ್ಲಿ ಎಲ್ಲ ನೋವುಗಳನ್ನು ನುಂಗಿ ದಾಂಪತ್ಯ ಎಂಬ ಮೌಲ್ಯಯುತ ಬದುಕಿಗೆ ತ್ಯಾಗಮಯಿಗಳಾಗಿ ನ್ಯಾಯ ಒದಗಿಸಿಕೊಟ್ಟಿರುವುದನ್ನು ಯೋಚಿಸಬೇಕಿದೆ.

ಇನ್ನು ಸಮಾಜದಲ್ಲಿ ಅತಿ ವೇಗವಾಗಿ ಹರಡುತ್ತಿರುವ ಮತ್ತೊಂದು ಪಿಡುಗು ವಿಚ್ಛೇದನ ಪ್ರಕರಣಗಳು. ಇಂದು ನ್ಯಾಯಾಲಯದ ಮೆಟ್ಟಿಲಲ್ಲಿ ಅಪರಾಧ ಪ್ರಕರಣಗಳಿಂತ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗುತ್ತಿರುವುದು ದಂಪತಿಗಳ ಕಲಹ, ದಾಂಪತ್ಯ ವಿರಸ, ವಿಚ್ಛೇದನ ಕೋರಿ ಬರುವ ಮನವಿಗಳು. ಇತ್ತೀಚೆಗೆ ಸಿಕ್ಕ ನ್ಯಾಯವಾದಿ ಮಿತ್ರರೊಬ್ಬರ ಮಾತಿನಂತೆ ಈ ವಿಚ್ಛೇದನ ಪ್ರಕರಣಗಳು ಯಾವುದೇ ಬಹುದೊಡ್ಡ ಸವಾಲು, ಬಿಡಿಸಲಾಗದ, ಕಗ್ಗಂಟಾದ ಸಮಸ್ಯೆಗಳಿಂದ ನಡೆಯುತ್ತಿರುವುದಲ್ಲ. ಬದಲಾಗಿ ಕ್ಷುಲ್ಲಕ ಕಾರಣಗಳಿಗಾಗಿಯೇ ದಾಂಪತ್ಯ ಹೊಂದಾಣಿಕೆಯಾಗದೆ ನಡೆಯುತ್ತಿರುವ ಘಟನೆಗಳು. ಇಂತಹ ಪ್ರಕರಣಗಳಲ್ಲಿ ವಿಚಾರಣೆಯ ಮೇಲೆ ಖುದ್ದು ನ್ಯಾಯಾಧೀಶರೇ ಗರಂ ಆಗಿ ಗದರಿಸಿದ ನಿದರ್ಶನಗಳಿವೆ. ಯಾಕೆ ಸಣ್ಣ-ಪುಟ್ಟ ಸಂಗತಿಗಳು, ಸವಾಲುಗಳನ್ನು ಎದುರಿಸುವಲ್ಲಿ ಯುವ ಸಮುದಾಯ ಎಡವಿ ಬೀಳುತ್ತಿವೆ? ಇಂದಿನ ಶಿಕ್ಷಣದ ಮಟ್ಟವೇ? ಸಾಮಾಜಿಕ ಮಾಧ್ಯಮ, ಜಾಲತಾಣಗಳ ಪ್ರಭಾವವೇ? ಕಾನೂನಿನಲ್ಲಿ ಮಿತಿಮೀರಿದ ನಿಯಮಗಳ ಸಡಿಲಿಕೆಯೇ? ಪಾಶ್ಚಾತ್ಯ ಪ್ರಭಾವ, ಪೋಷಕರು ಬೆಳೆಸಿದ ರೀತಿಯೇ? ಎಂಬುದು ಕೂಡ ಚರ್ಚೆಗೆ ಹಚ್ಚುವ ವಿಚಾರಗಳೇ.

ಇನ್ನು ಕೌಟುಂಬಿಕ ಮಟ್ಟದಲ್ಲಿ ಮಗುವಿನ ನಾಮಕರಣ, ಮದುವೆ, ಮದರಂಗಿ ಶಾಸ್ತ್ರ, ಸಂಗೀತ್, ಸೀಮಂತ, ಒಬ್ಬ ವ್ಯಕ್ತಿ ಸತ್ತಾಗ ನಡೆಸುವ ವಿಧಿ ವಿಧಾನಗಳು ನಂತರದ ಆಚರಣೆಗಳು ಇರಬಹುದು, ಕುಟುಂಬದ ದೇವಾರಾಧನೆ, ದೈವಾರಾಧನೆ, ನಾಗಾರಾಧನೆ, ಗೃಹಪ್ರವೇಶ ಅಥವಾ ಇನ್ನ್ಯಾವುದೇ ಕಾರ್ಯಕ್ರಮ ವಿಚಾರಕ್ಕೆ ಬಂದಾಗ ಕಟ್ಟುಪಾಡುಗಳು, ಸಂಪ್ರದಾಯ, ಆಚರಣೆಗಳನ್ನು ಮೀರಿ ಪ್ರತಿಷ್ಠೆಯ ಕಣವಾಗಿ, ದುಂದುವೆಚ್ಚಕ್ಕೆ ಹೊಸ ಹೊಸ ಸಂಪ್ರದಾಯಗಳಿಗೆ ನಾಂದಿ ಹಾಡುವ ಪದ್ಧತಿಗಳು ಜೋರಾಗಿ ನಡೆಯುತ್ತಿವೆ. ತಾನು ಕೂಡಿಟ್ಟ ಸಂಪತ್ತು, ಐಶ್ವರ್ಯವನ್ನು ನಾಲ್ಕು ಮಂದಿಗೆ ಪ್ರದರ್ಶಿಸಬೇಕು, ಪ್ರಚಾರ ಬೇಕು ಎಂಬಲ್ಲಿಗೆ ನಡೆಸಿದ ಕಾರ್ಯಕ್ರಮ ಅರ್ಥ ಕಳೆದುಕೊಂಡು ಸಮಾಜದ ದಿಕ್ಕು ತಪ್ಪಲು ಅಮಾನವೀಯ ನಡೆಗಳಿಗೆ ಪ್ರೇರಣೆ ನೀಡಿದಂತಾಗುತ್ತದೆ.

ಈಗಿನ ಆಧುನಿಕ ಜೀವನದ ಶೈಲಿಗೆ ಬಡಮಂದಿ ತಮ್ಮ ಮಕ್ಕಳಿಗೆ ಶುಭ ಕಾರ್ಯವನ್ನು ನಡೆಸಬೇಕಾದರೆ, ಒಡವೆ, ಬಟ್ಟೆಬರೆಗಳನ್ನು ಕೂಡಿಡುವಷ್ಟರ ಮಟ್ಟಿಗೆ ಹೈರಾಣಾಗಿ ಬಿಡುತ್ತಾರೆ. ಈಗಿನ ಕೆಲ ಮದುವೆ, ಗೃಹಪ್ರವೇಶ, ಸೀಮಂತ, ನಿಶ್ಚಿತಾರ್ಥದಂತಹ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ತುಲನೆ ಮಾಡಿದಾಗ ಈ ಹಿಂದಿನ ಕಾಲದಲ್ಲಿ 5-6 ಮಂದಿಗೆ ಮದುವೆ ನಡೆಸುವಷ್ಟರ ಮಟ್ಟಿಗೆ ವ್ಯಯಿಸಲಾಗುತ್ತಿದೆ. ಉಳ್ಳವರು ಎಲ್ಲವನ್ನೂ ಮಾಡುವರು ಆದರೆ ನಮ್ಮ ಸಮಾಜದಲ್ಲಿ ಒಂದು ಮಧ್ಯಮವರ್ಗ, ಬಡ ವರ್ಗ ಎಂಬುದು ಇದೆಯಲ್ಲ ಈ ವರ್ಗ ಇದರ ಪೆಟ್ಟು ವ್ಯಾಪಕ ಪ್ರಮಾಣದಲ್ಲಿ ತಿನ್ನುತ್ತಿವೆ.

ಇನ್ನು ಕೌಟುಂಬಿಕ, ದಾಂಪತ್ಯ ಜೀವನಗಳಿರಬಹುದು ಇದು ಯಾವುದೇ ಶೋಕಿ, ಪ್ರಯೋಗ, ತೋರ್ಪಡಿಕೆಯ ವಿಚಾರಗಳಾಗದೆ ಮೌಲ್ಯವನ್ನು ಉಳಿಸಿಕೊಂಡು ಸಾಗಬೇಕು. ಗುರು ಹಿರಿಯರು ಬಂಧು ಬಳಗವನ್ನು ಒಟ್ಟಾಗಿ ಕರೆದೊಯ್ಯುವ ವ್ಯವಸ್ಥೆಗಳಾಗಬೇಕು. ಸವಾಲು, ಕ್ಷುಲ್ಲಕ ಕಾರಣಗಳ ಸೇಡು, ಹಠ, ಜಿದ್ದು, ಸ್ವಾರ್ಥ ಎಂಬುವುದು ಸಂಸಾರದಲ್ಲಿ ಸೋಕಿದಾಗ ಅಲ್ಲಿ ಬಿರುಕು, ವ್ಯತ್ಯಯಗಳಾಗುವುದನ್ನು ಕಾಣುತ್ತೇವೆ. ಎಷ್ಟೇ ಸಂಪತ್ತು, ಐಶ್ವರ್ಯಗಳಿದ್ದರೂ ಒಬ್ಬ ಮನುಷ್ಯನ ಜೀವಿತಾವಧಿಯಲ್ಲಿ ಮಾತ್ರ ಅದು ಪ್ರಯೋಜನಕ್ಕೆ ಬರುವುದೇ ವಿನಃ ಸತ್ತ ಮೇಲೆ ಎಲ್ಲವೂ ನಗಣ್ಯ. ಆ ಕಾರಣಕ್ಕೆ ಮನುಷ್ಯನಿಗೆ ಬಹುಮುಖ್ಯವಾಗಿ ಬೇಕಿರುವುದು ಆರೋಗ್ಯ. ಮತ್ತೊಂದು ಕೌಟುಂಬಿಕ ವ್ಯವಸ್ಥೆಯಲ್ಲಿ ನೆಮ್ಮದಿ. ಇದರಲ್ಲಿ ಸಮತೋಲನ ತಪ್ಪಿದಾಗ ಎಷ್ಟೇ ಕೂಡಿಟ್ಟರೂ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಪರಿತಪಿಸುವ ಮಂದಿಯನ್ನು ಕಾಣುತ್ತೇವೆ.

ವರ್ಷಗಳು ಉರುಳಿದಂತೆ ಒಂದಷ್ಟು ಪ್ರಭಾವಗಳಿಗೆ ಒಳಗಾಗಿ, ಒತ್ತಡದ ಬದುಕಿಗೆ ಮನುಷ್ಯನ ಜೀವನ ಸಾಗುತ್ತಿರುವುದು ಒಂದೆಡೆ ಭಾವನೆ, ಮಾನವೀಯ ಸಂಬಂಧಗಳನ್ನು ಮೀರಿದ ವರ್ತನೆಗಳು ಮತ್ತೊಂದೆಡೆ. ಕೌಟುಂಬಿಕ ವ್ಯವಸ್ಥೆಗಳ ಅಡಿಪಾಯ ಭದ್ರಗೊಂಡಾಗ ದೇಶದ ಭವಿಷ್ಯವು ಉಜ್ವಲವಾಗಲಿದೆ. ಭಾರತದ ಕುಟುಂಬ ವ್ಯವಸ್ಥೆಗಳು ಕೂಡಾ ವಾಣಿಜ್ಯಾತ್ಮಕ ದಿಕ್ಕಿನಲ್ಲಿ ಸಾಗದೇ ಹಿರಿಯರು ಹಾಕಿ ಕೊಟ್ಟ ಮೌಲ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದೆ ಸಾಗಬೇಕಾದ ಹೊಣೆಗಾರಿಕೆ ಯುವಪೀಳಿಗೆಯ ಮೇಲಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 284

ಭಾರತದ ರಕ್ಷಣಾ ವೆಚ್ಚ ಶೇ.9ಕ್ಕೇರಿಕೆ

2025ರ ಭಾರತದ ಒಟ್ಟು ರಕ್ಷಣಾ ವೆಚ್ಚ 9210 ಕೋಟಿ ಡಾಲರ್‌ಗೆ | ಜಾಗತಿಕ ಮಟ್ಟದ ಸರಾಸರಿ ರಕ್ಷಣಾ ವೆಚ್ಚ ಹೆಚ್ಚಳ ಕೇವಲ ಶೇ.2.9 | ಅಮೆರಿಕ, ಚೀನಾ, ರಷ್ಯಾ, ಜರ್ಮನಿ, ಭಾರತ ಅಧಿಕ ರಕ್ಷಣಾ ವೆಚ್ಚ | ವಿಶ್ವದ ಒಟ್ಟಾರೆ ರಕ್ಷಣಾ ವೆಚ್ಚದಲ್ಲಿ ಐದು ದೇಶಗಳದ್ದೇ ಸಿಂಹಪಾಲು (ಶೇ.58)

ದೆಹಲಿ: ಭಾರತದ ಒಟ್ಟಾರೆ ರಕ್ಷಣಾ ವೆಚ್ಚದಲ್ಲಿ 2025ರಲ್ಲಿ ಶೇ.8.9ರಷ್ಟು ಏರಿಕೆ ಕಂಡುಬಂದಿದೆ. ಆದರೆ, ಜಾಗತಿಕ ಮಟ್ಟದ ಸರಾಸರಿ ರಕ್ಷಣಾ ವೆಚ್ಚದ ಹೆಚ್ಚಳದ ಪ್ರಮಾಣ ಕೇವಲ ಶೇ.2.9ರಷ್ಟಿದೆ.

ಶಸ್ತ್ರಾಸ್ತ್ರಗಳ ಮಾರಾಟದ ಮೇಲೆ ಕಣ್ಣಿಟ್ಟಿರುವ ಜಾಗತಿಕ ಮಟ್ಟದ ಗುಂಪು 'ಎಸ್‌ಐಪಿಆರ್‌ಐ' ಈ ಅಂಕಿ ಅಂಶವನ್ನು ಸೋಮವಾರ ಬಿಡುಗಡೆ ಮಾಡಿದೆ.

ಬ್ರಹ್ಮೋಸ್ ಕ್ಷಿಪಣಿ

ರಫೇಲ್ ಯುದ್ಧ ವಿಮಾನ

ಎಸ್ 400

ಭಾರತ 2025ರಲ್ಲಿ ಒಟ್ಟಾರೆಯಾಗಿ 9210 ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ರಕ್ಷಣಾ ವೆಚ್ಚ ಮಾಡಿರುವುದು ದಾಖಲಾಗಿದೆ. ಆ ಮೂಲಕ ದೇಶದ ಭದ್ರತೆ ಮತ್ತು ಸುರಕ್ಷತೆಗಾಗಿ ಮಾಡಲಾಗುವ ರಕ್ಷಣಾ ವೆಚ್ಚ ಪ್ರಮಾಣದಲ್ಲಿ ಭಾರತ ವಿಶ್ವಮಟ್ಟದಲ್ಲಿ ಈಗ 5ನೇ ಸ್ಥಾನದಲ್ಲಿದೆ ಎಂಬುದನ್ನೂ ವರದಿಯಲ್ಲಿ ವಿವರಿಸಲಾಗಿದೆ.

2025ರಲ್ಲಿ ಇಡೀ ವಿಶ್ವದ ರಕ್ಷಣಾ ವೆಚ್ಚದ ಮೊತ್ತವು 2.88 ಲಕ್ಷ ಕೋಟಿ ಅಮೆರಿಕನ್ ಡಾಲರ್‌ಗಳಷ್ಟಿದೆ(2,88,700 ಡಾಲರ್). ಕಳೆದ 11 ವರ್ಷಗಳಿಂದಲೂ ಜಾಗತಿಕ ಮಟ್ಟದ ರಕ್ಷಣಾ ವೆಚ್ಚದಲ್ಲಿ ಏರಿಕೆ ಕಾಣಬರುತ್ತಿದೆ. 2025ರಲ್ಲಿ ಅತ್ಯಧಿಕ ರಕ್ಷಣಾ ವೆಚ್ಚ ಮಾಡಿರುವ 5 ದೇಶಗಳ ಪಟ್ಟಿಯಲ್ಲಿ ಅನುಕ್ರಮವಾಗಿ ಅಮೆರಿಕ, ಚೀನಾ, ರಷ್ಯಾ, ಜರ್ಮನಿ ಮತ್ತು ಭಾರತ ದೇಶಗಳ ಹೆಸರಿದೆ.

ಈ ಐದೂ ದೇಶಗಳು 2025ರಲ್ಲಿ ಮಾಡಿರುವ ರಕ್ಷಣಾ ವೆಚ್ಚದ ಪ್ರಮಾಣ ಇಡೀ ವಿಶ್ವದ ಒಟ್ಟಾರೆ ವೆಚ್ಚದ ಶೇ.58ರಷ್ಟಿದೆ. ಅಂದರೆ, ಐದೂ ದೇಶಗಳು 2025ರಲ್ಲಿ ಒಟ್ಟು 1,68,600 ಕೋಟಿ ಡಾಲರ್‌ಗಳಷ್ಟು ಬೃಹತ್ ಮೊತ್ತವನ್ನು ಶಸ್ತ್ರಾಸ್ತ್ರಗಳ ಖರೀದಿಗೇ ವೆಚ್ಚ ಮಾಡಿವೆ ಎಂಬ ವಿವರ ಹಾಗೂ ವಿಶ್ಲೇಷಣಾತ್ಮಕ ವರದಿಯನ್ನು 'ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್(ಎಸ್‌ಐಪಿಆರ್‌ಐ) ಸೋಮವಾರ ಪ್ರಕಟಿಸಿದೆ.

ಅಂದರೆ, ಮೊದಲ ಶ್ರೇಣಿಯ ಈ ಐದೂ ದೇಶಗಳ ರಕ್ಷಣಾ ಪರಿಕರಗಳ ಮೇಲಿನ ವೆಚ್ಚವು ವಿಶ್ವದ ಒಟ್ಟಾರೆ ರಕ್ಷಣಾ ವೆಚ್ಚದ ಮೂರನೇ ಎರಡರಷ್ಟು ಪ್ರಮಾಣಕ್ಕೆ ತುಸುವೇ ಕಡಿಮೆ ಇದೆ. ಅಂದರೆ, ಅಷ್ಟೊಂದು ಬೃಹತ್ ಪ್ರಮಾಣದ ಹಣವನ್ನು ರಕ್ಷಣೆಗಾಗಿಯೇ ಈ ಐದೂ ದೇಶಗಳು ವೆಚ್ಚ ಮಾಡುತ್ತಿವೆ ಎಂಬುದು ಗಮನಾರ್ಹ.

'ಆಪರೇಷನ್ ಸಿಂದೂರ್' ಕಾರಣ ರಕ್ಷಣಾ ವೆಚ್ಚ ಹೆಚ್ಚಳ

2025ರ ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನದ ಮೂವರು ಮುಸ್ಲಿಂ ಭಯೋತ್ಪಾದಕರು ಭಾರತದ 24 ಮತ್ತು ನೇಪಾಳದ ಒಬ್ಬರು ಮುಸ್ಲಿಮೇತರು ಹಾಗೂ ಒಬ್ಬರು ಕಾಶ್ಮೀರಿ ವ್ಯಕ್ತಿಯನ್ನು ಬರ್ಬರವಾಗಿ ಕೊಂದರು. ಆ ಬಳಿಕ ಭಾರತ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ 9 ನೆಲೆಗಳು ಮತ್ತು ಪಾಕ್‌ನ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಮೇ 7ರಿಂದ 10ರವರೆಗೆ 'ಆಪರೇಷನ್ ಸಿಂದೂರ್' ಹೆಸರಿನಲ್ಲಿ ವಾಯು ದಾಳಿ ನಡೆಸಿತು. ಈ ನಾಲ್ಕು ದಿನಗಳ ಸೇನಾ ಕಾರ್ಯಾಚರಣೆಯಲ್ಲಿ ಭಾರೀ ಪ್ರಮಾಣದಲ್ಲಿ ಯುದ್ಧ ವಿಮಾನಗಳು, ಡ್ರೋನ್‌ಗಳು, ಕ್ಷಿಪಣಿಗಳ ಬಳಕೆಯಾಯಿತು. ಪಾಕಿಸ್ತಾನದ ಕ್ಷಿಪಣಿಗಳನ್ನು ಹೊಡೆದುರುಳಿಸಲೂ ವಾಯುದಾಳಿ ಪ್ರತಿಬಂಧಕ ಕ್ಷಿಪಣಿ ವ್ಯವಸ್ಥೆಯನ್ನೂ ಸಮರ್ಥವಾಗಿ ಬಳಸಿಕೊಳ್ಳಲಾಯಿತು. ಹಾಗಾಗಿ, 2025ರಲ್ಲಿ ಭಾರತದ ರಕ್ಷಣಾ ವೆಚ್ಚದಲ್ಲಿ ಶೇ.8.9ರಷ್ಟು ಏರಿಕೆಯಾಗಲು ಕಾರಣವಾಯಿತು ಎಂಬುದನ್ನು 'ಎಸ್‌ಐಪಿಆರ್‌ಐ'(ಸಿಪ್ರಿ) ಸೋಮವಾರ ಪ್ರಕಟಿಸಿದ 'ಟ್ರೆಂಡ್ಸ್ ಇನ್ ವರ್ಲ್ಡ್ ಮಿಲಿಟರಿ ಎಕ್ಸ್‌ಪೆಂಡಿಚರ್' ವರದಿಯಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಫ್ರಾನ್ಸ್‌ನಿಂದ ಬಾಂಬರ್‌ಗಳನ್ನು ಜೋಡಿಸಿದ ರಾಫೇಲ್ ಯುದ್ಧ ವಿಮಾನಗಳನ್ನು ಖರೀದಿಸಿರುವುದೂ ಕೂಡಾ ಭಾರತದ ಒಟ್ಟಾರೆ ರಕ್ಷಣಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿದೆ ಎಂಬುದು ಉಲ್ಲೇಖಾರ್ಹ.

ಚೀನಾ, ಪಾಕ್ ರಕ್ಷಣಾ ವೆಚ್ಚದಲ್ಲೂ ಏರಿಕೆ

2025ರಲ್ಲಿ ರಕ್ಷಣಾ ಕ್ಷೇತ್ರಕ್ಕಾಗಿ ಪಾಕಿಸ್ತಾನವೂ ವಾಡಿಕೆಗಿಂತಲೂ ತುಸು ಹೆಚ್ಚೇ ವೆಚ್ಚ ಮಾಡಿದೆ. ಹಾಗಾಗಿ ಕಳೆದ ವರ್ಷದ ಪಾಕ್‌ನ ರಕ್ಷಣಾ ವೆಚ್ಚದಲ್ಲಿ ಶೇ. 11ರಷ್ಟು ಏರಿಕೆಯಾಗಿದೆ. ಪಾಕ್ ಒಟ್ಟು 1190 ಕೋಟಿ ಅಮೆರಿಕನ್ ಡಾಲರ್‌ಗಳನ್ನು 2025ರಲ್ಲಿ ಶಸ್ತ್ರಾಸ್ತ್ರಗಳ ಖರೀದಿಗೆ ವ್ಯಯಿಸಿದೆ. ಭಾರತ ಆಪರೇಷನ್ ಸಿಂಧೂರ್ ನಡೆಸಿದ ನಂತರ ಪಾಕ್ ಹೊಸದಾಗಿ ಯುದ್ಧ ವಿಮಾನಗಳನ್ನು, ಕ್ಷಿಪಣಿಗಳನ್ನು ಖರೀದಿಸಿದೆ. ಇದುವೇ ರಕ್ಷಣಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿದೆ. ಇನ್ನೊಂದೆಡೆ, ನೆರೆಯ ಚೀನಾ 2025ರಲ್ಲಿ 33,600 ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ರಕ್ಷಣಾ ವಲಯಕ್ಕಾಗಿ ವೆಚ್ಚ ಮಾಡಿದೆ. ಆ ಮೂಲಕ ಹಿಂದಿನ ವರ್ಷಕ್ಕೆ ಹೋಲಿಸಿದರೆ ರಕ್ಷಣಾ ವೆಚ್ಚದಲ್ಲಿ ಶೇ.7.4ರಷ್ಟು ಹೆಚ್ಚಳವಾಗಿದೆ. ಚೀನಾದ ರಕ್ಷಣಾ ವೆಚ್ಚದಲ್ಲಿ ಸತತ ಏರಿಕೆ ಕಾಣಬರುತ್ತಿರುವುದು ಇದು 31ನೇ ವರ್ಷವಾಗಿದೆ ಎಂದು 'ಸಿಪ್ರಿ' ವರದಿಯಲ್ಲಿ ಹೇಳಲಾಗಿದೆ.

ವಿಶ್ವರಕ್ಷಣಾ ವೆಚ್ಚ ಶೇ.2.4 ಜಿಡಿಪಿ

ವಿಶ್ವದ ಒಟ್ಟಾರೆ ಆಂತರಿಕ ಉತ್ಪನ್ನಗಳಿಗೆ(ಜಿಡಿಪಿಗೆ) ಹೋಲಿಸಿದಲ್ಲಿ ರಕ್ಷಣಾ ವೆಚ್ಚದ ಪ್ರಮಾಣ 2014ರಲ್ಲಿ ಶೇ.2.4ರಷ್ಟಿತ್ತು. ಇದು 2025ರಲ್ಲಿ ಶೇ.2.5ಕ್ಕೆ ಏರಿಕೆಯಾಗಿದೆ. 2025ರಲ್ಲಿ ವಿಶ್ವದ ರಕ್ಷಣಾ ವೆಚ್ಚವು ಪ್ರತಿವ್ಯಕ್ತಿಯ ತಲೆ ಮೇಲೆ ಸರಾಸರಿ 352 ಡಾಲರ್ (33,130 ರು.)ಗಳ ಹೊರೆ ಹೊರಿಸಿದೆ. 2025ರಲ್ಲಿ ಒಟ್ಟಾರೆ ವಿಶ್ವದ ರಕ್ಷಣಾ ಸಲಕರಣೆಗಳ ವೆಚ್ಚದಲ್ಲಿ ಶೇ.3ರಷ್ಟು ಏರಿಕೆ ಯಾಗಿದೆ. ಆದರೆ, ಅಚ್ಚರಿ ಎಂಬಂತೆ ಅಮೆರಿಕದ ರಕ್ಷಣಾ ವೆಚ್ಚದಲ್ಲಿ ಅಲ್ಪ ಪ್ರಮಾಣದ ಇಳಿಕೆಯಾಗಿದೆ. ಇನ್ನೊಂದೆಡೆ, ಯೂರೋಪ್‌ನ ರಕ್ಷಣಾ ವೆಚ್ಚ ಶೇ.14ರಷ್ಟು ಏರಿಕೆಯಾಗಿದೆ. ಏಷ್ಯಾ ಮತ್ತು ಓಷೇನಿಯಾ ರಕ್ಷಣಾ ವೆಚ್ಚ ಶೇ.8.1ರಷ್ಟು ಹೆಚ್ಚಳವಾಗಿದೆ. ಅಮೆರಿಕ 2025ರಲ್ಲಿ 95400 ಕೋಟಿ ಡಾಲರ್‌ಗಳನ್ನು ರಕ್ಷಣಾ ಸಲಕರಣೆಗಳಿಗೆ ವೆಚ್ಚ ಮಾಡಿದೆ. ಇದು 2024ರ ಸಾಲಿಗೆ ಹೋಲಿಸಿದರೆ ಶೇ.7.5ರಷ್ಟು ಕಡಿಮೆ ಇದೆ. ಉಕ್ರೇನ್‌ಗೆ ರಕ್ಷಣಾ ಸಾಮಗ್ರಿ ಪೂರೈಸುವುದನ್ನು ನಿಲ್ಲಿಸಿದ್ದರಿಂದ ರಕ್ಷಣಾ ವೆಚ್ಚದಲ್ಲಿ ಗಮನಾರ್ಹ ಇಳಿಕೆ ಆಗಿದೆ ಎಂಬ ಅಂಕಿ ಅಂಶಗಳನ್ನು 'ಸಿಪ್ರಿ' ವರದಿ ಪ್ರಕಟಿಸಿದೆ.

ಬೆಂಗಳೂರಿನ ಕಟ್ಟಡ ನಿರ್ಮಾಣಕ್ಕೆ ಪಶ್ಚಿಮ ಬಂಗಾಳದ ಬಾಲಕಾರ್ಮಿಕರು!

ರಾಂಚಿ: ಬೆಂಗಳೂರಿನ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಬಾಲ ಕಾರ್ಮಿಕ ಪದ್ಧತಿ ಜೀವಂತವಿದೆ. ಬೆಂಗಳೂರಿನ ಅತಿ ವಿಶಾಲ ಉದ್ಯಮ ಕ್ಷೇತ್ರವಾದ ಕಟ್ಟಡ ನಿರ್ಮಾಣ ರಂಗಕ್ಕೆ ದೂರದ ಪಶ್ಚಿಮ ಬಂಗಾಳದಿಂದ ಬಾಲ ಕಾರ್ಮಿಕರ ಕಳ್ಳಸಾಗಣೆ ಆಗುತ್ತಿದೆ ಎಂಬ ಸ್ಫೋಟಕ ಸಂಗತಿ ಜಾರ್ಖಂಡ್‌ನ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಬಯಲಾಗಿದೆ.

ಪಶ್ಚಿಮ ಬಂಗಾಳದ ಪುರುಲಿಯಾ ಜಿಲ್ಲೆಯ ಝಾಲ್ದಾ ಪ್ರದೇಶದಿಂದ ಮೂವರು ಬಾಲ ಕಾರ್ಮಿಕರನ್ನು ಮಾನವ ಕಳ್ಳಸಾಗಣೆ ಏಜೆಂಟನೊಬ್ಬ ರೈಲಿನಲ್ಲಿ ಬೆಂಗಳೂರಿಗೆ ಸಾಗಿಸುತ್ತಿದ್ದ. ರೈಲು ಗಾಡಿಯು ಜಾರ್ಖಂಡ್ ರಾಜ್ಯದ ರಾಂಚಿ ಜಿಲ್ಲೆಯ ಹಟಿಯಾ ರೈಲು ನಿಲ್ದಾಣದಲ್ಲಿ ನಿಲುಗಡೆಯಾದಾಗ ರೈಲ್ವೆ ಪೊಲೀಸ್ ಪಡೆ ಅನುಮಾನದ ಮೇಲೆ ಪ್ರಶ್ನೆ ಮಾಡಿದಾಗ ಒಬ್ಬ 14 ವರ್ಷದ ಮತ್ತು ಇಬ್ಬರು 15 ವರ್ಷದ ಬಾಲಕರನ್ನು ಕಳ್ಳಸಾಗಣೆ ಮಾಡುತ್ತಿರುವುದು ಕಂಡುಬಂದಿದೆ. ಬಾಲಕರನ್ನು ಬೆಂಗಳೂರಿಗೆ ಸಾಗಣೆ ಮಾಡುತ್ತಿದ್ದ ಪುರಲಿಯಾ ಜಿಲ್ಲೆಯ ನಿವಾಸಿ, 27 ವರ್ಷದ ನಯನ್ ಕುಮಾರ್ ಎಂಬ ಮಾನವ ಕಳ್ಳಸಾಗಣೆ ಏಜೆಂಟನನ್ನು ರೈಲ್ವೆ ಪೊಲೀಸರು ಬಂಧಿಸಿದ್ದು, ಬಳಿಕ ರಾಂಚಿಯ ಕೊತ್ವಾಲಿಯಲ್ಲಿನ ಮಾನವ ಕಳ್ಳಸಾಗಣೆ ನಿಗ್ರಹ ಘಟಕದ ವಶಕ್ಕೆ ಒಪ್ಪಿಸಿದ್ದಾರೆ.

ಮೂವರು ಬಾಲಕರನ್ನು ರಕ್ಷಿಸಿ ರಾಂಚಿಯಲ್ಲಿನ 'ಬಾಲಾಶ್ರಯ' ಬಾಲಮಂದಿರಕ್ಕೆ ಸೇರಿಸಿದ್ದಾರೆ. ಆರೋಪಿ ವ್ಯಕ್ತಿಯ ತಮ್ಮನ್ನು ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಸಲು ಕರೆದೊಯ್ಯುತ್ತಿದ್ದ. ಈ ಹಿಂದೆಯೂ ಆರೋಪಿ ನಯನ್ ಕುಮಾರ್, ತಮ್ಮ ಗ್ರಾಮದ ಹಲವಾರು ಬಾಲಕರನ್ನು ಬೆಂಗಳೂರಿಗೆ ಕರೆದೊಯ್ದಿದ್ದಾನೆ ಎಂದು ಬಾಲಕರು ಪೊಲೀಸರ ಬಳಿ ಹೇಳಿದ್ದಾರೆ.

ಆರೋಪಿ ನಯನ್ ಕುಮಾರ್, ಪಶ್ಚಿಮ ಬಂಗಾಳ, ಬಿಹಾರ ಸೇರಿ ವಿವಿಧ ರಾಜ್ಯಗಳಲ್ಲಿನ ಗ್ರಾಮೀಣ ಭಾಗದ ಬಡ ಕುಟುಂಬಗಳಲ್ಲಿನ ಬಾಲಕರನ್ನು ಬೆಂಗಳೂರಿನ ವಿವಿಧೆಡೆಯ ಕಟ್ಟಡ ನಿರ್ಮಾಣ ಕ್ಷೇತ್ರಗಳಿಗೆ ಕರೆದೊಯ್ದು ಸೇರಿಸಿರುವುದಾಗಿ ಒಪ್ಪಿಕೊಂಡಿದ್ದಾನೆ.

'ಬಾಲಕಾರ್ಮಿಕರ ಕಳ್ಳಸಾಗಣೆಗೆ ತಲಾ 400-500 ರು. ಕಮಿಷನ್ ಪಡೆಯುತ್ತಿದ್ದೆ. ಬಾಲ ಕಾರ್ಮಿಕರ ಕಳ್ಳಸಾಗಣೆಯನ್ನು ಹಲವು ವರ್ಷಗಳಿಂದಲೂ ಮಾಡುತ್ತಿರುವೆ' ಎಂದು ಆರೋಪಿಯು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆಂದು ರಾಂಚಿ ವಲಯದ ರೈಲ್ವೆ ಪೊಲೀಸ್ ಅಧಿಕಾರಿ ರೂಪೇಶ್ ಕುಮಾರ್ ಅವರು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಹರಿಹರ ಕುಮಾರ್ ಎಂಬಾತನಿಂದ ಆನ್‌ಲೈನ್ ಮೂಲಕ 25 ಸಾವಿರ ರು. ಪಡೆದು ಕೊಂಡಿರುವೆ. ಹರಿಕುಮಾರ್ ಜತೆಗೂಡಿ ಹಲವು ವರ್ಷಗಳಿಂದ ಬಾಲಕಾರ್ಮಿಕರ ಕಳ್ಳಸಾಗಣೆ ಮಾಡುತ್ತಿರುವೆ ಎಂದು ನಯನ್ ಕುಮಾರ್ ಹೇಳಿದ್ದಾನೆ.

ಸಮಾಚಾರ ಸಣ್ಣದಲ್ಲ

ಟಿಎಂಸಿ ಕಾರ್ಯಕರ್ತನ ಮನೆಯಲ್ಲಿ ಬಾಂಬ್

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿನ 2ನೇ ಹಂತದ ಮತದಾನ ಬುಧವಾರ ನಡೆಯಲಿದೆ. ಇದರ ಮಧ್ಯೆಯೇ ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಒಬ್ಬ ಕಾರ್ಯಕರ್ತನ ಮನೆಯಲ್ಲಿ 100 ಕಚ್ಚಾಬಾಂಬ್‌ಗಳು ಪತ್ತೆಯಾಗಿವೆ. ಖಚಿತ ಮಾಹಿತಿ ಮೇರೆಗೆ ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗರ್‌ನಲ್ಲಿ ಟಿಎಂಸಿ ಕಾರ್ಯಕರ್ತ ರಫಿಕುಲ್ ಇಸ್ಲಾಂ ಎಂಬವನ ಮನೆ ಮೇಲೆ ಪೊಲೀಸರು ಭಾನುವಾರ ದಾಳಿ ಮಾಡಿ ಪರಿಶೀಲಿಸಿದಾಗ 100 ಕಚ್ಚಾಬಾಂಬ್‌ಗಳಿರುವುದು ಪತ್ತೆಯಾಗಿದೆ. ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

100 ಬಿಸಿಗಾಳಿ ನಗರ: ಭಾರತದಲ್ಲಿಯೇ 98

ದೆಹಲಿ: ಭಾರತದಲ್ಲಿ ಹೀಟ್ ವೇವ್(ಬಿಸಿಗಾಳಿ) ಅಬ್ಬರ ದಿನೇ ದಿನೇ ಹೆಚ್ಚುತ್ತಲೇ ಇದೆ. ಅತ್ಯಧಿಕ ತಾಪಮಾನದ ವಿಶ್ವದ 100 ನಗರಗಳಲ್ಲಿ 98 ನಗರಗಳು ಭಾರತದಲ್ಲಿಯೇ ಇವೆ. ಇದು ತೀವ್ರ ಕಳವಳಕಾರಿಯಾಗಿದೆ. ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಭಾರತ ದಾಖಲೆ ಪ್ರಮಾಣದ ಉಷ್ಣಾಂಶವನ್ನು ಅನುಭವಿಸುತ್ತಿದೆ. ಭಾರತ ಜಾಗತಿಕ ಶಾಖದ ಅಲೆಯ ಕೇಂದ್ರಬಿಂದುವಾಗಿದೆ. ಅನೇಕ ಪ್ರದೇಶಗಳಲ್ಲಿ ತಾಪಮಾನ 40 ಡಿ.ಸೆ. ಮೀರಿದ್ದರೆ, ಕೆಲವೆಡೆ 45 ಡಿ.ಸೆ. ಸಮೀಪವಿದೆ. ಉತ್ತರ ಪ್ರದೇಶದ ಒರೈ ಮತ್ತು ಔರೈಯ, ರಾಜಸ್ಥಾನದ ಜೈಸಲ್ಮೇರ್ ಮತ್ತು ಫಲೋಡಿ ನಗರ ಪ್ರದೇಶಗಳು ಅತ್ಯಧಿಕ ತಾಪಮಾನ ಹೊಂದಿವೆ ಎಂಬುದು ಏರ್ ಕ್ವಾಲಿಟಿ ಇಂಡೆಕ್ಸ್(ಎಕ್ಯುಐ) ಮಾಹಿತಿ. ಅಲ್ಲದೇ, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ಚಂಡೀಗಢ, ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನದಲ್ಲಿ ಮುಂಬರುವ ದಿನಗಳಲ್ಲಿ ಹೀಟ್ ವೇವ್ ಅಬ್ಬರ ಹೆಚ್ಚಲಿದೆ. ಈ ನಗರಗಳಲ್ಲಿನ ಜನರು ಶಾಖ ಸಂಬಂಧಿತ ಕಾಯಿಲೆಗಳ ವಿರುದ್ಧ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಿದೆ ಎಂಬುದು ಭಾರತೀಯ ಹವಾಮಾನ ಇಲಾಖೆಯ ಸಲಹೆ.

ಪಾಕಿಗಳಿಬ್ಬರು ಸೇರಿ 5 ಎಲ್‌ಇಟಿ ಉಗ್ರರ ಸೆರೆ

ಶ್ರೀನಗರ: ಪಾಕಿಸ್ತಾನ ಮೂಲದ 'ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆ ಜಮ್ಮು-ಕಾಶ್ಮೀರ ಸೇರಿದಂತೆ ಹಲವು ರಾಜ್ಯಗಳಲ್ಲಿ ಜಾಲ ಹೊಂದಿದ್ದುದನ್ನು ಪತ್ತೆ ಹಚ್ಚಿರುವ 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಇಬ್ಬರು ಪಾಕಿಸ್ತಾನಿಗಳು ಸೇರಿದಂತೆ ಐವರು ಭಯೋತ್ಪಾದಕರನ್ನು ಸೋಮವಾರ ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ಈ ಪ್ರಕರಣಕ್ಕೂ, ಜಮ್ಮು-ಕಾಶ್ಮೀರ ಪೊಲೀಸರು ಏ.7ರಂದು ನಡೆಸಿದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಐವರು ಎಲ್‌ಇಟಿ ಕಾರ್ಯಕರ್ತರನ್ನು ಬಂಧಿಸಿದ್ದಕ್ಕೂ ಸಂಬಂಧವಿದೆ ಎಂದು ಎನ್‌ಐಎ ಅಧಿಕಾರಿಗಳು ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ. ಪಾಕ್ ಉಗ್ರರಾದ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ಮತ್ತು ಉಸ್ಮಾನ್ ಅಲಿಯಾಸ್ ಖುಬೈಬ್ ಹಾಗೂ ಶ್ರೀನಗರ ನಿವಾಸಿಗಳಾದ ಮೊಹಮ್ಮದ್ ನಕೀಬ್ ಭಟ್, ಆದಿಲ್ ರಶೀದ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾನನ್ನು ಎನ್‌ಐಎ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಿದ್ದಾರೆ.

ಬಿರಿಯಾನಿ ಬಳಿಕ ಕಲ್ಲಂಗಡಿ: 4 ಸಾವು

ಮುಂಬೈ: ಮುಂಬೈ ಮಹಾನಗರದ ಫಿಡೊನಿಯ ಪ್ರದೇಶದಲ್ಲಿ ನೆಂಟರೊಟ್ಟಿಗೆ ರಾತ್ರಿ ಊಟಕ್ಕೆ ಬಿರಿಯಾನಿ ಸೇವಿಸಿದ ಬಳಿಕ, ಒಂದೇ ಕುಟುಂಬದ ನಾಲ್ವರು ಕಲ್ಲಂಗಡಿ ಹಣ್ಣು ಸೇವಿಸಿದ್ದು, ಆ ಬಳಿಕ ಹೊಟ್ಟೆನೋವು, ವಾಂತಿಯಾಗಿ ಅಸ್ವಸ್ಥಗೊಂಡು, ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ದಂಪತಿಗಳಾದ ಅಬ್ದುಲ್ಲಾ ದೊಕಾಡಿಯಾ(40) ಮತ್ತು ನಸ್ರೀನ್ ದೊಕಾಡಿಯಾ(35) ಹಾಗೂ ಪುತ್ರಿಯರಾದ ಆಯಿಷಾ (16) ಮತ್ತು ಝೈನಾಬ್(13) ದುರ್ಮರಣ ಕ್ಕೀಡಾದವರು. ಏ.25ರಂದು ಮನೆಗೆ ಅತಿಥಿಗಳು ಬಂದಿದ್ದ ಕಾರಣ ದೊಕಾಡಿಯಾ ಕುಟುಂಬದವರು ಬಿರಿಯಾನಿ ತಯಾರಿಸಿದ್ದರು. ರಾತ್ರಿ 10.30ಕ್ಕೆ ಭೋಜನವಾದ ಬಳಿಕ ನೆಂಟರು ನಿರ್ಗಮಿಸಿದರು. ಬಳಿಕ ಕಲ್ಲಂಗಡಿ ಸೇವಿಸಿ ಮಲಗಿದ್ದಾರೆ. ಮುಂಜಾನೆ 5.30ರ ವೇಳೆಗೆ ನಾಲ್ವರಿಗೂ ಹೊಟ್ಟೆನೋವು, ವಾಂತಿ, ಬೇದಿ ಶುರುವಾಗಿದೆ. ಕುಟುಂಬ ವೈದ್ಯರನ್ನು ಸಂಪರ್ಕಿಸಿ ಔಷಧಿ ಸೇವಿಸಿದ್ದಾರೆ. ಬಳಿಕ ಜೆಜೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೇ ಕೆಲವು ಗಂಟೆಗಳ ಅಂತರದಲ್ಲಿ ನಾಲ್ವರೂ ಅಸುನೀಗಿದ್ದಾರೆ.

{ **ಕಿರಣ್ ರಿಜಿಜು** } ಸಂಸದೀಯ ಸಚಿವ

ಆಮ್ ಆದ್ಮಿ ಪಾರ್ಟಿ(ಎಎಪಿ)ಯಲ್ಲಿನ ಉಸಿರುಕಟ್ಟುವ ವಾತಾವರಣದಿಂದ ಭಾರತೀಯ ಜನತಾ ಪಕ್ಷಕ್ಕೆ ಬಂದು ಸೇರಿರುವ 7 ರಾಜ್ಯಸಭಾ ಸದಸ್ಯರಿಗೆ ಸ್ವಾಗತ. ಏಳೂ ಸಂಸದರೂ ಮೇಲ್ಮನೆಯಲ್ಲಿ ಬಹಳ ಕ್ರಿಯಾಶೀಲರಾಗಿದ್ದವರು, ಶಿಸ್ತಿನಿಂದ, ಸಾಂವಿಧಾನಿಕ ವಾಗಿ ವರ್ತಿಸುತ್ತಿದ್ದವರು. 7 ಸಂಸದರ ಸೇರ್ಪಡೆಯಿಂದ ಮೇಲ್ಮನೆಯಲ್ಲಿ ಬಿಜೆಪಿ ಮತ್ತು ಎನ್‌ಡಿಎ ಬಲ ಹೆಚ್ಚಿದೆ.

ಮಾಲಿ ರಕ್ಷಣಾ ಸಚಿವ ಜನರಲ್ ಸಾಡಿಯೋ ಕಾಮಾರಾ ಹತ್ಯೆ

ಬಾಮಾಕೊ: ಆಫ್ರಿಕಾ ಖಂಡದ ದೇಶ 'ಮಾಲಿ'ಯ ರಕ್ಷಣಾ ಸಚಿವ ಜನರಲ್ ಸಾಡಿಯೋ ಕಾಮಾರಾ ಅವರ ಹತ್ಯೆಯಾಗಿದೆ. ಕಾಮಾರಾ ಅವರ 2ನೇ ಪತ್ನಿ ಮತ್ತು ಇಬ್ಬರು ಮೊಮ್ಮಕ್ಕಳೂ ಈ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಅಲ್‌ಖೈದಾ ಸಂಪರ್ಕದ ಉಗ್ರ ಸಂಘಟನೆ ಮತ್ತು ಟುವಾರೆಗ್ ಬಂಡುಕೋರರು ಗ್ಯಾರಿಸನ್ ಪಟ್ಟಣ ಕಾಟಿಯಲ್ಲಿರುವ ಕಾಮಾರಾ ಅವರ ನಿವಾಸವನ್ನು ಗುರಿಯಾಗಿಟ್ಟುಕೊಂಡು ಒಮ್ಮೆಲೇ ಸಶಸ್ತ್ರ ದಾಳಿ ನಡೆಸಿದಾಗ ಕಾಮಾರಾ ಅವರ ಹತ್ಯೆಯಾಗಿದೆ ಎಂದು ಸರಕಾರದ ವಕ್ತಾರ ಇಸ್ಸಾ ಉಸ್ಮಾನೆ ಕೂಲಿಬಾಲಿ ಭಾನುವಾರ ದೃಢಪಡಿಸಿದ್ದಾರೆ. 2021ರಲ್ಲಿ ಸೇನಾಧಿಕಾರಿಗಳು ಅಧಿಕಾರಕ್ಕೇರುವುದರಲ್ಲಿ ಕಾಮಾರಾ ಪ್ರಮುಖ ಪಾತ್ರ ವಹಿಸಿದ್ದರು. ಆಡಳಿತಾರೂಢ ಸರಕಾರದಲ್ಲಿನ ಸೇನಾ ನಾಯಕತ್ವದಲ್ಲಿ ಕಾಮಾರಾ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದರು, ಭವಿಷ್ಯದ ನಾಯಕರಾಗಿಯೂ ಗುರುತಿಸಿಕೊಂಡಿದ್ದರು. ಈಗ ಕಾಮಾರಾ ಅವರು ಹತರಾಗಿರುವುದು ದೇಶದ ಸಶಸ್ತ್ರ ಪಡೆಗಳಿಗೆ ದೊಡ್ಡ ಹೊಡೆತ ಕೊಟ್ಟಿದೆ ಎಂದು 'ಅಲ್ ಜಝೀರಾ'ದ ಮಾಲಿ ಪ್ರತಿನಿಧಿ ನಿಕೋಲಸ್ ಹಕ್ ಹೇಳಿದ್ದಾರೆ. ದೇಶದ ರಾಜಧಾನಿ ಬಾಮಾಕೊದಿಂದ 15 ಕಿಮೀ ದೂರದಲ್ಲಿದೆ ಕಾಟಿ ನಗರ. ಅತ್ಯಂತ ಭದ್ರತಾ ವ್ಯವಸ್ಥೆಯುಳ್ಳ ಸೈನಿಕ ಪಟ್ಟಣವಾಗಿದ್ದು, ಮಧ್ಯಂತರ ಅಧ್ಯಕ್ಷ ಅಸ್ಸಿಮಿ ಗೋಯಿಟಾ ಕೂಡ ಇದೇ ನಗರದಲ್ಲಿ ವಾಸಿಸುತ್ತಾರೆ. ಹಾಗಾಗಿ ಕಾಟಿ ದೇಶದ ಅತ್ಯಂತ ಸುರಕ್ಷಿತ ಸ್ಥಳ ಎಂದೇ ಗುರುತಿಸಿಕೊಂಡಿದೆ. ಆದರೆ, ಅಲ್ ಖೈದಾ ಸಂಪರ್ಕದ ಉಗ್ರ ಸಂಘಟನೆ ಮತ್ತು ಟುವಾರೆಗ್ ಬಂಡುಕೋರರು ದೊಡ್ಡ ಮಟ್ಟದ ದಾಳಿ ನಡೆಸಿ ರಕ್ಷಣಾ ಸಚಿವರನ್ನೇ ಕುಟುಂಬ ಸಮೇತ ಕೊಂದಿದ್ದಾರೆ.

ಎಎಪಿ 7 ಸಂಸದರು ಬಿಜೆಪಿಯಲ್ಲಿ ವಿಲೀನ: ಸಭಾಪತಿ ಅಂಗೀಕಾರ

ದೆಹಲಿ: ಆಮ್ ಆದ್ಮಿ ಪಕ್ಷದ(ಎಎಪಿ) ಏಳು ಸಂಸದರು ಭಾರತೀಯ ಜನತಾ ಪಕ್ಷ(ಬಿಜೆಪಿ)ದಲ್ಲಿ ವಿಲೀನಗೊಳ್ಳುವ ಪ್ರಕ್ರಿಯೆಗೆ ರಾಜ್ಯಸಭೆ ಸಭಾಪತಿಯಾಗಿರುವ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಸೋಮವಾರ ಅಂಗೀಕಾರದ ಮುದ್ರೆ ಒತ್ತಿದರು. ಬಿಜೆಪಿಗೆ ವಿಲೀನವಾಗುವ ಕ್ರಮವನ್ನು ಸಂಸದ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಮುನ್ನಡೆಸಿದರು. ಸೋಮವಾರ ಬೆಳಗ್ಗೆ ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿಯಾಗಿ ಪಕ್ಷ ಪ್ರವೇಶ ಪ್ರಕ್ರಿಯೆಯನ್ನು ಅಧಿಕೃತಗೊಳಿಸಿದರು. ಸಂವಿಧಾನದ 10ನೇ ಅನುಸೂಚಿ ಪ್ರಕಾರವೇ ಅಗತ್ಯವಾದ ಮೂರನೇ ಎರಡು ಪ್ರಮಾಣದ ಸದಸ್ಯರ(10ರಲ್ಲಿ 7) ಬಲು ಹೊಂದಿದ್ದೇವೆ ಎಂದು ರಾಘವ್ ಚಡ್ಡಾ ಹೇಳಿಕೊಂಡಿದ್ದಾರೆ. ಪಕ್ಷ ತೊರೆದ ಕಾರಣಕ್ಕೆ ರಾಜ್ಯಸಭೆ ಸದಸ್ಯತ್ವದಿಂದ ಅನರ್ಹರಾಗುವುದನ್ನು 7 ಸದಸ್ಯರೂ ತಪ್ಪಿಸಿಕೊಂಡಂತಾಗಿದೆ ಎಂದು ಹೇಳಲಾಗಿದೆ. ಇದಕ್ಕೆ ಮುನ್ನ ಎಎಪಿ ಏಳು ಸಂಸದರನ್ನು ಅನರ್ಹಗೊಳಿಸುವಂತೆ ಸಭಾಪತಿಗೆ ಮನವಿ ಸಲ್ಲಿಸಿತ್ತು. 245 ಸದಸ್ಯರಿರುವ ರಾಜ್ಯಸಭೆಯಲ್ಲಿ ಬಿಜೆಪಿ ಸಂಸದರ ಸಂಖ್ಯೆ 113ಕ್ಕೆ ಮತ್ತು ಎನ್‌ಡಿಎ ಮೈತ್ರಿಕೂಟದ ಬಲ 141ಕ್ಕೆ ಹೆಚ್ಚಿದೆ. ಆದರೆ, ಎಎಪಿ ಬಲ 10ರಿಂದ 3ಕ್ಕೆ ಇಳಿಕೆಯಾಗಿದೆ. ಉಳಿದಂತೆ ಸದನದಲ್ಲಿ ಕಾಂಗ್ರೆಸ್ ಪಕ್ಷ 29, ತೃಣಮೂಲ ಕಾಂಗ್ರೆಸ್ 13, ಡಿಎಂಕೆ 8, ವೈಎಸ್‌ಆರ್ ಕಾಂಗ್ರೆಸ್ ಪಾರ್ಟಿ 7, ಬಿಜು ಜನತಾ ದಳ 6, ಎಐಎಡಿಎಂಕೆ 5, ಸಂಯುಕ್ತ ಜನತಾ ದಳ(ಜೆಡಿಯು), ಸಮಾಜವಾದಿ ಪಕ್ಷ, ಎನ್‌ಸಿಪಿ ತಲಾ 4 ಸಂಸದರನ್ನು ಹೊಂದಿವೆ.

ಸಹಜೀವನದಲ್ಲಿ ಶಿಶು ಜನನ, ರೇಪ್ ಎಂದರೆ ಹೇಗೆ: ಸುಪ್ರೀಂ

ದೆಹಲಿ: ಸುದೀರ್ಘ ಕಾಲ ಲಿವ್-ಇನ್ ಸಂಬಂಧದಲ್ಲಿದ್ದು, ಮಗು ಪಡೆದ ನಂತರ ಪುರುಷ ಸಂಗಾತಿ ವಿರುದ್ಧ ಅತ್ಯಾಚಾರದ ದೂರು ದಾಖಲಿಸುವ ಪ್ರವೃತ್ತಿ ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. 'ಮದುವೆಯ ಬಂಧ' ಇಲ್ಲದ ಲಿವ್ ಇನ್ ಸಂಬಂಧದಿಂದ ಹೊರ ಬರುವುದು ಅಪರಾಧ ಆಗುವುದಿಲ್ಲ ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರ ಪೀಠ ಸ್ಪಷ್ಟವಾಗಿ ಹೇಳಿದೆ. ಮದುವೆ ಆಗುವುದಾಗಿ ಸುಳ್ಳು ಭರವಸೆ ನೀಡಿ ಅತ್ಯಾಚಾರವೆಸಗಿದ್ದಾನೆ ಎಂದು ಲಿವ್ ಇನ್ ಸಂಗಾತಿ ವಿರುದ್ಧ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪೀಠ, ಇದು ಲಿವ್-ಇನ್ ಸಂಬಂಧವಾಗಿದೆ. ಮಹಿಳೆ ಆ ವ್ಯಕ್ತಿಯಿಂದಲೇ ಒಂದು ಮಗುವನ್ನು ಹೊಂದಿದ್ದಾಳೆ. ಮಗು ಜನಿಸಿದ ನಂತರ ಅತ್ಯಾಚಾರ ಆರೋಪ ಮಾಡುವುದು ಎಷ್ಟು ಸರಿ? ಎಂಬ ಪ್ರಶ್ನೆ ಮುಂದಿಟ್ಟಿದೆ. ವಯಸ್ಕರು ವಿವಾಹದ ಹೊರಗೆ ಒಟ್ಟಿಗೆ ವಾಸಿಸಲು ನಿರ್ಧರಿಸಿದಾಗ, ಅಂತಹ ಸಂಬಂಧಗಳಲ್ಲಿ ಕೆಲವು ಅಂತರ್ಗತ ಅಪಾಯಗಳು ಇರುತ್ತವೆ ಎಂಬುದನ್ನೂ ಗಮನಿಸಿದ ಪೀಠ, ಒಪ್ಪಂದ ಅಥವಾ ಒಮ್ಮತದ ಸಂಬಂಧದಲ್ಲಿ ಅತ್ಯಾಚಾರದ ಪ್ರಶ್ನೆ ಬರಲು ಸಾಧ್ಯ? ಎಂದು ಪ್ರಶ್ನೆ ಮಾಡಿದೆ. ಲಿವ್-ಇನ್ ಸಂಬಂಧ ಕಡಿತವಾದಾಗ ಮಹಿಳೆಯರು ಲೈಂಗಿಕ ದೌರ್ಜನ್ಯ ಎಂಬುದನ್ನೇ ಅಸ್ತ್ರವಾಗಿ ಬಳಸುತ್ತಿದ್ದಾರೆ ಎಂದು ನ್ಯಾಯಾಲಯ ವಿಷಾದಿಸಿದೆ. ದೀರ್ಘಕಾಲ ಸಹ ಜೀವನ ವಾಸದ ನಂತರ ಹೀಗೆ ಲೈಂಗಿಕ ದೌರ್ಜನ್ಯದ ದೂರು ದಾಖಲಿಸುವುದರ ಕಾನೂನುಬದ್ಧತೆಯನ್ನು ಪೀಠ ಪ್ರಶ್ನಿಸಿದೆ.

ಪುಣೆ: ತುಂಬು ಗರ್ಭಿಣಿಗೆ ದಿಢೀರ್ ಹೆರಿಗೆ ನೋವು, ರಸ್ತೆಯಲ್ಲೇ ಪ್ರಸವ

ಪುಣೆ: ತುಂಬು ಗರ್ಭಿಣಿಯೊಬ್ಬರು ಮಹಾರಾಷ್ಟ್ರದ ಪುಣೆ ನಗರದ ರಸ್ತೆಯಲ್ಲಿ ಭಾನುವಾರ ಬೆಳಗ್ಗೆ ನಡೆದುಕೊಂಡು ಹೋಗುತ್ತಿರುವಾಗಲೇ ಹಠಾತ್ತನೆ ಹೆರಿಗೆ ನೋವು ಕಾಣಿಸಿಕೊಂಡಿದ್ದು, ರಸ್ತೆಯಲ್ಲೇ ಮಗುವಿನ ಜನನವಾಗಿದೆ.

- ಸುಸಜ್ಜಿತ ಪ್ರಸವ ಕೊಠಡಿ, ಆಧುನಿಕ ವೈದ್ಯಕೀಯ ಪರಿಕರವಿಲ್ಲ
- ನಡುರಸ್ತೆಯಲ್ಲೇ ಸಹಜ ಹೆರಿಗೆ-ಜನರ ಹರ್ಷ
- ಸಮಯಕ್ಕೆ ಒದಗಿದ ವೈದ್ಯೆ, ಸಮಯಪ್ರಜ್ಞೆ ಮೆರೆದ ಜನತೆ

ನಡೆದುಕೊಂಡು ಹೋಗುತ್ತಿದ್ದ ಗರ್ಭಿಣಿಗೆ ದಿಢೀರನೆ ಪ್ರಸವ ವೇದನೆ ಕಾಣಿಸಿಕೊಂಡು ರಸ್ತೆಯಲ್ಲೇ ಕುಸಿದು ಕುಳಿತಿದ್ದಾರೆ. ಅದೇ ಸ್ಥಳದಲ್ಲಿದ್ದ ಜನರು ಸಹಾಯಕ್ಕೆ ಧಾವಿಸಿ ಬಂದಿದ್ದಾರೆ. ಸ್ಥಳದಲ್ಲಿದ್ದ ಮಹಿಳೆಯರು ತಮ್ಮ ದುಪಟ್ಟಾಗಳನ್ನೇ ಬಿಡಿಸಿ ಪರದೆಯಂತೆ ಹಿಡಿದು ವೃತ್ತಾಕಾರದಲ್ಲಿ ನಿಂತು ಗರ್ಭಿಣಿಯನ್ನು ಮರೆ ಮಾಡಿದ್ದಾರೆ. ಪುರುಷರು ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳನ್ನು ತುಸು ದೂರದಲ್ಲೇ ತಡೆದು ನಿಲ್ಲಿಸಿದ್ದಾರೆ. ಸಮೀಪದ ಮನೆಯೊಂದರಲ್ಲಿದ್ದ ಮಹಿಳಾ ವೈದ್ಯೆಯೊಬ್ಬರು ಸುದ್ದಿ ತಿಳಿದು ಓಡೋಡಿ ಬಂದಿದ್ದಾರೆ.

ಮಹಿಳಾ ವೈದ್ಯೆ ತಮ್ಮ ಮನೆ ಮತ್ತು ಸಮೀಪದಲ್ಲಿ ಲಭ್ಯವಿದ್ದ ಸಂಪನ್ಮೂಲಗಳನ್ನೇ ಬಳಸಿಕೊಂಡು ಅತ್ಯಂತ ನಾಜೂಕಾಗಿ ಮಹಿಳೆಗೆ ಸಹಜ ರೀತಿಯ ಹೆರಿಗೆ ಆಗುವಂತೆ ನೋಡಿಕೊಂಡಿದ್ದಾರೆ. ನಡು ರಸ್ತೆಯಲ್ಲೇ ಹಸುಗೂಸಿನ ಜನನವಾಗಿದೆ. ಸ್ವಲ್ಪ ಸಮಯದ ನಂತರ ಪರಿಸರದಲ್ಲಿನ ಸದ್ದನ್ನೆಲ್ಲಾ ಮೀರುವಂತೆ ಪುಟ್ಟ ಕಂದಮ್ಮನ ಜೋರು ಅಳು ಕೇಳಿಸಿದೆ. ಜನರು ಹರ್ಷೋದ್ಗಾರ ಮಾಡಿದ್ದಾರೆ.

ವೈದ್ಯೆ, ನವಜಾತಾ ಶಿಶುವನ್ನು ಎರಡೂ ಕೈಗಳಲ್ಲಿ ಮೇಲೆತ್ತಿ ಹಿಡಿದು ಹರುಷದ ನಗೆಬೀರಿದ್ದಾರೆ. ಸುತ್ತಲಿದ್ದ ಜನರಿಗೆ ನವಜಾತಾ ಶಿಶುವನ್ನು ಪ್ರದರ್ಶಿಸಿ 'ತಾಯಿ-ಮಗು ಇಬ್ಬರೂ ಕ್ಷೇಮದಿಂದ ಇದ್ದಾರೆ' ಎಂದು ಘೋಷಿಸಿದ್ದಾರೆ.

ರಸ್ತೆಯಲ್ಲೇ ಸಹಜ ಹೆರಿಗೆ ಮಾಡಿಸಿದ ಬಳಿಕ ಸಾರ್ವಜನಿಕರಿಗೆ ಶಿಶುವನ್ನು ಪ್ರದರ್ಶಿಸಿದ ವೈದ್ಯೆ

ವೈದ್ಯರ ಸಮಯಪ್ರಜ್ಞೆ ಮತ್ತು ಸಕಾಲದಲ್ಲಿ ಜನರು ತೋರಿದ ಸಹಕಾರದಿಂದ ಕಂದಮ್ಮನ ಜನನವಾಗಿದೆ. ಸುಸಜ್ಜಿತ ಪ್ರಸವದ ಕೊಠಡಿ ಇಲ್ಲದಿದ್ದರೂ, ಆಧುನಿಕ ವೈದ್ಯಕೀಯ ಉಪಕರಣಗಳಿಲ್ಲದಿದ್ದರೂ, ನಡು ರಸ್ತೆಯಲ್ಲೇ ಯಾವುದೇ ತೊಂದರೆ ಇಲ್ಲದೇ ಸಹಜ ಹೆರಿಗೆ ಆಗಿರುವುದನ್ನು ಕಂಡು ಹಾಗೂ ತಾಯಿ-ಮಗು ಇಬ್ಬರೂ ಆರೋಗ್ಯದಿಂದ ಇರುವುದನ್ನು ಕೇಳಿ ಸುತ್ತಲಿದ್ದ ಜನರು ಸಮಾಧಾನದ ನಿಟ್ಟುಸಿರುಬಿಟ್ಟಿದ್ದಾರೆ, ಬಾಣಂತಿ-ಮಗುವಿಗೆ ಶುಭ ಹಾರೈಸಿದ್ದಾರೆ. ಮಹಿಳೆಯ ಕುಟುಂಬದವರು ಸಂತಸ ವ್ಯಕ್ತಪಡಿಸಿದ್ದಾರೆ, ಸಕಾಲದಲ್ಲಿ ನೆರವಾದ ವೈದ್ಯೆಗೆ ಮತ್ತು ಸುತ್ತಲಿದ್ದ ಜನಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ನಂತರ ಬಂದ ಆಂಬ್ಯುಲೆನ್ಸ್‌ನಲ್ಲಿ ಮಗು-ಬಾಣಂತಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಇರಾನ್ ದಾಳಿ ತಡೆಗೆ ನೆರವು ಕೋರಿದ ಯುಎಇಗೆ ಇಸ್ರೇಲ್ ಐರನ್‌ಡೋಮ್



ಶತ್ರು ದೇಶದ ಕ್ಷಿಪಣಿಗಳನ್ನು ಆಕಾಶದಲ್ಲೇ ನಾಶಪಡಿಸುತ್ತಿರುವ ಇಸ್ರೇಲ್‌ನ ಐರನ್ ಡೋಮ್ ವ್ಯವಸ್ಥೆ.

ಅಬುದಾಬಿ: ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಇಸ್ರೇಲ್ ತನ್ನ ಸಶಸ್ತ್ರ ಪಡೆಯಲ್ಲಿನ ವಿಶ್ವದಲ್ಲೇ ಅತಿ ವಿಶಿಷ್ಟವಾದ 'ಐರನ್ ಡೋಮ್' ಎಂಬ ವಾಯುದಾಳಿ ಪ್ರತಿಬಂಧಕ ವ್ಯವಸ್ಥೆಯನ್ನು ಇದೇ ಮೊದಲ ಬಾರಿಗೆ ಬೇರೆ ದೇಶವೊಂದಕ್ಕೆ ಕಳುಹಿಸಿಕೊಟ್ಟಿದೆ.

ಇರಾನ್‌ನ ವಾಯುದಾಳಿ ತಡೆಯಲು 'ಯುನೈಟೆಡ್ ಅರಬ್ ಎಮಿರೇಟ್ಸ್' (ಯುಎಇ), ಇಸ್ರೇಲ್‌ನ ನೆರವು ಕೋರಿದೆ. ಹಾಗಾಗಿ, ಇಸ್ರೇಲ್ ತನ್ನ 'ಐರನ್ ಡೋಮ್' ವಾಯುದಾಳಿ ತಡೆ ವ್ಯವಸ್ಥೆಯನ್ನು 'ಯುಎಇ'ಗೆ ಕಳುಹಿಸಿಕೊಟ್ಟಿದೆ. ಇಸ್ರೇಲ್ ಮತ್ತು ಯುಎಇ ಅಧಿಕಾರಿಗಳ ಹೇಳಿಕೆಗಳನ್ನು ಉಲ್ಲೇಖಿಸಿ 'ಆಕ್ಸಿಯೋಸ್' ಸುದ್ದಿಸಂಸ್ಥೆ ವರದಿ ಮಾಡಿದೆ.

'ಐರನ್ ಡೋಮ್' ಮಾತ್ರವಲ್ಲ, ರಾಕೆಟ್‌ಗಳು, ಕ್ಷಿಪಣಿಗಳನ್ನೂ 'ಯುಎಇ'ಗೆ ಇಸ್ರೇಲ್ ರವಾನಿಸಿದೆ. ಜತೆಗೆ ಇರಾನ್‌ನ ಡ್ರೋನ್‌ಗಳನ್ನು ನಾಶಪಡಿಸಲು ವಾಯು ರಕ್ಷಣಾ ವ್ಯವಸ್ಥೆ ಮತ್ತು ಅದನ್ನು ನಿರ್ವಹಿಸುವ ತಂತ್ರಜ್ಞರ ತಂಡವನ್ನೂ ಇಸ್ರೇಲ್ ಕಳುಹಿಸಿಕೊಟ್ಟಿದೆ.

ದೇಶದ ಮೂಲಸೌಕರ್ಯಗಳ ಮೇಲೆಯೇ ಇರಾನ್ ನಿರಂತರ ದಾಳಿ ಮಾಡುತ್ತಿರುವುದರಿಂದ ಅದನ್ನು ತಡೆಯಲು 'ಯುಎಇ' ತನ್ನ ಮಿತ್ರರಾಷ್ಟ್ರ ಇಸ್ರೇಲ್‌ನ ನೆರವು ಕೋರಿತ್ತು. 'ಯುಎಇ' ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯದ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೇ ಕರೆ ಮಾಡಿ ನೆರವು ಕೋರಿದ್ದರು. ಹಾಗಾಗಿ ಇದೇ ಮೊದಲ ಬಾರಿಗೆ ದೇಶದಿಂದಾಚೆಗೆ 'ಐರಾನ್ ಡೋಮ್' ವ್ಯವಸ್ಥೆಯನ್ನು ಕಳುಹಿಸಿಕೊಡಲಾಗಿದೆ ಎಂದು ಇಸ್ರೇಲ್‌ನ ಅಧಿಕಾರಿಗಳು 'ಆಕ್ಸಿಯೋಸ್'ಗೆ ತಿಳಿಸಿದ್ದಾರೆ.

ಇಸ್ರೇಲ್-ಯುಎಇ ನಂಟು: ಭಾರೀ ಸಂಕಷ್ಟದ ಸಮಯದಲ್ಲಿ ಯುಎಇಗೆ ಇಸ್ರೇಲ್ ಐರನ್ ಡೋಮ್ ನೆರವು ನೀಡಿದೆ. ಇದು ಎರಡೂ ದೇಶಗಳ ಸಂಬಂಧವನ್ನು ಮತ್ತಷ್ಟು ಗಾಢವಾಗಿಸಿದೆ. ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜಂಟಿ ದಾಳಿ ಸಂದರ್ಭದಲ್ಲಿ ಯುಎಇ ಕೂಡಾ ಇಸ್ರೇಲ್‌ಗೆ ನಿಕಟವಾಗಿದೆ ಎಂಬುದು ಗಮನಾರ್ಹ.

ಯುಎಇ ಭದ್ರತಾ ವಿಭಾಗದ ಮಾಜಿ ಅಧಿಕಾರಿ ತಾರೆಕ್ ಅಲ್ ಒಟೈಬಾ ಅರಬ್ ಗಲ್ಫ್ ಸ್ಟೇಟ್ಸ್ ಇನ್‌ಸ್ಟಿಟ್ಯೂಟ್‌ಗೆ ಬರೆದ ಲೇಖನದಲ್ಲಿ ಇಸ್ರೇಲ್ ನಡೆಯನ್ನು ಶ್ಲಾಘಿಸಿದ್ದಾರೆ. ಅಬುಧಾಬಿಗೆ ಇಸ್ರೇಲ್ ನಿಜವಾಗಿ ದೊಡ್ಡ ಮಟ್ಟದಲ್ಲಿ ನೆರವಾಗಿದೆ ಎಂದು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ವ್ಯಕ್ತಿ ಕಾಣೆ : ಪತ್ತೆಗೆ ಮನವಿ

ಹೊಸಪೇಟೆ: ಹಡಗಲಿ ತಾಲೂಕಿನ ಹೊಳಲು ಗ್ರಾಮದ ನಿವಾಸಿಯಾದ ಬಳ್ಳಾರಿ ರಾಜಪ್ಪ ತಂದೆ ಬಳ್ಳಾರಿ ದ್ಯಾಮಪ್ಪ (ಸುಮಾರು 38 ವರ್ಷ) ವ್ಯಕ್ತಿ ಕಾಣೆಯಾಗಿದ್ದು, ಈ ಕುರಿತು ಏಪ್ರಿಲ್ 23ರಂದು ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಬಳ್ಳಾರಿ ರಾಜಪ್ಪ ಸುಮಾರು 5.2 ಅಡಿ ಎತ್ತರ, ಎಣ್ಣೆಗಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ ಹೊಂದಿದ್ದು ಕನ್ನಡ ಭಾಷೆ ಮಾತನಾಡುವರು. ವ್ಯಕ್ತಿಯು ಮನೆಯಿಂದ ಹೋಗುವಾಗ ಚೆಕ್ಸ್ ಬಣ್ಣದ ತುಂಬು ತೋಳಿನ ಅಂಗಿ ಮತ್ತು ನೀಲಿ ಬಣ್ಣದ ಲುಂಗಿ ಧರಿಸಿರುತ್ತಾರೆ. ಈ ವ್ಯಕ್ತಿಯ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಹಿರೇಹಡಗಲಿ ಪೊಲೀಸ್ ಠಾಣೆಯ ಕಂಟ್ರೋಲ್ ರೂಮ್ ಸಂಖ್ಯೆ: 08394200202, 9480805700 ಅಥವಾ ಹಿರೇಹಡಗಲಿ ಠಾಣೆ ಪೊಲೀಸ್ ಸಬ್ ಇನ್ಸ್ ಪೆಕ್ಟರ್‌ದೂರವಾಣಿ ಸಂಖ್ಯೆ: 9480805781ಗೆ ಸಂಪರ್ಕಿಸಬಹುದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹೊಸಪೇಟೆ: ಪ್ರಸಕ್ತ ಸಾಲಿನಲ್ಲಿ 2 ಮಿಶ್ರ ತಳಿ ಹಸು ಹೊಂದಿರುವ ರೈತರಿಗೆ ಶೇ.50ರಷ್ಟು ಸಹಾಯಧನದಡಿ 2 ರಬ್ಬರ್‌ಮ್ಯಾಟ್ ಮತ್ತು ಶೇ.50ರಷ್ಟು ಫಲಾನುಭವಿಯ ವಂತಿಕೆಯೊಂದಿಗೆ ನೀಡುವ ಘಟಕಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಇದೇ ಏಪ್ರಿಲ್ 30 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಹೊಸಪೇಟೆ ತಾಲ್ಲೂಕು ಪಶು ಆಸ್ಪತ್ರೆಯಲ್ಲಿ ಸಲ್ಲಿಸಬೇಕು. ಅವಧಿ ನಂತರ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಯಿ-ಮಗಳ ಕಾಣೆ : ಪತ್ತೆಗೆ ಮನವಿ

ಹೊಸಪೇಟೆ: ನಗರದ ಬಳ್ಳಾರಿ ದುರ್ಗಮ್ಮ ದೇವಸ್ಥಾನದ ಹತ್ತಿರ 19ನೇ ವಾರ್ಡ್ ನಿವಾಸಿ ಜ್ಯೋತಿ ತಂದೆ ರಾಘವೇಂದ್ರ (21 ವರ್ಷದ) ಮಹಿಳೆ ಹಾಗೂ ಮಗಳಾದ ದೀಪಿಕಾ (1ವರ್ಷ 4 ತಿಂಗಳು) ಮಗು ಕಾಣೆಯಾಗಿದ್ದು, ಈ ಕುರಿತು ಏಪ್ರಿಲ್ 24ರಂದು ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಜ್ಯೋತಿ ಸುಮಾರು 4.5 ಅಡಿ ಎತ್ತರ, ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ, ಎಡಗಣ್ಣು ವರಸುಗಣ್ಣಿನಿಂದ ಕೂಡಿದ್ದು, ಬಲಕುತ್ತಿಗೆಯಲ್ಲಿ ಸಣ್ಣ ಗಾಯದ ಗುರುತು ಹೊಂದಿದ್ದು ಕನ್ನಡ ಭಾಷೆ ಮಾತನಾಡುತ್ತಾಳೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಕೊರಳಪಟ್ಟಿ ರಹಿತ ಅಡ್ಡಗೆರೆಯುಳ್ಳ ಟೀ ಶರ್ಟ್ ಮತ್ತು ಕಪ್ಪು ಬಣ್ಣದ ನೈಟ್ ಪ್ಯಾಂಟ್ ಧರಿಸಿರುತ್ತಾಳೆ. ಹಾಗೂ ಮಗಳಾದ ದೀಪಾ ಗೋಧಿ ಮೈ ಬಣ್ಣ, ಎಡ ಮೊಳಕೈಯಲ್ಲಿ ಗಾಯದ ಗುರುತು ಹೊಂದಿದ್ದು, ಬ್ಲೂ ಗ್ರೇ ಬಣ್ಣದ ಫ್ರಾಕ್ ಧರಿಸಿದ್ದಾಳೆ. ಈ ತಾಯಿ-ಮಗಳ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಹೊಸಪೇಟೆ ಪಿಐ ಪಟ್ಟಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08394224033, 9480805745, ಡಿವೈಎಸ್ಪಿ ದೂ.ಸಂ:08394224204,9480805720, ಎಸ್ ಪಿ ದೂ.ಸಂ: 9480805700ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಹರ್ಷ ಐಪಿಎಸ್‌ಗೆ ಪಿಎಚ್.ಡಿ ಪ್ರದಾನ

ಕೊಪ್ಪಳ: ಬಳ್ಳಾರಿ ಐಜಿಪಿ ಹರ್ಷ ಪಿ.ಎಸ್ ಅವರು ಕುವೆಂಪು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದಾರೆ. ಹರ್ಷ ಅವರು ಮಂಡಿಸಿದ್ದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ಸಂಶೋಧನೆಗೆ ಕುವೆಂಪು ವಿವಿ ಪಿಎಚ್.ಡಿ ಪದವಿ ಘೋಷಿಸಿದೆ. ವಿವಿಯಲ್ಲಿ ಮೇ. 6 ರಂದು ಪಿಎಚ್ಡಿ ಪ್ರಧಾನ ಮಾಡಲಿದೆ. ಕುವೆಂಪು ವಿಶ್ವವಿದ್ಯಾನಿಲಯದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ಪ್ರಾಧ್ಯಾಪಕ ಡಾ. ವಿಜಯ ಕುಮಾರ್‌ಮಾರ್ಗದರ್ಶನದಲ್ಲಿ ಹರ್ಷ ಪಿ.ಎಸ್ ಕಳೆದ ಐದು ವರ್ಷಗಳ ಕ್ಷೇತ್ರ ಆಧಾರಿತ ಅಧ್ಯಯನ ನಡೆಸಿದ್ದಾರೆ. 'ನಾಗರಹೊಳೆ, ಬಂಡೀಪುರ ಮತ್ತು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿಗಳ ಜನಸಂಖ್ಯೆಯ ಸ್ಥಿರತೆಯ ಕುರಿತು ಒಂದು ಅಧ್ಯಯನ, ಮಾನವ-ಹುಲಿ ಸಂಘರ್ಷಕ್ಕೆ ವಿಶೇಷ ಉಲ್ಲೇಖ ದೊಂದಿಗೆ' ಎಂಬ ಶೀರ್ಷಿಕೆಯ ಅವರ ಡಾಕ್ಟರೇಟ್ ಪ್ರಬಂಧವು ಈ ಸಂರಕ್ಷಿತ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಕ್ಯಾಮೆರಾ ಟ್ರ್ಯಾಪಿಂಗ್ ಮತ್ತು ವಿವರವಾದ ಸಂಘರ್ಷ ತಾಣಗಳ ವಿಶ್ಲೇಷಣೆ ಸೇರಿದಂತೆ ತೀವ್ರವಾದ ಕ್ಷೇತ್ರಕಾರ್ಯ ಆಧರಿಸಿದೆ. ಮೇ 6 ರಂದು ನಡೆಯಲಿರುವ ಕುವೆಂಪು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಪಿಎಚ್.ಡಿ ಪ್ರಮಾಣಪತ್ರ ನೀಡಲಾಗುವುದು.

{ಎಚ್.ಸಿ. ಬಾಲಕೃಷ್ಣ } ಶಾಸಕ

ಸಿದ್ದರಾಮಯ್ಯ ನಂತರ ಸಿಎಂ ರೇಸ್ನಲ್ಲಿರೋದು ಡಿಕೆಶಿ ಮಾತ್ರ. ಬೇರೆಯವರೂ ರೇಸ್ನಲ್ಲಿದ್ದಾರೆ, ಆದರೆ ಅದು ಕಾಲಕ್ಕೆ ತಕ್ಕಂತೆ ತೀರ್ಮಾನ ಆಗುತ್ತೆ. ಸದ್ಯಕ್ಕೆ ಸಿದ್ದರಾಮಯ್ಯನವರು ಬೇಡ ಅಂದಾಗ ಆ ಸ್ಥಾನದ ರೇಸ್ನಲ್ಲಿರೋದು ಡಿಕೆಶಿ. ಈ ಅವಧಿಯಲ್ಲೇ ಡಿಕೆಶಿಗೆ ಅವಕಾಶ ಸಿಗುತ್ತೆ. ನಮ್ಮ ಹೈಕಮಾಂಡ್ ಈ ಬಗ್ಗೆ ಸೂಕ್ತ ತೀರ್ಮಾನ ಮಾಡುತ್ತೆ.



ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸೂಚನೆ | ಜಿಲ್ಲೆಯ ಕುಡಿವ ನೀರಿನ ಸಮಸ್ಯೆಯ ಪರಿಶೀಲನಾ ಸಭೆ

ಕ್ಷೇತ್ರಕ್ಕೆ ಒಬ್ಬ ನೋಡಲ್ ಅಧಿಕಾರಿ ನೇಮಿಸಿ

ಕೊಪ್ಪಳ: ಕುಡಿವ ನೀರಿನ ಸಮಸ್ಯೆಗಳ ಬಗ್ಗೆ ಮೇಲ್ವಿಚಾರಣೆ ಮಾಡಲು ವಿಧಾನಸಭೆ ಕ್ಷೇತ್ರಕ್ಕೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಬೇಕು. ಕುಡಿವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ನಾಳೆಯಿಂದಲೇ ಜಿಲ್ಲಾ ಮಟ್ಟದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಕುಡಿವ ನೀರಿನ ಸಮಸ್ಯೆ ಮತ್ತು ಕುಡಿವ ನೀರಿನ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು.

ಕೊಪ್ಪಳ ವಿಧಾನಸಭೆ ಕ್ಷೇತ್ರಕ್ಕೆ ಜಿಪಂ ಉಪ ಕಾರ್ಯದರ್ಶಿ ಟಿ. ಕೃಷ್ಣಮೂರ್ತಿ,ಕನಕಗಿರಿಗೆ ಎಸಿ ಕ್ಯಾ.ಮಹೇಶ ಮಾಲಗಿತ್ತಿ, ಯಲಬುರ್ಗಾಕ್ಕೆ ಕೃಷಿ ಜೆಡಿ ಜಿ.ಡಿ.ಕೃಷ್ಣಮೂರ್ತಿ,ಕುಷ್ಟಗಿಗೆ ಡಿಯುಡಿಸಿ ಪಿಡಿ ಮಂಜುನಾಥ ಗುಂಡೂರು ಹಾಗೂ ಗಂಗಾವತಿ ವಿಧಾನಸಭೆ ಕ್ಷೇತ್ರಕ್ಕೆ ತೋಟಗಾರಿಕೆ ಇಲಾಖೆ ಜೆಡಿ ಕೃಷ್ಣ ಉಕ್ಕುಂದ ಅವರನ್ನು ನೇಮಕ ಮಾಡಬೇಕು. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು. ಎರಡು ಮೂರು ದಿನಗಳ ಒಳಗಾಗಿ ಆಯಾ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ತಹಸೀಲ್ದಾರ್,ತಾಪಂ ಇಒ, ಪಿಡಿಒಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಭೆ ಮಾಡಬೇಕು. ನಂತರ ಆಯಾ ಶಾಸಕರ ಅಧ್ಯಕ್ಷತೆಯಲ್ಲಿ ಕುಡಿವ ನೀರಿನ ಟಾಸ್ಕ್ ಫೋರ್ಸ್ ಸಭೆ ಮಾಡಬೇಕು. ಸಭೆಯ ಮಾಹಿತಿ ಮತ್ತು ಸಮಸ್ಯೆಗಳಿದ್ದರೆ ಕೂಡಲೇ ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಒ ಅವರಿಗೆ ಮಾಹಿತಿ ನೀಡಿ ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಕ್ಕೆ ಪ್ರತ್ಯೇಕ ಸಹಾಯವಾಣಿ ತೆರೆಯಲಾಗಿದೆ. ಪ್ರತಿಯೊಂದು ವಿಧಾನಸಭೆಗೆ ಒಂದು ವಾಟ್ಸಾಪ್ ಗ್ರೂಪ್ ಮಾಡುವಂತೆ ಸೂಚಿಸಲಾಗಿದೆ. ಎಲ್ಲ ಗ್ರೂಪ್ ನಲ್ಲಿ ಕಡ್ಡಾಯವಾಗಿ ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಒ ಇರಲಿದ್ದು, ಪ್ರತಿ ದಿನದ ಮಾಹಿತಿ ಅಪ್ ಡೇಟ್ ಮಾಡುವಂತೆ ಸೂಚಿಸಲಾಗಿದೆ. ಕುಡಿವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ಯುದ್ಧೋಪಾದಿಯಲ್ಲಿ ಕೆಲಸ ಮಾಡುವಂತೆ ಸೂಚಿಸಿದ್ದೇನೆ. ಸಹಾಯವಾಣಿಯ ನಂಬರ್‌ಗಳನ್ನು ಎಲ್ಲ ಸರಕಾರಿ ಕಚೇರಿ ಮುಂದೆ ಪ್ರದರ್ಶನ ಮಾಡಬೇಕು ಎಂದು ತಿಳಿಸಿದರು.

ಕೊಪ್ಪಳದ ಜಿಲ್ಲಾಡಳಿತ ಭವನದಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಕುಡಿವ ನೀರಿನ ಸಮಸ್ಯೆ ಮತ್ತು ಕುಡಿವ ನೀರಿನ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆಯಿತು

ತುಂಗಭದ್ರ ಡ್ಯಾಂನ 33 ಕ್ರಸ್ಟ್ ಗೇಟ್ ಈಗಾಗಲೇ ಸಿದ್ಧಗೊಂಡಿವೆ. ಏಪ್ರಿಲ್ ಅಂತ್ಯಕ್ಕೆ ಎಲ್ಲ ಗೇಟ್ ಕಾಮಗಾರಿ ಕೆಲಸ ಪೂರ್ಣಗೊಳ್ಳಲಿದೆ. ನಾವು ಮೇ ಎಂದು ಹೇಳಿದ್ದೆವು. ಒಂದು ತಿಂಗಳು ಮೊದಲೇ ಕಾಮಗಾರಿ ಪೂರ್ಣಗೊಂಡಿದ್ದು ಸಣ್ಣ- ಪುಟ್ಟ ಕೆಲಸ ನಡೆದಿವೆ. ಗೇಟ್ ಚೈನ್ ಕೂಡ ಬದಲಾವಣೆ ಮಾಡುತ್ತಿದ್ದು, ಟೆಂಡರ್‌ಆಗಿದೆ.
- ಶಿವರಾಜ ತಂಗಡಗಿ,
ಸಚಿವ

ಕುಡಿವ ನೀರಿಗೆ ಹಣದ ಕೊರತೆ ಇಲ್ಲ

ಬೇಸಿಗೆಯಲ್ಲಿ ಕುಡಿವ ನೀರಿನ ಸಮಸ್ಯೆ ಪರಿಹಾರಕ್ಕೆ ಕುಡಿವ ನೀಡಿನ ಸಮಸ್ಯೆ ಇಲ್ಲ. ಗ್ರಾಮೀಣ ಭಾಗಕ್ಕೆ ಸುಮಾರು 1.50 ಕೋಟಿ ರೂ. ಅನುದಾನ ನೀಡಲಾಗಿದೆ. ನಗರ ಪ್ರದೇಶಕ್ಕೆ 90 ಕೋಟಿ ಹಣ ಇದೆ. ಜಿಲ್ಲೆಯಲ್ಲಿ 30 ಗ್ರಾಮಗಳಿಗೆ ಕುಡಿವ ನೀರಿನ ಸಮಸ್ಯೆ ಇದೆ ಎಂದು ಗುರುತಿಸಲಾಗಿದೆ. ಜೊತೆಗೆ ಈಗಾಗಲೇ 31 ಖಾಸಗಿ ಬೋರ್‌ವೆಲ್ ಬಾಡಿಗೆಗೆ ಪಡೆದಿದ್ದೇವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದು ಸರಿ. ಆದರೆ, ಯಾವುದೇ ಕಾರಣಕ್ಕೂ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳಿಗೆ ಸೂಚಿಸಿದರು.

ಒಳ ಮೀಸಲಾತಿ ಹಂಚಿಕೆ

ಮಾದಿಗ ಸಮುದಾಯಕ್ಕೆ ಅನ್ಯಾಯ

ಸುದ್ದಿಗೋಷ್ಠಿಯಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಮಾತನಾಡಿದರು.

ರಾಯಚೂರು: ಒಳ ಮೀಸಲಾತಿ ಜಾರಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಲಾಢ್ಯ ಸಚಿವರ ಒತ್ತಡಕ್ಕೆ ಮಣಿದು, ತಮ್ಮ ಕುರ್ಚಿ ಉಳಿಸಿಕೊಳ್ಳಲು, ತಮ್ಮ ಸ್ವಾರ್ಥಕ್ಕಾಗಿ ಇಡೀ ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಮಾದಿಗ ದಂಡೋರ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ರಾಜ್ಯ ಸರಕಾರ ಒಳ ಮೀಸಲಾತಿಯನ್ನು ಶೇ.5.25, ಶೇ.5.25 ಹಾಗೂ ಶೆ.4.50ಯಾಗಿ ಜಾರಿ ಮಾಡಿದ್ದು, ಮಾದಿಗ ಸಮುದಾಯಕ್ಕೆ ಪ್ರತ್ಯೇಕ ಶೇ.6 ರಷ್ಟು ಮೀಸಲಾತಿ ನೀಡುವಂತೆ ಸದಾಶಿವ ಆಯೋಗ, ನಾಗಮೋಹನದಾಸ ಆಯೋಗ ತಿಳಿಸಿದರೂ, ಅವುಗಳನ್ನು ಪರಿಗಣಿಸದೇ ರಾಜ್ಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು, ಮತ್ತು ಕುರ್ಚಿ ಉಳಿಸಿಕೊಳ್ಳಲು ತಮ್ಮ ಇಚ್ಛೆಯಂತೆ ಜಾರಿ ಮಾಡಿದ್ದಾರೆ ಎಂದು ದೂರಿದರು. ಸಿದ್ದರಾಮಯ್ಯ ಮೂಲತಃ ವಕೀಲರು ಎಂದು ಹೇಳುತ್ತಿದ್ದು, ಮಾದಿಗ ಸಮುದಾಯಕ್ಕೆ ನ್ಯಾಯ ಸಮ್ಮತ ಮೀಸಲಾತಿ ನೀಡದೇ ಜಾತಿ ಜಾತಿಗಳ ಮಧ್ಯೆ ಜಗಳ ಹಚ್ಚುವವರಾಗಿದ್ದಾರೆ. ಈಗಾಗಲೇ ದಾವಣಗೆರೆ, ಬಾಗಲಕೋಟೆ ಉಪಚುನಾವಣೆಗಳಾಗಿದ್ದು, ಅಲ್ಲಿ ಬಿಜೆಪಿ ಬಹುಮತದಿಂದ ಗೆಲುವು ಸಾಧಿಸುತ್ತದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವುದೇ ಮಾದಿಗ ಸಮುದಾಯದ ಶಪಥವಾಗಿರುತ್ತದೆ. 2028 ರ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ದುಳ್ಳಯ್ಯ ಗುಂಜಳ್ಳಿ, ಜಕ್ರಪ್ಪ ಹಂಚಿನಾಳ, ಹನುಮಂತ ಜುಲಮಗೇರಾ, ಭೀಮೇಶ ತುಂಟಾಪೂರ, ಯಲ್ಲಪ್ಪ ಡಿ.ರಾಂಪೂರ, ಅನೀಲಕುಮಾರ ತಲಮಾರಿ ಸೇರಿದಂತೆ ಅನೇಕರಿದ್ದರು.

ಮುದಗಲ್: ಅದ್ದೂರಿ ವಾಸವಿ ಜಯಂತಿ ಆಚರಣೆ

ಮುದಗಲ್: ಪಟ್ಟಣದ ಆರ್ಯ ವೈಶ್ಯ ಸಮಾಜ ಹಾಗೂ ವಾಸವಿ ಮಹಿಳಾ ಸಂಘದ ಆಶ್ರಯದಲ್ಲಿ ಅದ್ದೂರಿಯಾಗಿ ವಾಸವಿ ಜಯಂತಿ ಆಚರಣೆ ಮಾಡಿದರು.

ದೇವಸ್ಥಾನದ ಆವರಣದಲ್ಲಿ ಗಂಗೆ ಪೂಜೆ ನಡೆಸಿ ಕನ್ನಿಕಾ ಪರಮೇಶ್ವರಿ ದೇವಿಯ ಭಾವಚಿತ್ರದ ಮೆರವಣಿಗೆ ನಗರೇಶ್ವರ ದೇವಸ್ಥಾನ ದಿಂದ ಪ್ರಮುಖ ರಸ್ತೆಯ ಬೀದಿ ಮೂಲಕ ನಗರೇಶ್ವರ ದೇವಸ್ಥಾನ ವರಗೆ ನೆಡೆಯಿತು. ಪಟ್ಟಣದ ನಗರೇಶ್ವರ ದೇವಸ್ಥಾನ ದಲ್ಲಿ ವಾಸವಿ ದೇವಿಗೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು, ಹೋಮ ಹವನಗಳ ಕಾರ್ಯಕ್ರಮ ದಲ್ಲಿ ಸಮಾಜದ ಬಾಂಧವರು ಭಾಗವಹಿಸಿ ಯಶಸ್ವಿ ಗೋಳಿಸಿದರು. ಈ ವೇಳೆ ಪ್ರಮುಖ ರಸ್ತೆಯ ಮೂಲಕ ಸಕಲ ವಾಧ್ಯ ವೈಭವ, ಡಿಜೆ ಸಾಂಗ್ ಗೆ ಯುವಕರು ಡ್ಯಾನ್ಸ್ ಮಾಡುವುದು ಗಮನ ಸೆಳೆಯಿತು ಈ ಸಂದರ್ಭದಲ್ಲಿ ವಾಸವಿ ಜಯಂತಿಯಲ್ಲಿ ಆರ್ಯ ವೈಶ್ಯ ಕುಲ ಬಾಂಧವರು ಭಾಗವಹಿಸಿದ್ದರು.

ಪಟ್ಟಣದ ಆರ್ಯ ವೈಶ್ಯ ಸಮಾಜ ಹಾಗೂ ವಾಸವಿ ಮಹಿಳಾ ಸಂಘದ ಆಶ್ರಯದಲ್ಲಿ ಅದ್ದೂರಿಯಾಗಿ ವಾಸವಿ ಜಯಂತಿ ನಡೆಯಿತು.

ಯುವತಿಗೆ ದೋಖಾ: ಯುವಕನ ವಿರುದ್ಧ ಕೇಸ್ ದಾಖಲು

ಲಿಂಗಸುಗೂರು: ಪ್ರೀತಿ ಹೆಸರಿನಲ್ಲಿ ವಂಚನೆ ಮಾಡುವ ಘಟನೆಗಳು ದಿನೇದಿನೇ ಹೆಚ್ಚುತ್ತಿರುವ ನಡುವೆ, ಇಂತಹದ್ದೇ ಒಂದು ಪ್ರಕರಣ ಲಿಂಗಸುಗೂರು ಪಟ್ಟಣದಲ್ಲಿ ಬೆಳಕಿಗೆ ಬಂದಿದೆ. ಮದುವೆಯಾಗುವುದಾಗಿ ನಂಬಿಸಿ ಯುವತಿಯನ್ನು ದೈಹಿಕ ಹಾಗೂ ಮಾನಸಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾನೆ ಎಂಬ ಆರೋಪದಡಿ ಯುವಕನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪಟ್ಟಣದ ನಿವಾಸಿ ಶಿವು ಅಲಿಯಾಸ್ ಶಿವಕುಮಾರ್ ವಿರುದ್ಧ ಯುವತಿ ದೂರು ನೀಡಿದ್ದಾಳೆ. ಸಂತ್ರಸ್ತೆಯ ಹೇಳಿಕೆಯ ಪ್ರಕಾರ, ಕಳೆದ ಸುಮಾರು ಹತ್ತು ವರ್ಷಗಳಿಂದ ಆತ ತನ್ನನ್ನು ಪ್ರೀತಿಸುತ್ತೇನೆ ಎಂದು ನಂಬಿಸಿ ಹತ್ತಿರವಾಗಿದ್ದ. ಮದುವೆಯಾಗುವುದಾಗಿ ಭರವಸೆ ನೀಡಿ, ಹಲವು ಬಾರಿ ಬಲವಂತವಾಗಿ ದೈಹಿಕ ಸಂಬಂಧ ಹೊಂದಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಇತ್ತೀಚೆಗೆ ಆರೋಪಿಯು ಸಂತ್ರಸ್ತೆಯನ್ನು ಬಿಟ್ಟು ಬೇರೊಬ್ಬ ಯುವತಿಯನ್ನು ಮದುವೆಯಾಗಲು ಸಿದ್ಧತೆ ನಡೆಸುತ್ತಿದ್ದನೆಂಬ ಮಾಹಿತಿ ಇದೆ. ಈ ವಿಷಯವಾಗಿ ನ್ಯಾಯ ಕೇಳಿದಾಗ, ಶಿವಕುಮಾರ್‌ಹಾಗೂ ಆತನ ಕುಟುಂಬಸ್ಥರು ಸಂತ್ರಸ್ತೆಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ.

ನ್ಯಾಯಕ್ಕಾಗಿ ಸಂತ್ರಸ್ತೆ ಇದೀಗ ಸಾರ್ವಜನಿಕವಾಗಿ ಹೋರಾಟ ನಡೆಸುತ್ತಿದ್ದು, ಆರೋಪಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ. ಪ್ರಕರಣ ದಾಖಲಿಸಿಕೊಂಡಿರುವ ಲಿಂಗಸುಗೂರು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕಂಪ್ಲಿಯಲ್ಲಿ ನೂತನ ಸಿವಿಲ್, ಜೆಎಂಎಫ್‌ಸಿ ನ್ಯಾಯಾಲಯ ಉದ್ಘಾಟನೆ

ಜನರ ಹಿತರಕ್ಷಣೆ, ಹಕ್ಕುಗಳಿಗಾಗಿ ನ್ಯಾಯಾಲಯ

ಬಳ್ಳಾರಿ: ಜನರ ಹಿತರಕ್ಷಣೆ ಹಾಗೂ ಹಕ್ಕುಗಳನ್ನು ಒದಗಿಸಿಕೊಡುವ ಜತೆಗೆ ಸಕಾಲದಲ್ಲಿ ಜನತೆಗೆ ನ್ಯಾಯ ಒದಗಿಸಿಕೊಡುವುದು ನ್ಯಾಯಾಲಯದ ಮುಖ್ಯ ಉದ್ದೇಶವಾಗಿದೆ ಎಂದು ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಆಡಳಿತಾತ್ಮಕ ನ್ಯಾಯಾಧೀಶ ಆರ್.ನಟರಾಜ ಹೇಳಿದರು.

ಕಂಪ್ಲಿ ಪಟ್ಟಣದ 20ನೇ ವಾರ್ಡಿನ ಶಿಬಿರದಿನ್ನಿ (ಮಾರುತಿನಗರ)ಯಲ್ಲಿ ಹಮ್ಮಿಕೊಂಡಿದ್ದ ನೂತನ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ ಉದ್ಘಾಟಿಸಿ ಮಾತನಾಡಿ, ಜನರು ಕೇಸ್ ವಿಚಾರಣೆಗಾಗಿ ಕಂಪ್ಲಿಯಿಂದ ದೂರದ ಬಳ್ಳಾರಿ ಕೋರ್ಟ್ ಗೆ ಹೋಗಬೇಕಾಗಿತ್ತು. ಕಂಪ್ಲಿಯಲ್ಲಿ ಕೋರ್ಟ್ ಆಗದಿದ್ದರೆ, ಅಪೂರ್ಣವಾಗುತ್ತಿತ್ತು. ಕೋರ್ಟ್ ಸ್ಥಾಪನೆಯೊಂದಿಗೆ ಹೂ ಅರಳಿದಂತಾಗಿದೆ ಎಂದು ತಿಳಿಸಿದರು.

ಇಲ್ಲಿನ ಜನರು ಹಕ್ಕು ಭಾದಿತರಾಗಿದ್ದಾರೆ. ಇಲ್ಲಿನ ಜನತೆಗೆ ಕೋರ್ಟ್ ಅತ್ಯವಶ್ಯಕವಾಗಿದೆ. ಇಲ್ಲಿನ ಪುರಸಭೆಗೆ ಒಳಪಡುವ ಕಟ್ಟಡದಲ್ಲಿ ಕೋರ್ಟ್ ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲಿನ ನಗದಿತ ಸ್ಥಳದಲ್ಲಿರುವ ಕಟ್ಟಡಕ್ಕೆ ಹೊಸ ರೂಪುರೇಷೆ ನೀಡಲಾಗುತ್ತದೆ. ಸರಕಾರ ಅನುಮತಿ ನೀಡಿದರೆ, ಭವ್ಯ ಕಟ್ಟಡ ಮಾಡಲಿದ್ದೇವೆ ಎಂದರು.

ಉತ್ತಮ ಸ್ಥಳದಲ್ಲಿ ಕೋರ್ಟ್ ಸ್ಥಾಪಿತವಾಗಬೇಕಾಗಿತ್ತು. ಆದರೆ, ಇಲ್ಲಿನ ಇಕ್ಕಟ್ಟಿನ ಸ್ಥಳದಲ್ಲಿ ಹಾಗೂ ಜನರು ಬಾರದ ಸ್ಥಳದಲ್ಲಿ ಕೋರ್ಟ್ ಕಟ್ಟಡ ನೀಡಿರುವುದು ಅಸಮಾಧಾನವಿದೆ. ಇಲ್ಲಿನ ಕೋರ್ಟ್ ಸಾಕಾಗಲ್ಲ, ಇಲ್ಲಿ 63 ಜನ ವಕೀಲರಿದ್ದು, ಒಂದು ಸಾವಿರ ಕೇಸ್ ಇರುತ್ತಿದ್ದವು. ಈಗ ಕಂಪ್ಲಿಯಲ್ಲೇ ನ್ಯಾಯಾಲಯ ಸ್ಥಾಪಿತವಾಗಿದೆ. ಇದರಿಂದ ಈ ಭಾಗದ ಜನರು ನ್ಯಾಯ ಪಡೆಯುವ ಜತೆಗೆ ಸೌಲಭ್ಯಗಳನ್ನು ಪಡೆದುಕೊಳ್ಳಲಿದ್ದಾರೆ. ಜನರ ಹಿತರಕ್ಷಣೆ ಹಾಗೂ ಜನರು ತಮ್ಮ ಹಕ್ಕುಗಳನ್ನು ಪಡೆದು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ, ಎಸ್.ಇಸ್ಮಾಯಿಲ್ ಜಬಿವುಲ್ಲಾ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಜೆ.ಎಂ.ಅನಿಲ್ ಕುಮಾರ, ಲೋಕೋಪ ಯೋಗಿ ಇಇ ಬಿ.ವಿಜಯ ಭಾಸ್ಕರ್, ವಕೀಲರಾದ ಪ್ರಭಾಕರ, ಹರೀಶ್, ರುದ್ರಪ್ಪ, ಶಿವಪ್ಪ, ಯಂಕಪ್ಪ, ನಟರಾಜ, ಹುಲುಗಪ್ಪ, ವೀರಣ್ಣ, ಮಾರುತಿಸಿಂಗ್, ಮೋಹನ್ ಕುಮಾರ್‌ದಾನಪ್ಪ, ಮುಂಖಡರಾದ ಕೆ.ಎಂ.ಹೇಮಯ್ಯಸ್ವಾಮಿ, ಹೊಸಕೋಟೆ ಜಗದೀಶ, ಜಿ.ರಾಮಣ್ಣ, ಬಿ.ಸಿದ್ದಪ್ಪ ಸೇರಿದಂತೆ ಅನೇಕರಿದ್ದರು.

ಕಂಪ್ಲಿ ಪಟ್ಟಣದ 20ನೇ ವಾರ್ಡಿನ ಶಿಬಿರದಿನ್ನಿ (ಮಾರುತಿನಗರ)ಯಲ್ಲಿ ಹಮ್ಮಿಕೊಂಡಿದ್ದ ನೂತನ ಸಿವಿಎಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ ಉದ್ಘಾಟನಾ ಕಾರ್ಯಕ್ರಮವನ್ನು ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಆಡಳಿತಾತ್ಮಕ ನ್ಯಾಯಾಧೀಶ ಆರ್.ನಟರಾಜ ಅವರು ಉದ್ಘಾಟಿಸಿದರು.

ಕಕ್ಷಿದಾರರಿಗೆ ನ್ಯಾಯ ಒದಗಿಸಿ

ಕರ್ನಾಟಕ ರಾಜ್ಯ ಬಾರ್‌ಕೌನ್ಸಿಲ್ ಸದಸ್ಯ ಅನೀಲ್ ಕುಮಾರ್‌ಮಾತನಾಡಿ, ಕಂಪ್ಲಿಯಲ್ಲಿ ಈಗ ನ್ಯಾಯಾಲಯ ಸ್ಥಾಪನೆಗೊಂಡಿದೆ. ಕಂಪ್ಲಿ ಬಳಿಯಲ್ಲಿ ಮೀಸಲಿಸಿರುವ 3.12 ಎಕರೆ ಜಾಗದಲ್ಲಿ ಸುಮಾರು 25 ಕೋಟಿ ರು. ಅನುದಾನ ಮಂಜೂರು ಮಾಡಿಸಿ, ಭವ್ಯ ಕಟ್ಟಡ ನಿರ್ಮಿಸಿಕೊಡುವ ಭರವಸೆಯನ್ನು ಶಾಸಕ ಜೆ.ಎನ್.ಗಣೇಶ ನೀಡಿದ್ದಾರೆ. ಸಕಾಲದಲ್ಲಿ ಕಕ್ಷಿದಾರರಿಗೆ ನ್ಯಾಯ ಒದಗಿಸಿಕೊಡುವ ನಿಟ್ಟಿನಲ್ಲಿ ವಕೀಲರು ಮುಂದಾಗಬೇಕು ಎಂದರು.

ಎಸ್ಸೆಸ್ಸೆಲ್ಸಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ | ವಿದ್ಯಾರ್ಥಿಗಳು ನಿರಂತರ ಅಧ್ಯಯನ ಶೀಲರಾಗಿ : ನಿತೀಶ್

ಸತತ ಪ್ರಯತ್ನವೇ ಸಾಧನೆಗೆ ಮಾರ್ಗ

ರಾಯಚೂರು: ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉನ್ನತ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಎಸ್.ಎಸ್.ಎಲ್.ಸಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಹೆಚ್ಚಿಸಲು ಜಿಲ್ಲೆಯ ಜಿಲ್ಲಾ ಮಟ್ಟದಿಂದ ಗ್ರಾಮೀಣ ಮಟ್ಟದವರೆಗೂ ವಿಶೇಷವಾದ ತಂಡಗಳನ್ನು ರಚಿಸಲಾಗಿತ್ತು. ಜೊತೆಗೆ ಪ್ರತಿ ತಾಲೂಕಿಗೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಿ, ಅಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳನ್ನು ನಡೆಸಿ, ಜಿಲ್ಲೆಯ ಫಲಿತಾಂಶವನ್ನು ಸುಧಾರಿಸಲಾಗಿದೆ. ಮತ್ತು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಉತ್ತೀಣಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಅತ್ಯಂತ ಹೆಚ್ಚಿನ ಶ್ರಮ ವಹಿಸಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ವಿದ್ಯಾರ್ಥಿಗಳಿಗೆ ಸನ್ಮಾನ: ಕಾರ್ಯಕ್ರಮದಲ್ಲಿ ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಮಾನ್ವಿ ತಾಲೂಕಿನ ಸುಖದೇವ (625), ಸಿಂಧನೂರಿನ ನಿಖಿಲ್ ಮೇಟಿ (622), ಲಿಂಗಸುಗೂರಿನ ಪ್ರವೀಣ್ (622), ದೇವದುರ್ಗದ ಮಲ್ಲಿಕಾರ್ಜುನ ಸ್ವಾಮಿ (622) ಹಾಗೂ ರಾಯಚೂರಿನ ಸೌಮ್ಯ ಪ್ಯಾಟಿ (619) ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲೆಯ ಮಾನ್ವಿಯ ಬಿವಿಆರ್‌ಪ್ರೌಢ ಶಾಲೆಯ ವಿದ್ಯಾರ್ಥಿ ಸುಖದೇವ ಅವರಿಗೆ ಜಿಲ್ಲಾಧಿಕಾರಿಯಿಂದ 10 ಸಾವಿರ ರು. ಚೆಕ್ ಅನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ್, ರಾಯಚೂರು ತಹಸೀಲ್ದಾರ್‌ಸುರೇಶ ವರ್ಮಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಡಿ.ಬಡಿಗೇರ, ಅಭಿವೃದ್ಧಿ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ ಭಂಡಾರಿ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇತರರು ಇದ್ದರು.

ವಿದ್ಯಾರ್ಥಿಗೆ ಶತೃವೆಂದರೇ ಅದು ಮೊಬೈಲ್ ಫೋನ್ ಆಗಿದ್ದು, ಅದನ್ನು ಒಳ್ಳೆ ಕೆಲಸಗಳಿಗೆ ಮತ್ತು ಶಿಕ್ಷಣದ ವಿಚಾರವಾಗಿ ಬಳಸಿದರೇ ಮಾತ್ರ ಉಪಯೋಗವಾಗುತ್ತದೆ. ಕೇವಲ ಸಾಮಾಜಿಕ ಜಾಲತಾಣದಲ್ಲಿ ಕಾಲ ಕಳೆಯುವುದರಿಂದ ಸಮಯವೂ ವ್ಯರ್ಥವಾಗುತ್ತದೆ. ವಿದ್ಯಾರ್ಥಿಗಳ ಪಾಲಕರ ಪರಿಶ್ರಮಕ್ಕೆ ಪ್ರತಿಫಲವೆಂದರೇ ಅದು ವಿದ್ಯಾರ್ಥಿ ಉತ್ತಮ ಫಲಿತಾಂಶವನ್ನು ತೆಗೆವುದು ಮಾತ್ರ ಆಗಿರುತ್ತದೆ. ಶಿಕ್ಷಣ ಇಲಾಖೆ ಈ ಬಾರಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು, ಇದೀಗ ಶಿಕ್ಷಣ ಇಲಾಖೆಯ ಜವಾಬ್ದಾರಿ ಇನ್ನೂ ಹೆಚ್ಚಾಗಿದ್ದು, ನಿರಂತರ ಶ್ರಮದಿಂದ ಕಾರ್ಯ ನಿರ್ವಹಿಸುವ ಮೂಲಕ ರಾಜ್ಯದಲ್ಲಿ ಇನ್ನೂ ಉನ್ನತ ಸ್ಥಾನಕ್ಕೆ ತಲುಪಬಹುದು.
-ನಿತೀಶ್ ಕೆ, ಜಿಲ್ಲಾಧಿಕಾರಿ

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ನಿತೀಶ್ ಕೆ. ಸನ್ಮಾನಿಸಿದರು.

ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡುವೆ

ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಜಿಲ್ಲೆಯ ಮಾನ್ವಿಯ ಬಿವಿಆರ್‌ಪ್ರೌಢ ಶಾಲೆಯ ವಿದ್ಯಾರ್ಥಿ ಅವರು ಮಾತನಾಡಿ, ಐಐಟಿ ಪದವಿ ಪಡೆದು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡುವ ಗುರಿ ಇದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಾಧನೆ ಮಾಡುವ ಆಸೆ ಇದೆ ಎಂದರು.

ಏಪ್ರಿಲ್ 30 ರಿಂದ ಮೇ 5 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು | ನಾನಾ ಗಣ್ಯರ ಆಗಮನ

ಶ್ರೀ ಕಾಳಿಕಾದೇವಿಯ ಪ್ರಾಣ ಪ್ರತಿಷ್ಠಾಪನೆ ಮೇ 3ರಂದು

ಹೊಸಪೇಟೆ: ನಗರದ ಅಭಿವೃದ್ಧಿ ಹಿನ್ನೆಲೆ ರಸ್ತೆ ಅಗಲೀಕರಣಕ್ಕೆ ಪ್ರಪ್ರಥಮವಾಗಿ ಬಿಟ್ಟುಕೊಟ್ಟ ಕಾಳಿಕಾ ದೇವಸ್ಥಾನವೂ 15 ವರ್ಷಗಳ ನಂತರ ನವೀಕೃತಗೊಂಡಿದ್ದು ಶ್ರೀ ಕಾಳಿಕಾ ದೇವಿಯ ದೇವಸ್ಥಾನ ಮೇ 3ರಂದು ಉದ್ಘಾಟನೆಗೊಳ್ಳಲಿದೆ ಎಂದು ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಕೆ. ವಿ. ಪತ್ತಾರ್‌ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೂತನ ಗರ್ಭಗುಡಿಯ ಆಲಯ ಸಮರ್ಪಣೆ ಹಾಗೂ ಕಾಳಿಕಾದೇವಿ ಕಮಟೇಶ್ವರ ದೇವರ ಹಾಗೂ ಪರಿಹಾರ ದೇವರ ಅಷ್ಟಬಂಧ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಹಾಗೂ ನವಚಂಡಿಕಾ ಯಾಗ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಏಪ್ರಿಲ್ 30 ರಿಂದ ಮೇ 5 ರವರೆಗೆ ಬಳ್ಳಾರಿ ರಸ್ತೆಯ ಕಾಳಿಕಾದೇವಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಮೇ 30 ರಂದು ಕಾಳಿಕಾದೇವಿಯ ಅಷ್ಟಬಂಧ ಪ್ರತಿಷ್ಟೆ ಬ್ರಹ್ಮಕುಂಭಾಭಿಷೇಕ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು ಎಂದರು. ಅಂದು ಮಧ್ಯಾಹ್ನ 3 ಗಂಟೆಗೆ ಸಕಲ ಮಂಗಳವಾದ್ಯಗಳೊಂದಿಗೆ ಶೋಭಾಯಾತ್ರೆಯೂ ಶ್ರೀ ಸಿದ್ದಿವಿನಾಯಕ ದೇವಸ್ಥಾನದಿಂದ ಕಾಳಿಕಾದೇವಿ ದೇವಸ್ಥಾನದವರೆಗೆ ನಡೆಯಲಿದೆ ಎಂದು ಹೇಳಿದರು. ಆನೆಗುಂದಿ ಮಹಾಸಂಸ್ಥಾನದ ಜಗದ್ಗುರು ಅನಂತ ಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳು ಸೇರಿದಂತೆ ನಾಗಮೂರ್ತಿಯೇಂದ್ರ ಮಹಾಸ್ವಾಮಿಗಳು, ನಾಗಲಿಂಗ ಮಹಾಸ್ವಾಮಿಗಳು, ಗುರುನಾಥ ಮಹಾಸ್ವಾಮಿಗಳು ಸಮ್ಮುಖದಲ್ಲಿ ಈ ಎಲ್ಲಾ ದಿನದ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಪ್ರತಿನಿತ್ಯವೂ ಗುರು ಪೂಜೆ ಪುಣ್ಯಹವಾಚನ, ದೇವತಾ ಪೂಜೆ, ವಿಶ್ವಕರ್ಮ ಹೋಮ ಸಹಸ್ರ ಕದಳಿಹೋಮ ರುದ್ರ ಹೋಮ ಸೇರಿದಂತೆ ನವಚಂಡಿಕ ಹೋಮ ಹಾಗೂ ಧಾರ್ಮಿಕ ಸಭೆಯು ಈ ಅವಧಿಯಲ್ಲಿ ಜರುಗಲಿದೆ. ಮೇ 3 ರಂದು ಕಾಳಿಕಾ ದೇವಿಯ ಪ್ರಾಣ ಪ್ರತಿಷ್ಠಾಪನೆ ಸೇರಿದಂತೆ ದಾನಿಗಳಿಗೆ ಸನ್ಮಾನ, ಸಂಗೀತ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್. ಆರ್‌ಗವಿಯಪ್ಪ ಸಂಸದ ತುಕಾರಾಂ, ನಗರಸಭಾ ಅಧ್ಯಕ್ಷ ರೂಪೇಶ್ ಕುಮಾರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್ ಎನ್ ಎಫ್ ಇಮಾಮ್ ನಿಯಾಜಿ, ನಗರಸಭಾ ಸದಸ್ಯ ರಾಘವೇಂದ್ರ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿಶ್ವಕರ್ಮ ಸಮಾಜದ ಎಲ್ಲ ಬಂಧುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್, ತಾಲೂಕ ಉಪಾಧ್ಯಕ್ಷ ವಿ. ಶಂಕರಾಚಾರ್ಯ, ತಾಲೂಕ ಪ್ರಧಾನ ಕಾರ್ಯದರ್ಶಿ ಸುರೇಶ್, ಪಟ್ಟಣ ಪೊಲೀಸ್ ಠಾಣೆ ಪಿಎಸ್‌ಐ ರಾಜಶೇಖರ್, ಕುಬೇರಚಾರ್ ಸೇರಿದಂತೆ ಸಮಾಜದ ಮುಖಂಡರು ಇದ್ದರು.

ಸುದ್ದಿಗೋಷ್ಠಿಯಲ್ಲಿ ನೂತನ ಶ್ರೀ ಕಾಳಿಕಾದೇವಿ ಪ್ರಾಣ ಪ್ರತಿಷ್ಠಾಪನಾ ಪೋಸ್ಟರ್‌ಬಿಡುಗಡೆ ಮಾಡಲಾಯಿತು.

ನಾಗದೇವರುಗಳ ವಿಗ್ರಹಗಳ ಮೆರವಣಿಗೆ

ಶ್ರೀ ಕಾಳಿಕಾದೇವಿ ದೇವಸ್ಥಾನದ ಅಷ್ಟಬಂಧ ಪ್ರತಿಷ್ಠೆ ಹಾಗೂ ಬ್ರಹ್ಮಕುಂಬಾಭಿಷೇಕ ಧಾರ್ಮಿಕ ಕಾಯಕ್ರಮ ನಿಮಿತ್ತ ಏಪ್ರಿಲ್ 30 ರಂದು ಪ್ರತಿಷ್ಠಾಪನೆಗೊಳ್ಳಲಿರುವ ಶ್ರೀ ಕಾಳಿಕಾದೇವಿ ಕಮಟೇಶ್ವರ, ಗಣಪತಿ, ಸರಸ್ವತಿ, ವಿಶ್ವಕರ್ಮ, ಮೌನೇಶ್ವರ, ವೀರಬ್ರಹ್ಮಂದ್ರ ಸ್ವಾಮಿ, ನವಗ್ರಹ ಮತ್ತು ನಾಗದೇವರುಗಳ ವಿಗ್ರಹಗಳು ಮೆರವಣಿಗೆ ನಡೆಯಲಿದೆ. ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾ ಸರಸ್ವತೀ ಪೀಠಾಧೀಶ್ವರಾದ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ.

ಪಂಚರಾಜ್ಯ ಪವರ್ ವಾರ್

ಮೆಲುಕು

ದ್ವೇಷ ನಿರಂತರ

ತಮಿಳುನಾಡಿನ ರಾಜಕಾರಣ ನಿಜಕ್ಕೂ ವರ್ಣರಂಜಿತ. ಬಣ್ಣದ ಲೋಕದ ಅನೇಕ ಘಟಾನುಘಟಿಗಳು ಕಾಲಕ್ರಮೇಣ ತನ್ನೆಡೆಗೆ ಹೊರಳಿದ್ದಕ್ಕೆ ಸಾಕ್ಷಿಯಾಗಿದೆ ಇಲ್ಲಿನ ರಾಜಕಾರಣ.

ಬೆಳ್ಳಿತೆರೆಯ ಮೇಲೆ ಸೂಪರ್‌ಸ್ಟಾರ್ ಆಗಿ ರಂಜಿಸಿದ್ದ ಎಂ.ಜಿ. ರಾಮಚಂದ್ರನ್ ('ಎಂಜಿಆರ್'), ಚಿತ್ರಕಥೆ-ಸಂಭಾಷಣೆಯ ರಚನೆಯಲ್ಲಿ ಎತ್ತಿದ ಕೈ ಎನಿಸಿಕೊಂಡಿದ್ದ ಎಂ.ಕರುಣಾನಿಧಿ ಈ ಪೈಕಿ ಎದ್ದುಕಾಣುವ ಹೆಸರುಗಳು. ಸಿ.ಎನ್. ಅಣ್ಣಾದೊರೈ ನೇತೃತ್ವದ 'ಡಿಎಂಕೆ' ಪಕ್ಷವನ್ನು ಸೇರಿದ್ದರು 'ಎಂಜಿಆರ್' ಆದರೆ, ಅಣ್ಣಾದೊರೈ ಅಸ್ತಂಗತರಾದ ಬಳಿಕ ಡಿಎಂಕೆಯ ಅಧ್ಯಕ್ಷಗಾದಿಯನ್ನು ಅಪ್ಪಿದ ಎಂ. ಕರುಣಾನಿಧಿಯವರ ಜತೆಗೆ ಅದೇನೋ ಭಿನ್ನಾಭಿಪ್ರಾಯ ತಲೆದೋರಿ, ತಮ್ಮದೇ ಆದ ಹೊಸ ರಾಜಕೀಯ ಪಕ್ಷವನ್ನು ಹುಟ್ಟುಹಾಕಲು ಎಂಜಿಆರ್ ನಿರ್ಧರಿಸಿದರು. ಆಗ ಜನ್ಮ ತಳೆದಿದ್ದೇ 'ಎಐಎಡಿಎಂಕೆ' ಪಕ್ಷ. 1972ರಲ್ಲಿ ಅಸ್ತಿತ್ವಕ್ಕೆ ಬಂದ ಈ ಪಕ್ಷ ಕೆಲವೇ ವರ್ಷಗಳಲ್ಲಿ ಜನಾನುರಾಗಿ ಎನಿಸಿಕೊಂಡಿತು. ಅದಕ್ಕೆ ಕಾರಣವಾಗಿದ್ದು ಮಹಿಳಾ ಸಬಲೀಕರಣ ಸೇರಿದಂತೆ 'ಎಂಜಿಆರ್' ಜಾರಿಗೆ ತಂದ ಹತ್ತು ಹಲವು ಕಲ್ಯಾಣ ಕಾರ್ಯಕ್ರಮಗಳು. ಈ ಪೈಕಿ, ಶಾಲಾ ಮಕ್ಕಳಿಗೆ ನೀಡುವ ಮಧ್ಯಾಹ್ನದ ಬಿಸಿಯೂಟದ ಯೋಜನೆ ಮಹತ್ವದ್ದು. ಸುಮಾರು 10 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದರು ಎಂಜಿಆರ್. ತರುವಾಯದಲ್ಲಿ, ಒಮ್ಮೆ ಡಿಎಂಕೆ, ಮತ್ತೊಮ್ಮೆ ಎಐಎಡಿಎಂಕೆ ಹೀಗೆ ಪಕ್ಷಗಳು ಪರ್ಯಾಯವಾಗಿ ತಮಿಳುನಾಡಿನಲ್ಲಿ ದರ್ಬಾರು ನಡೆಸಿದ್ದಿದೆ. ಜತೆಗೆ, ಅವುಗಳ ನಡುವಿನ ಭಿನ್ನಾಭಿಪ್ರಾಯವೂ ಮುಂದುವರಿದಿದೆ...

ಚುನಾವಣಾ ಚುರುಮುರಿ

ಇದು ಕುನಾಲ್ ಕಥನ

ಪಶ್ಚಿಮ ಬಂಗಾಳದ ರಾಜಕಾರಣದಲ್ಲಿ ಕುನಾಲ್ ಘೋಷ್ ಅವರಷ್ಟು ಬಾರಿ, ಅಥವಾ ಅವರಷ್ಟು ಸ್ಪಷ್ಟವಾಗಿ ತಮ್ಮನ್ನು ತಾವು ಮರುಶೋಧಿಸಿಕೊಂಡವರು ಕಮ್ಮಿ ಎನ್ನಬೇಕು.

ಓರ್ವ ಪತ್ರಕರ್ತರಾಗಿದ್ದುಕೊಂಡು ಲೇಖನಿ ಮೂಲಕದ ಪ್ರಖರ ಹೋರಾಟಕ್ಕೆ, ಅದರ ಕುರಿತಾದ ವ್ಯಾಖ್ಯಾನಕ್ಕೆ ಹೆಸರಾಗಿದ್ದ ಅವರು ತೃಣಮೂಲ ಕಾಂಗ್ರೆಸ್ ಪಕ್ಷವು ಹುಟ್ಟುವ ಸಮಯದಲ್ಲಿ ಅದನ್ನು ಪ್ರವೇಶಿಸಿದವರು. ಅವರ ನಿಷ್ಠೆಯನ್ನು ಕಂಡೋ ಏನೋ ಪಕ್ಷದ ಮುಖ್ಯಸ್ಥೆ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು 2012ರಲ್ಲಿ ಕುನಾಲ್ ಘೋಷ್‌ರನ್ನು ರಾಜ್ಯಸಭೆಗೆ ಕಳುಹಿಸಿದರು.

ಕುನಾಲ್‌ರ ರಾಜಕೀಯ ವೃತ್ತಿಜೀವನ ನೇರರೇಖೆಯಂತೆ ಇದ್ದುದು ಅಪರೂಪವೇ ಎನ್ನಬೇಕು. ಶಾರದಾ ಚಿಟ್‌ಫಂಡ್ ಹಗರಣದ ಸಂಬಂಧವಾಗಿ 2013ರಲ್ಲಿ ಬಂಧಿತರಾದ ಘೋಷ್ ಸಾಕಷ್ಟು ವರ್ಷಗಳ ಕಾಲ ಜೈಲಿನಲ್ಲಿ ದಿನದೂಡಬೇಕಾಗಿ ಬಂತು. ಕೆಲ ಕಾಲದವರೆಗೆ ಅವರು ತಮ್ಮ ಪಕ್ಷದ ವಿರುದ್ಧವೇ ತಿರುಗಿ ತೀಕ್ಷ್ಣವಾಗಿ ಒಂದಿಷ್ಟು ಪತ್ರಗಳನ್ನು ಬರೆದಿದ್ದುಂಟು. ಈ ನಡೆಯು ಕುನಾಲ್ ಘೋಷ್ ಅವರ ಅಮಾನತಿಗೆ ಕಾರಣವಾಯಿತು. ಆದರೆ, ಜೈಲಿನಿಂದ ಬಿಡುಗಡೆಯಾದ ನಂತರ ಅವರನ್ನು 'ರಾಜೋಚಿತ'ವಾಗಿಯೇ ಬರಮಾಡಿಕೊಂಡು ಪಕ್ಷದ ಗಟ್ಟಿದನಿಯ ವಕ್ತಾರರನ್ನಾಗಿಸಲಾಯಿತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೋಲ್ಕತ್ತಾದ ಬೆಲಿಯಾಘಾಟಾ ಕ್ಷೇತ್ರದಿಂದ 'ಟಿಎಂಸಿ' ಪಕ್ಷದ ಅಭ್ಯರ್ಥಿಯಾಗಿದ್ದಾರೆ ಕುನಾಲ್ ಘೋಷ್. ಫಾರ್ಮಲ್ ಪ್ಯಾಂಟು, ಅರ್ಧ ತೋಳಿನ ಅಂಗಿ, ಎಡಗೈ ಮಣಿಕಟ್ಟಿನ ಮೇಲೊಂದು ಗಡಿಯಾರ ಧರಿಸಿದ ವಿಶಿಷ್ಟ ವ್ಯಕ್ತಿತ್ವದ ಕುನಾಲ್‌ರ ಫೋನು ಮೌನವಾಗಿರುವುದೇ ವಿರಳ. ಬರಹಗಾರಿಕೆ ಮತ್ತು ರಾಜಕೀಯದ ನಡುವೆಯೂ ಅಷ್ಟಿಷ್ಟು ಬಿಡುವು ಸಿಕ್ಕರೆ ಫುಟ್ಬಾಲ್ ಅಥವಾ 'ಗಲ್ಲಿ ಕ್ರಿಕೆಟ್'ನಲ್ಲಿ ವ್ಯಸ್ತರಾಗಿಬಿಡುವ ಕುನಾಲ್, ಚಲನಚಿತ್ರಗಳಲ್ಲೂ ನಟಿಸಿರುವುದುಂಟು. 'ಕೂರ್ಪುರ್' ಎಂಬ ಚಿತ್ರದಲ್ಲಿ ಕಾಣಿಸಿಕೊಂಡ ನಂತರ ಬ್ರಾತ್ಯ ಬಸು ನಿರ್ದೇಶನದ 'ಶೆಕೊರ್' ಚಿತ್ರದಲ್ಲೂ ನಟಿಸಿದ್ದಾರೆ. ಚಿತ್ರೀಕರಣ ಮತ್ತು ಡಬ್ಬಿಂಗ್ ಕಾರ್ಯಗಳನ್ನು ಮುಗಿಸಿಕೊಂಡಿರುವ ಈ ಚಿತ್ರ ಬಿಡುಗಡೆಯ ಹಂತದಲ್ಲಿದೆ. ಮಿಕ್ಕಂತೆ ಅವರೀಗ, ಕ್ಷೇತ್ರದೆಲ್ಲೆಡೆಯ ಭಿತ್ತಿಪತ್ರಗಳು, ಬ್ಯಾನರ್‌ಗಳಲ್ಲಿ ಮಿಂಚುತ್ತಿದ್ದಾರೆ. ಚುನಾವಣೆ ಅಂದ ಮೇಲೆ ಇಂಥ ಅಬ್ಬರದ ಪ್ರಚಾರ ಸಹಜ ತಾನೇ?!

ಅಭಿಷೇಕ್ ಬ್ಯಾನರ್ಜಿ ಭದ್ರಕೋಟೆಗೆ ಲಗ್ಗೆ ಸಾಧ್ಯವೇ?

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

2020ರ ಅಕ್ಟೋಬರ್. ಬಿಜೆಪಿಯ ಹಾಲಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಕೋಲ್ಕತ್ತಾದಿಂದ ಸುಮಾರು 60 ಕಿ.ಮೀ. ದೂರದ ಡೈಮಂಡ್ ಹಾರ್ಬರ್‌ನ ಮೋಹನ್‌ಪುರದಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದರು. ಅವರು ಬರುವುದಕ್ಕೆ ಹೊಂಚುಹಾಕಿ ಕುಳಿತಿದ್ದ ಶಂಕಿತ ಟಿಎಂಸಿ ಕಾರ್ಯಕರ್ತರು ಭಟ್ಟಾಚಾರ್ಯ ಅವರ ಕಾರಿನ ಮೇಲೆ ದಾಳಿ ಮಾಡಿದರು. ಕಾರಿನ ವಿಂಡ್‌ಸ್ಕ್ರೀನ್ ಪುಡಿಮಾಡಿ, ಚಾಲಕ ಮತ್ತು ಭಟ್ಟಾಚಾರ್ಯ ಇಬ್ಬರ ಮೇಲೂ ಹಲ್ಲೆಮಾಡಲಾಯಿತು. ಪೊಲೀಸರು ಏನೂ ಆಗಲೇ ಇಲ್ಲ ಎಂಬಂತೆ ಸುಮ್ಮನಿದ್ದರು.

ಅದೇ ವರ್ಷದ ಡಿಸೆಂಬರ್ ತಿಂಗಳು. ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮತ್ತು 2021ರ ವಿಧಾನಸಭೆ ಚುನಾವಣೆಯ ಬಿಜೆಪಿ ಉಸ್ತುವಾರಿ ಕೈಲಾಶ್ ವಿಜಯ ವರ್ಗೀಯ ಅವರ ಬೆಂಗಾವಲು ವಾಹನಗಳ ಮೇಲೆ ಡೈಮಂಡ್ ಹಾರ್ಬರ್‌ನಲ್ಲಿ ದಾಳಿ ಮಾಡಲಾಯಿತು. ವಿಜಯ ವರ್ಗೀಯ ಅವರಿಗೆ ಗಾಯಗಳಾದವು. ಅಲ್ಲೂ ಪೊಲೀಸರು ಸುಮ್ಮನಿದ್ದರು. ಶಂಕಿತ ಆರೋಪಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬಿಜೆಪಿ ಕಾರ್ಯಕರ್ತರು, ಮುಖಂಡರು ಎಷ್ಟೇ ಪ್ರತಿಭಟನೆ ನಡೆಸಿದರೂ ಪ್ರಯೋಜನವಾಗಲಿಲ್ಲ.

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

ಕಾಕದ್ವೀಪ ಕ್ಷೇತ್ರದಲ್ಲಿ ಸಿ.ಟಿ. ಮತ್ತು ಅವರ ಕರ್ತವ್ಯಾಧಿಕಾರಿ ಸಂದೀಪ್ ಕುಮಾರ್ ಶೆಟ್ಟಿ

ಭಿನ್ನ ಅನುಭವ: ಸಿ.ಟಿ. ರವಿ

ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಒಟ್ಟು 31 ಕ್ಷೇತ್ರ ಸೇರಿ, ಕೋಲ್ಕತ್ತಾ ವಲಯದ 61 ಸೀಟುಗಳ ಪ್ರಚಾರ ಉಸ್ತುವಾರಿ ವಹಿಸಿದ್ದು ರಾಜ್ಯ ಬಿಜೆಪಿ ನಾಯಕ ಸಿ.ಟಿ. ರವಿ ಎನ್ನುವುದು ಗಮನಾರ್ಹ. ಕಳೆದ ನಾಲ್ಕೈದು ತಿಂಗಳಿಂದ ಬಂಗಾಳಕ್ಕೆ ಬರುತ್ತಿದ್ದ ಅವರು, 15 ದಿನಗಳಿಂದ ನಿತ್ಯವೂ ದಕ್ಷಿಣ ಪರಗಣ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದಾರೆ. ''ಉಳಿದ ರಾಜ್ಯಗಳಿಗೆ ಹೋಲಿಸಿದರೆ ಬಂಗಾಳ ಚುನಾವಣೆ ವಿಭಿನ್ನ ಅನುಭವ. ಟಿಎಂಸಿಯ ದರ್ಪ, ಸರ್ವಾಧಿಕಾರ ಮತ್ತು ಹಿಂಸಾಚಾರದ ರಾಜಕಾರಣದ ಮಧ್ಯೆಯೂ ಬಿಜೆಪಿ ಕಾರ್ಯಕರ್ತರು ಧೈರ್ಯದಿಂದ ಕೆಲಸ ಮಾಡಿ ದ್ದಾರೆ. ಇದು ಕ್ರಾಂತಿಕಾರಿಗಳು, ಸ್ವಾತಂತ್ರ್ಯ ಹೋರಾಟಗಾರರು, ಬುದ್ಧಿಜೀವಿಗಳು ಜನ್ಮತಳೆದ ನೆಲ. ದೇಶಕ್ಕೆ ದಿಕ್ಕು ತೋರಿ ಸಬೇಕಾಗಿದ್ದ ರಾಜ್ಯ. ಆದರೆ ಎಡಪಕ್ಷಗಳು, ಟಿಎಂಸಿಯಿಂದಾಗಿ ದಿಕ್ಕೆಟ್ಟು ಕುಳಿತಿದೆ. ಈ ಬಾರಿ, ದೀದಿಗೆ ಬಂಗಾಳದ ಜನ ಪಾಠ ಕಲಿಸಲಿದ್ದಾರೆ'' ಎಂದು ಸಿ.ಟಿ. ರವಿ 'ವಿಶ್ವವಾಣಿ' ಜತೆ ಅನಿಸಿಕೆ ಹಂಚಿಕೊಂಡರು.

2021ರ ವಿಧಾನಸಭೆ ಚುನಾವಣೆಗೆ ಡೈಮಂಡ್ ಹಾರ್ಬರ್ ಲೋಕಸಭೆ ಕ್ಷೇತ್ರದ ವ್ಯಾಪ್ತಿಯ ಫಾಲ್ತಾ ವಿಧಾನಸಭೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಬಿಧಾನ್ ಪರುಯ್ ಎಂಬವರಿಗೆ ಟಿಕೆಟ್ ನೀಡಲಾಗಿತ್ತು. ಸಿಪಿಐ-ಎಂ ಬಿಟ್ಟು ಅವರು ಬಿಜೆಪಿ ಸೇರ್ಪಡೆಯಾಗಿದ್ದರು. ಚುನಾವಣೆ ಪ್ರಚಾರ ನಡೆಸುತ್ತಿದ್ದ ಸಂದರ್ಭದಲ್ಲೇ ಹಲವು ಹಿಂಸಾಚಾರ ಘಟನೆಗಳಿಗೆ ಸಾಕ್ಷಿಯಾಗಿದ್ದ ಬಿಧಾನ್ ಪರುಯ್‌ಗೆ, ''ಫಲಿತಾಂಶದ ನಂತರ ನಿನ್ನನ್ನು ನೋಡಿಕೊಳ್ಳುತ್ತೇವೆ'' ಎಂದು ಟಿಎಂಸಿಯಿಂದ ಬೆದರಿಕೆ ಬರುತ್ತಲೇ ಇತ್ತು. ಚುನಾವಣೆಯಲ್ಲಿ ಟಿಎಂಸಿಯ ಶಂಕರ್ ಕುಮಾರ್ ನಸ್ಕಾರ್ ವಿರುದ್ಧ 43 ಸಾವಿರ ಮತಗಳಿಂದ ಸೋತಿದ್ದ ಬಿಧಾನ್ ಪರುಯ್‌ಗೆ ಫಲಿತಾಂಶದ ದಿನದಂದೇ ದಾಳಿಯ ಸುಳಿವು ಸಿಕ್ಕಿತು. ಫಾಲ್ತಾದಲ್ಲಿದ್ದ ಅವರ ಮನೆ, ಆಸ್ತಿ ಎಲ್ಲವನ್ನೂ ನಾಶಮಾಡಲಾಯಿತು. ಜೀವ ಉಳಿಸಿಕೊಂಡರೆ ಸಾಕು ಎಂದು ಫಾಲ್ತಾದಿಂದ ಕಾಲ್ಕಿತ್ತ ಬಿಧಾನ್ ಪರುಯ್, 5 ವರ್ಷ ಕಳೆದರೂ ಫಾಲ್ತಾ ಕಡೆ ತಲೆಹಾಕಿಲ್ಲ. 'ಟಿಎಂಸಿಯವರು ನನ್ನ ಮೇಲೆ ಯಾವಾಗ ಬೇಕಾದರೂ ದಾಳಿ ಮಾಡಬಹುದು' ಎಂಬ ಭಯದಿಂದಲೇ ಅವರು ಕೋಲ್ಕತ್ತಾದಲ್ಲೇ ಮನೆ ಮಾಡಿದ್ದಾರೆ. ಫಾಲ್ತಾದಿಂದ ಈ ಬಾರಿ ಬಿಜೆಪಿಯು ದೇಬಾಂಶು ಪಾಂಡಾ ಎಂಬುವವರಿಗೆ ಟಿಕೆಟ್ ನೀಡಿದ್ದರೆ, ಟಿಎಂಸಿಯಿಂದ ಜಹಾಂಗೀರ್ ಖಾನ್ ಎಂಬ ಮುಸ್ಲಿಂ ಅಭ್ಯರ್ಥಿ ಕಣದಲ್ಲಿದ್ದಾರೆ.

ಸಿಪಿಎಂ ಅಭ್ಯರ್ಥಿಗೆ ಪುನರ್ಜನ್ಮ ನೀಡಿದ್ದ ಬೆಂಗಳೂರು

ಡೈಮಂಡ್ ಹಾರ್ಬರ್ ರೈಲ್ವೇ ಸ್ಟೇಷನ್ ಪಕ್ಕದಲ್ಲಿ ಸಿಪಿಎಂ ಅಭ್ಯರ್ಥಿ, 70 ವರ್ಷದ ಸಮರ್ ನಾಯ್ಯಾ ಅವರು ಜನಸಭೆ ನಡೆಸುವ ತಯಾರಿಯಲ್ಲಿದ್ದರು. ನಾನು ಬೆಂಗಳೂರಿನಿಂದ ಚುನಾವಣೆ ವರದಿಗಾರಿಕೆಗೆ ಬಂದಿದ್ದೇನೆ ಎಂದ ಕೂಡಲೇ ಬಹಳ ಖುಷಿಯಿಂದ ಮಾತನಾಡಿದ ಅವರು, ''ಬೆಂಗಳೂರು ನನಗೆ ಪುನರ್ಜನ್ಮ ನೀಡಿದ ಊರು'' ಎಂದರು. 1998ರಲ್ಲಿ ಹೃದಯದ ಶಸ್ತ್ರಚಿಕಿತ್ಸೆಗಾಗಿ ನನ್ನನ್ನು ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಶಸ್ತ್ರಚಿಕಿತ್ಸೆ ನಂತರ ಗುಣಮುಖನಾಗಿ ಡೈಮಂಡ್ ಹಾರ್ಬರ್‌ಗೆ ವಾಪಸಾದೆ'' ಎಂದರು. ತಮ್ಮ ವಾಮಪಂಥೀಯ ಸಿದ್ಧಾಂತಕ್ಕೆ ಬದ್ಧರಾಗಿರುವ ಅವರು, ಹಿರಿ ವಯಸ್ಸಿನಲ್ಲೂ ಸಕ್ರಿಯರಾಗಿ ಪ್ರಚಾರ ನಡೆಸುತ್ತಿದ್ದರು. ''90ರ ದಶಕದಲ್ಲಿ ನಾನು ರಾಷ್ಟ್ರೀಯ ಏಕತೆ, ಸಾಮಾಜಿಕ ಒಗ್ಗಟ್ಟು ಮತ್ತು ಪರಿಸರ ಸಂರಕ್ಷಣೆ ವಿಚಾರಗಳನ್ನು ಮುಂದಿಟ್ಟು ಡೈಮಂಡ್ ಹಾರ್ಬರ್‌ನಿಂದ ಕೇರಳದ ಕನ್ಯಾಕುಮಾರಿವರೆಗೆ ಪಾದಯಾತ್ರೆ ಮಾಡಿದ್ದೆ. ನಿಮ್ಮ ಮಂಗಳೂರಿನ ಬಗ್ಗೆಯೂ ತಿಳಿದುಕೊಂಡಿದ್ದೇನೆ'' ಎಂದು ಮಾಹಿತಿ ಹಂಚಿಕೊಂಡರು. ಡೈಮಂಡ್ ಹಾರ್ಬರ್ ಸೇರಿ ಬಹುಪಾಲು ಕ್ಷೇತ್ರಗಳಲ್ಲಿ ಬಿಜೆಪಿ-ಟಿಎಂಸಿ ನಡುವೆ ದ್ವಿಪಕ್ಷೀಯ ಚುನಾವಣಾ ಹೋರಾಟ ನಡೆಯುತ್ತಿದ್ದರೂ, ಈ ಚುನಾವಣೆ ಮೂಲಕ ರಾಜ್ಯದಲ್ಲಿ ಸಿಪಿಐ-ಎಂ ರಾಜಕೀಯ ಪುನಶ್ಚೇತನ ಕಾಣಲಿದೆ ಎನ್ನುವುದು ಜನಸಭೆಯಲ್ಲಿದ್ದ ಪಕ್ಷದ ಯುವಕರ ಅನಿಸಿಕೆಯಾಗಿತ್ತು.

ಸಿಪಿಐ-ಎಂ ಅಭ್ಯರ್ಥಿ ಸಮರ್ ನಯ್ಯಾ

ಹೋಟೆಲ್ ಮಾಲಕಿ ಶಂಕರಿ ಬಾಗ್‌ಗೆ ಪರಿವರ್ತನೆ ಬೇಕು

ಇದು ಅಭಿಷೇಕ್ ಬ್ಯಾನರ್ಜಿಯವರ ರಾಜಕೀಯ ಭದ್ರಕೋಟೆ ಎಂದು ಪ್ರಸಿದ್ಧಿಯಾಗಿರುವ ಡೈಮಂಡ್ ಹಾರ್ಬರ್ ಕ್ಷೇತ್ರದ ರಾಜಕೀಯ ಹಿಂಸಾಚಾರಗಳ ಒಂದು ಝಲಕ್ ಅಷ್ಟೇ. ಈ ಬಾರಿ ದೊಡ್ಡ ಸಂಖ್ಯೆಯಲ್ಲಿ ಸಿಆರ್‌ಪಿಎಫ್ ಯೋಧರನ್ನು ಕೇಂದ್ರ ಚುನಾವಣಾ ಆಯೋಗ ನಿಯೋಜಿಸಿರುವುದರಿಂದ ರಾಜಕೀಯ ಹಿಂಸಾಚಾರಕ್ಕೆ ಇಲ್ಲಿ ಕೊಂಚ ಕಡಿವಾಣ ಬಿದ್ದಿದೆ. ಹೀಗಿದ್ದರೂ, ಚುನಾವಣಾ ಅಕ್ರಮಗಳ ವಾಸನೆ ಬಡಿಯುತ್ತಿದೆ. ಡೈಮಂಡ್ ಹಾರ್ಬರ್‌ನಲ್ಲಿನ ಹಿಂಸಾಚಾರ ಮತ್ತು ಪಕ್ಷಪಾತಿಯಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಜಿಲ್ಲೆಯ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಡೈಮಂಡ್ ಹಾರ್ಬರ್ ಕ್ಷೇತ್ರದ ಎಲ್ಲೆಡೆ ಅಭಿಷೇಕ್ ಬ್ಯಾನರ್ಜಿಯದ್ದೇ ಪೋಸ್ಟರ್

ಡೈಮಂಡ್ ಹಾರ್ಬರ್‌ನಲ್ಲಿ ಗಂಗಾ ನದಿ (ಹೂಗ್ಲಿ) ವಿಶಾಲವಾಗಿ ಹರಿಯುತ್ತಿದ್ದು, ನದಿ ದಂಡೆ ಪ್ರದೇಶ ಪ್ರವಾಸಿ ತಾಣವಾಗಿ ಗಮನಸೆಳೆಯುತ್ತದೆ. ಈ ಲೋಕಸಭೆ ಕ್ಷೇತ್ರದ ಸಂಸದ ಅಭಿಷೇಕ್ ಬ್ಯಾನರ್ಜಿ ಪ್ರಭಾವದ ಪರಿಣಾಮ 2021ರ ವಿಧಾನಸಭೆ ಚುನಾವಣೆಯಲ್ಲಿ ಇಲ್ಲಿನ ಏಳೂ ಕ್ಷೇತ್ರಗಳನ್ನು ಟಿಎಂಸಿ ಗೆದ್ದುಕೊಂಡಿತ್ತು. ಈ ಬಾರಿ ಡೈಮಂಡ್ ಹಾರ್ಬರ್ ವಿಧಾನಸಭೆ ಕ್ಷೇತ್ರದಲ್ಲಿ ಮೊದಲ ಬಾರಿಗೆ ಟಿಎಂಸಿ ವಿರುದ್ಧ ಅಪಸ್ವರಗಳು ಹೆಚ್ಚಿದ್ದು, ಪರಿವರ್ತನೆಯ ಸಾಧ್ಯತೆಗಳ ಕುರಿತ ಚರ್ಚೆ ಹೆಚ್ಚಾಗಿದೆ. ಗಂಗಾ ನದಿ ದಂಡೆಯಲ್ಲಿ ಪ್ರವಾಸಿಗರ ಹೋಟೆಲ್ ನಡೆಸುತ್ತಿರುವ ಶಂಕರಿ ಬಾಗ್, ''ಯುವ ವಿದ್ಯಾವಂತರಿಗೆ ಆದ್ಯತೆ ನೀಡುವ ಹೊಸ ಸರಕಾರ ಬರಬೇಕು. ನನ್ನ ಮಗಳ ಮನಸ್ಸಲ್ಲಿ ಸುರಕ್ಷತೆಯ ಭಾವನೆ ಮೂಡಬೇಕು'' ಎಂದರು. ಶಂಕರಿ ಅವರ ಮಗಳು ಪಲ್ಲವಿ ಬಾಗ್, ಬಿಎ ಪದವಿ ಪೂರ್ಣಗೊಳಿಸಿದ್ದು, ಬಂಗಾಳಿ ಭಾಷೆಯಲ್ಲಿ ಎಂಎ ಮಾಡಲು ತೀರ್ಮಾನಿಸಿದ್ದಾಳೆ. ''ಇಲ್ಲಿ ಡಿಗ್ರಿಯಾದವರಿಗೆ ನೌಕರಿ ಸಿಗುತ್ತಿಲ್ಲ. ಎಂಎ ಮಾಡಿದ ಮೇಲೂ ಸಿಗುವ ಧೈರ್ಯ ಇಲ್ಲ. ಯುವತಿಯರಿಗೆ ಭದ್ರತೆಯೂ ಇಲ್ಲ'' ಎಂದು ಆರ್.ಜಿ. ಕರ್ ಆಸ್ಪತ್ರೆ ಅತ್ಯಾಚಾರ ಪ್ರಕರಣ ಉಲ್ಲೇಖಿಸಿದಳು. ಆದರೆ, ''ರಾಜ್ಯ ಸರಕಾರ ಹಿರಿಯ ನಾಗರಿಕರಿಗೆ ಹಣ ನೀಡುತ್ತಿದೆ'' ಎನ್ನುವ ಪಲ್ಲವಿಯ ಅಜ್ಜಿ ಮಾತ್ರ ದೀದಿಗೆ ವೋಟು ಹಾಕುತ್ತಾರಂತೆ.

ಡೈಮಂಡ್ ಹಾರ್ಬರ್‌ನ ಆಶ್ರಮವೊಂದರಲ್ಲಿ ಕೆಲಸ ಮಾಡುವ ವಿನೋತಿ ಹಲ್ದಾರ್, ರಸ್ತೆ ಬದಿಯಲ್ಲಿ ಬದುಕುತ್ತಿರುವ ನಿರಾಶ್ರಿತರಿಗೆ ನಿತ್ಯವೂ ಆಹಾರ ತಂದುನೀಡುತ್ತಾಳೆ. ಮೂವರು ಮಕ್ಕಳಿದ್ದರೂ ಬೀದಿಯಲ್ಲಿ ಭಿಕ್ಷುಕಿಯಂತೆ ಬದುಕುತ್ತಿರುವ ಅನಾರ್ಕಲಿ ಬಾಗ್ಗಿಗೆ ವಿನೋತಿ ಊಟ ನೀಡುತ್ತಿದ್ದ ವೇಳೆ ನಾನು ಮಾತನಾಡಿದೆ. ''ಈ ಬಾರಿ ರಾಜ್ಯದಲ್ಲಿ ಪರಿವರ್ತನೆಯಾಗಬೇಕು'' ಎನ್ನುತ್ತಾ ಆಕೆಯೂ ಆರ್.ಜಿ. ಕರ್ ಘಟನೆ ಮುಂದಿಟ್ಟಳು.

''ಡೈಮಂಡ್ ಹಾರ್ಬರ್ ಕ್ಷೇತ್ರದ ನಾವಿರುವ ಕಾಲೊನಿಯಲ್ಲಿ ಮಹಿಳೆಯರಿಗೆ ಭದ್ರತೆ ಇದೆ. ಉಳಿದೆಡೆ ನನಗೆ ಗೊತ್ತಿಲ್ಲ'' ಎನ್ನುವ ಬಿಹಾರ ಮೂಲದ ಲಕ್ಷ್ಮಿ ಸಾಹು, ''ಮಹಿಳೆಯರಿಗಾಗಿ

ಕಟ್ ಮನಿಯ ಕೆಟ್ಟ ಸಂಸ್ಕೃತಿ

ಪಶ್ಚಿಮ ಬಂಗಾಳದಾದ್ಯಂತ 'ಕಟ್-ಮನಿ' ಭಾರಿ ಸದ್ದು ಮಾಡುತ್ತಿದೆ. ಟಿಎಂಸಿ ವಿರೋಧಿ ಅಲೆಗೆ ಅದೂ ಒಂದು ಕಾರಣ. ಸಾಮಾನ್ಯರಿಂದ ಹಿಡಿದು ವ್ಯಾಪಾರಿ ವರ್ಗ, ಉದ್ಯಮಿಗಳಲ್ಲಿ ಕಟ್ ಮನಿ ಬಗ್ಗೆ ಹತಾಶೆ, ಆಕ್ರೋಶ ಎರಡೂ ಇದೆ. ಸರಕಾರಿ ಸೇವೆ, ಸಬ್ಸಿಡಿ ಅಥವಾ ಯೋಜನಾ ಅನುಮೋದನೆಗಳನ್ನು ಸುಗಮಗೊಳಿಸಬೇಕೆಂದರೆ ಸ್ಥಳೀಯ ರಾಜಕಾರಣಿಗಳು, ಕಾರ್ಯಕರ್ತರು ಅಥವಾ ಅಧಿಕಾರಿಗಳು ಹಣ ವಸೂಲಿ ಮಾಡುವುದಕ್ಕೆ ಇಲ್ಲಿ ಕಟ್ ಮನಿ ಎನ್ನುತ್ತಾರೆ. ಉದಾಹರಣೆಗೆ 100 ರುಪಾಯಿ ಯಲ್ಲಿ 25 ರು. ಕಟ್ ಮನಿಯನ್ನು ವಸೂಲಿಕೋರರಿಗೆ ಅಂತಲೇ ಮೀಸಲಿಡಬೇಕು. ಅಭಿಷೇಕ್ ಬ್ಯಾನರ್ಜಿ ಅವರ ಸಂಸದ ಕ್ಷೇತ್ರವಾಗಿರುವ ಡೈಮಂಡ್ ಹಾರ್ಬರ್‌ನಲ್ಲಿ ಕೂಡ ಕಟ್ ಮನಿ ವ್ಯಾಪಕವಾಗಿದೆ ಎಂಬ ಆರೋಪಗಳಿವೆ. ಡೈಮಂಡ್ ಹಾರ್ಬರ್ ನಗರದಿಂದ ಸುಮಾರು 10 ಕಿ.ಮೀ. ಮುಂದೆ ಸಾಗಿದಾಗ ಗ್ರಾಮವೊಂದನ್ನು ಪ್ರವೇಶಿಸಿ ಬ್ಯಾಟರಿ ಆಟೋವಾಲಗಳೊಂದಿಗೆ ಚಹಾ ಕುಡಿಯುತ್ತಿದ್ದೆ. ಅವರು ಕಟ್ ಮನಿ ಬಗ್ಗೆ ಪ್ರಸ್ತಾಪಿಸುತ್ತಾ, ''ನೋಡಿ ಇಲ್ಲಿ ಅಂಗಡಿಯವರು ತಮ್ಮ ಸ್ವಂತ ಜಾಗದಲ್ಲಿ ಅಂಗಡಿ ಹಾಕಿಕೊಂಡಿದ್ದರೂ, ಟಿಎಂಸಿ ಗೂಂಡಾಗಳಿಗೆ 2-3 ಸಾವಿರ ರು. ಕಟ್ ಮನಿಯನ್ನು ತಿಂಗಳಿಗೆ ನೀಡುತ್ತಿರಬೇಕು. ನಮ್ಮಂಥ ಬಡವರಿಂದಲೂ ಹಣ ವಸೂಲಿ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ'' ಎಂದು ಕಿಡಿಕಾರಿದರು. ''ರಾಜ್ಯದಲ್ಲಿ ಯಾರಾದರೂ ಉದ್ಯಮಗಳನ್ನು ಸ್ಥಾಪನೆ ಮಾಡಲು ಹೆದರುವುದು ಇದಕ್ಕೇ. ಕಟ್ ಮನಿ ಸಂಸ್ಕೃತಿ ಹಾಗೂ ಗೂಂಡಾ ರಾಜಕಾರಣದಿಂದಾಗಿ ಇಲ್ಲಿ ಉದ್ಯಮಗಳು ಬರುತ್ತಿಲ್ಲ. ಉದ್ಯಮ ಸಂಸ್ಥೆಗಳು ಉದ್ಯಮಕ್ಕೆ ಪೂರಕ ಪರಿಸರ ಹಾಗೂ ಭದ್ರತೆಯ ವಾತಾವರಣ ಬಯಸುತ್ತಾರೆ. ಆದರೆ, ಬಂಗಾಳದಲ್ಲಿ ಆಡಳಿತಾರೂಢ ಪಕ್ಷ ಹಾಗೂ ಅಧಿಕಾರಶಾಹಿಯ ವಸೂಲಿ ಸಂಸ್ಕೃತಿಯಿಂದಾಗಿಯೇ ನಾವು ಔದ್ಯಮಿಕವಾಗಿ ಹಿಂದೆ ಬಿದ್ದಿದ್ದೇವೆ'' ಎನ್ನುತ್ತಾರೆ ಡೈಮಂಡ್ ಹಾರ್ಬರ್ ಮೂಲದ ಐಟಿ ಉದ್ಯೋಗಿ ದೀಪಂಕರ್ ಮುಖರ್ಜಿ.

ನಿರ್ಗತಿಕರಿಗೆ ಊಟ ನೀಡುವ ವಿನೋತಿ ಹಲ್ದಾರ್

ಲಕ್ಷ್ಮಿ ಭಂಡಾರ್, ರೂಪಶ್ರೀ, ಕನ್ಯಾಶ್ರೀ ಯೋಜನೆ ಜಾರಿ ಮಾಡಿರುವ ದೀದಿಯನ್ನು ಕೈಬಿಡುವ ಮಾತೇ ಇಲ್ಲ. ನನ್ನ ಅತ್ತೆ-ಮಾವ, ತಾಯಿ ಮೋದಿ ಎಂದರೂ ನಾನು ದೀದಿಯನ್ನು ಬೆಂಬಲಿಸುವೆ'' ಎಂದರು. ''ಟಾರ್ಪಲ್ ಹಾಕಿರುವ ಮನೆಯಲ್ಲಿರುವ ನೀವು, ಸರಕಾರದ ವಸತಿ ಯೋಜನೆಯಲ್ಲಿ ಮನೆ ಕೇಳಿಲ್ಲವೇ?'' ಎಂದು ಪ್ರಶ್ನಿಸಿದ್ದಕ್ಕೆ, ''ಸ್ವಂತ ಜಮೀನು ಇದ್ದರೆ ಮನೆ ಕಟ್ಟಿಸಿಕೊಡುತ್ತಾರಂತೆ. ನಾವಿರುವುದು ರೈಲ್ವೆ ಜಮೀನಿನಲ್ಲಿ. ನಮ್ಮಿಂದ ಟ್ಯಾಕ್ಸ್ ಸಂಗ್ರಹಿಸುತ್ತಾರೆ. ನಮ್ಮಂಥ ಬಡವರು ಸ್ವಂತ ಜಮೀನು ಮಾಡಲು ಸಾಧ್ಯ ಉಂಟೇ?'' ಎಂದು ಅಸಹಾಯಕರಾಗಿ ನುಡಿದರು.

ಆದರೆ, ಅಲ್ಲಿಂದ ಅರ್ಧ ಕಿ.ಮೀ. ದೂರದಲ್ಲಿ ಬೋರ್‌ವೆಲ್‌ನಿಂದ ಕೊಡಪಾನಕ್ಕೆ ನೀರು ತುಂಬಿಸುತ್ತಿದ್ದ ತನುಶ್ರೀ ಸಮಂತೋ ಯೋಚನೆ ಭಿನ್ನವಾಗಿತ್ತು. ''1500 ರು. ನೀಡುವುದನ್ನು ರದ್ದು ಮಾಡಿದರೂ ಪರವಾಗಿಲ್ಲ, ಉದ್ಯೋಗ ಬೇಕು. ನಾನು ಡಿಗ್ರಿ ಮಾಡಿದ್ದೇನೆ. ಡೈಮಂಡ್ ಹಾರ್ಬರ್‌ನಲ್ಲಿ ಕೆಲಸ ಇಲ್ಲ. ಇಬ್ಬರು ಮಕ್ಕಳು ಇದ್ದಾರೆ. ನೌಕರಿ ಕೊಡಿಸುವ, ಹೆಣ್ಮಕ್ಕಳಿಗೆ ಭದ್ರತೆ ನೀಡುವ ಸರಕಾರ ಬೇಕು'' ಎನ್ನುತ್ತಾ ಪರಿವರ್ತನೆಗೆ ಮನಸ್ಸು ಮಾಡಿದ್ದನ್ನು ಖಚಿತಪಡಿಸಿದಳು.

ದೀದಿಯೇ ಬೇಕು ಎನ್ನುವ ಲಕ್ಷ್ಮಿ ಸಾಹು

ಗಂಗಾ ನದಿಯ ತಟದಲ್ಲಿ ಗೂಡಂಗಡಿ ನಡೆಸುತ್ತ, ಮಾಸಿಕ 1500 ರು. ಪಡೆಯುತ್ತಿರುವ ಶಾಲಿನಿ ಹಲ್ದಾರ್, ''ನಮಗೆ ದೀದಿ ಅಲ್ಲ ದಾದ (ಮೋದಿ) ಬೇಕು. ನನ್ನ ಮೂರು ಮಕ್ಕಳಲ್ಲಿ ಇಬ್ಬರು ನೌಕರಿ ಇಲ್ಲದೆ ಮನೆಯಲ್ಲಿದ್ದಾರೆ'' ಎಂದು ಬೇಸರ ವ್ಯಕ್ತಪಡಿಸಿದಳು. ''ಯಾರು ಗೆದ್ದರೆ ಏನು? ಬಡವರ ನೋವು ಯಾರಿಗೆ ಬೇಕು ಸಾಬ್? ಈ ಸಲ ಬಿಜೆಪಿ ಬಿಟ್ಟು ಬೇರೆ ಆಯ್ಕೆಗಳಿಲ್ಲ'' ಎನ್ನುವುದು ಆಕೆಯ ಪತಿ ಸುಕುಮಾರ್ ಹಲ್ದಾರ್ ಮಾತು.

ಸುಕುಮಾರ್ ಹಲ್ದಾರ್

ತಮ್ಮ ಉದ್ಯಮಕ್ಕೆ ಸಂಬಂಧಿಸಿದ ಕೆಲಸಕ್ಕಾಗಿ ಡೈಮಂಡ್ ಹಾರ್ಬರ್‌ಗೆ ಬಂದಿದ್ದ ಆನಂದ ಮುಖರ್ಜಿ, ಸಂಜೆಯ ಚಹಾ ಹೀರುತ್ತಾ ಗಂಗಾ ನದಿಯ ಅಲೆಗಳ ಮೇಲೆ ಸೂರ್ಯನ ಕಿರಣ ಬೀಳುತ್ತಿದ್ದುದನ್ನೇ ನೋಡುತ್ತಿದ್ದರು. ಆನಂದ ಮುಖರ್ಜಿ ಅವರ ಪತ್ನಿ ಪಕ್ಕದ ಗ್ರಾಮವೊಂದರ ಪ್ರಧಾನ್ ಆಗಿದ್ದಾರೆ. ''ರಾಜ್ಯದ ಒಳಿತಿಗಾಗಿ ನಾವೂ ಪರಿವರ್ತನೆ ಬಯಸಿದ್ದೇವೆ'' ಎಂದು ಅತ್ತಿತ್ತ ನೋಡುತ್ತಾ ಮೆಲುದನಿಯಲ್ಲಿ ನನ್ನೊಂದಿಗೆ ಮಾತಿಗಿಳಿದ ಅವರು, ''ಬಿಜೆಪಿ ಹೆಚ್ಚು ಎಂದರೆ 100ರ ಹತ್ತಿರ ಬಂದೀತು. ದೀದಿಯನ್ನು ಇಲ್ಲಿ ಸೋಲಿಸಲು ಸಾಧ್ಯವೇ ಇಲ್ಲ'' ಎನ್ನುತ್ತಾ ''ಬಿಜೆಪಿ ಸಂಘಟನೆ ಇನ್ನೂ ದುರ್ಬಲವಾಗಿದೆ. ಅದು ಗಟ್ಟಿಯಾಗದೆ ಪೂರ್ಣ ಬಹುಮತ ಕಷ್ಟ. 110ರ ಆಸುಪಾಸು ಬಂದರೆ ಶಾಸಕರನ್ನು ಖರೀದಿಸಿ ಅವರೇ ಸರಕಾರ ಮಾಡಬಹುದು'' ಎಂದು ಅಭಿಪ್ರಾಯಪಟ್ಟರು. ''ಮಮತಾ ಬ್ಯಾನರ್ಜಿ ನಂತರ ಈ ಪಕ್ಷಕ್ಕೆ ಶೂನ್ಯ ಆವರಿಸಬಹುದು. ಅಭಿಷೇಕ್ ಬ್ಯಾನರ್ಜಿಯನ್ನು ಎಲ್ಲರೂ ಒಪ್ಪುವುದಿಲ್ಲ, ಸದ್ಯ ದೀದಿ ಇದ್ದಾರೆ. ಹಾಗಾಗಿ ನಡೆಯುತ್ತಿದೆ'' ಎಂದರು ಮುಖರ್ಜಿ.

''ಬಂಗಾಳ ಕೊಲ್ಲಿ ಮೂಲಕ ಕೋಲ್ಕತ್ತಾಗೆ ಪ್ರಯಾಣಿಸುವ ಹಡಗುಗಳಿಗೆ ಸುರಕ್ಷಿತ ಲಂಗರು ಹಾಕಲು ಮಹತ್ವದ ತಾಣ ಎಂಬ ಕಾರಣಕ್ಕಾಗಿ ಬ್ರಿಟಿಷರು ಹಾಜಿಪುರ ಎಂದಿದ್ದ ಈ ನಗರದ ಹೆಸರನ್ನು ಡೈಮಂಡ್ ಹಾರ್ಬರ್ ಎಂದು ನಾಮಕರಣ ಮಾಡಿದ್ದರು. ಆದರೆ, ಈಗ ಇದು ಬರೀ ನಗರ ಅಷ್ಟೇ. ಬೇರೇನೂ ಇಲ್ಲ'' ಎಂದು ಮುಖರ್ಜಿ ಹೇಳಿದಾಗ ಸೂರ್ಯ ಮುಳುಗುತ್ತಿದ್ದ. ನಾನು 'ಶುಕ್ರಿಯಾ' ಎನ್ನುತ್ತಾ ಕೋಲ್ಕತ್ತಾ ಕಡೆ ಮುಖ ಮಾಡಿದೆ.

ಸುಳ್ಳಿನ ವ್ಯಾಪಾರಿ ಮೋದಿಗೆ ಧೈರ್ಯವಿಲ್ಲ: ಕೇಜ್ರಿವಾಲ್ ಟೀಕೆ

ಕೋಲ್ಕತ್ತಾ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಬಗ್ಗೆ ನಕಾರಾತ್ಮಕವಾಗಿ ಮಾತನಾಡಿದ್ದರು; ಆದರೆ ನಮ್ಮ ಪ್ರಧಾನಿ ಮೋದಿಯವರಿಗೆ ಧೈರ್ಯವಿಲ್ಲದ ಕಾರಣ ಟ್ರಂಪ್‌ರ ವಿರುದ್ಧ ಪ್ರತಿಭಟಿಸಲಿಲ್ಲ ಎಂದು ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಟೀಕಿಸಿದ್ದಾರೆ.

ಬಾಲಿಗಂಜ್‌ನಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಪರ ಆಯೋಜಿಸಲಾಗಿದ್ದ ಚುನಾವಣಾ ಪ್ರಚಾರಸಭೆಯಲ್ಲಿ ಮಾತನಾಡಿದ ಅವರು, ''ಮೋದಿ ಸುಳ್ಳುಗಳ ವ್ಯಾಪಾರಿ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಬದಲು ಅವರ ನೇತೃತ್ವದ ಬಿಜೆಪಿ ಸರಕಾರವು ದೇಶದಲ್ಲಿ ಸೇಡು ಮತ್ತು ದ್ವೇಷದ ವಾತಾವರಣವನ್ನು ಸೃಷ್ಟಿಸಿದೆ. ಪಶ್ಚಿಮ ಬಂಗಾಳದ ಚುನಾವಣೆಗಾಗಿ ಇಷ್ಟೊಂದು ಹೋರಾಡುವ ಮೋದಿ, ಒಂದೊಮ್ಮೆ ರಾಜ್ಯದಲ್ಲಿ ಬಿಜೆಪಿ ಸೋತರೆ ರಾಜೀನಾಮೆ ನೀಡುತ್ತಾರೆಯೇ?'' ಎಂದು ಪ್ರಶ್ನಿಸಿದರು.

ನಂತರ ರಾಸ್‌ಬಿಹಾರಿ ಕ್ಷೇತ್ರದಲ್ಲೂ ಪ್ರಚಾರ ನಡೆಸಿದ ಅವರು, ''ನಿಮ್ಮ ಪೌರತ್ವದ ಹಕ್ಕುಗಳನ್ನು ಕಸಿದುಕೊಳ್ಳಲು ಬಯಸುತ್ತಿರುವ ಬಿಜೆಪಿಯ ವಿರುದ್ಧದ ಈ ಹೋರಾಟದಲ್ಲಿ ಮಮತಾ ಬ್ಯಾನರ್ಜಿ ಅವರು ಗೆಲ್ಲಲೇಬೇಕು. ಈ ಹೋರಾಟದಲ್ಲಿ ಮಮತಾ ಮಾತ್ರವೇ ನಿಮಗೆ ನೆರವಾಗಬಲ್ಲರು ಎಂಬುದನ್ನು ಮರೆಯದಿರಿ. ಎಸ್‌ಐಆರ್ ಪ್ರಕ್ರಿಯೆಯ ಹೆಸರಿನಲ್ಲಿ ಬಂಗಾಳದಲ್ಲಿ 90 ಲಕ್ಷಕ್ಕೂ ಹೆಚ್ಚು ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಯಿತು. ಈ ಚುನಾವಣೆಯಲ್ಲಿ ಮಮತಾ ಗೆದ್ದರೆ, ಇಷ್ಟೂ ಜನರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲು ಸಾಧ್ಯವಾಗುತ್ತದೆ'' ಎಂದರು. ಮಾತು ಮುಂದುವರಿಸಿದ ಅವರು, ''ವಿಧಾನಸಭಾ ಚುನಾವಣೆಗಾಗಿ ಬಂಗಾಳದಲ್ಲಿ ಮೂರೂವರೆ ಲಕ್ಷ ಭದ್ರತಾ ಸಿಬ್ಬಂದಿಯನ್ನು ಮೋದಿಯವರ ಸರಕಾರ ನಿಯೋಜಿಸಿದೆ. ಹಾಗಾದರೆ ಬಂಗಾಳದ ಜನರು ಭಯೋತ್ಪಾದಕರೇ? ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಮಮತಾ ಅವರು ಮಾಡಿದ ಕೆಲಸಗಳೂ ರದ್ದಾಗುತ್ತವೆ. ದೆಹಲಿಯಲ್ಲಿ ವಿಧಾನಸಭಾ ಚುನಾವಣೆಗೆ ಮುನ್ನ ಅಲ್ಲಿನ ಪ್ರತಿಯೊಬ್ಬ ಮಹಿಳೆಗೆ 2,500 ರುಪಾಯಿ ಕೊಡುವುದಾಗಿ ಭರವಸೆಯಿತ್ತಿದ್ದ ಮೋದಿ, ನಂತರದಲ್ಲಿ ಅದನ್ನು ಈಡೇರಿಸಲಿಲ್ಲ. ಬಿಜೆಪಿಯು ಕೇಂದ್ರದ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ನನ್ನ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ ಜೈಲಿಗಟ್ಟಿದರು. ಆದರೆ ಇದಕ್ಕೆ ಯಾವುದೇ ಪುರಾವೆ ಗಳಿಲ್ಲ ಎಂದು ನ್ಯಾಯಾಲಯವೇ ಹೇಳಿತು. ದ್ವೇಷ ರಾಜಕಾರಣವನ್ನೇ ನೆಚ್ಚಿರುವ ಬಿಜೆಪಿಯು ಬಂಗಾಳದಲ್ಲಿ ಗದ್ದುಗೆಯೇರುವುದಕ್ಕೆ ಅವಕಾಶ ನೀಡಬೇಡಿ'' ಎಂದರು.

ಬಂಗಾಳದಲ್ಲಿ ಕಮಲ ಅರಳಲಿದೆ: ಮೋದಿ ವಿಶ್ವಾಸ

ಕೋಲ್ಕತ್ತಾ: ಪಶ್ಚಿಮ ಬಂಗಾಳಕ್ಕೆ ಸೇವೆ ಸಲ್ಲಿಸುವುದು ಹಾಗೂ ಈ ರಾಜ್ಯವನ್ನು ಸವಾಲು-ಸಮಸ್ಯೆಗಳಿಂದ ರಕ್ಷಿಸುವುದು ನಮ್ಮ ಕರ್ತವ್ಯವಾಗಿದ್ದು, ಇದರಿಂದ ಹಿಂದೆ ಸರಿಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.



ಇಲ್ಲಿನ ಬಾರಕ್‌ಪುರದಲ್ಲಿ 'ವಿಜಯಸಂಕಲ್ಪ ಯಾತ್ರೆ'ಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ''ಕಳೆದ 3-4 ದಶಕಗಳಿಂದ ನಾನು ದೇಶದ ಮೂಲೆಮೂಲೆಗೆ ಸಂಚರಿಸುತ್ತಿದ್ದೇನೆ. ರಾಜಕೀಯಕ್ಕೆ ಅಡಿಯಿಟ್ಟು ಬಿಜೆಪಿಯನ್ನು ಸೇರಿಕೊಂಡ ನಂತರ, ಒಬ್ಬ ಕಾರ್ಯಕರ್ತನಾಗಿ ಪಕ್ಷ ಹೇಳಿದ ಎಲ್ಲವನ್ನೂ ಮಾಡುತ್ತಿದ್ದೇನೆ. ಚುನಾವಣಾ ಜವಾಬ್ದಾರಿಗಳನ್ನು ಹೊರುವುದು ಕೂಡ ಇದರ ಒಂದು ಭಾಗವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಬಂಗಾಳದ ಜನರು ಬಿಜೆಪಿಯನ್ನು ಗೆಲ್ಲಿಸುತ್ತಾರೆ ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಪಕ್ಷದ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸುತ್ತೇನೆ'' ಎಂದರು. ಅವರು ಮಾತು ಮುಂದುವರಿಸಿ, ''ಈ ರೋಡ್ ಶೋಗಳು ನನ್ನ ಪಾಲಿಗೆ ರಾಜಕೀಯ ಕಾರ್ಯಕ್ರಮದಂತಿರದೆ 'ತೀರ್ಥಯಾತ್ರೆ'ಯಂತೆ ಭಾಸ ವಾಗುತ್ತವೆ. ನಾನು ಕಾಳಿದೇವಿಯ ಭಕ್ತರನ್ನು ಆಗಾಗ್ಗೆ ಭೇಟಿಮಾಡುತ್ತಿದ್ದೆ. ಬಹುಶಃ ಅದಕ್ಕಾಗಿಯೇ ಕಾಳಿದೇವಿ ನನ್ನಲ್ಲಿ ನಿರಂತರವಾಗಿ ಹೊಸ ಶಕ್ತಿಯನ್ನು ತುಂಬುತ್ತಿದ್ದಳು. ಬಂಗಾಳದ ಪುತ್ರರು-ಪುತ್ರಿಯರು ಭಾರತದ ಪ್ರಗತಿ, ಸಂಸ್ಕೃತಿ ಮತ್ತು ಸ್ವಾತಂತ್ರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. 'ವಂದೇ ಮಾತರಂ' ಗೀತೆಯು 150 ವರ್ಷಗಳನ್ನು ಪೂರೈಸುತ್ತಿದ್ದಂತೆ, ಬಂಗಾಳವೂ ಐತಿಹಾಸಿಕ ಬದಲಾವಣೆಯತ್ತ ಸಾಗುತ್ತಿರುವುದು ಗಮನಾರ್ಹ ಮತ್ತು ಕಾಕತಾಳೀಯ'' ಎಂದರು.

ಗೆಲುವು ನಮ್ಮದೇ: ಸಂಸದ ರವಿ ಕಿಶನ್ ಭವಿಷ್ಯ

ಕೋಲ್ಕತ್ತಾ: ಇಡೀ ಪಶ್ಚಿಮ ಬಂಗಾಳದಲ್ಲಿನ ಪರಿಸ್ಥಿತಿ ಬದಲಾಗಿದ್ದು ಈ ಬಾರಿಯಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಪಕ್ಷದ ಸಂಸದ ರವಿ ಕಿಶನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರದ ವೇಳೆ ಮಾಧ್ಯಮ ಮಿತ್ರರೊಂದಿಗೆ ಮಾತನಾಡಿದ ಅವರು, ''ಬಂಗಾಳದಲ್ಲಿ ಪ್ರತಿಯೊಬ್ಬ ತಾಯಿ ಮತ್ತು ಮಗಳು, ದುರ್ಗಾ ಮತ್ತು ಕಾಳಿಯ ರೂಪದಲ್ಲಿ ಬಂದಿದ್ದಾರೆ. ಉತ್ತರ ಪ್ರದೇಶದ ಗೋರಖ್‌ಪುರದಲ್ಲೂ 2017ಕ್ಕೂ ಮುಂಚೆ ಇಂಥದೇ ವಾತಾವರಣವಿತ್ತು; ಆದರೆ ಯೋಗಿ ಆದಿತ್ಯನಾಥರು ಮುಖ್ಯಮಂತ್ರಿಯಾದ ನಂತರ ಡಬಲ್ ಎಂಜಿನ್ ಸರಕಾರ ಅಲ್ಲಿನ ಮಾಫಿಯಾದ ಅಬ್ಬರವನ್ನು ನಿಲ್ಲಿಸಿತು. ಅದೇ ರೀತಿಯಲ್ಲಿ, ಮೇ 4ರ ನಂತರ ಬಂಗಾಳದಲ್ಲಿನ ಮಾಫಿಯಾ ಮತ್ತು ಗೂಂಡಾಗಳು ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತದೆ. ಮಮತಾ ಬ್ಯಾನರ್ಜಿಯವರು ವಿಶ್ರಾಂತಿ ತೆಗೆದುಕೊಳ್ಳುವ ಕಾಲವೂ ಬಂದಿದೆ'' ಎಂದರು.

ಭದ್ರತೆ ಮುಂದುವರಿಕೆ: ಅಮಿತ್ ಶಾ ಭರವಸೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ವಿಧಾನ ಸಭಾ ಚುನಾವಣೆಯ ನಂತರವೂ ಭದ್ರತೆಯನ್ನು ಮುಂದುವರಿಸುವ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

ಇಲ್ಲಿನ ಬೆಹಲಾ ಎಂಬಲ್ಲಿ ಭಾರಿ ರೋಡ್ ಶೋ ನಡೆಸಿ ಮಾತನಾಡಿದ ಅವರು, ''ರಾಜ್ಯ ದಲ್ಲಿ ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಚುನಾವಣೆ ಸಂಪನ್ನಗೊಂಡ ನಂತರವೂ ಹೆಚ್ಚುವರಿ 7 ದಿನಗಳ ವರೆಗೆ ಕೇಂದ್ರದ ಭದ್ರತಾ ಪಡೆಗಳು ಇಲ್ಲಿಯೇ ಠಿಕಾಣಿ ಹೂಡಲಿವೆ.

ಏಪ್ರಿಲ್ 29ರಂದು ನಡೆಯಲಿರುವ ಎರಡನೇ ಹಂತದ ಮತದಾನ ದಲ್ಲಿ ಜನರು ಯಾವುದೇ ಭಯವಿಲ್ಲದೆ ಬಂದು ತಮ್ಮ ಹಕ್ಕು ಚಲಾಯಿಸಬೇಕು. ಕಿಡಿಗೇಡಿಗಳು ಅಥವಾ ಗೂಂಡಾಗಳಿಗೆ ಜನರು ಹೆದರುವ ಅಗತ್ಯವಿಲ್ಲ; ಏಕೆಂದರೆ ಚುನಾವಣಾ ಆಯೋಗವು ಬಿಗಿಭದ್ರತೆಯನ್ನು ಕಲ್ಪಿಸಿದೆ'' ಎಂದು ಧೈರ್ಯ ತುಂಬಿದರು. ತರುವಾಯದಲ್ಲಿ ಹೂಗ್ಲಿ ಜಿಲ್ಲೆಯ ಚಂದನ ನಗರದಲ್ಲಿ ಮತ್ತೊಂದು ರೋಡ್ ಶೋನಲ್ಲಿ ಪಾಲ್ಗೊಂಡ ಅವರು, ''ರಾಜ್ಯದಲ್ಲಿ ಪ್ರಸ್ತುತ ಬದಲಾವಣೆಯ ಗಾಳಿ ಬೀಸುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಅಕ್ರಮ ಒಳನುಸುಳುಕೋರರನ್ನು ಸಂಪೂರ್ಣವಾಗಿ ತಡೆಯಲಾಗು ವುದು. ರಾಜ್ಯ ಸರಕಾರದ ವಿವಿಧ ಜನಕಲ್ಯಾಣ ಯೋಜನೆಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದು, ಜನರ ಹಣವನ್ನು ಲೂಟಿ ಮಾಡಿದ ಯಾರನ್ನೂ ಬಿಡುವುದಿಲ್ಲ'' ಎಂದು ಎಚ್ಚರಿಕೆ ನೀಡಿದರು ಹಾಗೂ ಪಶ್ಚಿಮ ಬಂಗಾಳವನ್ನು ಮತ್ತೊಮ್ಮೆ 'ಸುಂದರ ಬಂಗಾಳ'ವನ್ನಾಗಿ ರೂಪಿಸುವಂತಾಗಲು ಬಿಜೆಪಿಯನ್ನು ಬೆಂಬಲಿಸುವಂತೆ ಜನರನ್ನು ಕೋರಿದರು.

ಚಿತ್ತವಿಹಾರ

ಕನಸು

• ವಿಜಯಲಕ್ಷ್ಮಿ ಎಸ್.

ಬಂಡೆಗಳ ನಡುವೆ ಜಿಗಿದಿಳಿವ
ನೀರಿನ ರಭಸಕೆ ಉರುಳುವ
ನುಣುಪು ಕಲ್ಲುಗಳನು
ನೋಡುವುದರಲಿ ಕನಸು..!

ಮಸುಕು ನಸುಕಿನಲಿ
ಚಿಲಿಪಿಲಿಯೆನ್ನುವ
ಪಕ್ಷಿಗಳ ಮೂಕಭಾಷೆಗಳ
ತಿಳಿವುದರಲಿ ಕನಸು..!

ಗಿಡಪೊದರುಗಳಡಿಯಲಿ
ಕಣ್ಣು ಪಿಳಿ ಬಿಡುವ
ಬಿಳಿಮೊಲಗಳ ಪಿಸುಮಾತನು
ಆಲಿಸುವುದರಲಿ ಕನಸು..!

ಸಂಜೆಗೆಂಪು ಮೂಡುವುದ ಲೆಕ್ಕಿಸದೆ
ಕಾಯ್ವ ಮರಿಗಳಿಗಾಗಿ ಕಾಳುಗಳ
ಕೊಕ್ಕಿನಲಿ ಹೆಕ್ಕುವ ತಾಯಕ್ಕಿಗಳ
ನೋಡುತಲಿ ಕನಸು..!

ಹರುಷದಲಿ ಜೀವ ತುಂಬುವ
ಓ.. ಕನಸುಗಳೇ..
ಮತ್ತೆ ಮತ್ತೆ ಆವರಿಸಿರಿ
ಮನವ ತುಂಬಿಸಿರಿ...!

ಐಟಿ-ನಾಳೆ ಕೆಲಸ ಐತಿ?

• ಎಚ್. ಪ್ರಹ್ಲಾದ ರಾವ್, ಬೆಂಗಳೂರು

AI ಕಬಳಿಸುತ್ತಿದೆ
IT ಕೆಲಸಗಳ
ಬಳಸುತ್ತ ತನ್ನ ಕೃತಕ ಮಿದುಳ...

ಸೃಷ್ಟಿಕರ್ತನನ್ನೇ
ಮಾಡುತ್ತ ಮರುಳ!
ಹೇಳುತ್ತಿದೆ ಮಾನವಕುಲ:
AI ಹೃದಯಹೀನ, ದುರುಳ...

ಸಿಲುಕಿದ್ದಾನೆ ಮಾನವ
ಸಂಕಷ್ಟದಲ್ಲಿ
ತಾನೇ ಸೃಷ್ಟಿಸಿದ
ಇಕ್ಕಳದಲ್ಲಿ...

ಕಂಪನಿಗಳಿಗೆ ಬಲು
ಲಾಭದಾಯಕ
ನೌಕರರಿಗೆ
ನಿತ್ಯ ಆತಂಕ:

ಹೋಗಬಹುದೇ
ನನ್ನ ಕಾಯಕ?
ಭರವಸೆಯ ಬದುಕು
ಸಿಗಲಾರದೆ ಇಂದಿನ

ಯುವ ಪೀಳಿಗೆಗೆ?
ನಾಳೆಯ ಚಿಂತೆಯಲ್ಲೇ
ಚಿತೆಯಾಗುವುದೇ
ಇಂದಿನ ಗಳಿಗೆ?!

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ..!

• ಅಂಜಿನಪ್ಪ ಡಿ., ಕೊಟ್ಟೂರು

ಮನುಷ್ಯನಿಗೆ ಬದುಕೆಂಬುದು, ಆ ದೇವರು ಕೊಟ್ಟ ಭಿಕ್ಷೆ. ಆ ಬದುಕನ್ನು ಹಸನಾಗಿಸಿಕೊಳ್ಳಬೇಕೇ ಹೊರತು ನಿರಾಕರಿಸಬಾರದು. ಜೀವನ ಎಷ್ಟು ತುಂಬಿ ವಿಶಾಲವಾಗಿ ಹರಡುವುದೋ, ಅಷ್ಟು ತುಂಬು ಜೀವನ ನಡೆಸಬೇಕು. ಬದುಕಿನಲ್ಲಿ ಎಲ್ಲಾ ಸೊಗಸುಗಳನ್ನು, ಮಜಲುಗಳನ್ನು ಸಾಧ್ಯವಾದಷ್ಟು ಅನುಭವಿಸಬೇಕು. ನಮ್ಮ ಬದುಕಿಗೆ ಒಪ್ಪುವ ಚೆಲುವಾವುದು, ಒಪ್ಪದಿರದಾವುದು ಎಂಬುದರ ಒಳನೋಟವನ್ನು ನಿರ್ಧರಿಸಬೇಕು. ಆ ಸೂಕ್ಷ್ಮತೆ ಮತ್ತು ಸಂವೇದನೆ, ಇಲ್ಲದೆ ಹೋದರೆ ಬದುಕು ಅಪಸ್ವರವಾಗುತ್ತದೆ.

ಆಸೆಗಳಿಗೆ ಮಿತಿ ಇಲ್ಲ

ಇಂದಿನ ತಂತ್ರಜ್ಞಾನ ಮತ್ತು ಆಧುನಿಕತೆಯ ಭರಾಟೆಯಲ್ಲಿ ಬದುಕೆಂಬುದು ಮಾಯೆಯಂತಾಗಿದೆ. ಅತಿಯಾದ ಆಸೆಗಳು ರಾಕ್ಷಸ ರೂಪ ತಾಳಿದ್ದು ನಮ್ಮನ್ನು ಇನ್ನಿಲ್ಲದಂತೆ ಕುಣಿಸುತ್ತವೆ. ಪ್ರತಿಯೊಬ್ಬರಿಗೂ ಆಡಂಬರದ ನಶೆ ಏರಿದೆ. ಸಾವಿರಾರು ವರ್ಷಗಳು ಬದುಕುತ್ತೇವೆ ಎಂಬ ಭ್ರಮೆಯಲ್ಲಿದ್ದೇವೆ. ಕ್ಷಣಿಕ ಬದುಕಿಗೆ ಮಹಾಸೌಧಗಳನ್ನ ಕಟ್ಟಿಕೊಳ್ಳುತ್ತಿದ್ದೇವೆ. ವರ್ತಮಾನದ ಬದುಕಿಗಿಂತ ಭವಿಷ್ಯತ್ತಿನ ಬಗೆಗೆ ಹೆಚ್ಚು ಚಿಂತಿತರಾಗಿ, ಚಿಂತೆಯೆಂಬ ಬಂದಿಖಾನೆಯಲ್ಲಿ ಬಂಧಿತರಾಗಿದ್ದು, ವರ್ತಮಾನದ ಬದುಕಿನ ಸುಂದರ ಕ್ಷಣಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಇಂದು ಬಾಹ್ಯ ಆಡಂಬರ ಹೆಚ್ಚಾಗಿದ್ದು, ಆಂತರಿಕ ಮೌಲ್ಯಗಳ ಕುಸಿತ ಕಾಣುತ್ತಿದೆ.

ಈ ಸಂದರ್ಭದಲ್ಲಿ, ವಿಷ್ಣುವರ್ಧನ್ ಅವರು ನಟಿಸಿರುವ 'ಜಿಮ್ಮಿಗಲ್ಲು' ಚಿತ್ರದ ಈ ಹಾಡು ಪ್ರಸ್ತುತವೆನಿಸುತ್ತದೆ: 'ತುತ್ತು ಅನ್ನ ತಿನ್ನೋಕೆ, ಬೊಗಸೆ ನೀರು ಕುಡಿಯೋಕೆ, ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ, ಅಂಗೈಯಗಲ ಜಾಗ ಸಾಕು ಹಾಯಾಗಿರೋಕೆ'. ಈಗಿನ ಕಾಲಕ್ಕೆ ಈ ಹಾಡನ್ನು ಕೇಳಿದವರು, 'ಜೀವನ ಇಷ್ಟು ಸರಳವೇ?' ಎಂದು ಮೂಗು ಮುರಿಯಬಹುದು, ಇಲ್ಲವೇ 'ಇದೊಂದು ವೇದಾಂತ' ಅನ್ನಬಹುದು. ಆದರೆ ಮನುಷ್ಯನ ಬದುಕಿಗೆ ಇಷ್ಟೇ ಸಾಕಲ್ಲವೆ? ಇದೇ ವಾಸ್ತವ. ಇದರ ಆಚೆಗೆನಿದ್ದರೂ ಅದು ದುರಾಸೆಯಂತೆ ತೋರುತ್ತದೆ.

ಚಿಂತೆ ಎಂಬ ಸಂತೆಯಲ್ಲಿ

ಮನುಷ್ಯನ ಬದುಕಿನ ಚಿಂತೆಯ ಕುಲುಮೆಯಲ್ಲಿ, ಎಂತೆಂಥ ಕಷ್ಟಗಳು, ಸಂಕಟಗಳು, ನೋವುಗಳು, ಅಸಹಾಯಕ ಸ್ಥಿತಿಗಳು ಬರಬಹುದು ಎಂಬುದನ್ನು ಒಂದು ದಿನದಲ್ಲಿ ವರ್ಣನೆ ಮಾಡಿ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಇದಕ್ಕೆ ಯಾರೂ ಹೊರತಾಗಿಲ್ಲ. ಬಡವನಿಗೆ ಬದುಕಿನ ಚಿಂತೆ, ಶ್ರೀಮಂತನಿಗೆ ಸಂಪತ್ತನ್ನು ರಕ್ಷಿಸಿಕೊಳ್ಳುವ ಚಿಂತೆ, ರಾಜಕಾರಣಿಗೆ ರಾಜಕಾರಣ ಮತ್ತು ದುಡ್ಡು ಮಾಡುವ ಚಿಂತೆ, ಉದ್ಯಮಿಗಳಿಗೆ ಉದ್ಯಮವನ್ನು ವಿಸ್ತರಿಸುವ ಚಿಂತೆ- ಹೀಗೆ ಎಲ್ಲರಿಗೂ ಒಂದಲ್ಲ ಒಂದು ಚಿಂತೆ ಬಾಧಿಸುತ್ತಲೇ ಇರುತ್ತದೆ. ಜಗತ್ತಿನಲ್ಲಿ ಎಲ್ಲವೂ ಇದ್ದವರದು ಒಂದು ಚಿಂತೆಯಾದರೆ, ಇಲ್ಲದವರದು ಇನ್ನೊಂದು ಚಿಂತೆ.

ಈ ಚಿಂತೆ ಜೀವನದ ಒಳಗನ್ನು ಸುಡುತ್ತಲೇ ಇರುತ್ತದೆ. ಹಾಗಾದರೆ ಈ ಪ್ರಪಂಚದಲ್ಲಿ ಚಿಂತೆ ಇಲ್ಲದವರು ಯಾರು? ಪರಮಸುಖಿ ಯಾರು? ಎಂಬ ಪ್ರಶ್ನೆಗೆ ಉತ್ತರ ನಿಲುಕದು. ಯಾಕೆಂದರೆ ಪ್ರತಿಯೊಬ್ಬರೂ ಜೀವನದ ಅತಿಯಾಸೆ ಎಂಬ ಕುದುರೆ ಏರಿ, ಬದುಕುತ್ತಿರುವಾಗ ಸುಖ ಎಂಬುದು ಮರುಭೂಮಿಯ ಮರೀಚಿಕೆಯಾಗಿ ಕಾಣುತ್ತದೆ.

'ಯಾಕೆ ಬಡಿದಾಡ್ತಿ ತಮ್ಮ ಮಾಯಾ ಮೆಚ್ಚಿ, ಸಂಸಾರ ನೆಚ್ಚಿ' ಎಂದು ತತ್ವಪದವೊಂದು ಹೇಳುವಂತೆ, ಇರುವಷ್ಟು ಕಾಲ ಜೀವನದಲ್ಲಿ ಬಡಿದಾಟದಲ್ಲೇ ಕಾಲ ಕಳೆಯುತ್ತೇವೆ. ಯಾವುದೂ ನಮ್ಮ ಹಿಂದೆ ಬರುವುದಿಲ್ಲ, ಆದ್ದರಿಂದಲೇ ಜನಪದರು 'ಹುಟ್ಟುವಾಗ ತರಲಿಲ್ಲ ಹೋಗುವಾಗ ಒಯ್ಯಲಾರೆ, ಸುಟ್ಟು ಸುಟ್ಟು ಸುಣ್ಣದ ಹರಳಾಯಿತು ಜೀವ' ಎಂದಿದ್ದಾರೆ. ಮನದಲ್ಲೊಂದು ಬದುಕಿನ ಚಿಂತಿ, ಮಾಡಲಾಕ ಬಂದಿದಿ ಸಂತಿ, ಸಂತಿ ತೀರಿದ ಬಳಿಕ, ಗೋಡ್ಯಾಗ ನೀ ಕುಂತಿ' ಎಂಬ ಜನಪದ ನುಡಿಯಂತೆ ಸಾಂಸಾರಿಕ ಮೋಹ ನಮ್ಮನ್ನು ತೊಳಲಾಡುವಂತೆ ಮಾಡುತ್ತಲೇ ಇರುತ್ತದೆ.

ಮನುಷ್ಯನಂತೆ ಪ್ರಾಣಿಗಳಿಗೂ ಜೀವನವಿದೆ. ಆದರೆ ಬದುಕಿನ ರೀತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಅವುಗಳಲ್ಲಿ ಅತಿಯಾದ ಆಸೆಗಳಿಲ್ಲ, ರಾಗ ದ್ವೇಷಗಳಿಲ್ಲ, ಆದ್ದರಿಂದ ಅವುಗಳಲ್ಲಿ ಅಹಂಮಿಕೆ ಇಲ್ಲ. ಈ ಕಾರಣದಿಂದಲೇ, ಅವುಗಳಿಗೆ ನಾನಾ ರೀತಿಯ ಕಾಯಿಲೆಗಳಿಲ್ಲ, ವೈದ್ಯರಿಲ್ಲ, ಸ್ವಚ್ಛಂದದ ಬದುಕು ಅವುಗಳದು. ಇರುವ ಕಾಲದಲ್ಲಿ ತಮಗೆಷ್ಟು ಬೇಕು ಅದನ್ನು ಪಡೆದುಕೊಂಡು ತೃಪ್ತಿ ಪಡುತ್ತವೆ. ಆದರೆ ಮನುಷ್ಯ ಮುಂದಿನ ತಲೆಮಾರುಗಳಿಗಾಗುವಷ್ಟು ಇದ್ದರೂ ಬೇಕೆನ್ನುತ್ತಲೇ ಇರುತ್ತಾನೆ. ಮನುಷ್ಯನ ಈ ಮನೋಭಾವವು ಚಿಂತೆ ಎಂಬ ಸಂತೆಗೆ ದೂಡುತ್ತದೆ. ಆದ್ದರಿಂದಲೇ ಕವಿ ಬೇಂದ್ರೆಯವರು 'ಚಿಂತೆ ಬಿಡ್ರೋ, ಚಿಂತೆ ಬಿಡ್ರಿ, ಚಿಂತೆ ಬಿಟ್ರೆ ಚಿರಂಜೀವಿ ಅಕ್ಕಿರೀ' ಎಂದು ಹೇಳಿದ್ದಾರೆ.

ಹೂವು ನಮಗೆ ಮಾದರಿ

'ನಗುತಾ ಹುಟ್ಟಿ, ನಗುತ ಮುಗಿಯುವ ನಗುವ ಹೂವೆ ಮಾದರಿ. ಮಣ್ಣು ತಿಂದು ಹಣ್ಣು ಕೊಡುವ ಮರದ ದಾರಿ ಹಿಡಿಯಿರಿ' ಎನ್ನುವ ಕವಿವಾಣಿಯಂತೆ, ಹೂಗಳ ಬದುಕು ಕ್ಷಣಿಕವಾಗಿರಬಹುದು. ಆದರೆ ಅವುಗಳು ನಗುತ್ತಾ ಹುಟ್ಟಿ, ನಗುತಲೆ ಜೀವನ ಮುಗಿಸುವ ರೀತಿ ನಮಗೆ ಆದರ್ಶವಲ್ಲವೇ? ಅದೇ ರೀತಿ ಹೂಗಳ ಅಂದ ಕೆಡಿಸದೆ ಅವುಗಳಿಂದ ಮಧುವನ್ನ ಸಂಗ್ರಹಿಸಿ ಪರರರಿಗೆ ನೀಡುವ ಜೇನುಹುಳು,ಪರರಿಗೆ ನೆರಳು ನೀಡಿ ಹಣ್ಣು ಕೊಡುವ ಮರ ನಮಗೆ ಮಾದರಿಯಾದೀತು.

ಒಮ್ಮೆ ಯೋಚಿಸಿ, ಪ್ರಪಂಚದಲ್ಲಿ ಎಷ್ಟೋ ಜನಕ್ಕೆ ಊಟ ಇಲ್ಲ, ಬಟ್ಟೆ ಇಲ್ಲ, ಒಂದು ಸೂರಿಲ್ಲ. ಆದರೆ ಅವರೆಲ್ಲರೂ ಹೇಗೋ ಬದುಕುತ್ತಿದ್ದಾರೆ. ಆದರೆ ನಮಗೆ ಎಲ್ಲಾ ಇವೆ. ಜತೆಗೆ ವಿದ್ಯೆ, ಬುದ್ಧಿ , ಸಂಪತ್ತುಗಳಿವೆ. ಈ ಎಲ್ಲಾ ಸೌಲಭ್ಯಗಳನ್ನು, ನಾವು ಕೊರತೆಯೆಂದು ಭಾವಿಸಿದರೆ ಸಂತೋಷದಿಂದಿರಲು ಹೇಗೆ ಸಾಧ್ಯ? ಪಾಲಿಗೆ ಬಂದದ್ದು ಪಂಚಾಮೃತ ಎನ್ನುವಂತೆ, ಇರುವುದನ್ನು ಸ್ವೀಕರಿಸಿ ಜೀವನದ ಕುಂದುಕೊರತೆಗಳಿಗೆ ಕುರುಡಾಗಿ ಮುನ್ನಡೆಯಬೇಕಿದೆ .

ಕವಿ ಎಚ್.ಎಸ್. ವೆಂಕಟೇಶ ಮೂರ್ತಿಯವರ ಈ ಭಾವಗೀತೆಯನ್ನು ಕೇಳದವರಿಲ್ಲ: 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆ ಸುರಿಸಿ ಹಗುರಾದ ಮುಗಿಲಿನಂತೆ; ತಾನು ಬಿಸಿಲಲ್ಲಿ ನಿಂತು ತನ್ನ ಬಳಿ ಬರುವವರಿಗೆ ತಣ್ಣನೆಯ ಆಸರೆಯ ನೆರಳು ಕೊಟ್ಟ ಹೊಂಗೆಯ ಮರದಂತೆ'- ಮನುಷ್ಯನಿಗೆ ಸಾವಿರ ಚಿಂತೆಗಳಿದ್ದರೂ, ಜೀವನವನ್ನು ಹಸನಾಗಿಸಲು ನಗು ಮತ್ತು ಪ್ರೀತಿಯ ಪರೋಪಕಾರ ಗುಣದಿಂದ ಸಾಧ್ಯ, ಎಂಬ ಸಂದೇಶವನ್ನು ಈ ಸಾಲುಗಳು ನೀಡುತ್ತದೆ. ಹಣವೇ ಎಲ್ಲವೂ ಅಲ್ಲ, ಅದು ಅಗತ್ಯತೆ ಅಷ್ಟೇ. ಆಸೆಗಳು ಅತಿಯಾದಾಗ ಹಣದ ಅಗತ್ಯವೂ ಹೆಚ್ಚಾಗುತ್ತದೆ. ಜೀವನದಲ್ಲಿ ಎಲ್ಲವೂ ಮಿತವಾಗಿದ್ದರೆ ಹಿತ, ಅತಿಯಾದರೆ ಅಹಿತ ಎನ್ನುವಂತೆ ಬಿಗುವನ್ನ ತೊರೆದು ನಗುವನ್ನ ಹೊರಸೂಸುತ್ತ, ಆತ್ಮವಿಶ್ವಾಸದ ಕೆಚ್ಚಿನಿಂದ ಮುನ್ನಡೆದು, ಅಂತರ್‌ದೃಷ್ಟಿಯ ಗುಣಗಳನ್ನು ವೃದ್ಧಿಸಿಕೊಂಡರೆ, ಜೀವನ ಜೇನಾದೀತು.

ಪ್ರತಿಯೊಬ್ಬರ ಭಾಗ್ಯವು, ಅವರವರ ಕೈಯಲ್ಲಿ ಇರುತ್ತದೆ. ಶಿಲ್ಪಿಯು ಮೂರ್ತಿಗೆ ಆಕಾರ ಕೊಡುವಂತೆ, ನಮ್ಮ ಜೀವನಕ್ಕೆ ಬೇಕಾದ ರೂಪವನ್ನು ಕೊಡುವ ಕಲೆಯನ್ನ ಕಲಿಯಬೇಕಿದೆ, ಶ್ರದ್ಧೆಯಿಂದ ರೂಢಿಸಿಕೊಳ್ಳಬೇಕಿದೆ. 'ಸರಳ ಬದುಕು, ಉನ್ನತ ಚಿಂತನೆ' ಎಂಬ ತತ್ವವನ್ನು ಅಳವಡಿಸಿಕೊಳ್ಳಬೇಕಿದೆ. ಪ್ರತಿಯೊಬ್ಬರಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ, ನಂಬಿಕೆ, ಪರೋಪಕಾರ ಮನೋಭಾವ, ತನ್ನಂತೆ ಪರರನ್ನು ಬಗೆಯುವ ವಿಶಾಲ ಮನೋಭಾವ, ಇರುವುದರಲ್ಲಿ ತೃಪ್ತಿ ಪಡುವಿಕೆ ಇತ್ಯಾದಿ ಗುಣ-ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡರೆ ಪ್ರತಿಯೊಬ್ಬರ ಬಾಳೂ ಬಂಗಾರವಾದೀತು. ಇಂಥ ಸುಂದರ ಪ್ರಾತಃಕಾಲದಿ ಜೀವಿಸುವುದಕ್ಕಿಂತಲೂ ಬೇರೆಯ ಗುರಿ ಜೀವಕೆ ಬೇಕಿಲ್ಲ ಎಂದು ಹೇಳುವ ಕುವೆಂಪು ಕವಿತೆಯ ಸಾಲುಗಳು ಜೀವಪ್ರೇಮದ ಆಶಯವಾಗಬೇಕು....

ನಂಗ್ಯಾಕೋ ಡೌಟು! ಮನರಂಜನೆ ಗ್ರೇಟು...

• ಧೀರೇಂದ್ರ ಸೀತಾರಾಮಾಚಾರ್ಯ

ಬೆಂಗಳೂರಿನ ಹವ್ಯಾಸಿ ತಂಡ 'ಬೆನಕ' ಏಪ್ರಿಲ್ 18ರಂದು 'ನಂಗ್ಯಾಕೋ ಡೌಟು' ನಾಟಕದ (ನಿರ್ದೇಶನ: ಪ್ರಮೋದ್ ಶಿಗ್ಗಾಂವ್) ಎರಡು ಪ್ರದರ್ಶನಗಳನ್ನು ಆಯೋಜಿಸಿತ್ತು. ಹದಿನಾರು ವರ್ಷಗಳ ಹಿಂದೆ ಬೆನಕ ತಂಡದಿಂದಲೇ ಈ ನಾಟಕ 24 ಪ್ರದರ್ಶನ ಕಂಡಿತ್ತು. ಈ ನಾಟಕವನ್ನು ಮತ್ತೆ ಕೈಗೆತ್ತಿಕೊಂಡು ಬೆನಕ, ಪ್ರಮೋದ್ ಶಿಗ್ಗಾಂವ್ ಅವರ ನಿರ್ದೇಶನದಲ್ಲಿ ಹೊಚ್ಚ ಹೊಸ

ಯುವ ಕಲಾವಿದರ ಜತೆ ಪ್ರದರ್ಶಿಸುತ್ತಿದೆ. ಮೋಲಿಯರನ ಮೂಲ ಫ್ರೆಂಚ್ ನಾಟಕವನ್ನು ಬಿ.ಆರ್. ಲಕ್ಷ್ಮಣರಾಯರು, 'ಬೆನಕ'ದ ಸಂಚಾಲಕ ಡಾ. ಟಿ.ಎಸ್. ನಾಗಾಭರಣರ ಒತ್ತಾಯದ ಮೇರೆಗೆ ಕನ್ನಡಕ್ಕೆ ರೂಪಾಂತರಿಸಿದರು.

ಮಧ್ಯ ವಯಸ್ಕ ದಂಪತಿಗಳ ನಡುವೆ ಸಣ್ಣ ಸಂಗತಿಯೊಂದು ಸಂಶಯದ ಬೀಜ ಬಿತ್ತಿ, ಕುಡಿಯೊಡೆದು ಬೆಳೆದು ಹೆಮ್ಮರವಾಗಿ ಅವರ ದಾಂಪತ್ಯಕ್ಕೇ ಕಂಟಕವಾದಾಗ ಅದರ ಪರಿಣಾಮ, ಮುದ್ದಾಡುವ ಯುವ ಪ್ರೇಮಿಗಳ ಬದುಕಿಗೂ ತಟ್ಟಿ ಒದ್ದಾಡುವಂತಾಗುವುದು, ನಾಟಕೀಯ ರೀತಿಯಲ್ಲಿ ಪರಿಹಾರ ಕಂಡುಕೊಳ್ಳುವುದು ಈ ನಾಟಕದ ತಿರುಳು. ನಾಟಕದುದ್ದಕ್ಕೂ ನವಿರಾಗಿ ಹರಿದ ಹಾಸ್ಯ ಪ್ರೇಕ್ಷಕರಿಗೆ ಕಚಗುಳಿಯಿಟ್ಟು ಹೊಟ್ಟೆ ಹುಣ್ಣಾಗುವಂತೆ ನಗಿಸುವಲ್ಲಿ ಯಶಸ್ವಿಯಾಯಿತು. ಇಲ್ಲಿ ದ್ವಂದ್ವಾರ್ಥದ ಮಾತುಗಳಿಲ್ಲ, ಕೇವಲ ತಿಳಿಹಾಸ್ಯ. ಹಾಡುಗಳೂ ಅಷ್ಟೇ- ಬಲು ರಂಜನೀಯ. ನಾಟಕಕಾರ ಲಕ್ಷ್ಮಣರಾಯರು ಸಂಭಾಷಣೆ ಮಾತ್ರವಲ್ಲದೇ, ಹಾಡಿನಲ್ಲೂ ಕಚಗುಳಿ ಇಟ್ಟು ನಗಿಸುತ್ತಾರೆ.

ರಂಗಕ್ಕೆ ತಕ್ಕಂತೆ ಸಂಗೀತದ ಲಯ, ಲಯಕ್ಕೆ ತಕ್ಕಂತೆ ಕಲಾವಿದರ ತ್ವರಿತ ಹಾಗೂ ಉತ್ಸಾಹದ ಚಲನೆ, ಹಾಸ್ಯ ಉಕ್ಕಿಸುವ ಸಂಭಾಷಣೆ, ಸಮರ್ಥ ಅಭಿನಯ ಮತ್ತು ಉತ್ತಮ ಮೇಳ ನಾಟಕದ ಜೀವಾಳವಾಗಿತ್ತು. ಮನೆಯ ಆಳು ಮಂಜುನಾಥನಾಗಿ ಶ್ರೀನಿವಾಸ ಭಾರ್ಗವ ಮತ್ತು ಪುಟ್ಟಗೌರಿ ಪಾತ್ರದಲ್ಲಿ ಸ್ಫೂರ್ತಿ ಗಿರೀಶ್ ತಮ್ಮ ಅಭಿನಯದಿಂದ, ವಿಶೇಷ ಹಾವಭಾವಗಳಿಂದ ಗಮನ ಸೆಳೆದರು. ವೃತ್ತಿ ನಾಟಕ ಕಂಪನಿಗಳ ಮಟ್ಟುಗಳನ್ನು ಹೊಂದಿದ್ದ ಸಂಗೀತಕ್ಕೆ ನಾಗೇಶ್ ಜಯಕುಮಾರರ ಹಾರ್ಮೋನಿಯಂ ಸಾಥ್ ನೀಡಿತ್ತು. ಪ್ರತಿ ದೃಶ್ಯದ ಅಂತ್ಯದಲ್ಲೂ ಕೇಳಿಬರುತ್ತಿದ್ದ ಪ್ರೇಕ್ಷಕರ ಚಪ್ಪಾಳೆ ಮತ್ತು ನಗು ರಂಗಮಂದಿರದಲ್ಲಿ ಅನುರಣಿಸುತ್ತಿದ್ದುದೇ ನಾಟಕದ ಯಶಸ್ಸಿಗೆ ಸಾಕ್ಷಿ!

ಹಾಸ್ಯ ಲಾಸ್ಯ

ಪರೋಪಕಾರಿಗಳು

ಅದೊಂದು ಮೆಟ್ರೋಪಾಲಿಟನ್ ನಗರ. ಹುಡುಗರ ಮತ್ತು ಹುಡುಗಿಯರ ಹಾಸ್ಟೆಲ್‌ಗಳು ಅಕ್ಕಪಕ್ಕದಲ್ಲೇ ಇದ್ದವು. ಒಮ್ಮೆ ಇದ್ದಕ್ಕಿದ್ದಂತೆ ಹುಡುಗಿಯರ ಹಾಸ್ಟೆಲ್‌ನ ಕೋಣೆಯೊಂದರಲ್ಲಿ ಬೆಂಕಿಹೊತ್ತಿಕೊಂಡು, ಊರಿಗೆಲ್ಲಾ ಕಾಣುವಂತೆ ಹೊಗೆ ಮೇಲೇಳಲು ಆರಂಭಿಸಿತು. ಇದನ್ನು ನೋಡುತ್ತಿದ್ದಂತೆ ಪಕ್ಕದ ಹಾಸ್ಟೆಲ್‌ನ ಹುಡುಗರು, ಹುಡುಗಿಯರ ಹಾಸ್ಟೆಲ್‌ನತ್ತ ಧಾವಿಸಿ, ಕೊಡ, ಬಕೀಟು, ಚೊಂಬು, ಲೋಟ ಹೀಗೆ ಸಿಕ್ಕ ಸಿಕ್ಕ ಪಾತ್ರೆಗಳಲ್ಲಿ ನೀರು ತಂದು ಎರಚಿ ಬೆಂಕಿಯನ್ನು ನಂದಿಸಲು ಹರಸಾಹಸ ಪಡತೊಡಗಿದರು.

ಕ್ಯಾಮರಾಮನ್ ಜತೆಯಲ್ಲಿ ಈ ಘಟನೆಯ ಕವರೇಜ್ ಮಾಡುತ್ತಿದ್ದ ಪತ್ರಕರ್ತ, ತನ್ನ ಸುದ್ದಿವಾಹಿನಿಯ ಸ್ಟುಡಿಯೋಕ್ಕೆ ಲೈವ್‌ನಲ್ಲಿ ಮಾಹಿತಿ ರವಾನಿಸಿದ್ದು ಹೀಗೆ: ''ಹುಡುಗಿಯರ ಹಾಸ್ಟೆಲ್‌ಗೆ ತಾಕಿದ್ದ ಬೆಂಕಿಯನ್ನು ಹತೋಟಿಗೆ ತರಲಾಗಿದೆ; ಆದರೆ ಪಕ್ಕದ ಹಾಸ್ಟೆಲ್‌ನ ಹುಡುಗರನ್ನು ಹತೋಟಿಗೆ ತರುವುದು ಶಾನೆ ಕಷ್ಟವಾಗಿದೆ....!!''

ಕೇಳಿಸಿಕೊಳ್ಳುವ ಹೃದಯವಂತಿಕೆ

• ಡಾ. ಎನ್. ಜಯರಾಮ ಶೆಟ್ಟಿ

ಸಂವಹನದಲ್ಲಿ ಹೃದಯದ ಪಾತ್ರ ಎನ್ನುವ ವಿಷಯದ ಬಗ್ಗೆ ಗುರುಗಳೊಬ್ಬರು ಉಪನ್ಯಾಸ ಕೊಡುತ್ತಿದ್ದರು. ಪರಿಣಾಮಕಾರಿ ಸಂವಹನದಲ್ಲಿ ಯಾವುದರ ಪಾತ್ರ ಹೆಚ್ಚಿನದು ಎನ್ನುವುದರ ಕುರಿತು ಸಾಕಷ್ಟು ಪ್ರಶ್ನೋತ್ತರ ನಡೆಯಿತು. ''ಸಂಭಾಷಣೆ, ಸಂವಹನವೆಲ್ಲ ಮಿದುಳು-ಕೇಂದ್ರಿತ ಮತ್ತು ಬುದ್ಧಿ-ಸಂಬಂಧಿತ, ಅದರಲ್ಲಿ ಹೃದಯದ ಕೆಲಸವೇನು?'' ಎನ್ನುವವರ ವಾದ ಗೆಲ್ಲುವ ಹಂತದಲ್ಲಿತ್ತು. ಆಗ ಗುರುಗಳು ತಮ್ಮ ಚೀಲದಿಂದ ಮೂರು ಗೊಂಬೆಗಳನ್ನು ಹೊರತೆಗೆದು ಮೇಜಿನ ಮೇಲಿಟ್ಟರು ಮತ್ತು ವಾಗ್ಯುದ್ಧಕ್ಕೆ ಸ್ವಲ್ಪ ವಿರಾಮ ಹೇಳಲು ವಿನಂತಿಸಿದರು. ಸಭಿಕರು 'ಉಪನ್ಯಾಸದ ಮಧ್ಯೆ ಗೊಂಬೆಗಳು ಯಾಕೆ?' ಎನ್ನುವ ಅಚ್ಚರಿಯಲ್ಲಿದ್ದರು. ಆಗ ಗುರುಗಳು, ''ಈ ಗೊಂಬೆಗಳು ಹೇಗೆ ಕಾಣಿಸುತ್ತಿವೆ?'' ಎಂದು ಕೇಳಲು, ಸಭಿಕರು ಒಕ್ಕೊರಲಿಂದ ಉತ್ತರಿಸಿದರು: ''ಏನೂ ವ್ಯತ್ಯಾಸವಿಲ್ಲ, ಮೂರೂ ಒಂದೇ ತೆರನಾದ ಗೊಂಬೆಗಳು''.

ಗುರುಗಳು ಸ್ವರ ಏರಿಸಿ ಹೇಳಿದರು: ''ವ್ಯತ್ಯಾಸವಿರಲಿ ಇಲ್ಲದಿರಲಿ, ನಾನು ಇಂದು ಇಷ್ಟಪಟ್ಟವರಿಗೆ ಈ ಮೂರೂ ಗೊಂಬೆಗಳನ್ನು ಮಾರಲಿದ್ದೇನೆ. ಮೊದಲನೆಯ, ಎರಡನೆಯ, ಮೂರನೆಯ ಗೊಂಬೆಯ ಬೆಲೆ ಕ್ರಮವಾಗಿ ನೂರು, ಒಂದು ಸಾವಿರ ಮತ್ತು ಐದು ಸಾವಿರ ರುಪಾಯಿಗಳು'' ಎಂದಾಗ ಸಭಿಕರಲ್ಲಿ ಗುಸುಗುಸು ಶುರುವಾಯಿತು. ''ಹೆದರಬೇಡಿ, ಖರೀದಿಸಬೇಕೆಂದು ನಿಮಗೆ ನಾನು ಹೇಳಲಾರೆ. ಅದು ನನ್ನ ಉದ್ದೇಶವೂ ಅಲ್ಲ. ನನ್ನ ಇಂದಿನ ಉಪನ್ಯಾಸದ ಮುಂದುವರಿದ ಭಾಗವಾಗಿ, ಈ ಮೂರು ಗೊಂಬೆಗಳ ಬೆಲೆಗಳಲ್ಲಿ ತಾರತಮ್ಯ ಏಕೆ ಎನ್ನುವ ಬಗ್ಗೆ ಹೇಳಲಿಚ್ಛಿಸುವೆ'' ಎಂದಾಗ ಸಭಿಕರು ಮುಂದಿನ ಮಾತುಗಳಿಗೆ ಕಿವಿಯಾದರು.

ಗುರುಗಳು ಸಪೂರದ ಸರಿಗೆಯನ್ನು ಮೊದಲನೆಯ ಗೊಂಬೆಯ ಕಿವಿಯೊಳಗೆ ಸೇರಿಸಿದರು, ಆ ಸರಿಗೆಯ ತುದಿ ಗೊಂಬೆಯ ಇನ್ನೊಂದು ಕಿವಿಯಿಂದ ಹಾಗೆಯೇ ಹೊರ ಬಂತು. ಸಭಿಕರು ನೋಡುತ್ತಿದ್ದಂತೆ, ಗುರುಗಳು ಎರಡನೆಯ ಗೊಂಬೆಯ ಒಂದು ಕಿವಿಗೆ ಸರಿಗೆ ತಳ್ಳಿದರು. ಸರಿಗೆ ತಲೆಯ ಭಾಗಕ್ಕೆ ಹೋದಂತಾಗಿ ಇನ್ನೊಂದು ಕಿವಿಯಿಂದ ಹೊರಬರುತ್ತಿದ್ದಂತೆ, ಗೊಂಬೆ ಪುನಃ ಪುನಃ ಬಾಯಿ ತೆರೆದು, ಮುಚ್ಚಿಕೊಂಡಿತು. ನೋಡುವವರಿಗೆ ಅದು ಏನೋ ವಟಗುಟ್ಟುವಂತೆ ಕಾಣಿಸಿಕೊಂಡಿತು. ಗುರುಗಳು ಸರಿಗೆ ಕೈಯಲ್ಲಿ ಹಿಡಿದು ಮೂರನೆಯ ಗೊಂಬೆಯ ಒಂದು ಕಿವಿಗೆ ಸೇರಿಸಿದಾಗ ತೀರಾ ವ್ಯತಿರಿಕ್ತ ದೃಶ್ಯ ಕಂಡಿತು. ಸರಿಗೆಯು ಗೊಂಬೆಯ ಹೃದಯ ಭಾಗವನ್ನು ತಲುಪುತ್ತದೆ. ಅದರ ಇನ್ನೊಂದು ತುದಿ ಹೊರಗೆ ಬರಲೇ ಇಲ್ಲ! ಒಂದೇ ಒಂದು ಸಲ ಬಾಯಿ ತೆಗೆದು, ಏನೋ ಹೇಳಿತೋ ಇಲ್ಲವೋ ಎನ್ನುವ ಸ್ಥಿತಿಯಲ್ಲಿ ಗೊಂಬೆ ಸಭಿಕರನ್ನು ನೋಡಹತ್ತಿತು!

ನಾವು ಪ್ರತಿಯೊಬ್ಬರು ಆಲಿಸುವಿಕೆ (ಕೇಳಿಸಿಕೊಳ್ಳುವಿಕೆ)ಯಲ್ಲಿ ಹೆಚ್ಚುಕಡಿಮೆ ಈ ಮೂರು ಗೊಂಬೆಗಳಂತೆಯೆ ಇರುವವರು. ಕೆಲವರು ಮೊದಲನೆ ಗೊಂಬೆಯ ತೆರದಿ ಎಷ್ಟೆಷ್ಟೋ ಮಾತನಾಡುವವರು, 'ಕೇಳಿಸಿ'ಕೊಳ್ಳುವವರು. ಹೊರಗಿನಿಂದ ಬಂದದ್ದನ್ನು, ನೋಡಿದ್ದನ್ನು, ಕೇಳಿದ್ದನ್ನು ಹಾಗೆಯೇ ತೂರಿಬಿಡುವವರು. ಅವರ ಮಾತು ಮತ್ತು ಆಲಿಸುವಿಕೆ ಮೇಲ್ಮೇಲೆ ಮತ್ತು ಜಾಳುಜಾಳು. ಅವರಲ್ಲೂ ಉಳಿಯಲ್ಲ, ಬೇರೆಯವರಿಗೂ ಕೊಡಲ್ಲ. ಎರಡನೆಯ ಗೊಂಬೆಯ ಆಲಿಸುವಿಕೆ ಬುದ್ಧಿಮಟ್ಟಕ್ಕೆ ಬಂದರೂ, ಅತಿರೇಕದ ವಿಶ್ಲೇಷಣೆ, ವಿಚಾರ ಮಂಥನದಿಂದಾಗಿ ಮಾತಿನಲ್ಲೇ ಮುಗಿಯುವಂಥದ್ದು. ಕೇಳಿಸಿಕೊಂಡದ್ದು ಒಂದಾದರೆ, ಅದರ ಹತ್ತು ಪಟ್ಟು ಮಾತಿನಲ್ಲಿ ಮುಗಿಸುವವರು ಅವರು. ಈ ಗುಂಪಿನವರು ಬುದ್ಧಿವಂತರು, ವಿಚಾರವಂತರು. ಅಲ್ಪಸ್ವಲ್ಪ ನಿಯಮ, ನಿಯಂತ್ರಣದ ಮೂಲಕ ಇವರು ಮುಖ್ಯವಾಹಿನಿಗೆ ಬಂದು ತಮ್ಮ ಕೊಡುಗೆ ನೀಡಬಲ್ಲರು.

ಮೂರನೆಯ ಗೊಂಬೆಯ ಆಲಿಸುವಿಕೆಯ ಮಾದರಿ ಆದರ್ಶಪ್ರಾಯವಾದುದು. ಹೃದಯ ಕೇಂದ್ರಿತ ಮಾತು, ಮನಸ್ಸು, ಸಂವಹನ, ಸಂಭಾಷಣೆ ನಮ್ಮಲ್ಲೇ ಇದ್ದು ಹೊರಗೆ ಅದರ ಘಮಲನ್ನು ಬೀರುವಂಥದ್ದು. ನಾವು ಕೇಳುವ ವಿಷಯಗಳು ಏನೇ ಇರಲಿ, ಹೇಗೇ ಇರಲಿ ಅವು ನಮ್ಮಲ್ಲೇ ಇರಲಿ, ಕರಗಿ. ಗೊಂಬೆ ಒಂದೇ ಸಲ ಬಾಯ್ಬಿಟ್ಟು ಹೇಳಿದ್ದೇನಿರಬಹುದು ಗೊತ್ತೆ? ''ನಾನು ನೋಡಿದ್ದು, ಕೇಳಿದ್ದು, ಅರ್ಥೈಸಿದ್ದು ಸರೀನೂ ಇರಬಹುದು, ಅಸಂಬದ್ಧವಾಗಿಯೂ ಇರಬಹುದು, ತಪ್ಪೂ ಇದ್ದಿರಬಹುದು. ನಾನು ಇನ್ನೊಮ್ಮೆ ಪರಿಶೀಲಿಸುವೆ, ನನ್ನ ಮಾತಿನಿಂದ ಯಾರಿಗಾದರೂ ಸಹಾಯವಾಗುವುದಿದ್ದರೆ ಮಾತನಾಡುವೆ. ಇಲ್ಲದಿದ್ದರೆ, ನಾನು ಇನ್ನೊಮ್ಮೆ ಬಾಯಿ ತೆಗೆಯಲಾರೆ''.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮಯೂರ ವರ್ಮನ ವಂಶ (3)
4. ಮೀನಿನ ಉಸಿರಾಡುವ ಅಂಗ (3)
6. ಚಾಡಿಮಾತಿಗೆ ಒಲಿಯುವ ಸ್ವಭಾವಕ್ಕೆ ಒಪ್ಪುವ ನುಡಿಗಟ್ಟಿನಲ್ಲಿ ಒಂದು ಲೋಹವೂ ಇದೆ (5)
7. ಸಂಭ್ರಮವು ಮತ್ತೊಂದು ಹಾರದ ನಡುವೆ ಇದೆ (4)
9. ಹಾಡುವವನು, ಗಾಯಕ (4)
11. ಆರಂಭದಲ್ಲಿ ಹ್ರಸ್ವವಾಗಿ ಬಂದಿರುವ ವಿಷ್ಣು (3)
12. ದಿವಸವು ರತ್ನದೊಂದಿಗೆ ಸೇರಿದರೆ ಸಿಗುವ ಸೂರ್ಯ (4)
14. ಅರಮನೆಯಲ್ಲ, ಕಾರಾಗೃಹ (4)
18. ಹೇಳಿದ್ದು ಅಥವಾ ಓದಿದ್ದು ಅರ್ಥವಾಗು ಎಂಬರ್ಥದ ನುಡಿಗಟ್ಟು (5)
20. ಜನರ ನಡುವೆ ಜೋಪಾನ (3)
21. ಹಿಂತಿರುಗು ಎನ್ನುವ ಉಸುಕು (3)

ಮೇಲಿಂದ ಕೆಳಕ್ಕೆ

1. ತೊಂದರೆ ಅಥವಾ ಶ್ರಮ (2)
2. ಹೊರಗಿನದು (4)
3. ಆಕರ್ಷಣೆ (3)
4. ತಲ್ಲೀನತೆಯಿಂದ ಕೇಳು ಎಂದರ್ಥ (4)
5. ಭಯಂಕರನಾಗಿರುವ ಶಿವ (2)
7. ಆದಿಕಾಲದಿಂದ ಇರುವ ಒಂದು ಬಗೆಯ ವಾದ್ಯ (3)
8. ಚೆಲುವೆಯೂ, ಹೆಂಡತಿಯೂ (3)
9. ತೇವವಾಗಿರುವ ಸ್ಥಳಗಳಲ್ಲಿ ಬೆಳೆಯುವ ಪಾಚಿ (3)
10. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು (3)
13. ಆತನ ಕುಲ (4)
15. ಮಡಿ ಹೆಂಗಸರು ಉಡುವ ಕೆಂಬಣ್ಣದ ವಸ್ತ್ರ ತಲೆಕೆಳಗಾಗಿದೆ (4)
16. ಅಸ್ತವ್ಯಸ್ತವಾಗಿ ಬಂದಿರುವ ಒಂದು ಸಿಹಿತಿಂಡಿ (3)
17. ಮತ್ತೊಬ್ಬ ತಾತನ ಒತ್ತು ಕಳೆದರೆ ಸಿಗುವ ಆಡು (2)
19. ಎರಡಕ್ಷರದ ಜವಾನ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ಕದಂಬ 4.ಕಿವಿರು 6.ಹಿತ್ತಾಳೆಕಿವಿ 7.ಸಡಗರ 9.ಹಾಡುಗಾರ 11.ಮಧವ 12.ದಿನಮಣಿ 14.ಸೆರೆಮನೆ 18.ತಲೆಗೆಹಿಡಿ 20.ಜತನ 21.ಮರಳು

ಮೇಲಿಂದ ಕೆಳಕ್ಕೆ: 1.ಕಷ್ಟ 2.ಬಹಿರಂಗ 3.ಸೆಳೆತ 4.ಕಿವಿಕೊಡು 5.ರುದ್ರ 7.ಸನಾದಿ 8.ರಮಣಿ 9.ಹಾವಸೆ 10.ರವಾನೆ 13.ಮನೆತನ 15.ರೆಸೀಡಿಮ 16.ಹೋಗೆಳಿ 17.ಅಜ 19.ಆಳು

ರಾಮಚರಿತ ಮಾನಸ: ಸೇತುಬಂಧನದ ಕಲ್ಲುಗಳನ್ನೂ ತೇಲಿಸಿದ ಭಕ್ತಿಯ ಪವಾಡ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸಮುದ್ರರಾಜನ ಅಹಂಕಾರ ಕರಗಿತ್ತು. ಜಗತ್ತನ್ನೇ ಆಳುವ ರಾಮನ ಸೈನ್ಯಕ್ಕೆ ದಾರಿ ಮಾಡಿಕೊಡಲು ಸಾಗರವು ಶಾಂತವಾಗಿ ನಿಂತಿತ್ತು. ಶ್ರೀರಾಮನು ನಲ ಮತ್ತು ನೀಲರನ್ನು ಕರೆದು ಸೇತುವೆಯ ನಿರ್ಮಾಣಕ್ಕೆ ಆದೇಶಿಸಿದನು. ಬ್ರಹ್ಮನ ವರದಿಂದ ಹಾಗೂ ಋಷಿಗಳ ಶಾಪದ ಫಲವಾಗಿ ಅವರ ಕೈ ಸೋಂಕಿದ ವಸ್ತುಗಳು ನೀರಿನಲ್ಲಿ ತೇಲುವ ಶಕ್ತಿ ಪಡೆದಿದ್ದವು. ಸಮುದ್ರದ ದಂಡೆಯ ಮೇಲೆ ನಿಂತು ಹನುಮಂತ, ಅಂಗದ, ಜಾಂಬವಂತ ಮತ್ತು ಲಕ್ಷ್ಮಣರು ವಾನರ ಸೈನ್ಯಕ್ಕೆ ಮಾರ್ಗದರ್ಶನ ನೀಡಿದರು. 'ಜೈ ಶ್ರೀರಾಮ್' ಎಂಬ ಘೋಷಣೆ ಆಕಾಶವನ್ನೇ ಮುಟ್ಟುತ್ತಿತ್ತು. ಲಕ್ಷಾಂತರ ವಾನರರು ಬೆಟ್ಟದ ಗಾತ್ರದ ಬಂಡೆಗಳನ್ನು ಹೊತ್ತು ತರುತ್ತಿದ್ದರು.

ಸೇತುವೆಯ ನಿರ್ಮಾಣದ ವೇಳೆ ಒಂದು ಅದ್ಭುತ ನಡೆಯಿತು. ನಲ ಮತ್ತು ನೀಲರು ಕಲ್ಲುಗಳನ್ನು ಜೋಡಿಸುತ್ತಿದ್ದರೆ, ವಾನರರು ಪ್ರತಿಯೊಂದು ಕಲ್ಲಿನ ಮೇಲೆ 'ರಾಮ' ಎಂಬ ಹೆಸರನ್ನು ಕೆತ್ತುತ್ತಿದ್ದರು. ವಿಜ್ಞಾನದ ನಿಯಮಗಳನ್ನು ಮೀರಿ, ಭಾರವಾದ ಆ ಶಿಲೆಗಳು ನೀರಿನಲ್ಲಿ ಹಗುರವಾಗಿ ತೇಲತೊಡಗಿದವು. ರಾಮನಾಮದ ಶಕ್ತಿ ಅಂಥದ್ದು; ಸಂಸಾರ ಸಾಗರದಲ್ಲಿ ಮುಳುಗುವ ಆತ್ಮಗಳನ್ನು ಪಾರು ಮಾಡುವ ಆ ನಾಮವು, ನಿರ್ಜೀವ ಕಲ್ಲುಗಳನ್ನೂ ಸಮುದ್ರದ ಮೇಲೆ ತೇಲಿಸಿತು! ತುಳಸೀದಾಸರು ಈ ಸಂದರ್ಭದ ಭಕ್ತಿಯನ್ನು ಹೀಗೆ ವರ್ಣಿಸುತ್ತಾರೆ:

ಜಾಮವಂತ ಕೆ ಬಚನ ಸುಹಾಏ । ಸುನಿ ಹನುಮಂತ ಹೃದಯ ಅತಿ ಭಾಏ ॥
ರಾಮ ಕಾಜು ಕರಿಬೆ ಕೊ ಆತುರ । ಹರಿಷಿ ಚಲೆಉ ಹನುಮಾನ ಅತಿ ಆತುರ ॥

• **ಭಾವಾರ್ಥ:** ರಾಮನ ಕಾರ್ಯವನ್ನು ಪೂರೈಸಲು ಹನುಮಂತನು ಎಷ್ಟೊಂದು ಆತುರನಾಗಿದ್ದನೆಂದರೆ, ಪ್ರತಿಯೊಂದು ಕ್ಷಣವೂ ರಾಮ ಸೇವೆಯಲ್ಲಿ ಕಳೆಯಬೇಕು ಎಂಬ ಹಂಬಲ ಅವನದಾಗಿತ್ತು. ಇಡೀ ಸೈನ್ಯವು ಒಂದೇ ಮನಸ್ಸಿನಿಂದ ಭಗವಂತನ ಸೇವೆಗೆ ಕಟಿಬದ್ಧವಾಗಿತ್ತು.

ಸೇತುವೆಯ ಕೆಲಸ ನಡೆಯುತ್ತಿರುವಾಗ, ಶ್ರೀರಾಮನು ಅಹಂಕಾರ ಪಡಲಿಲ್ಲ. ಬದಲಾಗಿ, ತಾನು ಕೈಗೊಂಡ ಕಾರ್ಯವು ನಿರ್ವಿಘ್ನವಾಗಿ ಸಾಗಲು ಅಲ್ಲಿಯೇ ಸಮುದ್ರ ತೀರದಲ್ಲಿ ಮರಳಿನಿಂದ ಶಿವಲಿಂಗವನ್ನು ಸ್ಥಾಪಿಸಿ ಪೂಜಿಸಿದನು. ಅದೇ ಇಂದು ನಾವು ಕಾಣುವ ಪವಿತ್ರ 'ರಾಮೇಶ್ವರ'. ''ರಾಮನಿಗೆ ಈಶ್ವರನೇ ದೈವ, ಈಶ್ವರನಿಗೆ ರಾಮನೇ ದೈವ'' ಎಂಬ ಅದ್ವೈತ ತತ್ವಕ್ಕೆ ಇದು ಸಾಕ್ಷಿಯಾಯಿತು. ಶತ್ರುವಿನ ನಾಶಕ್ಕಿಂತ ಮೊದಲು ತನ್ನ ಅಂತರಂಗದ ಶಕ್ತಿಯನ್ನು



ಜಾಗೃತಗೊಳಿಸುವುದು ರಾಮನ ಗುಣವಾಗಿತ್ತು.

ಐದು ದಿನಗಳ ಸತತ ಪರಿಶ್ರಮದ ನಂತರ, ನೂರು ಯೋಜನ ವಿಸ್ತೀರ್ಣದ ಭವ್ಯ ಸೇತುವೆಯು ಸಿದ್ಧವಾಯಿತು. ಇದು ಕೇವಲ ಕಲ್ಲುಗಳ ಸೇತುವೆಯಾಗಿರಲಿಲ್ಲ, ಜತೆಗೆ 'ಧರ್ಮ' ಮತ್ತು 'ಅಧರ್ಮ'ದ ನಡುವಿನ ಸಂಪರ್ಕ ಕೊಂಡಿಯಾಗಿತ್ತು. ವಾನರ ಸೈನ್ಯವು ಹರ್ಷೋದ್ಗಾರದೊಂದಿಗೆ ಸೇತುವೆಯ ಮೇಲೆ ಹೆಜ್ಜೆ ಇಟ್ಟಿತು. ರಾಮನು ತನ್ನ ಧನುಸ್ಸನ್ನು ಹಿಡಿದು ಮುಂದೆ ನಡೆದರೆ, ಸೈನ್ಯವು ಜಯಘೋಷ ಹಾಕುತ್ತಾ ಲಂಕೆಯ ದ್ವಾರವನ್ನು ತಲುಪಿತು.

ದೂರದಲ್ಲಿ ಲಂಕೆಯ ಉತ್ತುಂಗ ಗೋಪುರಗಳು ಕಾಣಿಸುತ್ತಿದ್ದವು. ಅಲ್ಲಿ ರಾವಣನ ಅಹಂಕಾರದ ಅರಮನೆ ಇತ್ತು, ಇಲ್ಲಿ ರಾಮನ ಭಕ್ತಿಯ ಸೈನ್ಯವಿತ್ತು. ಸಮುದ್ರವನ್ನು ದಾಟಿದ ಸೈನ್ಯವು ಈಗ ಲಂಕೆಯ ಸುಬ್ರೇಲ ಪರ್ವತದ ಮೇಲೆ ಬೀಡುಬಿಟ್ಟಿತು. ರಾಮನು ಎತ್ತರದ ಶಿಖರದ ಮೇಲೆ ನಿಂತು ಲಂಕೆಯನ್ನು ನೋಡಿದಾಗ, ಅವನ ಕಣ್ಣಲ್ಲಿ ಯುದ್ಧದ ಕ್ರೌರ್ಯವಿರಲಿಲ್ಲ, ಬದಲಾಗಿ ಸೀತೆಯನ್ನು ಮುಕ್ತಗೊಳಿಸುವ ಹಾಗೂ ಲೋಕಕ್ಕೆ ಶಾಂತಿ ತರುವ ಕರುಣೆಯಿತ್ತು.

ನಮ್ಮ ಜೀವನದಲ್ಲೂ ಕಷ್ಟಗಳು ಸಮುದ್ರದಂತೆ ಎದುರಾದಾಗ, ನಂಬಿಕೆ ಎಂಬ ಕಲ್ಲಿನ ಮೇಲೆ ಭಕ್ತಿ ಎಂಬ ಹೆಸರನ್ನು ಕೆತ್ತಿದರೆ ಸಾಕು; ಆ ಕಷ್ಟಗಳೇ ನಮ್ಮನ್ನು ಯಶಸ್ಸಿನ ಕಡೆಗೆ ತೇಲಿಸಿ ಕರೆದೊಯ್ಯುತ್ತವೆ. ಸಣ್ಣ ಅಳಿಲು ಕೂಡ ಸೇತುವೆ ನಿರ್ಮಾಣಕ್ಕೆ ತನ್ನ ಶಕ್ತ್ಯಾನುಸಾರವಾಗಿ ಮರಳನ್ನು ತಂದು ಹಾಕಿದಂತೆ, ನಮ್ಮ ಸಣ್ಣ ಪ್ರಯತ್ನಗಳೂ ಭಗವಂತನ ಕಾರ್ಯದಲ್ಲಿ ದೊಡ್ಡ ಫಲವನ್ನೇ ನೀಡುತ್ತವೆ.

ಶ್ರೀರಾಮಚಂದ್ರ, ಚರಣೌ ಶರಣಂ ಪ್ರಪದ್ಯೇ...

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	7	6	0	13
ಬೆಂಗಳೂರು	8	6	2	12
ಹೈದರಾಬಾದ್	8	5	3	10
ರಾಜಸ್ಥಾನ್	8	5	3	10
ಗುಜರಾತ್	8	4	4	8
ಚೆನ್ನೈ	8	3	5	6
ಡೆಲ್ಲಿ	8	3	5	6
ಕೋಲ್ಕತಾ	8	2	5	5
ಮುಂಬೈ	7	2	5	4
ಲಖನೌ	8	2	6	4

ಹೇಜಲ್‌ವುಡ್, ಭುವನೇಶ್ವರ್ ಮಾರಕ ಬೌಲಿಂಗ್ ದಾಳಿ | ತವರಿನಲ್ಲಿ ಅಕ್ಷರ್ ತಂಡದ ನೀರಸ ಬ್ಯಾಟಿಂಗ್

ಡೆಲ್ಲಿ ಕೋಟೆಯಲ್ಲಿ ಆರ್‌ಸಿಬಿ ಗೆಲುವಿನ ಕೇಕೆ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ಬೌಲರ್‌ಗಳ ಮುಂದೆ ಮಂಡಿಯೂರಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಕೇವಲ 75 ರನ್‌ಗಳಿಗೆ ಆಲೌಟ್ ಆಗಿದ್ದು, 76 ರನ್‌ಗಳ ಗೆಲುವಿನ ಗುರಿ ಪಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕೇವಲ 6.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ ಗೆಲುವಿನ ಗುರಿ ತಲುಪಿ 9 ವಿಕೆಟ್‌ಗಳ ಭರ್ಜರಿ ಗೆಲುವನ್ನು ಪಡೆಯಿತು.

ಪಂದ್ಯ ಗೆಲ್ಲಲು 76 ರನ್‌ಗಳ ಸುಲಭ ಗುರಿ ಪಡೆದ ಆರ್‌ಸಿಬಿ ಪರ ಜೇಕಬ್ ಬೆಥೆಲ್ ಮತ್ತು ವಿರಾಟ್ ಕೊಹ್ಲಿ ಇನ್ನಿಂಗ್ಸ್ ಆರಂಭಿಸಿದರು. ತಂಡದ ಮೊತ್ತ 26 ರನ್ ಆಗಿದ್ದಾಗ 11 ಬಾಲ್‌ನಲ್ಲಿ 20 ರನ್ ಗಳಿಸಿದ್ದ ಬೆಥೆಲ್ ಔಟ್ ಆದರು.

ಬಳಿಕ ದೇವದತ್ ಪಡಿಕ್ಕಲ್-ಕೊಹ್ಲಿ ಜತೆಯಾಟ ಮುಂದುವರಿಯಿತು. ಕೊಹ್ಲಿ 15 ಬಾಲ್‌ಗಳಲ್ಲಿ 23 ರನ್ ಮತ್ತು ಪಡಿಕ್ಕಲ್ 13 ಬಾಲ್‌ಗಳಲ್ಲಿ 34 ರನ್ ಗಳಿಸಿ ಅಜೇಯರಾಗಿ ಉಳಿದರು. ಆರ್‌ಸಿಬಿ 6.3 ಓವರ್‌ಗಳಲ್ಲಿ ಕೇವಲ 1 ವಿಕೆಟ್ ಕಳೆದುಕೊಂಡು ಪಂದ್ಯವನ್ನು ಭರ್ಜರಿಯಾಗಿ ಗೆದ್ದುಕೊಂಡಿತು.

ಆರ್‌ಸಿಬಿ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ಆಯ್ಕೆ ಮಾಡಿಕೊಂಡಿತು, ಆ ನಿರ್ಧಾರ ಆರ್‌ಸಿಬಿ ಪಾಲಿಗೆ ಸರಿ ಹೊಂದಿತು. ಭುವನೇಶ್ವರ್ ಕುಮಾರ್-ಜೋಶ್ ಹೇಜಲ್‌ವುಡ್ ಜೋಡಿ ಕೇವಲ 4 ಓವರ್‌ಗಳಲ್ಲಿ ಡೆಲ್ಲಿ ತಂಡದ 6 ಬ್ಯಾಟರ್‌ಗಳನ್ನು ಔಟ್ ಮಾಡಿದರು.

ಆರ್‌ಸಿಬಿ ಪರ ಹೇಜಲ್‌ವುಡ್ 4 ವಿಕೆಟ್ ಮತ್ತು ಭುವನೇಶ್ವರ್ ಕುಮಾರ್ 3 ವಿಕೆಟ್ ಪಡೆದು ಡೆಲ್ಲಿ ತಂಡದ ಬ್ಯಾಟಿಂಗ್ ಬೆನ್ನೆಲುಬನ್ನು ಮುರಿದರು. ಡೆಲ್ಲಿ ತಂಡದ ಪರ ಅಭಿಷೇಕ್ ಪೊರೆಲ್ 30 ರನ್ ಗಳಿಸಿ ಟಾಪ್ ಸ್ಕೋರರ್ ಎನಿಸಿಕೊಂಡರು. ಉಳಿದ

ಭುವನೇಶ್ವರ್ ಕುಮಾರ್‌ಗೆ 3 ವಿಕೆಟ್.

ಯಾವುದೇ ಡೆಲ್ಲಿ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲು ಸಾಧ್ಯವಾಗಲಿಲ್ಲ.

ಡೆಲ್ಲಿ ತಂಡದ ಆರಂಭಿಕ ಆಟಗಾರ ಸಾಹಿಲ್


4 ವಿಕೆಟ್ ಪಡೆದ ಹೇಜಲ್‌ವುಡ್.

ಪರಖ್ ಯಾವುದೇ ರನ್ ಗಳಿಸುವಲ್ಲಿ ವಿಫಲರಾದರು. ಎರಡನೇ ಬಾಲ್‌ನಲ್ಲಿ ಅವರು ಭುವನೇಶ್ವರ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಆ ನಂತರ ಮುಂದಿನ ಓವರ್‌ನಲ್ಲೇ ತಂಡದ ಸ್ಕೋರ್ 2 ರನ್ ಆಗಿದ್ದ ವೇಳೆ ಕೇಲವ 1 ರನ್ ಗಳಿಸಿದ್ದ ಕೆಎಲ್ ರಾಹುಲ್ ಹೇಜಲ್‌ವುಡ್‌ಗೆ ವಿಕೆಟ್ ಒಪ್ಪಿಸಿದರು.

ಬಳಿಕ ಯಾವುದೇ ರನ್ ಗಳಿಸದ ಸಮೀರ್ ರಿಝ್ವಿಯವರು ಹೇಜಲ್‌ವುಡ್ ಬೌಲಿಂಗ್‌ನಲ್ಲೇ ವಿಕೆಟ್ ಕಳೆದುಕೊಂಡರು. 5 ರನ್ ಗಳಿಸಿದ್ದ ಟ್ರಿಸ್ಟನ್ ಸ್ಟಬ್ಸ್ 5 ರನ್ ಗಳಿಸಿದ್ದ ವೇಳೆ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಪಡಿಕ್ಕಲ್‌ಗೆ ಕ್ಯಾಚ್ ನೀಡಿ ಔಟ್ ಆದರು. ಡೆಲ್ಲಿ ತಂಡದ ನಾಯಕ ಅಕ್ಷರ್ ಪಟೇಲ್ ಯಾವುದೇ ರನ್ ಗಳಿಸದೆ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಜಿತೇಶ್ ಶರ್ಮಾಗೆ ಕ್ಯಾಚ್ ನೀಡಿ ಔಟ್ ಆದರು.

ಡೆಲ್ಲಿ ಪರ ಅಭಿಷೇಕ್ ಪೊರೆಲ್ ಮಾತ್ರ ಆರ್‌ಸಿಬಿ ಬೌಲರ್‌ಗಳ ವಿರುದ್ಧ ಸ್ವಲ್ಪ ಮಟ್ಟಿಗೆ ಪ್ರತಿರೋಧ ತೋರಿದರು. ಅವರು 33 ಬಾಲ್‌ಗಳನ್ನು ಎದುರಿಸಿ 3 ಬೌಂಡರಿಗಳ ಸಹಿತ 30 ರನ್ ಮಾಡುವಲ್ಲಿ ಯಶಸ್ವಿಯಾದರು. ಡೇವಿಡ್ ಮಿಲ್ಲರ್ 18 ಬಾಲ್‌ಗಳನ್ನು ಎದುರಿಸಿ 19 ರನ್ ಗಳಿಸಿ ರಸಿಖ್ ಸಲಾಮ್ ಬೌಲಿಂಗ್‌ನಲ್ಲಿ ಔಟ್ ಆದರು. ಜೇಮಿಸನ್ 13 ಬಾಲ್‌ಗಳಲ್ಲಿ 12 ರನ್ ಗಳಿಸಿದರು. ಕುಲದೀಪ್ ಯಾದವ್ 3 ರನ್ ಗಳಿಸಿದರೆ, ಚಮೀರ ಯಾವುದೇ ರನ್ ಗಳಿಸದೆ ಅಜೇಯರಾಗುಳಿದರು. ಡೆಲ್ಲಿ ತಂಡವು 16.3 ಓವರ್‌ಗಳಲ್ಲಿ 75 ರನ್‌ಗಳಿಗೆ ಆಲೌಟ್ ಆಯಿತು.

ಆರ್‌ಸಿಬಿ ಹೊಸ ದಾಖಲೆ

ಐಪಿಎಲ್ ಇತಿಹಾಸದಲ್ಲೇ ಆರ್‌ಸಿಬಿ ಸೋಮವಾರ ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಹೊಸ ದಾಖಲೆಯನ್ನು ಮಾಡಿತು. ಮೊದಲ ಪವರ್ ಪ್ಲೇನಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನ ನೀಡುವ ಮೂಲಕ ತಂಡವು ಇತಿಹಾಸ ಸೃಷ್ಟಿಸಿತು. ಮೊದಲ ಪವರ್ ಪ್ಲೇನಲ್ಲಿ ಅತೀ ಕಡಿಮೆ ರನ್‌ಗಳಿಗೆ 6 ವಿಕೆಟ್ ಪಡೆದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಆರ್‌ಸಿಬಿ ಪಾತ್ರವಾಯಿತು. ಇದಕ್ಕೂ ಮುನ್ನ ಐಪಿಎಲ್ 2011 ರಲ್ಲಿ ಕೊಚ್ಚಿ ಟಸ್ಕರ್ಸ್ ವಿರುದ್ಧ ಡೆಕ್ಕನ್ ಚಾರ್ಜರ್ಸ್ 6 ರನ್‌ಗಳಿಗೆ 5 ವಿಕೆಟ್ ಕಬಳಿಸಿತ್ತು. ಸೋಮವಾರ ಆರ್‌ಸಿಬಿ ಕೇವಲ 8 ರನ್ 6 ವಿಕೆಟ್ ಉರುಳಿಸಿ ದಾಖಲೆ ಮಾಡಿದೆ.

ಸ್ಕೋರ್ ಬೋರ್ಡ್

ಡೆಲ್ಲಿ 75/10 16.3 ಓವರ್

ಬ್ಯಾಟರ್		ರನ್	ಎಸೆತ	4s	6s
ಸಾಹಿಲ್	ಬಿ ಕುಮಾರ್	0	2	0	0
ರಾಹುಲ್	ಸಿ ಶರ್ಮಾ, ಬಿ ಹ್ಯಾಜಲ್‌ವುಡ್	1	3	0	0
ನಿತೀಶ್	ಸಿ ಪಡಿಕ್ಕಲ್, ಬಿ ಹ್ಯಾಜಲ್‌ವುಡ್	1	9	0	0
ರಿಜ್ವಿ	ಸಿ ಶರ್ಮಾ, ಬಿ ಹೇಜಲ್‌ವುಡ್	0	1	0	0
ಸ್ಟಬ್ಸ್	ಸಿ ಪಡಿಕ್ಕಲ್, ಬಿ ಕುಮಾರ್	5	3	1	0
ಅಕ್ಷರ್	ಸಿ ಶರ್ಮಾ, ಬಿ ಕುಮಾರ್	0	3	0	0
ಪೊರೆಲ್	ಬಿ ಹೇಜಲ್‌ವುಡ್	30	33	3	0
ಮಿಲ್ಲರ್	ಸಿ ಶರ್ಮಾ, ಬಿ ಡಾರ್	19	18	3	0
ಜೇಮಿಸನ್	ಎಲ್‌ಬಿಡಬ್ಲ್ಯು, ಬಿ ಪಾಂಡ್ಯ	12	13	1	1
ಕುಲದೀಪ್	ಬಿ ಶರ್ಮಾ	3	11	0	0
ಚಮೀರ	ನಾಟ್ ಔಟ್	0	3	0	0

ಬೌಲಿಂಗ್ ಬೆಂಗಳೂರು

ಬೌಲರ್	ಓವರ್	ಮೆಡನ್	ರನ್	ವಿಕೆಟ್
ಭುವನೇಶ್ವರ್	3	0	5	3
ಹೇಜಲ್‌ವುಡ್	3.3	0	12	4
ರಾಸಿಖ್	2	0	21	1
ಶೆಫರ್ಡ್	2	0	21	0
ಸುಯಶ್	4	0	7	1
ಕೃನಾಲ್	2	0	9	1

ವಿಕೆಟ್ ಪತನ : 1-0, , 2-2, 3-2, 4-7, 5-7, 6-8, 7-43, 8-62, 9-71, 10-75

ಬೆಂಗಳೂರು 77/1 6.3 ಓವರ್

ಬ್ಯಾಟರ್		ರನ್	ಎಸೆತ	4s	6s
ಬೆಥೆಲ್	ಸಿ ನಟರಾಜನ್, ಬಿ ಜೇಮಿಸನ್	20	11	1	2
ಕೊಹ್ಲಿ	ನಾಟ್ ಔಟ್	23	15	1	2
ಪಡಿಕ್ಕಲ್	ನಾಟ್ ಔಟ್	34	13	3	3

ಬೌಲಿಂಗ್ ಡೆಲ್ಲಿ

ಬೌಲರ್	ಓವರ್	ಮೆಡನ್	ರನ್	ವಿಕೆಟ್
ಜೇಮಿಸನ್	3	0	42	1
ಚಮೀರ	2	0	18	0
ಅಕ್ಷರ್	1	0	5	0
ನಟರಾಜನ್	0.3	0	12	0

ವಿಕೆಟ್ ಪತನ: 1-26

ಪ್ಲೇಯರ್ ಆಫ್ ದಿ ಮ್ಯಾಚ್
ಹೇಜಲ್‌ವುಡ್ (ಬೆಂಗಳೂರು)

ಸಮಾಚಾರ ಸಣ್ಣದಲ್ಲ

ರಘುವಂಶಿಗೆ ದಂಡ

ಲಖನೌ: ಭಾನುವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ವಿವಾದಾತ್ಮಕ ಔಟ್ ಬಗ್ಗೆ ಪ್ರತಿಕ್ರಿಯಿಸಿದ ನಂತರ ಕೋಲ್ಕತಾ ನೈಟ್ ರೈಡರ್ಸ್ ಬ್ಯಾಟ್ಸ್‌ಮನ್ ಅಂಗ್‌ಕ್ರಿಶ್ ರಘುವಂಶಿ ಅವರಿಗೆ ಪಂದ್ಯ ಶುಲ್ಕದ 20 ಪ್ರತಿಶತ ದಂಡ ವಿಧಿಸಲಾಗಿದೆ. ಲೀಗ್‌ನ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ಅವರಿಗೆ ಒಂದು ಡಿಮೆರಿಟ್ ಪಾಯಿಂಟ್ ಕೂಡ ಸಿಕ್ಕಿದೆ. ಐಪಿಎಲ್ ಆಡಳಿತ ಮಂಡಳಿ ಅಧಿಕೃತ ಹೇಳಿಕೆಯಲ್ಲಿ ಈ ಕುರಿತು ತಿಳಿಸಿದೆ. ಕೆಕೆಆರ್ ಬ್ಯಾಟಿಂಗ್ 5ನೇ ಓವರ್‌ನ ಕೊನೆಯ ಎಸೆತದಲ್ಲಿ ಚೆಂಡನ್ನು ಮಿಡ್‌ಆನ್ ಕಡೆ ಬಾರಿಸಿ ಒಂದು ರನ್ ಕದಿಯಲು ಯತ್ನಿಸಿದ ರಘುವಂಶಿ, ಇನ್ನೊಂದು ತುದಿಯಲ್ಲಿದ್ದ ಕ್ಯಾಮರೂನ್ ಗ್ರೀನ್ ಓಟವನ್ನು ತಿರಸ್ಕರಿಸಿದ ಕಾರಣ ಮತ್ತೆ ಕ್ರೀಸ್‌ನತ್ತ ಹಿಂದಿರುಗಿ ಓಡಿದರು. ಆದರೆ ಕ್ಷೇತ್ರ ರಕ್ಷಕ ಶಮಿ ಎಸೆದ ಚೆಂಡು ರಘುವಂಶಿ ಕಾಲಿಗೆ ತಗಲಿದಾಗ, ಲಖನೌ ತಂಡದ ನಾಯಕ ಪಂತ್ ಹಾಗೂ ಮೊಹಮ್ಮದ್ ಶಮಿ ರನೌಟ್‌ಗಾಗಿ ಮನವಿ ಮಾಡಿದ್ದರು. ಅದನ್ನು ಪರಿಶೀಲಿಸಿದ ಮೂರನೇ ಅಂಪೈರ್, ರಘುವಂಶಿ ಓಡುವಾಗ ತಮ್ಮ ದಿಕ್ಕನ್ನು ಬದಲಿಸಿದ್ದಾರೆ ಎಂಬ ಕಾರಣ ನೀಡಿ ಔಟ್ ಎಂದು ತೀರ್ಪು ನೀಡಿದ್ದರು.

ಶೀಘ್ರ ಮೊಹ್ಸಿನ್ ಭಾರತ ತಂಡಕ್ಕೆ?

ಲಖನೌ: ಕೋಲ್ಕತಾ ವಿರುದ್ಧದ ಭಾನುವಾರದ ಪಂದ್ಯದಲ್ಲಿ ತಮ್ಮ ಚೊಚ್ಚಲ 5 ವಿಕೆಟ್ ಸಾಧನೆ ಮಾಡಿದ್ದ ಲಖನೌ ಸೂಪರ್ ಜಯಂಟ್ಸ್ ತಂಡದ ವೇಗಿ ಮೊಹ್ಸಿನ್ ಖಾನ್ ಅವರನ್ನು ತಂಡದ ಹೆಡ್ ಕೋಚ್ ಜಸ್ಟಿನ್ ಲ್ಯಾಂಗರ್ ಗುಣಗಾನ ಮಾಡಿದ್ದಾರಲ್ಲದೆ, ಅವರ ಬಗ್ಗೆ ದೊಡ್ಡ ಭವಿಷ್ಯ ನುಡಿದಿದ್ದಾರೆ. ಮೊಹ್ಸಿನ್ ಖಾನ್ ಆದಷ್ಟು ಬೇಗ ಭಾರತ ತಂಡದ ಪರ ಆಡಲಿದ್ದಾರೆಂದು ಅವರು ಹೇಳಿದ್ದಾರೆ. ಪಂದ್ಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಸ್ಟಿನ್ ಲ್ಯಾಂಗರ್, ಮೊಹ್ಸಿನ್ ಖಾನ್ ಅವರ ಕ್ರೀಡಾ ಮನೋಭಾವ ಮತ್ತು ಕೆಲಸದ ನೀತಿಯಲ್ಲಿನ ಬೆಳವಣಿಗೆಯ ಬಗ್ಗೆ ಅವರು ಪ್ರತಿಕ್ರಿಯಿಸಿದ್ದಾರೆ. ಈ ಹಂತಕ್ಕೆ ಬರಲು ಅವರು ಚೆನ್ನೈಯಲ್ಲಿರುವ ಭರತ್ ಅವರ ಅಕಾಡೆಮಿಯಲ್ಲಿ ಹಲವು ತಿಂಗಳನ್ನು ಕಳೆಯಿದ್ದಾರೆ. ಹಾಗಾಗಿ ಅವರು ತುಂಬಾ ಪರಿಶ್ರಮ ಪಟ್ಟಿದ್ದಾರೆ ಮತ್ತು ಫಿಟ್ ಆಗಿದ್ದಾರೆ ಎಂದು ಹೇಳಿದರು.



ಲಖನೌಗೆ ಎಲ್ಲ ಪಂದ್ಯಗಳನ್ನು ಗೆಲ್ಲಬೇಕಾದ ದೊಡ್ಡ ಸವಾಲು

ಲಖನೌ: ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಬಲಿಷ್ಠವಾಗಿದ್ದರೂ ಕೂಡ ಕಳಪೆ ಪ್ರದರ್ಶನ ತೋರುವ ಮೂಲಕ ಲಖನೌ ಸೂಪರ್ ಜೈಂಟ್ ತಂಡವು ಹಾಲಿ ಆವೃತ್ತಿಯ ಐಪಿಎಲ್‌ನಲ್ಲಿ ನಿರ್ಗಮನದ ಬಾಗಿಲಿಗೆ ಬಂದು ನಿಂತಿದೆ. ಈವರೆಗೆ ಆಡಿದ 8 ಪಂದ್ಯಗಳಲ್ಲಿ ಕೇವಲ 2 ಗೆಲುವುಗಳನ್ನು ಕಂಡು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ತಲುಪಿದೆ. ಆದರೆ ಲಖನೌ ತಂಡಕ್ಕೆ ಇನ್ನೂ ಪ್ಲೇ ಆಫ್ ಪ್ರವೇಶಿಸುವ ಕೊನೆಯ ಅವಕಾಶವೊಂದಿದೆ.

ಲಖನೌ ತಂಡಕ್ಕೆ ಇನ್ನು 6 ಪಂದ್ಯಗಳು ಬಾಕಿ ಉಳಿದಿವೆ. ಆ ಎಲ್ಲಾ ಲೀಗ್ ಪಂದ್ಯಗಳಲ್ಲಿ ದೊಡ್ಡ ಅಂತರದಿಂದ ಗೆದ್ದರೆ ತಂಡ ಪ್ಲೇಆಫ್‌ಗೆ ಅರ್ಹತೆ ಪಡೆಯುತ್ತದೆ. ಉಳಿದಿರುವ ಎಲ್ಲಾ ಪಂದ್ಯಗಳಲ್ಲಿ ಗೆದ್ದರೆ, ಲೀಗ್ ಹಂತವನ್ನು 16 ಅಂಕಗಳೊಂದಿಗೆ ಮುಗಿಸಬಹುದಾಗಿದ್ದು, ಅದು ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯಲು ಸಾಕಾಗುತ್ತದೆ.

ಒಂದೊಮ್ಮೆ ಲಖನೌ ಮುಂದಿನ ಪಂದ್ಯಗಳಲ್ಲಿ ಒಂದು ಪಂದ್ಯ ಸೋತರೂ ಟೂರ್ನಿಯಿಂದ ಬಹುತೇಕ ಹೊರಬೀಳಲಿದೆ. ತಂಡದದಲ್ಲಿ ಟಿ20 ಸ್ಟಾರ್ ಆಟಗಾರರಿದ್ದರೂ ಕೂಡ ಯಾರು ನಿರೀಕ್ಷಿತ ಪ್ರದರ್ಶನ ತೋರುತ್ತಿಲ್ಲ. ಐಡೆನ್ ಮಾರ್ಕ್ರಮ್, ನಾಯಕ ರಿಷಭ್ ಪಂತ್, ನಿಕೋಲಸ್ ಪೂರನ್, ಮಿಚೆಲ್ ಮಾರ್ಷ್ ಹೀಗೆ ಈ ಆವೃತ್ತಿಯಲ್ಲಿ ವೈಫಲ್ಯ ಕಂಡವರ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ತಂಡದ ಬೌಲಿಂಗ್ ವಿಭಾಗ ಬಲಿಷ್ಠವಾಗಿದ್ದರೂ ಈ ಸಲ ನಿರೀಕ್ಷಿತ ಫಲ ಕಂಡಿಲ್ಲ.

ವೈಭವ್ ಬಗ್ಗೆ ಪಾಕ್ ಕ್ರಿಕೆಟ್ ತಜ್ಞ ತಮಾಷೆ

ಇಸ್ಲಾಮಾಬಾದ್: ವೈಭವ್ ಸೂರ್ಯವಂಶಿ ಬ್ಯಾಟ್‌ನಲ್ಲಿ ಎ.ಐ ಚಿಪ್ ಇರಬಹುದು, ಅವರನ್ನು ಲ್ಯಾಬ್ ಟೆಸ್ಟ್‌ಗೆ ಕಳುಹಿಸಿ ಎಂದು ಪಾಕಿಸ್ತಾನ ಕ್ರಿಕೆಟ್ ತಜ್ಞ ನೌಮನ್ ನಿಯಾಜ್ ಅವರು ತಮಾಷೆಯಾಗಿ ಹೇಳಿದ್ದಾರೆ. ಪಾಕಿಸ್ತಾನದಲ್ಲಿ ನಡೆದ ಆನ್‌ಲೈನ್ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಅವರು, 'ಇತ್ತೀಚಿನ ದಿನಗಳಲ್ಲಿ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ತಮ್ಮ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದಾಗಿ ಎಲ್ಲೆಡೆ ಪ್ರಶಂಸೆ ಪಡೆದಿದ್ದಾರೆ.

ಪಂಜಾಬ್‌ಗಿಂದು ರಾಜಸ್ಥಾನ ಎದುರಾಳಿ

ಮುಲ್ಲನ್‌ಪುರ್: ಇಲ್ಲಿನ ಮಹಾರಾಜ ಯಾದ ವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಐಪಿಎಲ್ 40ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತನ್ನ ತವರಿನಲ್ಲಿ ರಾಜಸ್ಥಾನ್ ರಾಯಲ್ ವಿರುದ್ಧ ಸೆಣಸಲಿದೆ.

ಅದ್ಭುತ ಫಾರ್ಮ್‌ನಲ್ಲಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ತಾನು ಆಡಿದ 7 ಪಂದ್ಯಗಳಿಂದ 6 ಗೆಲುವುಗಳೊಂದಿಗೆ 13 ಪಾಯಿಂಟ್ ಪಡೆದು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ, ಮತ್ತೊಂದೆಡೆ ರಿಯಾನ್ ಪರಾಗ್ ನೇತೃತ್ವದ ರಾಜಸ್ಥಾನ ರಾಯಲ್ಸ್ ತಂಡವು ಆಡಿರುವ 8 ಪಂದ್ಯಗಳ ಪೈಕಿ 5 ಗೆಲುವುಗಳೊಂದಿಗೆ 4ನೇ ಸ್ಥಾನದಲ್ಲಿದೆ.

ಮೊದಲ ಪಂದ್ಯದಲ್ಲಿ ಪಂಜಾಬ್ ಗುಜರಾತ್



ವಿರುದ್ಧ ಗೆಲುವನ್ನು ಸಾಧಿಸಿದರೆ, 2ನೇ ಪಂದ್ಯದಲ್ಲಿ ಅದು ಚೆನ್ನೈ ತಂಡವನ್ನು ಸೋಲಿಸಿತ್ತು. ಕೋಲ್ಕತ್ತಾ ವಿರುದ್ಧದ ಅದರ 3ನೇ ಪಂದ್ಯ ಮಳೆಯಿಂದಾಗಿ

ರದ್ದಾಯಿತು. 4ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ, 5ನೇ ಪಂದ್ಯದಲ್ಲಿ ಮುಂಬೈ ಮತ್ತು 6ನೇ ಪಂದ್ಯದಲ್ಲಿ ಲಖನೌ ಹಾಗೂ 7ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧವೂ ಅದು ಗೆಲುವನ್ನು ಕಂಡಿತ್ತು.

ರಾಜಸ್ಥಾನ್ ರಾಯಲ್ಸ್ ತಂಡವು ತಾನಾಡಿದ ಮೊದಲ ಪಂದ್ಯದಲ್ಲಿ ಚೆನ್ನೈ ವಿರುದ್ಧ ಗೆಲುವು ಪಡೆದರೆ, 2ನೇ ಪಂದ್ಯದಲ್ಲಿ ಅದು ಗುಜರಾತ್, 3ನೇ ಪಂದ್ಯದಲ್ಲಿ ಮುಂಬೈ ವಿರುದ್ಧ, 4ನೇ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧವೂ ಗೆದ್ದಿತ್ತು. ಆದರೆ 5ನೇ ಪಂದ್ಯದಲ್ಲಿ ರಾಜಸ್ಥಾನವು ಹೈದರಾಬಾದ್ ವಿರುದ್ಧ ಮತ್ತು 6ನೇ ಪಂದ್ಯದಲ್ಲಿ ಕೋಲ್ಕತಾ ವಿರುದ್ಧವೂ ಸೋಲೊಪ್ಪಿತು. 7ನೇ ಪಂದ್ಯದಲ್ಲಿ ಅದು ಲಖನೌ ವಿರುದ್ಧ ಜಯಗಳಿಸಿರೆ, 8ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಸೋಲೊಪ್ಪಿಕೊಂಡಿತ್ತು. ಅಯ್ಯರ್ ನಾಯಕತ್ವದ ಪಂಜಾಬ್ ಪಡೆ ಈ ಆವೃತ್ತಿಯಲ್ಲಿ ಯಾವುದೇ ಪಂದ್ಯದಲ್ಲಿ ಸೋತಿಲ್ಲ. ಹಾಗಾಗಿ ತವರಿನಲ್ಲಿ ನಡೆಯುವ ಇಂದಿನ ಪಂದ್ಯ ದಲ್ಲೂ ಗೆಲ್ಲುವ ವಿಶ್ವಾಸವನ್ನೂ ಅದು ಹೊಂದಿದೆ. ಆದರೆ ಪಂಜಾಬ್ ಕೂಡಾ ಈ ಪಂದ್ಯದಲ್ಲಿ ಪೈಪೋಟಿಯ ಪ್ರದರ್ಶನ ನೀಡುವ ತವಕದಲ್ಲಿದೆ.

ಪಿಚ್ ರಿಪೋರ್ಟ್: ನ್ಯೂ ಚಂಡೀಗಢದಲ್ಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಅಂತಾ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಸಾಮಾನ್ಯ ವಾಗಿ ಬ್ಯಾಟಿಂಗ್‌ಸ್ನೇಹಿಯಾಗಿದ್ದು, ಸ್ಕೋರ್‌ಗಳು ಹೆಚ್ಚಾಗಿ 200 ರನ್‌ಗಳ ಗಡಿಯನ್ನು ದಾಟುತ್ತವೆ. ಪಿಚ್‌ನ ಮೇಲ್ಮೈ ಉತ್ತಮ ರೀತಿಯಲ್ಲೇ ಬೌನ್ಸ್ ನೀಡುತ್ತದೆ. ಉಭಯ ತಂಡಗಳ ಬ್ಯಾಟಿಂಗ್ ಬಲಿಷ್ಠ ವಾಗಿರುವ ಕಾರಣ ಪಂದ್ಯದಲ್ಲಿ ದೊಡ್ಡ ಮೊತ್ತ ದಾಖ ಲಾಗುವುದು ಖಚಿತ.

ಇಂದಿನ ಪಂದ್ಯ

ಪಂಜಾಬ್ vs ರಾಜಸ್ಥಾನ

ಸ್ಥಳ	: ಮಹಾರಾಜ ಯಾದವೀಂದ ಕ್ರೀಡಾಂಗಣ, ಮೊಹಾಲಿ
ಸಮಯ	: ರಾತ್ರಿ: 7.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ವಿಟಾಕೀಸ್

ಕನಕಾವತಿಗೆ ಒಲಿದ ಅದೃಷ್ಟ

ಕಾಂತಾರದ ಕನಕಾವತಿ ರುಕ್ಮಿಣಿ ವಸಂತ್ ಈಗ ಬಹುಭಾಷಾ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಕಾಂತಾರ ಚಾಪ್ಟರ್ 1 ರುಕ್ಮಿಣಿಗೆ ಬಿಗ್ ಬ್ರೇಕ್ ನೀಡಿತು. ಹಾಗಾಗಿ ರುಕ್ಮಿಣಿ ಚಿತ್ರರಂಗದ ಬಹು ಬೇಡಿಕೆಯ ನಟಿಯಾಗಿದ್ದಾರೆ. ಹಾಗಂತ ರುಕ್ಮಿಣಿ ಕನ್ನಡ ಚಿತ್ರರಂಗಕ್ಕೆ ಸೀಮಿತವಾಗಿಲ್ಲಿ ಟಾಲಿವುಡ್, ಬಾಲಿವುಡ್ ಸಿನಿಮಾಗಳಲ್ಲಿಯೂ ಅಭಿನಯಿಸುತ್ತಿದ್ದಾರೆ. ಸದ್ಯ ಸಂಗೀತ ಕ್ಷೇತ್ರದ ದಿಗ್ಗಜರಲ್ಲಿ ಒಬ್ಬರಾದ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಬಯೋಪಿಕ್‌ನಲ್ಲಿ ನಟಿಸಲಿದ್ದಾರೆ. ಈ ಹಿಂದೆ ಈ ಚಿತ್ರದಲ್ಲಿ ನಟಿ ಸಾಯಿ ಪಲ್ಲವಿ, ಸುಬ್ಬುಲಕ್ಷ್ಮಿ ಅವರ ಪಾತ್ರ ನಿರ್ವಹಿಸುವುದು ಖಚಿತವಾಗಿತ್ತು. ಆದರೆ ಸಾಯಿ ಪಲ್ಲವಿ ತೆಲುಗು, ಹಿಂದಿಯಲ್ಲಿ ಹಲವು ಚಿತ್ರಗಳಲ್ಲಿ ನಟಿಸುತ್ತಿರುವುದರಿಂದ ಬಯೋಪಿಕ್‌ನಲ್ಲಿ ನಟಿಸಲು ಡೇಟ್ ಸಮಸ್ಯೆಯಾಗಿದೆ ಎನ್ನಲಾಗುತ್ತಿದೆ. ಹಾಗಾಗಿ ಅವರ ಬದಲು ರುಕ್ಮಿಣಿ ಅವರನ್ನು ಚಿತ್ರಕ್ಕೆ ಕರೆ ತರಲಾಗಿದೆ. ರುಕ್ಮಿಣಿ ವಸಂತ್ ಎಲ್ಲಾ ರೀತಿಯ ಕಥೆಗಳಿಗೂ ಹೊಂದಿಕೊಳ್ಳುತ್ತಾರೆ. ಮಾತ್ರವಲ್ಲ, ಅವರ ಮುಗ್ಧತೆ, ಶಾಸ್ತ್ರೀಯನೃತ್ಯ, ಗಾಯನ ಎಲ್ಲವೂ ಸುಬ್ಬುಲಕ್ಷ್ಮಿ ಅವರ ಬಯೋಪಿಕ್ ಕಥೆಗೆ ತಕ್ಕಂತೆ ಹೊಂದಿಕೊಳ್ಳುತ್ತದೆ. ಇದರಿಂದ ರುಕ್ಮಿಣಿ ಅವರೇ ಬಹುನಿರೀಕ್ಷಿತ ಬಯೋಪಿಕ್ ಸಿನಿಮಾಗೆ ಸರಿ ಹೊಂದುತ್ತಾರೆ ಎಂದು ನಿರ್ಧರಿಸಿದೆ. ಸದ್ಯ ರುಕ್ಮಿಣಿ ವಸಂತ್, ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಡ್ರ್ಯಾಗನ್ ಸಿನಿಮಾದಲ್ಲಿ ಜೂನಿಯರ್ ಎನ್‌ಟಿಆರ್ ಅವರಿಗೆ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಅದರ ಜತೆಗೆ ಬಾಲಿವುಡ್ ಚಿತ್ರದಲ್ಲಿಯೂ ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ. ಇದರ ಜತೆಗೆ ಪ್ಯಾನ್‌ಇಂಡಿಯಾ ಮಟ್ಟದದಲ್ಲಿ ಮೂಡಿಬರುತ್ತಿರುವ ಎಂ.ಎಸ್.ಸುಬ್ಬುಲಕ್ಷ್ಮಿ ಬಯೋಪಿಕ್‌ನಲ್ಲಿ ಬಣ್ಣ ಹಚ್ಚಲಿದ್ದಾರೆ. ಈ ಹಿಂದೆ ಜೆರ್ಸಿ ಚಿತ್ರವನ್ನು ನಿರ್ದೇಶನ ಮಾಡಿದ್ದ ಗೌತಮ್ ತಿನ್ನನೂರಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಜೀವನ ಚರಿತ್ರೆಯ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಇದು ಪ್ಯಾನ್‌ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗುತ್ತಿದ್ದು, ಅದ್ದೂರಿಯಾಗಿ ಮೂಡಿಬರಲಿದೆ.

ಕಾಮನ್ ಮ್ಯಾನ್ ಕರೆತಂದ ಸಾಯಿಪ್ರಕಾಶ್

ಕನ್ನಡದಲ್ಲಿ ನೂರಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿರುವ ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ಈಗ ಮತ್ತೊಂದು ಚಿತ್ರವನ್ನು ನಿರ್ದೇಶಿಸಿದ್ದು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಕಾಮಾನ್ ಮ್ಯಾನ್ ಶೀರ್ಷಿಕೆಯಲ್ಲಿ ಚಿತ್ರ ನಿರ್ಮಾಣವಾಗಿದ್ದು, ನರಸಿಂಹ ಮೂರ್ತಿ ಕಥೆ ಬರೆದು ನಿರ್ಮಾಣ ಮಾಡಿದ್ದಾರೆ. ಒಬ್ಬ ಸಾಮಾನ್ಯ ವ್ಯಕ್ತಿ ಹೇಗೆ ಮುಖ್ಯಮಂತ್ರಿಯಾಗುತ್ತಾನೆ. ಆ ಬಳಿಕ ಆತ ಯಾವೆಲ್ಲಾ ಬದಲಾವಣೆಗಳನ್ನು ತರುತ್ತಾನೆ ಎಂಬುದೇ ಸಿನಿಮಾದ ಕಥೆ. ನಟ ಗೌರಿ ಶಂಕರ್ ನಾಯಕನಾಗಿ ನಟಿಸಿದ್ದು, ಸೋನಾ ಹಾಗೂ ಕಾವ್ಯಾ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ.

ಹಿರಿಯ ನಟ ರಮೇಶ್ ಭಟ್, ಗಣೇಶ್ ರಾವ್ ಕೇಸರ್‌ಕರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಇಂದು ಇನ್ನೂರಕ್ಕೂ ಹೆಚ್ಚು ಸಿನಿಮಾಗಳು ರಿಲೀಸ್ ಆದರೂ ಗೆಲುವು ತೀರ ವಿರಳ. ಹೀಗಿರುವಾಗಲೂ ಸಿನಿಮಾ ನಿರ್ಮಾಣಕ್ಕೆ ನಿರ್ಮಾಪಕರು ಮುಂದಾಗಿರುವುದು ಖುಷಿಕೊಟ್ಟಿದೆ. ಚಿತ್ರದ ನಾಯಕ ವಕೀಲ ಆತ ಹೇಗೆ ಮುಖ್ಯಮಂತ್ರಿಯಾಗುತ್ತಾನೆ. ಆ ಬಳಿಕ ಆತ ಯಾವೆಲ್ಲಾ ಬದಲಾವಣೆ ತರುತ್ತಾನೆ ಎನ್ನುವುದೇ ಈ ಸಿನಿಮಾದ ಕುತೂಹಲ. ಜನವರಿಯಲ್ಲಿ ಚಿತ್ರೀಕರಣ ಆರಂಭಿಸಿ ಸಿನಿಮಾದ ಶೂಟಿಂಗ್ ಮುಗಿಸಿದ್ದೇವೆ.

ಇಂದು ಕನ್ನಡ ಮಾತ್ರವಲ್ಲ ತಮಿಳು, ತೆಲುಗು ಹೀಗೆ ಎಲ್ಲಾ ಚಿತ್ರರಂಗಗಳು ಸಂಕಷ್ಟದಲ್ಲಿವೆ. ಉತ್ತಮ ಚಿತ್ರಗಳು ಇಲ್ಲದೆ ಪ್ರೇಕ್ಷಕರು ಚಿತ್ರಮಂದಿರಗಳಿಂದ ದೂರ ಉಳಿದಿದ್ದಾರೆ. ತಿಂಗಳಿಗೆ ಎರಡು ಚಿತ್ರವಾದರೂ ಹಿಟ್ ಆಗಬೇಕು. ಆಗ ಪ್ರೇಕ್ಷಕರು ಸಿನಿಮಾ ನೋಡಲು ಮರಳಿ ಬರುತ್ತಾರೆ.
-ಓಂ ಸಾಯಿಪ್ರಕಾಶ್ ನಿರ್ದೇಶಕರು

ಸದ್ಯ ರೀರೆಕಾರ್ಡಿಂಗ್ ನಡೆಯುತ್ತಿದೆ. ಜೂನ್‌ನಲ್ಲಿ ಸಿನಿಮಾ ಬಿಡುಗಡೆ ಮಾಡುವ ಯೋಜನೆಯಿದೆ ಎಂದು ನಿರ್ದೇಶಕ ಸಾಯಿಪ್ರಕಾಶ್ ಹೇಳಿದರು.

ಸರಕಾರಿ ನೌಕರನಾಗಿದ್ದ ನಾನು ಬಳಿಕ ಸಾಮಾಜಿಕ ಕಾರ್ಯಗಳತ್ತ ಒಲವು ತಾಳಿದೆ. ಚಿತ್ರರಂಗಕ್ಕೆ ಏನಾದರೂ ಕೊಡುಗೆ ಕೊಡಬೇಕು ಎಂದು ಸಿನಿಮಾ ನಿರ್ಮಾಣ ಮಾಡಿದೆ. ಇದು ಕಾಮನ್‌ಮ್ಯಾನ್ ಸ್ಟೋರಿ. ನಾನು ಮೂಲತಃ ರಂಗಭೂಮಿ ಕಲಾವಿದ. ಹಾಗಾಗಿ ಈ ಚಿತ್ರದಲ್ಲಿಯೂ ನಟಿಸಿದ್ದು, ಮುಖ್ಯಮಂತ್ರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ನಿರ್ಮಾಪಕ ನರಸಿಂಹ ಮೂರ್ತಿ ತಿಳಿಸಿದರು.

ಕೆರೆ ಭೇಟಿ ಬಳಿಕ ಒಳ್ಳೆಯ ಕಥೆಗಾಗಿ ಅರಸುತ್ತಿದ್ದೆ. ಆಗ ಈ ಕಥೆ ಸಿಕ್ಕಿತು. ನಾನು ಯಾವ ಪಾತ್ರ ಮಾಡಬೇಕು ಅಂದುಕೊಂಡಿದ್ದೆನೋ ಅದೇ ಕಥೆ ಈ ಸಿನಿಮಾದಲ್ಲಿದೆ. ಸಾಯಿ ಪ್ರಕಾಶ್ ಅವರಂತಹ ಹಿರಿಯ ನಿರ್ದೇಶಕರ ಜತಗೆ ಕಾರ್ಯನಿರ್ವಹಿಸಿದ್ದು ಖುಷಿಕೊಟ್ಟಿದೆ ಎಂದು ನಟ ಗೌರಿ ಶಂಕರ್ ಸಂತಸದಿಂದ ನುಡಿದರು.

ಜೆಜೆ ಕೃಷ್ಣ ಛಾಯಾಗ್ರಹಣ, ವಿನಯ್ ಚಂದ್ರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಬಾಬ ಸೈಗಲ್, ಜಾವೀದ್ ಅಲಿ, ಕೈಲಾಶ್ ಖೇರ್ ಹೀಗೆ ಖ್ಯಾತ ಗಾಯಕರು ಚಿತ್ರದ ಹಾಡುಗಳಿಗೆ ದನಿಯಾಗಿದ್ದಾರೆ.

ದಿಟ್ಟ ನಿರ್ಧಾರ ಮಾಡಿದ ಅಲ್ಲು ಅರ್ಜುನ್

ಚಿತ್ರಮಂದಿರಗಳು ಸಿನಿಮಾಗಳ ಕೊರತೆ ಎದಿರಿಸುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಹಲವು ಚಿತ್ರಮಂದಿರಗಳು ಮುಚ್ಚಿವೆ. ಮತ್ತಷ್ಟು ಥಿಯೇಟರ್‌ಗಳು ಬಾಗಿಲು ಹಾಕುವ ತಯಾರಿಯಲ್ಲಿವೆ. ಇದು ಕರ್ನಾಟಕ ಮಾತ್ರವಲ್ಲ ಇಡೀ ಭಾರತದಾದ್ಯಂತ ಕಾಡುತ್ತಿರುವ ಸಮಸ್ಯೆಯಾಗಿದೆ. ಸ್ಟಾರ್ ನಟರ ಸಾಲು-ಸಾಲು ಸಿನಿಮಾಗಳು ತೆರೆಗೆ ಬಂದರೆ ಚಿತ್ರಮಂದಿರಗಳು ಹೊಸ ಹುರುಪು ಪಡೆದುಕೊಳ್ಳುತ್ತವೆ. ಆದರೆ ಸ್ಟಾರ್ ನಟರು ವರ್ಷಕ್ಕೆ ಅಥವಾ ಎರಡು ವರ್ಷಕ್ಕೆ ಒಂದು ಸಿನಿಮಾ ಮಾಡಿ ತೆರೆಗೆ ತರುತ್ತಾರೆ. ಇದರಿಂದ ಸಿನಿಮಾಗಳ ಕೊರತೆ ಎದುರಾಗುತ್ತಿವೆ. ಈ ನಡುವೆಯೇ ಅಲ್ಲು ಅರ್ಜುನ್ ಚಿತ್ರಮಂದಿರಗಳನ್ನು ಉಳಿಸುವ ನಿಟ್ಟಿನಲ್ಲಿ ದಿಟ್ಟ ನಿರ್ಧಾರ ಮಾಡಿದ್ದಾರೆ. ವರ್ಷದಲ್ಲಿ ಎರಡು ಸಿನಿಮಾಗಳಲ್ಲಿ ನಟಿಸುವ ಹಠತೊಟ್ಟಿದ್ದಾರೆ. ಅಲ್ಲು ಅರ್ಜುನ್ ಇನ್ನು ಮುಂದೆ ನಿರ್ಮಾಪಕರಿಗೆ ಇನ್ನೂರು ದಿನ ಕಾಲ್‌ಶೀಟ್ ಕೊಡಲು ನಿರ್ಧರಿಸಿದ್ದು, ಅಷ್ಟರಲ್ಲಿ ಚಿತ್ರವನ್ನು ಮುಗಿಸಲು ತಿಳಿಸಿದ್ದಾರೆ. ಮಾತ್ರವಲ್ಲ ಒಂದೇ ಸಿನಿಮಾಗೆ ಸೀಮಿತವಾಗದೆ ವರ್ಷದಲ್ಲಿ ಎರಡು ಚಿತ್ರಗಳಲ್ಲಿ ನಟಿಸಲು ನಿರ್ಧರಿಸಿದ್ದಾರೆ. ಸದ್ಯ ಅಟ್ಲಿ ನಿರ್ದೇಶನದ ರಾಕಾ ಚಿತ್ರ ದಲ್ಲಿ ನಟಿಸುತ್ತಿರುವ ಅಲ್ಲು ಅರ್ಜುನ್, ಆ ಬಳಿಕ ಲೋಕೇಶ್ ಕನಕರಾಜ್ ಜತೆಗೆ ಸಿನಿಮಾ ಮಾಡಲಿದ್ದಾರೆ. ಆ ಬಳಿಕ ಮತ್ತೆ ಸುಕುಮಾರನ್ ನಿರ್ದೇಶನದ ಸಿನಿಮಾದಲ್ಲಿ ಅಲ್ಲು ಅಭಿನಯಿಸಲಿದ್ದಾರೆ. ಅಂದರೆ ಈ ಹಿಂದಿನಂತೆ ತಮ್ಮ ಚಿತ್ರಕ್ಕಾಗಿ 2 ವರ್ಷ ಗಳನ್ನು ಕಾಯಿಸದೇ ಒಂದೇ ವರ್ಷದಲ್ಲಿ ಚಿತ್ರವನ್ನು ಬಿಡುಗಡೆ ಮಾಡಲಿದ್ದಾರೆ.

ಇನ್ನು ಪ್ರಭಾಸ್ ಕೂಡ ಈಗಾಗಲೇ ಇದೇ ರೀತಿಯ ನಿರ್ಧಾರ ಮಾಡಿದ್ದು, ವರ್ಷದಲ್ಲಿ ಎರಡು ಚಿತ್ರಗಳಲ್ಲಿ ನಟಿಸಿ ತೆರೆಗೆ ತರಬೇಕು ಎಂಬ ಉತ್ಸಾಹದಲ್ಲಿದ್ದಾರೆ. ಸದ್ಯ ಪ್ರಭಾಸ್, ಸ್ಪಿರಿಟ್ ಮತ್ತು ಫೌಜಿ ಚಿತ್ರದಲ್ಲಿ ಅಭಿನಯಿಸುತ್ತಿದ್ದು, ಆ ಬಳಿಕ ಕಲ್ಕಿ 2 ಸಿನಿಮಾ ತಂಡ ಸೇರಲಿದ್ದಾರೆ. ಇದರ ಜತೆಗೆ ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಮೂಡಿಬರಲಿರುವ ಸಲಾರ್ 2 ಚಿತ್ರದಲ್ಲಿಯೂ ಅಭಿನಯಿಸಲಿದ್ದಾರೆ. ಈ ದಿಗ್ಗಜ ನಟರ ನಿರ್ಧಾರಕ್ಕೆ ಎಲ್ಲಾ ನಿರ್ಮಾಪಕರು ಸಂತಸ ವ್ಯಕ್ತಪಡಿಸಿದ್ದಾರೆ. ಇನ್ನು ರಾಮ್‌ಚರಣ್, ಜೂನಿಯರ್ ಎನ್‌ಟಿಆರ್, ರವಿತೇಜ, ಕೂಡ ಇದೇ ನಿರ್ಧಾರಕ್ಕೆ ಬರುವ ನಿರೀಕ್ಷೆ ಇದೆ. ಹಾಗೆ ಆದರೆ, ಟಾಲಿವುಡ್‌ನಲ್ಲಿ ಸ್ಟಾರ್ ನಟರ ಸಾಲು - ಸಾಲು ಸಿನಿಮಾಗಳು ತೆರೆಗೆ ಬರಲಿವೆ.

ಚಿತ್ರರಂಗದಲ್ಲಿ ಮತ್ತೆ ಹೊಸತನ ಮೂಡಲಿದೆ.

ಟಾಲಿವುಡ್ ನಟರಂತೆ ನಮ್ಮ ಸ್ಯಾಂಡಲ್‌ವುಡ್ ನಟರು ದಿಟ್ಟ ನಿರ್ಧಾರ ಮಾಡಿದರೆ ಕನ್ನಡದಲ್ಲಿಯೂ ಅದ್ಭುತ ಸಿನಿಮಾಗಳು ಮೂಡಿಬರಲಿವೆ. ಮತ್ತೆ ಚಂದನವನದತ್ತ ಎಲ್ಲರೂ ತಿರುಗಿ ನೋಡುವಂತಾಗುತ್ತದೆ. ಈಗಾಗಲೇ ಕಿಚ್ಚ ಸುದೀಪ್ ಒಂದೇ ವರ್ಷದಲ್ಲಿ ಅಂದುಕೊಂಡಂತೆ ಸಿನಿಮಾ ಮಾಡಿ ಬಿಡುಗಡೆ ಮಾಡಬಹುದು ಎಂಬುದನ್ನು ಮಾರ್ಕ್ ಸಿನಿಮಾ ಮೂಲಕ ಮಾಡಿ ತೋರಿಸಿದ್ದಾರೆ. ಅಂತೆಯೇ ಇತರ ನಟರೂ ಕೂಡ ವರ್ಷದಲ್ಲಿ ಎರಡು ಸಿನಿಮಾದಲ್ಲಿ ನಟಿಸಿದರೆ ಚಂದನವನದಲ್ಲಿಯೂ ಸಾಲು ಸಾಲು ಹಿಟ್ ಸಿನಿಮಾಗಳೂ ಮೂಡಿಬರಲಿವೆ.